" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

# ಕರ್ನಾಟಕ ವಿಧಾನ ಪರಿಷತ್ತು

13ನೇ ಜೂನ್ 2017
ಮಂಗಳವಾರ

## ವಿಷಯಾನುಕ್ರಮಣಿಕೆ

**1. ನೂತನ ಸದಸ್ಯರ ಪ್ರಮಾಣ ವಚನ**

**2. ಪ್ರಶ್ನೋತ್ತರಗಳು**

**ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು.**

2911 – ಬೆಳಗಾವಿ ಜಿಲ್ಲೆಯ ರಾಷ್ಟ್ರೀಯ ಹಾಗೂ ರಾಜ್ಯ ಹೆದ್ದಾರಿಗಳು ನಿರ್ವಹಣೆಯಿಲ್ಲದೆ ಹದಗೆಟ್ಟಿರುವ ಕುರಿತು
– ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ

2874 – ನಾಡ ಕಛೇರಿ, ಅಟಲ್ ಜನಸ್ನೇಹಿ ಕೇಂದ್ರಗಳಿಗೆ ನಿರಂತರ ವಿದ್ಯುತ್ ಪೂರೈಕೆ
– ಶ್ರೀ ಪ್ರದೀಪ್ ಶೆಟ್ಟರ್

2840 – ರೈತರ ಅಭಿವೃದ್ಧಿಗಾಗಿ ಕೃಷಿಭಾಗ್ಯ ಯೋಜನೆಯ ಬಗ್ಗೆ
– ಶ್ರೀ ಬಿ.ಜೆ.ಪುಟ್ಟಸ್ವಾಮಿ

2815 – ಮಂಡ್ಯ, ಮೈಸೂರು ಲೋಕೋಪಯೋಗಿ ಇಲಾಖಾ ಕಾಮಗಾರಿಗಳ ಬಗ್ಗೆ
– ಶ್ರೀ ಕೆ.ಟಿ.ಶ್ರೀಕಂಠೇಗೌಡ

2823 – ರಾಜ್ಯ ಸರ್ಕಾರ ಹಾಲಿಗೆ ಪ್ರೋತ್ಸಾಹಧನ ನೀಡುವ ಬಗ್ಗೆ
– ಶ್ರೀ ಟಿ.ಎ.ಶರವಣ

2799 – ಲೈನ್‌ಮ್ಯಾನ್‌ಗಳ ನೇಮಕಾತಿಯ ಕುರಿತು
– ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ

2850 – ರಾಜ್ಯದಲ್ಲಿರುವ ನದಿ, ಕೆರೆ, ಕಾಲುವೆಗಳಿಂದ ಅನಧಿಕೃತ ಪಂಪುಗಳ ಮುಖಾಂತರ ಅನಧಿಕೃತ ವಿದ್ಯುತ್ ಸಂಪರ್ಕ ನೀಡುತ್ತಿರುವ ಪ್ರಕರಣಗಳ ಬಗ್ಗೆ
– ಕ್ಯಾಪ್ಟನ್ ಗಣೇಶ್ ಕಾರ್ಣಿಕ್

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

2875 – ಪಶು ಸಂಗೋಪನೆ ಯೋಜನೆ ಬಗ್ಗೆ
– ಶ್ರೀ ಸೋಮಣ್ಣ ಮ.ಬೇವಿನಮರದ

2830 – 2018ರ ಮಹಾಮಸ್ತಕಾಭಿಷೇಕಕ್ಕೆ ಸರ್ಕಾರದ ವತಿಯಿಂದ ಬಿಡುಗಡೆಯಾಗಿರುವ ಅನುದಾನ ಮತ್ತು ಕಾಮಗಾರಿಗಳ ವಿವರ
– ಶ್ರೀ ಎಂ.ಎ.ಗೋಪಾಲಸ್ವಾಮಿ

2878 – ಕೊಡಗು ಜಿಲ್ಲೆಯಲ್ಲಿನ ಜಾನುವಾರು ಹಾಗೂ ಪಶು ಆಸ್ಪತ್ರೆಗಳ ಕುರಿತು
–ಶ್ರೀಮತಿ ಎಸ್.ವೀಣಾ ಅಚ್ಚಯ್ಯ

2904 – ಕೃಷಿ ಉಪಕರಣಗಳ ಬಾಡಿಗೆ ವ್ಯವಸ್ಥೆಯ ಬಗ್ಗೆ
– ಶ್ರೀ ಎನ್.ಅಪ್ಪಾಜಿಗೌಡ

2917 – ತೋಟಗಾರಿಕೆ ಬೆಳೆಗಳನ್ನು ಬೆಳೆಸಲು ಹನಿ ನೀರಾವರಿ ಒದಗಿಸುವ ಬಗ್ಗೆ
– ಶ್ರೀ ಆರ್.ಪ್ರಸನ್ನಕುಮಾರ್

2854 – ಕೃಷಿ ಉತ್ಪನ್ನ ಮಾರುಕಟ್ಟೆಗಳಲ್ಲಿರುವ ದೋಷಪೂರಿತ ತೂಗುಯಂತ್ರ ಕುರಿತು
– ಶ್ರೀ ಆರ್.ಧರ್ಮಸೇನ

2086 – ರಾಜ್ಯದಲ್ಲಿರುವ ಸ್ಥಳೀಯ ಸಂಸ್ಥೆಗಳ ಸಮಗ್ರ ಅಭಿವೃದ್ಧಿ ಬಗ್ಗೆ
– ಶ್ರೀ ಆರ್.ಧರ್ಮಸೇನ
– ಶ್ರೀ ಈಶ್ವರ್ ಖಂಡ್ರೆ (ಪೌರಾಡಳಿತ, ಸ್ಥಳೀಯ ಸಂಸ್ಥೆಗಳು ಮತ್ತು ಸಾರ್ವಜನಿಕ ಉದ್ದಿಮೆಗಳ ರಾಜ್ಯ ಸಚಿವರು)

**ಆ) ಚುಕ್ಕೆ ರಹಿತ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.**

**3. ಸಭಾಪತಿಯವರ ಅನುಮತಿ ಮೇರೆಗೆ ಚರ್ಚಿಸಲ್ಪಟ್ಟ ವಿಷಯಗಳು.**

ಅ) ಉತ್ತರ ಕನ್ನಡ ಜಿಲ್ಲೆಯ ಕುಮಟಾ ತಾಲ್ಲೂಕಿನ ತಂಡ್ರಕುಳಿಯಲ್ಲಿ ಗುಡ್ಡ ಮನೆಯ ಮೇಲೆ ಕುಸಿದು ಮೂರು ಜನರು ಮೃತರಾಗಿರುವ ಕುರಿತು

– ಶ್ರೀ ಎಸ್.ಎಲ್.ಘೋಟ್ನೇಕರ
– ಡಾ:ಹೆಚ್.ಸಿ.ಮಹದೇವಪ್ಪ (ಲೋಕೋಪಯೋಗಿ ಸಚಿವರು)

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಆ) ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ (ವಿಟಿಯು)ನ ಪರೀಕ್ಷೆ ಹಾಗೂ ಫಲಿತಾಂಶಗಳನ್ನು ನೀಡುವಲ್ಲಿ ವಿದ್ಯಾರ್ಥಿಗಳು ಗೊಂದಲಕ್ಕೀಡಾಗಿರುವುದರ ಬಗ್ಗೆ

- ಶ್ರೀ ಡಿ.ಎಸ್.ವೀರಯ್ಯ
- ಡಾ: ಜಿ.ಪರಮೇಶ್ವರ (ಸಭಾ ನಾಯಕರು)

ಇ) ಬಿರುಗಾಳಿ ಮತ್ತು ಬೆಂಕಿಯ ಅವಗಡದಿಂದ ಬೀದಿ ಪಾಲಾಗಿರುವ ಹಂಚಿನಾಳ ರೈತ ಕುಟುಂಬಗಳಿಗೆ ಪರಿಹಾರ ಒದಗಿಸುವ ಬಗ್ಗೆ

- ಶ್ರೀ ಮಹಂತೇಶ ಮ.ಕವಟಗಿಮಠ
- ಡಾ: ಜಿ.ಪರಮೇಶ್ವರ (ಸಭಾ ನಾಯಕರು)

ಈ) ಡೆಂಘಿ ರೋಗ ಉಲ್ಬಣವಾಗದಂತೆ ನಿಯಂತ್ರಣ ಮಾಡುವ ಬಗ್ಗೆ

- ಶ್ರೀ ಕೆ.ಟಿ.ಶ್ರೀಕಂಠೇಗೌಡ
- ಡಾ: ಜಿ.ಪರಮೇಶ್ವರ (ಸಭಾ ನಾಯಕರು)

ಉ) ಸರ್ಕಾರಿ ಗೋಮಾಳ ಜಮೀನನ್ನು ವಕ್ಫ್ ಆಸ್ತಿಗೆ ಸೇರ್ಪಡೆ ಮಾಡಿರುವುದನ್ನು ರದ್ದುಗೊಳಿಸಿ ಗೋಮಾಳ ಜಮೀನಿಗೆ ಸೇರಿಸಿ ಆದೇಶ ಹೊರಡಿಸುವ ಬಗ್ಗೆ

- ಶ್ರೀ ಬಸನಗೌಡ ಆರ್.ಪಾಟೀಲ್ (ಯತ್ನಾಳ್)
- ಡಾ: ಜಿ.ಪರಮೇಶ್ವರ (ಸಭಾ ನಾಯಕರು)

**4. ಸಚಿವರ ಹೇಳಿಕೆಗಳು**

ಅ) ಮಂಡ್ಯ ಜಿಲ್ಲೆ ಮಳವಳ್ಳಿ ತಾಲ್ಲೂಕಿನ ಗೌಡಗೆರೆ ಗ್ರಾಮದಲ್ಲಿನ ಜನರು ಜ್ವರದಿಂದ ಬಳಲುತ್ತಿರುವ ಬಗ್ಗೆ

- ಡಾ: ಜಿ.ಪರಮೇಶ್ವರ (ಸಭಾ ನಾಯಕರು) (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಪರವಾಗಿ)

ಆ) ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ಟೌನ್‌ನಲ್ಲಿರುವ ಬಾಲಕರ ಜೂನಿಯರ್ ಕಾಲೇಜು ಕಟ್ಟಡವು 70 ವರ್ಷ ಹಳೆಯದಾಗಿದ್ದು ಮೇಲ್ಛಾವಣಿಗಳು ಕಿತ್ತು ಹೋಗಿದ್ದು ಅತ್ಯಂತ ಶಿಥಿಲಗೊಂಡಿದ್ದು ಮುಂದಾಗುವ ಅನಾಹುತ ತಪ್ಪಿಸಲು ಕ್ರಮ ಕೈಗೊಳ್ಳುವ ಬಗ್ಗೆ

- ಡಾ: ಜಿ.ಪರಮೇಶ್ವರ (ಸಭಾ ನಾಯಕರು) (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಪರವಾಗಿ)

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**5. ನಿರ್ಣಯ**

**ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 165ರ ಹಾಗೂ ಭಾರತ ಸಂವಿಧಾನದ 183ನೇ ಅನುಚ್ಛೇದ 'ಸಿ' ಖಂಡದಡಿಯಲ್ಲಿ ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಾದ ಶ್ರೀ ಡಿ.ಹೆಚ್.ಶಂಕರಮೂರ್ತಿಯವರನ್ನು ಸಭಾಪತಿ ಸ್ಥಾನದಿಂದ ತೆಗೆದು ಹಾಕಬೇಕೆಂಬ ಬಗ್ಗೆ –**

– ಶ್ರೀ ಹೆಚ್.ಎಂ.ರೇವಣ್ಣ

**(ನಿರ್ಣಯದ ಪರಿಶೀಲನೆಗೆ ಸದನದ ಒಪ್ಪಿಗೆ ದೊರಕಿತು)**

**6. ವರದಿಯನ್ನೊಪ್ಪಿಸುವುದು**

**7. ನಿಯಮ 68ರಡಿಯಲ್ಲಿ ಸಾರ್ವಜನಿಕ ಮಹತ್ವದ ವಿಷಯದ ಮೇಲೆ ಚರ್ಚೆ**

**<u>ರಾಜ್ಯದಲ್ಲಿ ಸತತ ಬರಗಾಲದಿಂದ ಉಂಟಾಗಿರುವ ಪರಿಸ್ಥಿತಿ ಬಗ್ಗೆ ಮುಂದುವರೆದ ಚರ್ಚೆ</u> –**

– ಶ್ರೀ ಕೆ.ಟಿ.ಶ್ರೀಕಂಠೇಗೌಡ
– ಶ್ರೀ ವಿ.ಎಸ್.ಉಗ್ರಪ್ಪ
– ಶ್ರೀ ಕೃಷ್ಣ ಬೈರೇಗೌಡ (ಕೃಷಿ ಸಚಿವರು)
– ಶ್ರೀ ಎಂ.ಕೆ.ಪ್ರಾಣೇಶ್
– ಶ್ರೀಮತಿ ಎಸ್.ವೀಣಾ ಅಚ್ಚಯ್ಯ
– ಶ್ರೀ ರಾಮಚಂದ್ರಗೌಡ
– ಶ್ರೀ ಕಾಂತರಾಜು (ಬಿಎಂಎಲ್)
– ಶ್ರೀ ಎಸ್.ರವಿ
– ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ
– ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ
– ಶ್ರೀ ಬಸನಗೌಡ ಆರ್.ಪಾಟೀಲ್ (ಯತ್ನಾಳ್)
– ಶ್ರೀ ಆರ್.ಪ್ರಸನ್ನಕುಮಾರ್

*****

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

(672)13–06–2017 11–30 ಕೆಜಿ–ಆರ್‌ಎನ್

**<u>ಕರ್ನಾಟಕ ವಿಧಾನ ಪರಿಷತ್ತು</u>**

**ಮಂಗಳವಾರ, 13*ನೇ ಜೂನ್ 2017***

**ಸದನವು ವಿಧಾನ ಪರಿಷತ್ತಿನ ಸಭಾಂಗಣದಲ್ಲಿ**
**ಬೆಳಿಗ್ಗೆ 11 ಗಂಟೆ 32 ನಿಮಿಷಕ್ಕೆ ಸಮಾವೇಶಗೊಂಡಿತು.**
**ಸಭಾಪತಿ (ಶ್ರೀ ಡಿ.ಹೆಚ್.ಶಂಕರಮೂರ್ತಿ) ಯವರು**
**ಪೀಠದಲ್ಲಿ ಉಪಸ್ಥಿತರಿದ್ದರು.**

**ಸಭಾಪತಿಯವರು:–** ಗೌರವಾನ್ವಿತ ಘನತೆವೆತ್ತ ರಾಜ್ಯಪಾಲರು ಈ ಸದನದಲ್ಲಿ ಖಾಲಿ ಇದ್ದಂತಹ ಇನ್ನೊಂದು ಸದಸ್ಯರ ಹುದ್ದೆಗೆ ಶ್ರೀಯುತ ಸಿ.ಎಂ.ಲಿಂಗಪ್ಪ ರವರನ್ನು ನಾಮನಿರ್ದೇಶನ ಮಾಡಿ ಆದೇಶವನ್ನು ಕಳುಹಿಸಿದ್ದಾರೆ. ಅವರು ಮೊದಲಿಗೆ ಪ್ರಮಾಣ ವಚನ ಸ್ವೀಕಾರ ಮಾಡುತ್ತಾರೆ.

1. **<u>ನೂತನ ಸದಸ್ಯರ ಪ್ರಮಾಣ ವಚನ</u>**

**ಶ್ರೀ ಸಿ.ಎಂ.ಲಿಂಗಪ್ಪ (ನಾಮನಿರ್ದೇಶಿತರು):– "ಶ್ರೀ ಸಿ.ಎಂ.ಲಿಂಗಪ್ಪ"** ಎಂಬ ಹೆಸರಿನವನಾದ ನಾನು ವಿಧಾನ ಪರಿಷತ್ತಿನ ಸದಸ್ಯನಾಗಿ, ನಾಮನಿರ್ದೇಶನ ಹೊಂದಿದವನಾಗಿ, ವಿಧಿದ್ವಾರ ಸ್ಥಾಪಿತವಾದ ಭಾರತದ ಸಂವಿಧಾನದ ವಿಷಯದಲ್ಲಿ ಶ್ರದ್ಧೆಯಿಂದಲೂ, ನಿಷ್ಠೆಯಿಂದಲೂ ಕೂಡಿರುತ್ತೇನೆಂದೂ, ನಾನು ಭಾರತದ ಪರಮಾಧಿಕಾರವನ್ನು ಮತ್ತು ಸಮಗ್ರತೆಯನ್ನು ಸಮರ್ಥಿಸುತ್ತೇನೆಂದೂ, ನಾನು ಈಗ ಕೈಗೊಳ್ಳಲಿರುವ ಕರ್ತವ್ಯವನ್ನು ಶ್ರದ್ಧಾಪೂರ್ವಕವಾಗಿ ನಿರ್ವಹಿಸುತ್ತೇನೆಂದೂ ಭಗವಂತನ ಹೆಸರಿನ ಮೇಲೆ ಪ್ರಮಾಣ ಮಾಡುತ್ತೇನೆ".

**ಸಭಾಪತಿಯವರು:–** ಮಾನ್ಯ ಸದಸ್ಯರಾದ ಶ್ರೀ ಸಿ.ಎಂ.ಲಿಂಗಪ್ಪನವರಿಗೆ ಸುಸ್ವಾಗತ. ಈಗ ಪ್ರಶ್ನೋತ್ತರವನ್ನು ತೆಗೆದುಕೊಳ್ಳೋಣ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "**

2. **ಪ್ರಶ್ನೋತ್ತರಗಳು:–**

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು.

**ಪ್ರಶ್ನೆ ಸಂಖ್ಯೆ 2911**
**(ಉತ್ತರ ಲಗತ್ತಿಸಲಾಗಿದೆ)**

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ:–** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಬಹಳ ದೀರ್ಘವಾದಂತಹ ಮತ್ತು ಸವಿಸ್ತಾರವಾದಂತಹ ಉತ್ತರವನ್ನು ಒದಗಿಸಿದ್ದಾರೆ. ಅದಕ್ಕೆ ಮಾನ್ಯ ಸಚಿವರಿಗೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ. 2014–2015, 2015–2016 ಮತ್ತು 2016–2017 ನೇ ಸಾಲಿನಲ್ಲಿ ರಾಜ್ಯದಲ್ಲಿರುವ ಎಷ್ಟು ಹೆದ್ದಾರಿ ರಸ್ತೆಗಳನ್ನು ಮೇಲ್ದರ್ಜೆಗೇರಿಸಲಾಗಿದೆ ಎಂಬುದು ನನ್ನ ಪ್ರಶ್ನೆ. ಮಾನ್ಯ ಸಚಿವರು ಇದಕ್ಕೆ ಉತ್ತರವನ್ನು ಕೊಟ್ಟಿದ್ದಾರೆ. ಸದರಿ ಉತ್ತರದಲ್ಲಿ ಬೆಳಗಾಂ ಜಿಲ್ಲೆಗೆ ಸಂಬಂಧಪಟ್ಟಂತೆ, ಬೆಳಗಾಂ ಜಿಲ್ಲೆಯ ಗೋಟೂರು, ಕಾಗವಾಡ, ಅಥಣಿ, ಬಿಜಾಪುರ ಮತ್ತು ಸೊಲ್ಲಾಪುರ ಈ ರಾಜ್ಯ ಹೆದ್ದಾರಿಗಳನ್ನು ರಾಷ್ಟ್ರೀಯ ಹೆದ್ದಾರಿಯನ್ನಾಗಿ ಮೇಲ್ದರ್ಜೆಗೇರಿಸುವ ವಿಚಾರದಲ್ಲಿ ಸರ್ಕಾರದ ಕ್ರಮವೇನು ಎಂಬುದು ನನ್ನ ಪ್ರಶ್ನೆ. ಮಾನ್ಯ ಸಚಿವರು ಅನುಬಂಧದಲ್ಲಿ ಹೇಳಿದ್ದಾರೆ. ಗೋಟೂರು, ಕಾಗವಾಡ, ಅಥಣಿ, ಬಿಜಾಪುರ ಮತ್ತು ಸೊಲ್ಲಾಪುರ ಇವು ಬಹು ಮುಖ್ಯವಾದಂತಹ ಹಾಗೂ ಮುಂದೆ ನಾಗಪುರವನ್ನು ಜೋಡಣೆ ಮಾಡುವಂತಹ ರಸ್ತೆಗಳಾಗಿವೆ. ಈಗಾಗಲೇ ಕೇಂದ್ರ ಸರ್ಕಾರ ನಾಗಪುರ ಮತ್ತು ಸೊಲ್ಲಾಪುರ ರಸ್ತೆಯನ್ನು ಮೇಲ್ದರ್ಜೆಗೇರಿಸಿ ರಾಷ್ಟ್ರೀಯ ಹೆದ್ದಾರಿಯನ್ನಾಗಿ ಮಾಡುತ್ತಿದೆ. ನಾವು ಬೆಳಗಾಂನಿಂದ ಮಹಾರಾಷ್ಟ್ರಕ್ಕೆ ಹೋಗಬೇಕಾದರೆ, ಮಹಾರಾಷ್ಟ್ರದ ಮುಖಾಂತರ ಉತ್ತರ ಭಾರತಕ್ಕೆ ಹೋಗಬೇಕಾದರೆ, ಮುಂಬಯಿ ಮುಖಾಂತರ ಹೋಗಬೇಕು. ಈ ಹೆದ್ದಾರಿಯನ್ನು develop ಮಾಡಿದರೆ ನೇರವಾಗಿ ನಾಗಪುರ ಮುಖಾಂತರ ಮಧ್ಯಪ್ರದೇಶ ಮತ್ತು ಉತ್ತರ ಪ್ರದೇಶಕ್ಕೆ ಹೋಗುವುದಕ್ಕೆ ಬಹಳ ಒಂದು ಒಳ್ಳೆಯ ಅವಕಾಶ ಆಗುತ್ತದೆ. ಅಲ್ಲದೇ, ಈ ಭಾಗದಲ್ಲಿನ ರೈತರಿಗೆ ಮಾರುಕಟ್ಟೆಗಳನ್ನು ಕಂಡುಕೊಳ್ಳುವುದಕ್ಕೆ ಹೆಚ್ಚು ಅನುವು ಮಾಡಿಕೊಡುವಂತಹ ಒಂದು ಹೆದ್ದಾರಿ ಆಗಲಿದೆ. ಈ ಹಿನ್ನೆಲೆಯಲ್ಲಿ ನಾವು ಈಗಾಗಲೇ ಕೇಂದ್ರ ಸಾರಿಗೆ ಸಚಿವರನ್ನು ನಿಯೋಗದಲ್ಲಿ ಭೇಟಿಯಾಗಿದ್ದೇವೆ. ಸನ್ಮಾನ್ಯ ಕೇಂದ್ರ ಸಚಿವರಾದ ಶ್ರೀ ನಿತಿನ್ ಗಡ್ಕರಿ ಯವರು ಇದನ್ನು ಮಾಡುತ್ತೇವೆ ಎಂಬ ಮಾತನ್ನು ಹೇಳಿದ್ದಾರೆ. ಮಾನ್ಯ ಸಭಾಪತಿಯರೆ, ಈ ವಿಚಾರದಲ್ಲಿ ಮಾನ್ಯ ಸಚಿವರು 'In principle approved roads in the State of Karnataka' ಎನ್ನುವಂಥದ್ದನ್ನು ಅನುಬಂಧದಲ್ಲಿ ಹೇಳಿದ್ದಾರೆ. ಮೂರನೆಯದಾಗಿ, ಸಂಕೇಶ್ವರ, ಗೋಟೂರು,

" ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಕಾಗವಾಡ, ಅಥಣಿ ಮತ್ತು ಬಿಜಾಪುರ ಇವುಗಳು ಬರುವಂತಹ ರಾಜ್ಯ ಹೆದ್ದಾರಿ 12 ರಲ್ಲಿ 180 ಕಿಲೋಮೀಟರ್‌ಗಳನ್ನು ರಾಷ್ಟ್ರೀಯ ಹೆದ್ದಾರಿಯನ್ನಾಗಿ ಮಾಡುವುದಕ್ಕೆ ಏನಾದರೂ ಈಗಾಗಲೇ ಆಡಳಿತಾತ್ಮಕವಾಗಿ ಮಂಜೂರಾತಿಯನ್ನು ನೀಡಲಾಗಿದೆಯೇ? Land acquisition ನಲ್ಲಿ ಏನು ಪ್ರಗತಿಯನ್ನು ಸಾಧಿಸಲಾಗಿದೆ? ಚಿಕ್ಕೋಡಿ ಮತ್ತು ಅಥಣಿ ನಗರಗಳಲ್ಲಿ ಬೈಪಾಸ್ ರಸ್ತೆಯನ್ನು ಏನಾದರೂ propose ಮಾಡುತ್ತಿದ್ದಾರೆಯೇ ಹೇಗೆ ಎನ್ನುವುದು ಮತ್ತು ಅದನ್ನು ಯಾವಾಗ ಟೆಂಡರ್ ಕರೆಯುತ್ತಾರೆ ಎನ್ನುವುದನ್ನು ತಮ್ಮ ಮುಖಾಂತರ ಮಾನ್ಯ ಸಚಿವರನ್ನು ಕೇಳಲಿಕ್ಕೆ ಬಯಸುತ್ತೇನೆ.

**ಡಾ||ಹೆಚ್.ಸಿ.ಮಹದೇವಪ್ಪ:-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ಕಾಲಕಾಲಕ್ಕೆ ನನ್ನನ್ನು ಭೇಟಿ ಮಾಡಿ ಆ ಭಾಗದಲ್ಲಿನ ರಸ್ತೆಗಳ ಬಗ್ಗೆ ಮತ್ತು ರಾಷ್ಟ್ರೀಯ ಹೆದ್ದಾರಿಗಳನ್ನು ಮಾಡುವ ಬಗ್ಗೆ ವೈಯಕ್ತಿಕವಾಗಿ ಚರ್ಚೆ ಮಾಡುತ್ತಿರುತ್ತಾರೆ. Surface Transport Minister ಆದ ಸನ್ಮಾನ್ಯ ನಿತಿನ್ ಗಡ್ಕರಿ ಇವರನ್ನು ಭೇಟಿ ಮಾಡಿ ಈ ಬಗ್ಗೆ ಚರ್ಚೆ ಮಾಡಿದ್ದೇವೆ. ಗೋಟೂರು ರಸ್ತೆ 183 ಕಿಲೋಮೀಟರ್, ಕಾಗವಾಡ-ಗೋಟೂರು ರಸ್ತೆ in principle ಇದನ್ನು ಒಪ್ಪಿಕೊಂಡು upgrade ಆಗಿದೆ. ಇದಾದ ಮೇಲೆ ಡಿಪಿಆರ್ ಮಾಡಬೇಕು. ಡಿ.ಪಿ.ಆರ್ ಮಾಡುವಾಗ ಅಲ್ಲಿ land acquisition ಏನಾಗುತ್ತದೆ ಮತ್ತು ಬೇರೆ ಬೇರೆ ಬೈಪಾಸ್ ಏನು ಆಗುತ್ತದೆ ಅದನ್ನೆಲ್ಲವನ್ನು incorporate ಮಾಡಿ ಡಿ.ಪಿ.ಆರ್ ಆಗಿ ಅದನ್ನು submit ಮಾಡಿದ ನಂತರ ಅವರು ಕಾಮಗಾರಿಗಳನ್ನು ತೆಗೆದುಕೊಂಡು ಮಾಡುತ್ತಾರೆ. ಅದರ ಜೊತೆಗೆ ನಾಗಪುರ ಮತ್ತು ಸೊಲ್ಲಾಪುರ connectivity ಬಗ್ಗೆ ಸಾಮಾನ್ಯವಾಗಿ ನಮ್ಮ ಕೇಂದ್ರ ಭೂಸಾರಿಗೆ ಸಚಿವರಿಗೆ ಚೆನ್ನಾಗಿ ಗೊತ್ತಿದೆ. ಅವರದೇ ಜಿಲ್ಲೆಯಾಗಿರುವುದರಿಂದ Surface Transport Minister is also taking interest. ನಾನು ಖುದ್ದಾಗಿ ಅನೇಕ ಬಾರಿ ಭೇಟಿಯಾಗಿ ಈ ಬಗ್ಗೆ ಮನವಿ ಕೊಟ್ಟಿದ್ದನ್ನು ಹೆಚ್ಚು ಕಡಿಮೆ ಅವರು in principle ಒಪ್ಪಿ ಇದನ್ನೆಲ್ಲಾ ರಾಷ್ಟ್ರೀಯ ಹೆದ್ದಾರಿ ಎಂದು ಘೋಷಣೆ ಮಾಡಿದ್ದಾರೆ. Detailed Project Report (DPR) ತಯಾರು ಆದಮೇಲೆ ಅಥಣಿ ಅಥವಾ ಚಿಕ್ಕೋಡಿ ಬೇರೆ ಬೇರೆ ಪ್ರದೇಶದಲ್ಲಿ ಬೈಪಾಸ್‌ನ ಅಗತ್ಯವಿದ್ದಾಗ ಡಿಪಿಆರ್‌ನಲ್ಲಿ incorporate ಆಗುತ್ತದೆ. 90% land acquisition complete ಆಗಿ ಮುಗಿದ ಮೇಲೆ ಅದು submission ಅದ ಮೇಲೆ then they will take up and sanction will be given from Government of India.

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ:-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಇದಕ್ಕೆ ಏನಾದರೂ ಒಂದು ಕಾಲಮಿತಿಯನ್ನು ನಿಗದಿ ಮಾಡಿ ಇದನ್ನು ಅದಷ್ಟು ಬೇಗ ಸರ್ಕಾರದ ಮುಂದೆ ತೆಗೆದುಕೊಳ್ಳುವಂತಹ ವಿಚಾರ ಇದೆಯೇ?

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

(673)13-06-2017 11-40 ಸಿಎಸ್-ವಿಕೆ

**ಡಾ॥ಹೆಚ್.ಸಿ.ಮಹದೇವಪ್ಪ:-** ಮಾನ್ಯ ಸಭಾಪತಿಯವರೆ, ನಮ್ಮ ರಾಜ್ಯವೇ ಪ್ರಥಮವಾಗಿ ಡಿಪಿಆರ್ ಮಾಡಿ ಈ ರೀತಿ ಮಂಜೂರಾದಂತಹ ರಸ್ತೆಗಳನ್ನು ಬೇಗ ಪಡೆದುಕೊಳ್ಳುವುದಕ್ಕೆ ನಮ್ಮ ದೇಶದಲ್ಲಿಯೇ ನಾವೇ ಪ್ರಥಮದಲ್ಲಿದ್ದೇವೆ. ಡಿಪಿಆರ್ ಮಾಡುವುದು, ಮಂಜೂರಾತಿ ಪಡೆದುಕೊಳ್ಳುವುದು ಈ ರೀತಿಯಲ್ಲಿ ನಾವೇ ಮಾಡಲಿದ್ದೇವೆ. The Government of India is appreciating this and also supporting us.

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ:-** ಮುಂದುವರೆದು ನಾನು ಹೇಳುವುದೇನೆಂದರೆ ಇಡೀ ರಾಜ್ಯದಲ್ಲಿ ಚಿಕ್ಕೋಡಿಯ ಸದಲಗಾ ವಿಧಾನಸಭಾ ಕ್ಷೇತ್ರಕ್ಕೆ ಹೆಚ್ಚಿನ ಹಣವನ್ನು ನೀಡಲಾಗಿದೆ. ಅದಕ್ಕಾಗಿ ನಾನು ಮಾನ್ಯ ಸಚಿವರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಆದರೆ ಸರ್ಕಾರ ಕೆಲಸಗಳ ನಿರ್ವಹಣೆಯ ಕಡೆಗೆ ಹೆಚ್ಚಿನ ಗಮನವನ್ನು ಹರಿಸಬೇಕು. ಅದರಲ್ಲಿ repetition of works, ಆಗಬಾರದು. ಮುಧೋಳ್, ನಿಪ್ಪಾಣಿ ರಸ್ತೆ ಮಹಾಲಿಂಗಪುರ, now it has been taken up under KSHIP. The Government of Karnataka is spending around 300 crores of rupees for that particular project. ಆದರೆ ಅದೇ ರಸ್ತೆಯ ಮೇಲೆ 10 ಕೋಟಿ ರೂಪಾಯಿಗಳನ್ನು ಕೆಲಸ ಪ್ರಾರಂಭಿಸುವ 6 ತಿಂಗಳಿಗೆ ಮೊದಲಿಗೆ ಆ ರಸ್ತೆಯ ನಿರ್ವಹಣೆಗಾಗಿ ಬಿಡುಗಡೆ ಮಾಡಲಾಗಿದೆ. ಇಂತಹ ಕಾಮಗಾರಿಗಳನ್ನು ತೆಗೆದುಕೊಳ್ಳುವ ಸಂದರ್ಭದಲ್ಲಿ, no such repetition of work has to be done. ಏಕೆಂದರೆ ಒಂದು ಯೋಜನೆಯನ್ನು ಕೈಗೆತ್ತಿಕೊಳ್ಳುವ ಸಂದರ್ಭದಲ್ಲಿ ಅದಕ್ಕೆ ಪೂರಕವಾಗಿ, unnecessarily the amount should not be spent on such roads. ಅದರ ಬಗ್ಗೆ ಗಮನ ಹರಿಸಬೇಕೆನ್ನುವ ವಿನಂತಿಯನ್ನು ನಾನು ಸರ್ಕಾರಕ್ಕೆ ಮಾಡಿಕೊಳ್ಳುತ್ತೇನೆ. ಅದರ ಬಗ್ಗೆ ಸಚಿವರು ದಯಮಾಡಿ ವಿವರಣೆಯನ್ನು ನೀಡಬೇಕು. ರಸ್ತೆಗಳನ್ನು ಎಷ್ಟು ಅವಧಿಗೆ ನಿರ್ವಹಣೆಗೆ ನೀಡಲಾಗಿದೆ, ಎಷ್ಟು ಹಣ ಈ ಯೋಜನೆಗೆ ತಗಲುತ್ತಿದೆ, ಯಾವ ಗುತ್ತಿಗೆದಾರರು ಅದನ್ನು ಮಾಡುತ್ತಿದ್ದಾರೆ ಎನ್ನುವುದು ಪಾರದರ್ಶಕವಾಗಿರಬೇಕು. Whether the maintenance is for the next five years or what? ಇದರ ಬಗ್ಗೆ ಪಾರದರ್ಶಕವಾಗಿ ಉಲ್ಲೇಖಿಸಿದಲ್ಲಿ ಈ ರಸ್ತೆಯ ನಿರ್ವಹಣೆ ಯಾರು ಮಾಡುತ್ತಾರೆನ್ನುವುದರ ಬಗ್ಗೆ ಸಾರ್ವಜನಿಕರಿಗೆ ಮಾಹಿತಿ ದೊರೆಯುತ್ತದೆ. ಇಲ್ಲದಿದ್ದರೆ ಇದನ್ನೆಲ್ಲ ಇಲಾಖೆಯವರು ಮಾಡುತ್ತಾರೆನ್ನುವ ಜಾರಿಕೆ ಉತ್ತರ ಜನರಿಗೆ ಸಿಗಬಹುದು. ಅದಕ್ಕಾಗಿಯೇ ಪಾರದರ್ಶಕವಾಗಿ ಆ ಎಲ್ಲಾ ರಸ್ತೆಗಳಿಗೆ ನಾಮಫಲಕಗಳನ್ನು ಅಳವಡಿಸಿ, ಅದರ ಮೇಲೆ ಆ ರಸ್ತೆಗಳ ನಿರ್ವಹಣೆ ಯಾರದೆನ್ನುವ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಮಾಹಿತಿಯನ್ನು ಸಾರ್ವಜನಿಕರಿಗೆ ಒದಗಿಸಬೇಕೆನ್ನುವ ವಿನಂತಿಯನ್ನು ನಾನು ತಮ್ಮ ಮೂಲಕ ಸರ್ಕಾರಕ್ಕೆ ಮಾಡಿಕೊಳ್ಳುತ್ತೇನೆ.

**ಡಾ||ಹೆಚ್.ಸಿ.ಮಹದೇವಪ್ಪ:-** ಮಾನ್ಯ ಸಭಾಪತಿಗಳೇ, ಮಾನ್ಯ ಸದಸ್ಯರು ಹೇಳಿದ ರೀತಿಯಲ್ಲಿ ಮುಧೋಳ್, ಚಿಕ್ಕೋಡಿ ಮತ್ತು ನಿಪ್ಪಾಣಿಯ ರಸ್ತೆಯ ಕೆಲಸಗಳನ್ನು ಒಂದು ದೊಡ್ಡ ಸಭೆ ನಡೆಸಿ ಪ್ರಾರಂಭಿಸಲಾಗಿತ್ತು. ಆ ಸಭೆಗೆ ಮಾನ್ಯ ಸದಸ್ಯರು ಕೂಡ ಬಂದಿದ್ದರು. ಈಗ ಹೆಚ್ಚು ಕಡಿಮೆ ಎಲ್ಲಾ ಕೆಲಸ ಮುಗಿದಿದೆ. ನಾನು ಆ ರಸ್ತೆಯ ಉದ್ದಗಲಕ್ಕೂ ಸಹ ಪ್ರವಾಸ ಮಾಡಿದ್ದೇನೆ. ನಾನು ಅಧಿಕಾರಕ್ಕೆ ಬಂದ ಮೇಲೆ ಆ ರಸ್ತೆ ಕೆಟ್ಟು ಹೋಗಿದ್ದಾಗಲೂ ಸಹ ಪ್ರವಾಸ ಮಾಡಿದ್ದೆನು. ಆನಂತರ ರಸ್ತೆ ಕೆಲಸ ಮುಗಿದ ಮೇಲೂ ಸಹ ನಾನು ನೋಡಿದ್ದೇನೆ. I think everybody is appreciating and enjoying it. ಆಮೇಲೆ ಅಲ್ಲಿ repetition ಆಗುವ ಪ್ರಮೇಯ ಬರುವುದಿಲ್ಲ. ಏಕೆಂದರೆ ನಮ್ಮ ಸರ್ಕಾರ ಬಂದ ಮೇಲೆ road information system ಮೇಲೆ ಒಂದು software develop ಮಾಡಿದ್ದೇವೆ. ಯಾವ್ಯಾವ ಊರಿನಲ್ಲಿ ಯಾವ ರಸ್ತೆ ಇತ್ತು, ಯಾರು ಅದನ್ನು ಮಾಡಿದ್ದರು, ಯಾವ ಕಾಲದಲ್ಲಿ ಮಾಡಿದ್ದರು, ಅದಕ್ಕೆ ಎಷ್ಟು ಖರ್ಚಾಗಿತ್ತು, ಅದರ ಕಾಲಮಿತಿ ಎಷ್ಟು ಎನ್ನುವ ಎಲ್ಲಾ ಮಾಹಿತಿಗಳನ್ನು ಸಾಫ್ಟ್‌ವೇರ್‌ನಲ್ಲಿ ಹಾಕಲಾಗಿದೆ. ಈಗ ರಸ್ತೆಗಳನ್ನು ಮಾಡುವಾಗ ಆಯಾ ರಸ್ತೆಗಳಿಗೆ ಎಷ್ಟು ಹಣ ಖರ್ಚಾಗಿದೆ, ಪ್ರಾಜೆಕ್ಟ್ ಯಾರದ್ದು, concessionaire ಯಾರು, ಎಷ್ಟು ವರ್ಷ ಬಾಳಿಕೆ ಬರಬೇಕು, ಅವುಗಳು ಕೆಟ್ಟು ಹೋದಾಗ ಅದರ ನಿರ್ವಹಣೆಯ ಜವಾಬ್ದಾರಿ ಯಾರದು, ಮತ್ತು ಟೆಂಡರ್ ನ guidelines, terms and conditions ಏನಿರುತ್ತದೆ, ಈ ಎಲ್ಲಾ ಮಾಹಿತಿಗಳನ್ನು ಒಳಗೊಂಡ ನಾಮಫಲಕಗಳನ್ನು ರಸ್ತೆಗಳಿಗೆ ಹಾಕಲಿಕ್ಕೆ ಈಗಾಗಲೇ ಕ್ರಮ ಕೈಗೊಂಡಿದ್ದೇವೆ. ಈಗಲೂ ಸಹ ಮಾಡುತ್ತೇವೆ.

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ:-** ಈ ಪದ್ಧತಿ ಇಡೀ ರಾಜ್ಯದಲ್ಲಿರಬಹುದು, ಆದರೆ ನಮ್ಮ ಭಾಗದಲ್ಲಿಲ್ಲ ಎನ್ನುವುದನ್ನು ಮಾನ್ಯ ಸಚಿವರು ಗಮನಿಸಬೇಕು.

**ಡಾ||ಹೆಚ್.ಸಿ.ಮಹದೇವಪ್ಪ:-** ಮಾನ್ಯ ಸಭಾಪತಿಗಳೇ, ಮಾನ್ಯ ಸದಸ್ಯರ ಕಾಳಜಿ ಅರ್ಥ ಆಗಿದೆ. ಅವರು ಹೇಳಿದರೂ ಈ ಕೆಲಸ ಮಾಡುತ್ತೇವೆ. ಅವರು ಹೇಳದಿದ್ದರೂ ಸಹ ಈ ಕೆಲಸ ಮಾಡುತ್ತೇವೆ. ಅವರು ಹೇಳಿರುವ ಹಿನ್ನೆಲೆಯಲ್ಲಿ ಆ ಭಾಗದಲ್ಲಿ ಇನ್ನೂ ತ್ವರಿತವಾಗಿ ಮಾಡುತ್ತೇವೆ.

**ಸಭಾಪತಿಯವರು:-** ಮುಂದಿನ ಪ್ರಶ್ನೆ ಶ್ರೀಕಂಠೇಗೌಡರದ್ದು ಇದೆ, ಅವರು ಟ್ರಾಫಿಕ್‌ನಲ್ಲಿ ಸಿಕ್ಕಿಕೊಂಡಿದ್ದು ಸ್ವಲ್ಪ ತಡವಾಗಿ ಬರುವುದಾಗಿ ನನಗೆ ಮಾಹಿತಿ ನೀಡಿದ್ದಾರೆ. ಆದ್ದರಿಂದ ಸ್ವಲ್ಪ ಸಮಯದ ನಂತರ ಅವರ ಪ್ರಶ್ನೆಯನ್ನು ತೆಗೆದುಕೊಳ್ಳಲಾಗುವುದು.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಪ್ರಶ್ನೆ ಸಂಖ್ಯೆ 2874**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಪ್ರದೀಪ್ ಶೆಟ್ಟರ್:–** ಮಾನ್ಯ ಸಭಾಪತಿಗಳೇ, ನಮ್ಮ ಧಾರವಾಡ ಗದಗ ಮತ್ತು ಹಾವೇರಿ ಭಾಗದಲ್ಲಿ ರೈತರು ಬೆಳೆಯನ್ನು ಬೆಳೆಯಲು ವಿದ್ಯುತ್ತಿನ ಅಭಾವ ಹೆಚ್ಚಾಗುತ್ತಿದೆ. ಈಗ ವಿದ್ಯಾರ್ಥಿಗಳ ಅಡ್ಮಿಷನ್ಸ್ ಪ್ರಾರಂಭ ಆಗಿವೆ, ಶಾಲೆಗಳಿಗೆ ಪ್ರವೇಶ ಪಡೆಯಲು ಶಾಲೆಗಳಲ್ಲಿ ಕರೆಂಟ್ ಇರುವುದಿಲ್ಲ ಎನ್ನುವ ದೂರುಗಳು ಬಂದಿವೆ. ಆಮೇಲೆ ಜಮೀನನ್ನು ಉತಾರ್ ಪಡೆಯಲು ಸಹ ರೈತರಿಗೆ ತುಂಬಾ ತೊಂದರೆ ಆಗುತ್ತಿದೆ. ಇವೆಲ್ಲ ಸಮಯಕ್ಕೆ ಸರಿಯಾಗಿ ಆಗದಿದ್ದರೆ ಬಹಳ ಕಷ್ಟ ಆಗುತ್ತದೆ. ಈ ರೈತರು ಯಾರು ಮಂತ್ರಿಗಳಿಗೆ ದೂರನ್ನು ನೀಡುವುದಿಲ್ಲ, ನಮಗೆ ದೂರನ್ನು ನೀಡುತ್ತಾರೆ ದಯಮಾಡಿ ಮಾನ್ಯ ಸಚಿವರು ಈ ವಿಚಾರವನ್ನು ಬಹಳ ಗಂಭೀರವಾಗಿ ಪರಿಗಣಿಸಿ ನಮ್ಮಲ್ಲಿರುವ ಸಮಸ್ಯೆಯನ್ನು ಪರಿಹರಿಸಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಡಿ.ಕೆ.ಶಿವಕುಮಾರ್:–** ಮಾನ್ಯ ಸಭಾಪತಿಗಳೇ, ಪ್ರದೀಪ್ ಶೆಟ್ಟರ್ ಸಾಹೇಬರು ಏನು ಪ್ರಸ್ತಾಪಿಸಿದ್ದಾರೆ ಆ ವಿಚಾರವನ್ನು ನಾವು ಸಂಪೂರ್ಣವಾಗಿ ಗಮನಿಸಿದ್ದೇವೆ. ಇಡೀ ರಾಜ್ಯದಲ್ಲಿ 25 ವರ್ಷಗಳಿಂದ ಬರಗಾಲವಿದೆ. 125 ರಿಂದ 144 ತಾಲ್ಲೂಕುಗಳನ್ನು ಬರಗಾಲ ಪೀಡಿತ ತಾಲ್ಲೂಕುಗಳೆಂದು ಘೋಷಣೆಯನ್ನು ಮಾಡಲಾಗಿದೆ. ಇಂತಹ ಸಂದರ್ಭದಲ್ಲಿಯೂ ಕೂಡ ಕಳೆದ 3 ವರ್ಷಗಳಿಂದ ವಿದ್ಯಾರ್ಥಿಗಳನ್ನು ಗಮನದಲ್ಲಿಟ್ಟುಕೊಂಡು ರೈತರನ್ನು ಗಮನದಲ್ಲಿಟ್ಟುಕೊಂಡು ನಾವು ವಿದ್ಯುತ್ತಿನ ಸರಬರಾಜನ್ನು ಮಾಡುತ್ತಿದ್ದೇವೆ. ಮಾನ್ಯ ಸದಸ್ಯರು ಪ್ರಸ್ತಾಪಿಸಿದಂತೆ ಆ ಭಾಗದ ಎಸ್ಕಾಂ ವ್ಯಾಪ್ತಿಯಲ್ಲಿ, ಎಲ್ಲಾ ಶಾಸಕರುಗಳಿಗೂ ಸಹ ಈ ತಿಂಗಳಿನಿಂದ ಪ್ರತಿಯೊಂದು ಫೀಡರ್‌ನಲ್ಲಿಯೂ ಏನೇನು ಪವರ್ ಎಷ್ಟು ಗಂಟೆ ಹೋಗುತ್ತದೆ ಎನ್ನುವ ಮಾಹಿತಿಯನ್ನು ಅವರಿಗೆ ಎಸ್‌ಎಂಎಸ್ ಮೂಲಕ ನೀಡಬೇಕೆಂದು ಈಗಾಗಲೇ ನಾನು ಆದೇಶ ನೀಡಿದ್ದೇನೆ. ಈಗ ಬೆಂಗಳೂರಿನಲ್ಲಿ ಪ್ರಾರಂಭಿಸಲಾಗಿದೆ, ಎಸ್ಕಾಂನಲ್ಲಿಯೂ ಸಹ ಪ್ರಾರಂಭಿಸಲಾಗುವುದು. ಎಂಎಲ್‌ಸಿ ಗಳಿಗೂ ಆ ಮಾಹಿತಿ ದೊರೆಯುವ ವ್ಯವಸ್ಥೆಯನ್ನು ನಾನು ಮಾಡಿಕೊಡುತ್ತೇನೆ. ಅವರ ಜಿಲ್ಲೆ ಅಥವಾ ತಾಲ್ಲೂಕು ಯಾವುದಿದ್ದರೂ ಮಾಹಿತಿಯನ್ನು ಪಡೆಯುವ ವ್ಯವಸ್ಥೆಯನ್ನು ಮಾಡುತ್ತೇನೆ. ವಿದ್ಯುತ್ ನಮಗೆ ಕೇವಲ 3–4 ಗಂಟೆಗಳ ಕಾಲ ಮಾತ್ರ ದೊರೆಯುತ್ತಿದೆ ಎನ್ನುವ ದೂರುಗಳು ನಮಗೆ ಬಂದಿದೆ. ಆದರೆ ಎಸ್ಕಾಂ ವ್ಯಾಪ್ತಿಯಲ್ಲಿ 6–7 ಗಂಟೆ ವಿದ್ಯುತ್ ನೀಡಬೇಕೆಂದು ನಾವು ಯೋಚನೆ ಮಾಡಿದ್ದೆವು, ಆದರೆ ಅವರಿಗೆ 10–12 ಗಂಟೆಗಳ ಕಾಲ ವಿದ್ಯುತ್ ಸಿಗುತ್ತಿದೆ. ನಾನು ಏಕೆ ಇಷ್ಟು ಜಾಸ್ತಿ ಕೊಡುತ್ತಿದ್ದೀರಾ ಎಂದು ಸಹ ಅಲ್ಲಿನ ಅಧಿಕಾರಿಗಳನ್ನು ಕೇಳಿದ್ದೇನೆ. ಉದಾಹರಣೆಗೆ ಉಡುಪಿ ಜಿಲ್ಲೆಗೆ 24 ಗಂಟೆಗಳ ಕಾಲ ವಿದ್ಯುತ್ತನ್ನು ನೀಡಲಾಗುತ್ತಿದೆ. ಏಕೆಂದರೆ ಮಳೆ ಜಾಸ್ತಿಯಾದಾಗ ಕೆಲವು ಕಡೆಗಳಲ್ಲಿ ಗ್ರಿಡ್ ಅನ್ನು ನಿರ್ವಹಣೆ ಮಾಡುವ ಸಲುವಾಗಿ ವಿದ್ಯುತ್ತನ್ನು ನೀಡಬೇಕಾಗುತ್ತದೆ. ರೈತರ ಪಂಪ್‌ಸೆಟ್‌ಗಳಿಗೆ ಅವರ ಬೇಡಿಕೆಯಷ್ಟು ವಿದ್ಯುತ್ತನ್ನು

**" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "**

ಹರಿಸಲಾಗುತ್ತಿದೆ. ನಮ್ಮಲ್ಲಿ excess power ಇದೆ, ಕಳೆದ 4 ವರ್ಷಗಳಿಂದ 4000-6000 ಮೆ.ವ್ಯಾಟ್ ವಿದ್ಯುತ್ತನ್ನು ಗ್ರಿಡ್‌ಗೆ ನಾವು add ಮಾಡಿದ್ದೇವೆ. We have sufficient power. ಇದರ ಬಗ್ಗೆ ಸದಸ್ಯರು ಚಿಂತೆ ಮಾಡುವುದು ಬೇಕಾಗಿಲ್ಲ. ಬೇರೆ ಏನಾದರೂ ತೊಂದರೆಗಳಿದ್ದರೆ ಕೇಳಲಿ ನಾವು ಅದಕ್ಕೆ ಸ್ಪಂದಿಸ ಕೆಲಸ ಮಾಡಿಕೊಡುತ್ತೇವೆ. ಮೊನ್ನೆಯ ದಿವಸ ಕೆಳಮನೆಯ ವಿರೋಧ ಪಕ್ಷದ ನಾಯಕರಾದ ಶ್ರೀ ಜಗದೀಶ್ ಶೆಟ್ಟರ್‌ರವರು ಹುಬ್ಬಳ್ಳಿಯಲ್ಲಿ ಏನೋ ವಿದ್ಯುತ್ತಿನಲ್ಲಿ ಹೆಚ್ಚುಕಡಿಮೆ ಆದಾಗ ಅವರೇ ಕೆಪಿಟಿಸಿಎಲ್ ಅಧಿಕಾರಿಗಳ ಜೊತೆಯಲ್ಲಿ ಮಾತನಾಡಿದಾಗ 3 ಗಂಟೆಗಳ ಒಳಗೆ ಅಧಿಕಾರಿಗಳು ಬಂದು ಇದ್ದ ಸಮಸ್ಯೆಯನ್ನು ಪರಿಹರಿಸಿದರು ಎನ್ನುವ ವಿಚಾರವನ್ನು ಅವರು ನನಗೆ ದೂರವಾಣಿ ಮುಖೇನ ತಿಳಿಸಿದರು. ಹಾಗಾಗಿ, we are there. ಇದು 24 ಗಂಟೆಗಳ ಸೇವೆ ಇರುತ್ತದೆ. ಯಾರಿಗೆ ಏನೇ ತೊಂದರೆ ಆದರೂ ಸಹ ಫೋನ್ ಮಾಡಿದರೆ we will attend to your works.

**ಶ್ರೀ ಪ್ರದೀಪ್ ಶೆಟ್ಟರ್:-** ನಮ್ಮದು ಸ್ವಲ್ಪ ಗ್ರಾಮೀಣ ಪ್ರದೇಶ ಆಗುತ್ತದೆ. ಧಾರವಾಡ ರೂರಲ್, ಜಾಸ್ತಿ ಅವರು ಈ ರೀತಿ contact ಮಾಡುವುದಕ್ಕೆ ಹೋಗುವುದಿಲ್ಲ. ಹಾಗಾಗಿ ತಾವಾಗಿಯೇ 24 ಗಂಟೆಗಳ ಕಾಲ ವಿದ್ಯುತ್ತನ್ನು ನೀಡಿ, ಇಲ್ಲಿನ ಅಭಿವೃದ್ಧಿಗಳಿಗೆ ಅನುಕೂಲ ಮಾಡಿಕೊಡಬೇಕು.

**ಶ್ರೀ ಡಿ.ಕೆ.ಶಿವಕುಮಾರ್:-** 24 ಗಂಟೆಗಳ ಕಾಲ ಅಲ್ಲಿ ವಿದ್ಯುತ್ತನ್ನು ನೀಡುವುದಕ್ಕೆ ಆಗುವುದಿಲ್ಲ. ಈಗಾಗಲೇ ಅಲ್ಲಿ 7 ಗಂಟೆಗಳ ಕಾಲ ವಿದ್ಯುತ್ತನ್ನು ನೀಡಲಾಗುತ್ತಿದೆ. 9000 ಕೋಟಿ ರೂಪಾಯಿಗಳ ವಿದ್ಯುತ್ತಿನ ಸಬ್ಸಿಡಿಯನ್ನು ರೈತರಿಗೆ ನೀಡಲಾಗುತ್ತಿದೆ. ನಿಮ್ಮ ಕಡೆಯ ರೈತರಿಗೆ 60,000 ರೂಪಾಯಿಗಳ ಸಬ್ಸಿಡಿ ಬೀಳುತ್ತಿದೆ. ಬೆಂಗಳೂರಿನ ಸುತ್ತಮುತ್ತ ಒಬ್ಬ ರೈತನಿಗೆ 40,000 ರೂಪಾಯಿ ಬೀಳುತ್ತಿದೆ. ಹೀಗೆ 9000 ಕೋಟಿ ರೂಪಾಯಿಗಳ ಉಚಿತ ವಿದ್ಯುತ್ತನ್ನು ರೈತರಿಗೆ ನೀಡಲಾಗುತ್ತಿದೆ.

**ಶ್ರೀ ಪ್ರದೀಪ್ ಶೆಟ್ಟರ್:-** ನಮ್ಮ ಭಾಗಕ್ಕೆ 24 ಗಂಟೆಗಳ ಕಾಲ ವಿದ್ಯುತ್ ನೀಡುವ ಪ್ರಯತ್ನ ಮಾಡಿ, ನಮ್ಮ ರಾಜ್ಯವನ್ನು ಸಹ ಗುಜರಾತಿನ ಮಾದರಿಯಂತೆ ಮಾಡಬೇಕು.

**ಶ್ರೀ ಡಿ.ಕೆ.ಶಿವಕುಮಾರ್:-** ಗುಜರಾತ್ ಅಲ್ಲ, ಎಲ್ಲಾ ರಾಜ್ಯಗಳ ಮಾದರಿಯನ್ನು ಮೀರಿಸುವಂತೆ ನಾವು ಕೆಲಸ ಮಾಡುತ್ತಿದ್ದೇವೆ. ಗುಜರಾತಿನ ಮಾದರಿ ಮಾಡುವುದಕ್ಕೆ ನಾವು ತಯಾರಿದ್ದೇವೆ, ತೊಂದರೆ ಇಲ್ಲ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಪ್ರಶ್ನೆ ಸಂಖ್ಯೆ 2840**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಬಿ.ಜೆ.ಪುಟ್ಟಸ್ವಾಮಿ:-** ಮಾನ್ಯ ಸಭಾಪತಿಗಳೇ, ನಮ್ಮದು ರೈತ ಪರ ಸರ್ಕಾರ ಎಂದು ಹೇಳಿಕೊಳ್ಳುವ ಸರ್ಕಾರ ಕೃಷಿ ಭಾಗ್ಯದಲ್ಲಿ ಎಷ್ಟು ಹಣ ಖರ್ಚು ಮಾಡಿದೆ ಎನ್ನುವುದನ್ನು ತಿಳಿದುಕೊಳ್ಳಬೇಕೆನ್ನುವ ಕುತೂಹಲದಿಂದ ನಾನಿವತ್ತು ಈ ಪ್ರಶ್ನೆಯನ್ನು ಕೇಳಿದ್ದೇನೆ. ಅದಕ್ಕೆ ಕೃಷಿ ಭಾಗ್ಯ ಯೋಜನೆಯಡಿ ಮಳೆ ನೀರು ಸಂಗ್ರಹಣೆ ಹಾಗೂ ಸಂರಕ್ಷಿತ ನೀರಾವರಿಗೆ ಒತ್ತು ನೀಡಲಾಗಿದ್ದು ಅದಕ್ಕಾಗಿ ಸ್ಥಳದಲ್ಲಿಯೇ ಮಣ್ಣಿನ ತೇವಾಂಶ ಸಂರಕ್ಷಣೆ ಕ್ರಮಗಳು(ಬದು,ನಿರ್ಮಾಣ), ನೀರು ಸಂಗ್ರಹಣೆಗಾಗಿ ಕೃಷಿ ಹೊಂಡ, ನೀರು ಹಿಂಗದಂತೆ ತಡೆಯಲು ಪಾಲಿಥೀನ್ ಹೊದಿಕೆ/ಪರ್ಯಾಯ ಮಾದರಿ ಅಳವಡಿಕೆ, ನೀರು ಎತ್ತಲು ಡಿಸೇಲ್ ಪಂಪ್‌ಸೆಟ್, ನೀರು ಹಾಯಿಸಲು ಲಘು ನೀರಾವರಿ ಘಟಕ, ಬೆಳೆ ಪದ್ಧತಿ ಪ್ರಾತ್ಯಕ್ಷತೆ, ನೆರಳು ಪರದೆ, ಪಶುಸಂಗೋಪನಾ ಚಟುವಟಿಕೆಗಳಿಗಾಗಿ ಕಳೆದ 4 ವರ್ಷ 3 ತಿಂಗಳುಗಳಲ್ಲಿ 1447 ಕೋಟಿ ರೂಪಾಯಿಗಳನ್ನು ನೀಡಲಾಗಿದೆ. ಅಂದರೆ ವರ್ಷಕ್ಕೆ 362 ಕೋಟಿ ರೂಪಾಯಿಗಳು. ಇಲ್ಲಿ 8 ಐಟೆಮ್‌ಗಳಿದ್ದು ಒಂದು ಐಟೆಮ್‌ಗೆ ನೀಡಿರುವ ಮೊತ್ತ 45 ಕೋಟಿ ರೂಪಾಯಿಗಳು. ಈಗಾಗಲೇ ನನಗೆ ತಿಳಿದಿರುವ ಹಾಗೆ ಸರ್ಕಾರ ನೀಡಿರುವ ಮಾಹಿತಿಯ ಪ್ರಕಾರ ಕೃಷಿಯ ಬೆಳವಣಿಗೆ 2013 ರಲ್ಲಿ 14% ಇದ್ದರೆ ಈಗ 4.7% ಗೆ ಕುಸಿದಿದೆ. ಅಂದರೆ ಕೃಷಿ ಭಾಗ್ಯಕ್ಕೆ ಈ ಸರ್ಕಾರ ಕೊಟ್ಟಿರುವ ಮನ್ನಣೆ ಸರಿಯೇ? ಇದನ್ನು ಹೆಚ್ಚಿಗೆ ಮಾಡುವ ನಿಟ್ಟಿನಲ್ಲಿ ಕೃಷಿ ಹೊಂಡ ಬಹಳ ಮುಖ್ಯ, ಕೃಷಿ ಹೊಂಡಗಳು ಹೆಚ್ಚಾದಲ್ಲಿ ಮಳೆ ಬಂದಾಗ ನೀರು ಶೇಖರಗೊಂಡು ಬರಗಾಲದಲ್ಲಿ ಉಪಯೋಗಕ್ಕೆ ಬರುತ್ತದೆ. ಈ ಕೃಷಿ ಹೊಂಡಕ್ಕೆ ಎಷ್ಟು ಹಣ ನೀಡಲಾಗುತ್ತಿದೆ? ಹಾಗೆಯೇ ಇನ್ನುಳಿದವುಗಳಿಗೆ ಹೆಚ್ಚಿಗೆ ಹಣ ನೀಡಲು ಸಾಧ್ಯವೇ ಎನ್ನುವುದನ್ನು ಮಾನ್ಯ ಸಚಿವರು ತಿಳಿಸಬೇಕು.

**ಶ್ರೀ ಕೃಷ್ಣ ಬೈರೇಗೌಡ:-** ಮಾನ್ಯ ಸಭಾಪತಿಗಳೇ, ಈ ಯೋಜನೆ ಅನುಷ್ಠಾನಗೊಂಡಿದ್ದು 2015-16ರ ನಂತರ, ಪ್ರಾರಂಭದಲ್ಲಿ ಇದರ ಬಗ್ಗೆ ರೈತರಿಗೆ ಅರಿವು ಮೂಡಿಸುವ ಬಹಳಷ್ಟು ಪ್ರಯತ್ನಗಳನ್ನು ಮಾಡಲಾಯಿತು. ಆರಂಭದಲ್ಲಿ ರೈತರು ಇದನ್ನು ಅರ್ಥ ಮಾಡಿಕೊಳ್ಳುವುದಕ್ಕೆ ಬಹಳ ಸಮಯ ತೆಗೆದುಕೊಂಡರು. ಕಳೆದ ವರ್ಷದಿಂದ ಇದಕ್ಕೆ ಬಹಳ ಬೇಡಿಕೆ ಬರುತ್ತಿದೆ. ಕಳೆದ ವರ್ಷದ ಆಯವ್ಯಯದಲ್ಲಿ ನಾವು ಇದಕ್ಕಾಗಿ 200 ಕೋಟಿ ರೂಪಾಯಿಗಳನ್ನು ಇಟ್ಟಿದ್ದೆವು.

(ಮುಂದು)

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

(674) 11.50 13-06-2017 ಎಂವಿ:ವಿಕೆ

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಕೃಷ್ಣ ಬೈರೇಗೌಡ (ಮುಂದು...):-**

ಬೇಡಿಕೆ ಜಾಸ್ತಿ ಬಂದ ಮೇಲೆ ಅದನ್ನು ಪರಿಷ್ಕರಣೆ ಮಾಡಿ ಮತ್ತೆ ಅದನ್ನು 500 ಕೋಟಿ ಮಾಡಿ, ಆ 500 ಕೋಟಿ ರೂಪಾಯಿಗಳನ್ನು ಸಹ ಕಳೆದ ವರ್ಷ ಖರ್ಚು ಮಾಡಿದ್ದೇವೆ. ಈ ವರ್ಷ ಮುಖ್ಯಮಂತ್ರಿಗಳು ಕೃಷಿ ಇಲಾಖೆಯ ಮುಖಾಂತರ, ಕೃಷಿ ಭಾಗ್ಯಕ್ಕೆ 600 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಅದು ಅಲ್ಲದೆ ತೋಟಗಾರಿಕೆ ಇಲಾಖೆಯ ಮುಖಾಂತರವೂ 200 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಈ ವರ್ಷ ಇದಕ್ಕೆ ಒಟ್ಟು 800 ಕೋಟಿ ರೂಪಾಯಿಗಳ ಹಣವನ್ನು ಇಟ್ಟುಕೊಂಡಿದ್ದೇವೆ. ಇಲ್ಲಿಯವರೆವಿಗೂ ಸುಮಾರು ಒಂದು ಲಕ್ಷದ ಐವತ್ತೈದು ಸಾವಿರ ಕೃಷಿ ಹೊಂಡಗಳು ನಿರ್ಮಾಣಗೊಂಡಿವೆ. ಈ ಕೃಷಿ ಹೊಂಡ ಮಾಡುವುದೇನೂ ಹೊಸದಲ್ಲ. ತಾವು ಕೃಷಿ ಭಾಗ್ಯದ ವೈಶಿಷ್ಟ್ಯತೆ ಏನೆಂದು ಕೇಳಿದರೆ, ಕೃಷಿ ಹೊಂಡಗಳ ಜೊತೆಗೆ ಆ ನೀರನ್ನು ಉಪಯೋಗಿಸುವುದಕ್ಕೆ ನಾವು ಡೀಸೆಲ್ ಪಂಪ್‌ಗಳನ್ನು ಸಹ ಕೊಡುತ್ತೇವೆ ಮತ್ತು ಇಲ್ಲಿ ಅಲ್ಪ ನೀರು ಸಹ ಸದುಪಯೋಗವಾಗಬೇಕೆಂದು ಕಡ್ಡಾಯವಾಗಿ ಇದರಲ್ಲಿ ಹನಿ ನೀರಾವರಿಯನ್ನು ಮತ್ತು micro irrigation ಅನ್ನು ಸಹ ಅಳವಡಿಸಿದ್ದೇವೆ. ಇದು ಸಮಗ್ರವಾದಂತಹ ಯೋಜನೆ, ಅದು ಇದರ ವಿನೂತನ ವಿಧಾನ, ಹಾಗಾಗಿ ಇದಕ್ಕೆ ಅನುದಾನವನ್ನು ಹೆಚ್ಚಿಗೆ ಕೊಟ್ಟಿದ್ದೇವೆ. ತಮ್ಮ ಪಕ್ಷದ ಕೆಲವು ನಾಯಕರು ಹಣ ಬಳಕೆಯಾಗಿಲ್ಲವೆಂದು ಸಹ ಆರೋಪ ಮಾಡಿದ್ದಾರೆ. ಈಗ ಇದರ ಅಂಕಿ-ಸಂಖ್ಯೆಯನ್ನು ನೋಡಿದರೆ ತಮಗೆ ಗೊತ್ತಾಗುತ್ತದೆ, ಕಳೆದ ವರ್ಷದಿಂದ ನಾವು ಇಟ್ಟಿರುವಂತಹ ಹಣಕ್ಕಿಂತ ಹೆಚ್ಚು ಹಣ ಖರ್ಚು ಮಾಡುತ್ತಿದ್ದೇವೆ. Revised Estimates ನಲ್ಲಿ ಹೆಚ್ಚಿಗೆ ಹಣವನ್ನು ಪಡೆದುಕೊಂಡು ಸಹ ಖರ್ಚು ಮಾಡುತ್ತಿದ್ದೇವೆ. ನಾವು ಈ ವರ್ಷ 600 ಕೋಟಿ ರೂಪಾಯಿಗಳಿಗಿಂತ ಹೆಚ್ಚು ಖರ್ಚು ಮಾಡಬೇಕು ಎನ್ನುವಂತಹ ಗುರಿಯನ್ನು ಇಟ್ಟುಕೊಂಡಿದ್ದೇವೆ. ಖರ್ಚಾದರೆ ಪೂರಕ ಅಂದಾಜುಗಳಲ್ಲಿ ಮತ್ತೆ ಹೆಚ್ಚಿಗೆ ಕೊಡುತ್ತೇವೆಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಇದರಿಂದ ಪ್ರಯೋಜನವೇನು ಎನ್ನುವಂತಹ ಮಾತನ್ನು ಸಹ ತಾವು ಹೇಳಿದ್ದೀರಿ, ಒಂದು ಅಧ್ಯಯನವನ್ನು ಸಹ ಮಾಡಿಸಿದ್ದೇವೆ. ಬೇರೆ-ಬೇರೆ ಬೆಳೆಗಳಿಗೆ ಈ ಮಳೆ ನೀರನ್ನು ಸಂಗ್ರಹ ಮಾಡಿ, ಅದನ್ನು ಮರು ಉಪಯೋಗ ಮಾಡುವುದರಿಂದ, ಯಾವ ರೀತಿ ಕೃಷಿಭಾಗ್ಯದಿಂದ ರೈತರಿಗೆ ಅನುಕೂಲವಾಗುತ್ತದೆಂದು, ಅದನ್ನು ನಾವು ನಮ್ಮ ಕೃಷಿ ಬೆಲೆ ಆಯೋಗದಿಂದ ಮತ್ತು ವಿಶ್ವವಿದ್ಯಾಲಯಗಳಿಂದ ವೈಜ್ಞಾನಿಕ ಅಧ್ಯಯನವನ್ನು ಸಹ ಮಾಡಿಸಿದ್ದೇವೆ. ಅದರಲ್ಲಿ ನಮಗೆ ಕಂಡು ಬಂದ ಹಾಗೆ ಯಾವ ರೈತರು ಕೃಷಿಭಾಗ್ಯವನ್ನು ಅಳವಡಿಸಿಕೊಂಡಿದ್ದಾರೆ, ಅಂತಹವರಿಗೆ, ಶೇಕಡ 25 ರಿಂದ ಶೇಕಡ 100-120 ರವರೆವಿಗೂ ಹೆಚ್ಚಿಗೆ ಇಳುವರಿ ಬಂದಿದೆ. ಒಂದೊಂದು ಬೆಳೆಗೆ, ಒಂದೊಂದು ಜಿಲ್ಲೆಯಲ್ಲಿ ಒಂದೊಂದು ತರಹ ಹೆಚ್ಚಿಗೆ ಇಳುವರಿ ಬಂದಿದೆ. ಬೇರೆಯವರಿಗೆ ಹೋಲಿಕೆ ಮಾಡಿದಾಗ, ಯಾರು ಕೃಷಿ ಭಾಗ್ಯವನ್ನು ಮಾಡಿಕೊಂಡಿಲ್ಲ, ಅವರಿಗೆ ಹೋಲಿಕೆ ಮಾಡಿಕೊಂಡರೆ, ಕೃಷಿಭಾಗ್ಯ ಮಾಡಿಕೊಂಡು ನೀರನ್ನು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಮರು ಉಪಯೋಗ ಮಾಡಿಕೊಂಡವರಿಗೆ ಶೇಕಡ 25 ರಿಂದ ಶೇಕಡ 125ವರೆಗೆ ಬೆಳೆಗಳಿಗೆ ಹೆಚ್ಚುವರಿ ಇಳುವರಿ ಬಂದಿದೆ. ಇದರ ಉಪಯೋಗವನ್ನು ಹೆಚ್ಚಿಗೆ ಮಾಡಬೇಕೆಂದು ತಾವು ಹೇಳುತ್ತಿದ್ದೀರಾ, ಖಂಡಿತವಾಗಿ ಈ ವರ್ಷ ಮುಗಿಯುವುದರೊಳಗಾಗಿ ಒಟ್ಟು 2000 ದಿಂದ 2200 ಕೋಟಿ ರೂಪಾಯಿಯನ್ನು ಈ ಕೃಷಿಭಾಗ್ಯ ಯೋಜನೆಯ ಅಡಿಯಲ್ಲಿ ಖರ್ಚು ಮಾಡಬೇಕೆಂಬ ಗುರಿಯನ್ನು ಇಟ್ಟುಕೊಂಡಿದ್ದೇವೆ. ಈ ವರ್ಷ ಮುಗಿಯುವುದರೊಳಗಡೆ, ರಾಜ್ಯದಲ್ಲಿ ಕನಿಷ್ಠ ಎರಡು ಲಕ್ಷ ಕೃಷಿ ಹೊಂಡಗಳನ್ನು ಮಾಡಬೇಕೆಂಬ ಗುರಿಯನ್ನು ಇಟ್ಟುಕೊಂಡಿದ್ದೇವೆ. ಇದಕ್ಕೆ ಹೆಚ್ಚಿಗೆ ಬೇಡಿಕೆ ಬಂದಷ್ಟು ಮಾನ್ಯ ಮುಖ್ಯಮಂತ್ರಿಗಳು ಸಂಪೂರ್ಣ ಸಹಕಾರ ಕೊಡುತ್ತೇನೆಂದು ಹೇಳಿದ್ದಾರೆ. ಖಂಡಿತ ತಮ್ಮ ಭಾವನೆಯನ್ನು ಗಮನದಲ್ಲಿಟ್ಟುಕೊಂಡು ಇದನ್ನು ಇನ್ನು ಹೆಚ್ಚಿಗೆ ಮಾಡುತ್ತೇವೆ.

**ಶ್ರೀ ಬಿ.ಜೆ.ಪುಟ್ಟಸ್ವಾಮಿ:-** ಮಾನ್ಯ ಸಭಾಪತಿಯವರೆ, 2017-18ನೇ ಸಾಲಿಗೆ 2000 ಕೋಟಿ ರೂಪಾಯಿಗಳನ್ನು ಕೊಡುತ್ತೇವೆಂದು ಹೇಳುತ್ತೀರಾ? ಆದರೆ ಬಜೆಟ್‌ನಲ್ಲಿ 600 ಕೋಟಿ ರೂಪಾಯಿಗಳಿಗೆ ಮಾತ್ರ provision ಮಾಡಿದ್ದೀರಿ. 600 ಕೋಟಿ ರೂಪಾಯಿಗಳನ್ನು ಕೊಟ್ಟಿರುವಾಗ, 2000 ಕೋಟಿ ರೂಪಾಯಿಗಳನ್ನು ಹೇಗೆ increase ಮಾಡುತ್ತೀರಾ?

**ಶ್ರೀ ಕೃಷ್ಣ ಬೈರೇಗೌಡ:-** ಮಾನ್ಯ ಸಭಾಪತಿಯವರೆ, ಈ ವರ್ಷ ನಮ್ಮಲ್ಲಿ 600 ಕೋಟಿ ರೂಪಾಯಿ ಇದೆ ಮತ್ತು ತೋಟಗಾರಿಕೆಯಲ್ಲಿ 200 ಕೋಟಿ ರೂಪಾಯಿ ಇದೆ, ಒಟ್ಟು 800 ಕೋಟಿ ರೂಪಾಯಿ ಇದೆ. ನಾನು ನಮ್ಮ ಇಲಾಖೆಯಿಂದ ಹೇಳುವುದಾದರೆ ಈ ವರ್ಷ ಮುಗಿಯುವುದರೊಳಗಾಗಿ ಒಟ್ಟು 2200 ಕೋಟಿ ರೂಪಾಯಿಗಳಿಗಿಂತ ಹೆಚ್ಚು ಹಣವನ್ನು ಈ ಯೋಜನೆಯಲ್ಲಿ ಖರ್ಚು ಮಾಡುತ್ತೇವೆ, ಅಂದರೆ ಮೂರು ವರ್ಷದ ಅವಧಿಯಲ್ಲಿ ಎಂದು ಹೇಳುತ್ತೇನೆ.

**ಸಭಾಪತಿಯವರು:-** ಧನ್ಯವಾದಗಳು. ಮಾನ್ಯ ಸದಸ್ಯರಾದಂತಹ ಶ್ರೀ ಕೆ.ಟಿ.ಶ್ರೀಕಂಠೇಗೌಡರು ತಮ್ಮ ಪ್ರಶ್ನೆಯನ್ನು ಕೇಳಬಹುದು.

**ಚುಕ್ಕೆಗುರುತಿನ ಪ್ರಶ್ನೆ ಸಂಖ್ಯೆ 2815**

**(ಉತ್ತರವನ್ನು ಒದಗಿಸಲಾಗಿದೆ)**

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೆ, ಉತ್ತರ ಸಿಕ್ಕಿದೆ. ಇವತ್ತಿನ ದಿವಸ ನಮ್ಮ ಮಂಡ್ಯ ಮತ್ತು ಮೈಸೂರು ಭಾಗಗಳಲ್ಲಿ ಬಹಳ ಪ್ರಕರಣಗಳಲ್ಲಿ ಕಾನೂನುಗಳನ್ನು ಗಾಳಿಗೆ ತೂರಿದಂತಹ ಸಂದರ್ಭಗಳು ನಮ್ಮ ಎದುರು ದಾಖಲಾಗಿವೆ. ಏಕೆ ಈ ವ್ಯತ್ಯಯವಾಗುತ್ತಿದೆಂದು ನಮಗೆ ಅರ್ಥವಾಗುತ್ತಿಲ್ಲ. ಇದರಿಂದ ಸರ್ಕಾರಕ್ಕೆ ನೂರಾರು ಕೋಟಿ ರೂಪಾಯಿಗಳು ನಷ್ಟವಾಗುವಂತಹ ಸಂದರ್ಭಗಳು ಬಂದಿವೆ. ಏಕೆಂದರೆ ನಾನು ನಿಮಗೆ ಒಂದು ಉದಾಹರಣೆ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಹೇಳುತ್ತೇನೆ, ನಾಗಮಂಗಲ ತಾಲ್ಲೂಕು, ಬ್ರಹ್ಮದೇವರ ಹಳ್ಳಿ, ಬಸರಾಳು ರಸ್ತೆ ವಿಚಾರದಲ್ಲಿ ಯಾರು ಟೆಂಡರ್ ಹಾಕಿದ್ದ ಟೆಂಡರುದಾರ ಅವನು document verification ಗೆ ಬರಲಿಲ್ಲ. ಅಂದ ಮೇಲೆ ಅವನಿಗೆ eligibility ಇಲ್ಲ. ಆದರೆ, ಆ tender agreement ಅವನಿಗೆ ಆಗಿದೆ. ಬಹಳಷ್ಟು ಜನ lowest bid quote ಮಾಡಿದ್ದಾರೆ, ಆದರೆ ಅವರನ್ನು ಬಿಟ್ಟಿದ್ದಾರೆ. ಅವರ ಕಡೆ ಯಾರ್‍ಯಾರು ಬೇಕೋ ಅವರಿಗೆ agreement ಮಾಡಿಕೊಂಡು ಕುಳಿತಿದ್ದಾರೆ. ಹಾಗಾದರೆ ಈ ಟೆಂಡರ್ ಹಾಕುವುದು ಏಕೆ? ಬೇಕಾದವರಿಗೆ ಟೆಂಡರ್ ಕೊಡುವುದಾದರೆ, ಈ ಟೆಂಡರ್ procedure ಏಕೆ? ಕಾನೂನು ಏಕೆ? ಇಂತಹವುಗಳು ತುಂಬಾ ದೊಡ್ಡ ಲೋಪಗಳು, ವ್ಯತ್ಯಯಗಳಾಗಿವೆ. ದಯಮಾಡಿ ತಾವು ಅದರ ಬಗ್ಗೆ ತನಿಖೆ ಮಾಡಿ, ಸೂಕ್ತವಾದ ಕ್ರಮ ತೆಗೆದುಕೊಳ್ಳಬೇಕೆಂದು ನಾನು ತಮ್ಮ ಮೂಲಕ ಆಗ್ರಹಿಸುತ್ತೇನೆ ಮತ್ತು ಇದಕ್ಕೆ ಸ್ಪಷ್ಟೀಕರಣ ಕೊಡಬೇಕೆಂದು ಕೋರುತ್ತೇನೆ.

**ಸಭಾಪತಿಯವರು:-** ಮಾನ್ಯ ಸಚಿವರೆ, ಮಾನ್ಯ ಸದಸ್ಯರು ಇದಕ್ಕೆ ನೇರವಾಗಿ ಅಪಾದನೆ ಮಾಡಿದ್ದಾರೆ.

**ಡಾ.ಹೆಚ್.ಸಿ.ಮಹದೇವಪ್ಪ:-** ಮಾನ್ಯ ಸಭಾಪತಿಯವರೆ, ಇದು ಇ-ಟೆಂಡರ್. ಈ ಇ-ಟೆಂಡರ್‌ನಲ್ಲಿ ಯಾರು, ಎಲ್ಲಿ ಬೇಕಾದರೂ ಕುಳಿತುಕೊಂಡು ಟೆಂಡರ್ ಹಾಕಬಹುದು ಮತ್ತು EMD (Earnest Money Deposit) ಕಟ್ಟದೆ ಕೂಡ ಟೆಂಡರ್ ಹಾಕಬಹುದು. Technical bid ತೆಗೆದು ನೋಡಿದಾಗ, without going to the finance, technical ನೋಡುತ್ತೇವೆ. ಯಾರ್‍ಯಾರು eligible ಇರುವುದಿಲ್ಲವೋ ಅವರು ಅಲ್ಲೇ eliminate ಆಗುತ್ತಾರೆ. ಯಾರು finance ನಲ್ಲಿ least ಇದ್ದಾರೆಂದು ಗೊತ್ತಾಗುವುದಿಲ್ಲ. ಏನು ಈ ಇ-ಟೆಂಡರ್‌ನ ಗೈಡ್‌ಲೈನ್ಸ್ ಇದೆ, ಆ ಗೈಡ್‌ಲೈನ್ಸ್ ಪ್ರಕಾರವೇ ಇ-ಟೆಂಡರ್ ಅನ್ನು ಎಲ್ಲಿಂದಲ್ಲೋ ಹಾಕಿರುತ್ತಾರೆ ಮತ್ತು 1,2,3,4 ಎಂದು tender specification guidelines, ಅದು ಅಲ್ಲೇ ಹೊರಟು ಹೋಗುತ್ತದೆ ಮತ್ತು ಇದು ಇ-ಟೆಂಡರ್‌ನಲ್ಲಿ ಮಾಡುವಂಥದ್ದು, ಇದನ್ನು ಯಾರು manually manage ಮಾಡುವುದಕ್ಕೆ ಆಗುವುದಿಲ್ಲ. ಟೆಕ್ನಿಕಲ್‌ನಲ್ಲಿ ಇವರೆಲ್ಲರೂ ಹೋದ ಮೇಲೆ ಫೈನಾನ್ಸ್ ಬಿಡ್‌ನಲ್ಲಿ ಯಾರು ಇದ್ದಾರೆ, ಯಾರು ಇಲ್ಲವೆಂದು ನೋಡುತ್ತಾರೆ. ಅಲ್ಲಿ ನೋಡಿ ಆದಮೇಲೆ ಅಲ್ಲಿ ಸಿಂಗಲ್ ಇರುವವರಿಗೂ ಕೊಡಬಹುದು ಅಥವಾ ಡಬಲ್ ಇದ್ದು ಬೇರೆ-ಬೇರೆ quality ಇದ್ದಾಗ, ಎಫ್.ಡಿ. ಏನೇನೂ ಕೊಟ್ಟಿರುತ್ತದೆ ಆ ರೀತಿ ಮಾಡಲು ಒಂದು ಟೆಂಡರ್ ಕಮಿಟಿಯೇ ಇದೆ. ಟೆಂಡರ್ ಮೊತ್ತ ಒಂದು ಕೋಟಿಯಾದರೆ ಚೀಫ್ ಇಂಜಿನಿಯರ್ ಅಧ್ಯಕ್ಷತೆಯಲ್ಲಿ ಮತ್ತು ಇತರೆ ಸದಸ್ಯರು ಇರುತ್ತಾರೆ. ಹತ್ತು ಕೋಟಿಗೆ ಕಾರ್ಯದರ್ಶಿ, ಮತ್ತಿತರ ಜನ ಇರುತ್ತಾರೆ, ಅದಕ್ಕಿಂತ ಹೆಚ್ಚು ಪಟ್ಟು ಆದಲ್ಲಿ ಅಪರ ಮುಖ್ಯಕಾರ್ಯದರ್ಶಿಯವರು ಇರುತ್ತಾರೆ. ಮೊದಲೆಲ್ಲಾ ಈ ರೀತಿ ಟೆಂಡರ್ ಕಮಿಟಿ, ಎಸ್ಟಿಮೇಟ್ ಕಮಿಟಿ ಎಂದು ಇವುಗಳು ಯಾವುವು ಇರಲಿಲ್ಲ, ನಾವು ಬಂದ ಮೇಲೆ ಈ ರೀತಿ ಮಾಡಿ, ಇ-ಟೆಂಡರ್ ಮಾಡಿದ ಮೇಲೆ, ಇಲ್ಲಿ

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

violation ಆಗುವಂತಹ ಅಥವಾ ಇವರುಗಳಿಗೇ ಕೊಡುವಂಥದ್ದಕ್ಕೆ ಆ ತರಹದ ಅವಕಾಶಗಳು ಇರುವುದಕ್ಕೆ ಸಾಧ್ಯವೇ ಇಲ್ಲ. ಒಂದು ವೇಳೆ ಇಷ್ಟೆಲ್ಲಾ ಮಾಡಿ, ಈ ರೀತಿ ಆಗಿದ್ದರೆ ಮತ್ತು ಅದಕ್ಕೆ ದಾಖಲಾತಿ ಇದ್ದರೆ, I will get them verified.

**ಶ್ರೀ ಕೆ.ಟಿ.ಶ್ರೀಕಂಠೇಗೌಡ :–** ಮಾನ್ಯ ಸಭಾಪತಿಯವರೆ, ನನಗೆ ಇ–ಟೆಂಡರ್ ಮೂಲಕವೇ ಟೆಂಡರ್ ಹಾಕುವುದೆಂದು ಗೊತ್ತಿದೆ. ಆದರೆ ಈ ವ್ಯವಸ್ಥೆಯನ್ನೇ ಅಂತಿಮಗೊಳಿಸುವುದಿಲ್ಲ, ಅದನ್ನು ಅಧಿಕಾರಿಗಳೇ ಮಾಡುವುದು.

**ಡಾ.ಹೆಚ್.ಸಿ.ಮಹದೇವಪ್ಪ:–** ಮಾನ್ಯ ಸಭಾಪತಿಯವರೆ, ಈ ಇ–ಟೆಂಡರ್ ಹಾಕುವವರು, EMD ಹಾಕದೇನೂ ಸಹ ಟೆಂಡರ್ ಹಾಕಿಬಿಟ್ಟಿರುತ್ತಾರೆ. ಟೆಕ್ನಿಕಲ್ ಬಿಡ್ ತೆಗೆದಾಗ automatically ineligible ಆಗಿಬಿಡುತ್ತಾರೆ. ಯಾರು finance ನಲ್ಲಿ least ಇದ್ದಾರೆಂದು ಗೊತ್ತಾಗುವುದೇ ಇಲ್ಲ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೆ, ಆ ಪ್ರಶ್ನೆಯನ್ನು ನಾನು ಕೇಳುತ್ತಿಲ್ಲ ineligible, document verification ಗೆ ಬರಲಿಲ್ಲ. Eligibility ನೇ ಇಲ್ಲ, ಆದರೂ agreement ಅವರಿಗೆ ಆಗಿದೆ.

**ಡಾ.ಹೆಚ್.ಸಿ.ಮಹದೇವಪ್ಪ:–** ಮಾನ್ಯ ಸಭಾಪತಿಯವರೆ, ಅವುಗಳನ್ನೆಲ್ಲಾ Technical Committee ನೋಡಿಕೊಳ್ಳುತ್ತದೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೆ, ಈ ರೀತಿ ಒಂದಲ್ಲ, ಹತ್ತಾರು ಪ್ರಕರಣಗಳಿವೆ.

**ಡಾ.ಹೆಚ್.ಸಿ.ಮಹದೇವಪ್ಪ:–** ಮಾನ್ಯ ಸಭಾಪತಿಯವರೆ, ಆ ರೀತಿ ಆಗುವುದಕ್ಕೆ ಸಾಧ್ಯವಿಲ್ಲ. ಒಂದು ವೇಳೆ ಆ ತರಹ ಇದೆ ಎಂದರೆ, definitely I will look into the matter very seriously.

**ಸಭಾಪತಿಯವರು:–** ಧನ್ಯವಾದಗಳು. ಮುಂದಿನ ಪ್ರಶ್ನೆ ಮಾನ್ಯ ಸದಸ್ಯರಾದಂತಹ ಶ್ರೀ ಟಿ.ಎ.ಶರವಣರವರದ್ದು.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಚುಕ್ಕೆಗುರುತಿನ ಪ್ರಶ್ನೆ ಸಂಖ್ಯೆ 2823.**

**(ಉತ್ತರವನ್ನು ಒದಗಿಸಲಾಗಿದೆ)**

**ಶ್ರೀ ಟಿ.ಎ.ಶರವಣ:–** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಇವತ್ತಿನ ದಿವಸ ರಾಜ್ಯದಲ್ಲಿ ಸರ್ಕಾರ ಹಾಲಿಗೆ ಎಷ್ಟು ಪ್ರೋತ್ಸಾಹ ಧನವನ್ನು ನೀಡುತ್ತಿದ್ದೀರಿ, ಈ ಪ್ರೋತ್ಸಾಹ ಧನವನ್ನು ಯಾವ–ಯಾವ ತರಹದ ಫಲಾನುಭವಿಗಳಿಗೆ ನೀಡಿದ್ದೀರಿ ಜಿಲ್ಲಾವಾರು ವಿವರಗಳನ್ನು ಕೇಳಿರುವಂಥದ್ದು, ಇವತ್ತಿನ ದಿವಸ ಮಾನ್ಯ ಸಚಿವರು ಕೊಟ್ಟಿರುವಂತಹ ಉತ್ತರದಲ್ಲಿ ಬಹುಶ: ಏಪ್ರಿಲ್ 2017ರಲ್ಲಿ 8,00,949 ಫಲಾನುಭವಿಗಳಿಗೆ

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಪೂರೈಸುತ್ತಿದ್ದೇವೆಂದು ಹೇಳಿಕೆ ಕೊಟ್ಟಿರುವಂಥದ್ದು. ನಾನು ತಮಗೆ ಕೇಳುತ್ತಿರುವಂತಹ ಪ್ರಶ್ನೆ ಏನೆಂದರೆ, ರೈತರಿಗೆ ಏನು ಪ್ರೋತ್ಸಾಹ ಧನವನ್ನು ಕೊಡಬೇಕೆಂದು ಇದ್ದೀರಿ, ಅದಕ್ಕೆ ಎಲ್ಲೋ ಒಂದು ಕಡೆ ಆಧಾರ ಸಂಖ್ಯೆಯನ್ನು ಲಿಂಕ್ ಮಾಡಿ, ಆ processing ಮತ್ತು ಕಾನೂನನ್ನು ಒಂದು ಕಡೆ ಮಾಡಿ, ಅದರ ಬಗ್ಗೆ ನನ್ನ ಚರ್ಚೆ ಇಲ್ಲ. ಆದರೆ ಆ ಹಣ ಕೊಡುವುದರಲ್ಲಿ ವಿಳಂಬವೇಕೆ? ಯಾವಾಗ ಕೊಡುತ್ತೀರಾ? ಏತಕ್ಕಾಗಿ ಇಷ್ಟೊಂದು ನಿಧಾನ ಮಾಡುತ್ತಿದ್ದೀರಾ ಎಂಬುದು ನನ್ನ ಪ್ರಶ್ನೆ? ಅದಕ್ಕೆ ತಾವು ಉತ್ತರ ಕೊಡಬೇಕು.

**ಶ್ರೀ ಎ.ಮಂಜು:-** ಮಾನ್ಯ ಸಭಾಪತಿಯವರೆ, ಈಗ ಮೊದಲು 2013ರಲ್ಲಿ ಪ್ರತಿ ಲೀಟರ್‌ಗೆ ನಾಲ್ಕು ರೂಪಾಯಿಗಳ ಪ್ರೋತ್ಸಾಹ ಧನವನ್ನು ಕೊಡುವುದಕ್ಕೆ ಶುರು ಮಾಡಿದರು, ಅಂದರೆ ನಮ್ಮ ಸರ್ಕಾರ ಬಂದ ಮೇಲೆ ದಿನಾಂಕ 19.11.2016ರಲ್ಲಿ ಐದು ರೂಪಾಯಿಗಳ ಪ್ರೋತ್ಸಾಹ ಧನವನ್ನು ಕೊಡುವುದಕ್ಕೆ ತೀರ್ಮಾನ ಮಾಡಿದ್ದೇವೆ. ಅದರಂತೆ ಈಗಾಗಲೇ ಅವರು ಕೇಳಿರುವ ಹಾಗೆ ಈ ಹಣವನ್ನು ನೇರವಾಗಿ ಸೊಸೈಟಿ ಮುಖಾಂತರ ನಾವು ಅವರಿಗೆ ವಿತರಣೆಯನ್ನು ಮಾಡುತ್ತೇವೆ. ಆ ವಿತರಣೆ ಮಾಡುವಂತಹ ಹದಿನಾಲ್ಕು ಒಕ್ಕೂಟಗಳು ಆ ಹಣವನ್ನು ಕೊಡುವಾಗ ಅವರ ಬ್ಯಾಂಕ್ ಖಾತೆಗೆ ಆಧಾರ ಸಂಖ್ಯೆಯನ್ನು ಲಿಂಕ್ ಮಾಡುವುದು ಇರುತ್ತದೆ. ಈಗ ಒಟ್ಟು 8,00,949 ಫಲಾನುಭವಿಗಳಿಗೆ ಹಣವನ್ನು ಕೊಡಬೇಕಾಗಿರುತ್ತದೆ. ಆದಷ್ಟು ಬಿಡುಗಡೆಯಾದಂತಹ ಮೊತ್ತವನ್ನು ಕಡ್ಡಾಯವಾಗಿ ಆಧಾರ ಸಂಖ್ಯೆಯ ಲಿಂಕ್ ಮೂಲಕ ಮಾಡಬೇಕೆಂದು ಏನು ಮಾಡಿದ್ದೇವೆ, ಅದರಂತೆ ನಮ್ಮ ಸೊಸೈಟಿಯವರು ಮಾಡಬೇಕು. ಅದರಲ್ಲಿ ಕೆಲವು ಸೊಸೈಟಿಯವರು ಆಧಾರ ಸಂಖ್ಯೆಯ ಲಿಂಕ್ ಇಲ್ಲದೆ ಇರುವುದರಿಂದ, ಆ ಹಣವನ್ನು ಹಿಡಿದಿದ್ದಾರೆ. ಬಹುಶಃ ಇದು ಅವರು ನನಗೆ ಹೇಳಿರುವಂಥದ್ದು.

**(ಮುಂದು...)**

**(675)13-06-2017 12-00 ಎಲ್‌ಎಲ್-ಬಿಎನ್‌ಎಸ್**

**ಸಭಾಪತಿಯವರ ಉಪಸ್ಥಿತಿ**

**ಶ್ರೀ ಎ. ಮಂಜು (ಮುಂದು):-**

ಮಾನ್ಯ ಸದಸ್ಯರು ಹೇಳಿರುವುದೇನೆಂದರೆ, ಏಪ್ರಿಲ್ ತಿಂಗಳಿನಲ್ಲಿ ಒಟ್ಟು 14 ಹಾಲು ಒಕ್ಕೂಟದವರ ಬಿಲ್ ನಮಗೆ ಸ್ವೀಕೃತವಾಗಿರತಕ್ಕಂಥದ್ದು... ಬಾಬ್ತು ಇರತಕ್ಕಂಥದ್ದು ಒಟ್ಟು ರೂ.73.93 ಕೋಟಿ. ಇದರ ಬಗ್ಗೆ ಈಗಾಗಲೇ ಖಜಾನೆಗೆ ಕ್ರಮ ತೆಗೆದುಕೊಳ್ಳಲು ತಿಳಿಸಲಾಗಿದೆ. ಅದಕ್ಕಾಗಿ ದುಡ್ಡು ಕೊಡಲಾಗಿದೆ. ಅದರಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಬಿಡುಗಡೆಯಾಗಿರತಕ್ಕಂತಹ ರೂ.8.49 ಕೋಟಿ ಬಾಕಿಯಿದೆ. ಬಹುಶಃ ಮಾನ್ಯ ಸದಸ್ಯರು ಕೇಳಿರತಕ್ಕಂತಹದ್ದು ನಿಜ. ಏಕೆಂದರೆ, ನಾವು ಹಣ ಬಿಡುಗಡೆ ಮಾಡಿರುತ್ತೇವೆ. ಆದರೆ, ಸೊಸೈಟಿಯವರು ಅವರಿಗೆ ಆ

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಹಣವನ್ನು ಕೊಟ್ಟಿರುವುದಿಲ್ಲ. ಏಕೆಂದರೆ, ಆಧಾರ್ ಸಂಖ್ಯೆ ಜೋಡಣೆಯಾಗಿರುವುದಿಲ್ಲವೆಂದು ಅವರಿಗೆ ಕೊಟ್ಟಿರುವುದಿಲ್ಲ. ಅದರಲ್ಲಿ ಕೆಲವು ಬಿಡುಗಡೆಯಾಗಿಲ್ಲವೆಂದರೆ, ಅದನ್ನು ಬಿಡುಗಡೆ ಮಾಡುವಂತಹ ಕ್ರಮ ತೆಗೆದುಕೊಳ್ಳುತ್ತೇವೆ.

**ಶ್ರೀ ಟಿ.ಎ. ಶರವಣ:-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಬಹಳ ಸ್ಪಷ್ಟವಾಗಿ ಹೇಳಿರುವುದೇನೆಂದರೆ, "ಪಟಾಪಟ್ ಬಿಡುಗಡೆ ಮಾಡುತ್ತೇವೆಂದು ಪತ್ರಿಕಾ ಹೇಳಿಕೆಯನ್ನು ಸಹ ಕೊಟ್ಟಿದ್ದಾರೆ." ಆದರೆ, ರೈತರಿಗೆ ಕೊಡಬೇಕಾದಂತಹ ಪ್ರೋತ್ಸಾಹಧನವನ್ನು ತಡೆಹಿಡಿದಿದ್ದಾರೆ. ಆ ರೀತಿ ತಡೆಹಿಡಿದಿರುವ ಹಣ ಯಾರ ಖಾತೆಯಲ್ಲಿದೆ? ಅದರ ಬಡ್ಡಿ ಯಾರಿಗೆ ಹೋಗುತ್ತಿದೆ? ರೈತರು ಯಾವ ತಪ್ಪು ಮಾಡಿದ್ದಾರೆ? ಆಧಾರ್‌ಗೂ ಈ ಪ್ರೋತ್ಸಾಹಧನಕ್ಕೂ ಏತಕ್ಕೆ ಲಿಂಕ್ ಮಾಡುತ್ತಿದ್ದಾರೆ? ಆಧಾರ್ ಸಂಖ್ಯೆ ಜೋಡಣೆಯನ್ನು ಮಾಡಿಕೊಳ್ಳಲಿ. ಅದನ್ನು ನಾನು ಬೇಡವೆಂದು ಹೇಳುವುದಿಲ್ಲ. ಅದಕೋಸ್ಕರವಾಗಿ ರೈತರಿಗೆ ಏತಕ್ಕೆ ತೊಂದರೆ ಕೊಡಬೇಕು? ರೈತರಿಗೆ ಏನು ಪ್ರೋತ್ಸಾಹಧನ ಬಿಡುಗಡೆ ಮಾಡಬೇಕು ಅದನ್ನು ಬಿಡುಗಡೆ ಮಾಡಲಿ. ಆಧಾರ್ ಸಂಖ್ಯೆಯನ್ನು ಬ್ಯಾಂಕ್ ಖಾತೆಗೆ ಜೋಡಣೆ ಮಾಡುವಂತಹ ಕೆಲಸ ಮಾಡಿಕೊಳ್ಳಲಿ. ಅದನ್ನು ನಾನು ಬೇಡವೆಂದು ಹೇಳುವುದಿಲ್ಲ.

**ಶ್ರೀ ಎ.ಮಂಜು:-** ಮಾನ್ಯ ಸಭಾಪತಿಯವರೆ, ಗೌರವಾನ್ವಿತ ಸದಸ್ಯರು ಹೇಳುತ್ತಿರುವುದು ಸರಿಯಿದೆ. ಆದರೆ, ರೈತರಿಗೆ ಪ್ರೋತ್ಸಾಹಧನ ಬಿಡುಗಡೆ ಮಾಡಬೇಕಾದರೆ ಅವರ ಬ್ಯಾಂಕ್ ಖಾತೆಗೆ ಆಧಾರ್ ಸಂಖ್ಯೆ ಜೋಡಣೆಯಾಗಬೇಕು. ಅದರಂತೆ, ಬ್ಯಾಂಕ್ ಖಾತೆಗೆ ಆಧಾರ್ ಸಂಖ್ಯೆಯನ್ನು ಜೋಡಣೆ ಮಾಡಿಲ್ಲವೆಂದರೆ, ನಾವು ಅಂತಹ ರೈತರ ಖಾತೆಗಳಿಗೆ ಹಣ ಬಿಡುಗಡೆ ಮಾಡುವುದಕ್ಕಾಗುವುದಿಲ್ಲ. ಬಹುಶಃ ನಾವು ಅದನ್ನು ಹಾಲು ಒಕ್ಕೂಟದ ಮುಖಾಂತರ ಮಾಡುತ್ತಿದ್ದೇವೆ. ಈ ಒಕ್ಕೂಟದಿಂದ ಹಣ ಬಿಡುಗಡೆ ಮಾಡುವ ವ್ಯವಸ್ಥೆಯನ್ನು ತಪ್ಪಿಸುವ ಸಲುವಾಗಿ ಆಧಾರ್ ಸಂಖ್ಯೆ ಜೋಡಣೆಯಾಗಿರುವ ರೈತರ ಬ್ಯಾಂಕ್ ಖಾತೆಗೆ ನೇರವಾಗಿ ನಾವೇ ಪ್ರೋತ್ಸಾಹಧನ ಬಿಡುಗಡೆ ಮಾಡಬೇಕೆಂದು ಚಿಂತನೆ ಮಾಡುತ್ತಿದ್ದೇವೆ. ಇದಕ್ಕಾಗಿ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದೇವೆ. ಅದು ಒಳ್ಳೆಯದಾಗುತ್ತದೆ. ಅದನ್ನು ನಾವು ಮಾಡುತ್ತೇವೆ.

**ಶ್ರೀ ಟಿ.ಎ. ಶರವಣ:-** ಮಾನ್ಯ ಸಭಾಪತಿಯವರೆ, ಈಗ ಜೂನ್ ತಿಂಗಳಾಯಿತು. ಇಷ್ಟು ದಿನಗಳವರೆಗೆ ಯಾವುದೇ ಪ್ರಗತಿಯಾಗಿಲ್ಲ ಮತ್ತು ಯಾವುದೇ ಕಾರ್ಯ ಮಾಡಿರುವುದಿಲ್ಲ. ಪದೇ ಪದೇ ಮಾಡುತ್ತೇನೆ, ಮಾಡುತ್ತೇನೆ ಎಂದು ಒಂದೇ ಉತ್ತರವನ್ನು ಹೇಳುತ್ತಿದ್ದಾರೆ. ರೈತ ಇವತ್ತಿನ ದಿವಸ ಯಾವ ರೀತಿಯ ಸಂಕಷ್ಟದಲ್ಲಿದ್ದಾನೆಂಬುದು ತಮಗೆಲ್ಲಾ ತಿಳಿದಿದೆ. ಆದರೂ ಏತಕ್ಕಾಗಿ ಈ ವಿಷಯದಲ್ಲಿ ಆಸಕ್ತಿ ತೋರಿಸುತ್ತಿಲ್ಲವೆಂದು ನನಗೆ ತಿಳಿಯುತ್ತಿಲ್ಲ.

**ಶ್ರೀ ಎ.ಮಂಜು:-** ಮಾನ್ಯ ಸಭಾಪತಿಯವರೆ, ನಾವು ಈ ವಿಷಯದಲ್ಲಿ ಆಸಕ್ತಿ ತೋರಿರುವುದರಿಂದಲೇ, ಒಕ್ಕೂಟದವರು ರೈತರ ಖಾತೆಗೆ ನೇರವಾಗಿ ಪ್ರೋತ್ಸಾಹಧನ ಬಿಡುಗಡೆ ಮಾಡದೇ ಇರುವುದರಿಂದ, ಆಧಾರ್ ಸಂಖ್ಯೆ ಜೋಡಣೆಯಾಗಿರುವ ರೈತರ ಬ್ಯಾಂಕ್ ಖಾತೆಯ ಮಾಹಿತಿಯನ್ನು ಬ್ಯಾಂಕ್‌ನಿಂದ ಪಡೆದುಕೊಂಡು, ಸರ್ಕಾರವೇ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ನೇರವಾಗಿ ರೈತರ ಬ್ಯಾಂಕ್ ಖಾತೆಗೆ ಪ್ರೋತ್ಸಾಹಧನ ಬಿಡುಗಡೆ ಮಾಡಬೇಕೆಂದು ಚಿಂತನೆ ಮಾಡುತ್ತಿದ್ದೇವೆ. ಈಗಾಗಲೇ ಇದಕ್ಕಾಗಿ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದೇವೆ.

**ಶ್ರೀ ಟಿ.ಎ. ಶರವಣ:-** ಮಾನ್ಯ ಸಭಾಪತಿಯವರೆ, ಈ ಕಾರ್ಯವನ್ನು ಎಷ್ಟು ದಿನಗಳಲ್ಲಿ ಮಾಡುತ್ತಾರೆ?

**ಶ್ರೀ ಎ.ಮಂಜು:-** ಮಾನ್ಯ ಸಭಾಪತಿಯವರೆ, ಈ ಕಾರ್ಯ ಪ್ರಗತಿಯಲ್ಲಿದೆ ಅದನ್ನು ಆದಷ್ಟು ಬೇಗ ಮುಗಿಸಿಕೊಡುತ್ತೇವೆ.

**ಸಭಾಪತಿಯವರು:-** ಧನ್ಯವಾದಗಳು.

**ಶ್ರೀ ಟಿ.ಎ. ಶರವಣ:-** ಮಾನ್ಯ ಸಭಾಪತಿಯವರೆ, ಆದಷ್ಟು ಬೇಗವೆಂದರೆ..? ನಮಗೆ ಒಂದು ಅಂದಾಜು ಹೇಳಲಿ.

**ಶ್ರೀ ಎ.ಮಂಜು:-** ಮಾನ್ಯ ಸಭಾಪತಿಯವರೆ, ಅಂದಾಜು ಎಂದರೆ, ನಾಳೆ ಅಥವಾ ನಾಡಿದ್ದು ಎಂದು ಹೇಳುವುದಕ್ಕಾಗುವುದಿಲ್ಲ.

**ಶ್ರೀ ಟಿ.ಎ. ಶರವಣ:-** ಮಾನ್ಯ ಸಭಾಪತಿಯವರೆ, ಈ ಕಾರ್ಯಕ್ಕೆ ಒಂದು ವರ್ಷ ಸಮಯ ಬೇಕಾಗುತ್ತದೆಯೇ?

**ಶ್ರೀ ಎ.ಮಂಜು:-** ಮಾನ್ಯ ಸಭಾಪತಿಯವರೆ, ಒಂದು ವರ್ಷ ಸಮಯವೂ ಕೂಡ ಆಗುವುದಿಲ್ಲ.

**ಶ್ರೀ ಟಿ.ಎ. ಶರವಣ:-** ಮಾನ್ಯ ಸಭಾಪತಿಯವರೆ, ಹಾಗಾದರೆ, ಎಷ್ಟು ಸಮಯ ಬೇಕಾಗುತ್ತದೆ?

**ಶ್ರೀ ಎ.ಮಂಜು:-** ಮಾನ್ಯ ಸಭಾಪತಿಯವರೆ, ನನಗೆ ಗೊತ್ತಿರುವ ಹಾಗೆ ಈ ಕಾರ್ಯ ಪ್ರಗತಿಯಲ್ಲಿದೆ. It will happen at any time.

**ಶ್ರೀ ಟಿ.ಎ. ಶರವಣ:-** ಮಾನ್ಯ ಸಭಾಪತಿಯವರೆ, ಆದಷ್ಟು ಬೇಗ ಈ ಕಾರ್ಯವನ್ನು ಮಾಡಬೇಕು.

ಸಭಾಪತಿಯವರು:- ಧನ್ಯವಾದಗಳು. ಮುಂದಿನ ಪ್ರಶ್ನೆ ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿಯವರದು. **(ಗೊಂದಲ)** ಒಂದು ನಿಮಿಷ ಪ್ರತಾಪಚಂದ್ರ ಶೆಟ್ಟರೆ...

**(ಗೊಂದಲ)**

**ಶ್ರೀ ಎ.ಮಂಜು:-** ಮಾನ್ಯ ಸಭಾಪತಿಯವರೆ, ಬ್ಯಾಂಕ್ ಖಾತೆಗೆ ಆಧಾರ್ ಸಂಖ್ಯೆ ಜೋಡಣೆಯಾಗಿಲ್ಲದೇ ಇರುವಂತಹ ರೈತರಿಗೆ ಮಾತ್ರ ಪ್ರೋತ್ಸಾಹಧನ ಬಿಡುಗಡೆ ಮಾಡಿರುವುದಿಲ್ಲ. ಇದು ಮಾತ್ರ ಬಾಕಿಯಿದೆ. ಈಗಾಗಲೇ, ಆಧಾರ್ ಸಂಖ್ಯೆ ಜೋಡಣೆಯಾಗಿರುವಂತಹ ರೈತರ ಬ್ಯಾಂಕ್ ಖಾತೆಗೆ ಏಪ್ರಿಲ್ ತಿಂಗಳವರೆಗೆ ಪ್ರೋತ್ಸಾಹಧನ ಬಿಡುಗಡೆ ಮಾಡಲಾಗಿದೆ.

**ಸಭಾಪತಿಯವರು:-** ಹಾಲಿನ ಬಗ್ಗೆ ಮಾತ್ರ ಮಾತನಾಡಬೇಕು. ಹಾಲು ಹಾಕಿರುವಂತಹ ರೈತರಿಗೆ ಮಾತ್ರ ಪ್ರೋತ್ಸಾಹಧನ ಬಿಡುಗಡೆ ಮಾಡುತ್ತಾರೆ.

**ಶ್ರೀ ಎ.ಮಂಜು:-** ಮಾನ್ಯ ಸಭಾಪತಿಯವರೆ, ಹಾಲು ಹಾಕಿರುವವರಿಗೆ ಮಾತ್ರ...

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಮಾನ್ಯ ಸಭಾಪತಿಯವರೆ, ಆಧಾರ್ ಸಂಖ್ಯೆ ಬ್ಯಾಂಕ್ ಖಾತೆಗೆ ಜೋಡಣೆಯಾಗಿಲ್ಲದೇ ಇರುವಂತಹ ರೈತರ ಖಾತೆಗೆ ಮಾತ್ರ ಪ್ರೋತ್ಸಾಹಧನ ಬಿಡುಗಡೆ ಮಾಡಿರುವುದಿಲ್ಲ ಅದು ಮಾತ್ರ ಬಾಕಿಯಿದೆಯೆಂದು ಹೇಳಿದ್ದಾರೆ. ಇದರ ಜೊತೆಗೆ ಹಾಲು ಒಕ್ಕೂಟದವರಿಗೆ ಹಣ ಬಿಡುಗಡೆ ಮಾಡುತ್ತೇವೆಂದು ಮಾನ್ಯ ಸಚಿವರು ಹೇಳುತ್ತಿದ್ದಾರೆ.

**ಸಭಾಪತಿಯವರು:-** ಇಲ್ಲ, ಇಲ್ಲ. ಹಾಲು ಒಕ್ಕೂಟದವರಿಗೆ ಹಣ ಬಿಡುಗಡೆ ಮಾಡುವುದಿಲ್ಲ. ನೇರವಾಗಿ ರೈತರಿಗೆ ಬಿಡುಗಡೆ ಮಾಡುತ್ತೇವೆಂದು ಮಾನ್ಯ ಸಚಿವರು ಹೇಳುತ್ತಿದ್ದಾರೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಮಾನ್ಯ ಸಭಾಪತಿಯವರೆ, ಸರ್ಕಾರದಿಂದ ರೈತರಿಗೆ ಕೊಡಬೇಕಾದ ಹಣ ಏನಿದೆ ಅದನ್ನು ಕೊಡಲಿಕ್ಕೆ ಬಾಕಿಯಿದೆಯೋ ಅಥವಾ ಇಲ್ಲವೋ? ಒಕ್ಕೂಟದವರು ಆಧಾರ್ ಸಂಖ್ಯೆ ಜೋಡಣೆಯಾಗಿಲ್ಲವೆಂಬ ಕಾರಣಕ್ಕೆ ಕೊಟ್ಟಿಲ್ಲವೆನ್ನುವುದು ಒಂದು ಭಾಗ. ಆದರೆ, ರೈತರಿಗೆ ಕೊಡಬೇಕಾದ ಪ್ರೋತ್ಸಾಹಧನವನ್ನು ಹಾಲು ಒಕ್ಕೂಟದವರಿಗೆ ಸರ್ಕಾರ ಹಣ ಬಿಡುಗಡೆ ಮಾಡಬೇಕು. ಆ ಹಣ ಬಿಡುಗಡೆ ಮಾಡಲಿಕ್ಕೆ ಬಾಕಿಯಿದೆಯೋ ಅಥವಾ ಇಲ್ಲವೋ ಎಂಬ ಪ್ರಶ್ನೆಯನ್ನು ಮಾನ್ಯ ಶರವಣರವರು ಕೇಳಿರುವುದು. ಆಧಾರ್ ಸಂಖ್ಯೆ ಜೋಡಣೆಯಾಗಿಲ್ಲವೆಂದು ಕೊಡಲಿಕ್ಕೆ ಆಗಲಿಲ್ಲವೆಂದು ಹೇಳುತ್ತಿದ್ದಾರೆಯೇ ಹೊರತು, ಸರ್ಕಾರ ಕೊಡಬೇಕಾದ ಹಣವನ್ನು ಹಾಲು ಒಕ್ಕೂಟದವರಿಗೆ ಬಿಡುಗಡೆ ಮಾಡಿದ್ದಾರೋ ಅಥವಾ ಇಲ್ಲವೋ?

**ಶ್ರೀ ಎ.ಮಂಜು:-** ಮಾನ್ಯ ಸಭಾಪತಿಯವರೆ, ಹಣವನ್ನು ಬಿಡುಗಡೆ ಮಾಡಿದ್ದೇವೆ. ಏಪ್ರಿಲ್ ತಿಂಗಳ ಪ್ರೋತ್ಸಾಹಧನ ಮಾತ್ರ ಬಾಕಿಯಿದೆಯೆಂದು ನಾನು ಈಗಾಗಲೇ ಹೇಳಿದ್ದೇನೆ. ಅದನ್ನು ಏತಕ್ಕೆ ಬಿಡುಗಡೆ ಮಾಡಿಲ್ಲವೆಂದರೆ, ಆಧಾರ್ ಸಂಖ್ಯೆ ಜೋಡಣೆಯಾಗಿಲ್ಲವೆಂದು ಹೇಳಿದ್ದೇನೆ. ಬಹುಶಃ ನನಗೆ ಗೊತ್ತಿರುವ ಹಾಗೆ ಹಣವನ್ನು ಹಾಲು ಒಕ್ಕೂಟದವರೇ ನೇರವಾಗಿ ರೈತರ ಬ್ಯಾಂಕ್ ಖಾತೆಗೆ ಬಿಡುಗಡೆ ಇಲ್ಲಿಯವರೆಗೂ ಮಾಡುತ್ತಿರುವುದು. ಆ ಹಾಲು ಒಕ್ಕೂಟದವರೇ ಈ ಹಣವನ್ನು ಕೊಡಬೇಕು. ಇದನ್ನು ಅವರು ವಿಳಂಬ ಮಾಡುತ್ತಿದ್ದಾರೆ. ಅದಕ್ಕಾಗಿ ಸರ್ಕಾರದಿಂದಲೇ ನೇರವಾಗಿ ರೈತರ ಬ್ಯಾಂಕ್ ಖಾತೆಗೆ ಬಿಡುಗಡೆ ಮಾಡುವ ಕ್ರಮ ಕೈಗೊಳ್ಳುತ್ತಿದ್ದೇವೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಮಾನ್ಯ ಸಭಾಪತಿಯವರೆ, ಆ ಕಾರ್ಯವನ್ನು ಇನ್ನು ಮುಂದೆ ಮಾಡುತ್ತಾರೆ. ಆದರೆ, ನನ್ನ ಪ್ರಶ್ನೆಯೇನೆಂದರೆ, ಈ ರೀತಿಯ ಪ್ರೋತ್ಸಾಹಧನವನ್ನು ಸರ್ಕಾರದಿಂದ ಹಾಲು ಒಕ್ಕೂಟದವರಿಗೆ ಪೂರ್ತಿಯಾಗಿ ಬಿಡುಗಡೆ ಮಾಡಲಾಗಿದೆಯೇ? ಹಾಲು ಒಕ್ಕೂಟದವರು ಕೊಡುವುದನ್ನು ನಂತರ ನೋಡೋಣ.

**ಶ್ರೀ ಎ.ಮಂಜು:-** ಮಾನ್ಯ ಸಭಾಪತಿಯವರೆ, ಏಪ್ರಿಲ್‌ವರೆಗೆ ಮಾತ್ರ ಈಗಾಗಲೇ ಕೊಟ್ಟಿದ್ದೇವೆ. ಅದರ ಮುಂದಿನ ತಿಂಗಳ ಪ್ರೋತ್ಸಾಹಧನವನ್ನು ನಾವು ಬಿಡುಗಡೆ ಮಾಡುತ್ತೇವೆ.

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಟಿ.ಎ. ಶರವಣ:-** ಮಾನ್ಯ ಸಭಾಪತಿಯವರೆ, ಇನ್ನೊಂದು ಪ್ರಶ್ನೆ, ಇದೇ ಪ್ರಶ್ನೆಯಲ್ಲಿರುವಂತಹ ಉಪ ಪ್ರಶ್ನೆ. ಒಂದೇ ನಿಮಿಷ. ಅದೇನೆಂದರೆ, ಮೇವು ಬ್ಯಾಂಕ್‌ಗಳಲ್ಲಿ ಮೇವು ಉಳಿದಿದೆಯೇ? ಉಳಿದಿದ್ದರೆ ಅದನ್ನು ಯಾವಾಗ ವಿಲೇವಾರಿ ಮಾಡುತ್ತಾರೆ? ಯಾವ ಕಾಲಮಿತಿಯೊಳಗೆ ಕೊಡುತ್ತಾರೆ? ಅದರ ಬಗ್ಗೆ ಸ್ಪಷ್ಟನೆ ನೀಡಲಿ.

**ಸಭಾಪತಿಯವರು:-** ಹಾಲಿನ ಬಗ್ಗೆ ಮಾತ್ರ ಉಪ ಪ್ರಶ್ನೆ ಕೇಳಿ. ಇದು ಹಾಲಿನ ಬಗ್ಗೆ ಚರ್ಚೆ.

**ಶ್ರೀ ಟಿ.ಎ. ಶರವಣ:-** ಮಾನ್ಯ ಸಭಾಪತಿಯವರೆ, ಇದೇ ಪ್ರಶ್ನೆಯಲ್ಲಿ ಬಂದಿರತಕ್ಕಂತಹ ಉಪ ಪ್ರಶ್ನೆಯನ್ನು ನಾನು ಕೇಳಿರುವಂತಹದ್ದು.

**ಸಭಾಪತಿಯವರು:-** ನಿಮ್ಮ ಪ್ರಶ್ನೆ ಇರುವಂತಹದ್ದು ಹಾಲಿನ ಬಗ್ಗೆ.

**ಶ್ರೀ ಟಿ.ಎ. ಶರವಣ:-** ಮಾನ್ಯ ಸಭಾಪತಿಯವರೆ, ಮೇವು ಬ್ಯಾಂಕ್‌ಗಳಲ್ಲಿ ಮೇವು ಇದೆಯೇ?

**ಸಭಾಪತಿಯವರು:-** ತಾವುಗಳು ಹಾಲಿನ ಬಗ್ಗೆ ಮಾತ್ರ ಪ್ರಶ್ನೆ ಕೇಳಿದ್ದೀರಿ.

**(ಗೊಂದಲ)**

**ಶ್ರೀ ಎ.ಮಂಜು:-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ತಮ್ಮ ಪ್ರಶ್ನೆಯಲ್ಲಿ ಈ ಪ್ರಶ್ನೆಯನ್ನು ಸಹ ಕೇಳಿದ್ದಾರೆ.

**ಸಭಾಪತಿಯವರು:-** ಹಾಗಾದರೆ ಉತ್ತರ ಹೇಳಿ.

**ಶ್ರೀ ಎ.ಮಂಜು:-** ಮಾನ್ಯ ಸಭಾಪತಿಯವರೆ, ಇದುವರೆವಿಗೂ 30 ಜಿಲ್ಲೆಗಳಲ್ಲಿ 55,401 ಟನ್ ಒಣ ಮೇವನ್ನು ವಿತರಿಸಲಾಗಿದೆ. ಉಳಿದಿರತಕ್ಕಂತಹ ಮೇವು, ಮೇವು ಬ್ಯಾಂಕ್‌ನಲ್ಲಿದೆ. ಬಹುಶಃ ನಮಗೆಲ್ಲರಿಗೂ ಇಂದು ಸಂತೋಷವಾಗುತ್ತಿದೆ. ಏಕೆಂದರೆ, ಇತ್ತೀಚಿನ ದಿನಗಳಲ್ಲಿ ಚೆನ್ನಾಗಿ ಮಳೆಯಾಗುತ್ತಿದೆ. ಇದೇ ಕಾರಣದಿಂದ, ಯಾವುದೇ ರೈತರು ಮೇವು ಕೊಳ್ಳುವುದಕ್ಕೆ ಮುಂದೆ ಬರುತ್ತಿಲ್ಲ. ನಾವು 2 ರೂಪಾಯಿ ಪ್ರೋತ್ಸಾಹಧನದಲ್ಲಿ ಮೇವನ್ನು ಕೊಟ್ಟಿದ್ದೇವೆ. ಈಗ ಯಾರಾದರೂ ರೈತರು ಮೇವನ್ನು ಕೊಳ್ಳಲು ಬಯಸಿದರೆ, ದಾಸ್ತಾನಿರುವ ಮೇವಿನಲ್ಲಿ ಅದೇ 2 ರೂಪಾಯಿ ಪ್ರೋತ್ಸಾಹಧನದಲ್ಲಿ ಮೇವನ್ನು ಕೊಡುವಂತಹ ವ್ಯವಸ್ಥೆಯಾಗುತ್ತದೆ.

**ಸಭಾಪತಿಯವರು:-** ಧನ್ಯವಾದಗಳು. ಮುಂದಿನ ಪ್ರಶ್ನೆ ಶ್ರೀ ಪ್ರತಾಪಚಂದ್ರ ಶೆಟ್ಟರದ್ದು.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಪ್ರಶ್ನೆ ಸಂಖ್ಯೆ:-2799**

**(ಉತ್ತರವನ್ನು ಲಗತ್ತಿಸಲಾಗಿದೆ.)**

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:-** ಮಾನ್ಯ ಸಭಾಪತಿಯವರೆ, ರಾಜ್ಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಲೈನ್‌ಮ್ಯಾನ್‌ಗಳ ಸಂಖ್ಯೆಯನ್ನು ಕೇಳಿದ್ದೆ, ಅದಕ್ಕೆ ಮಾನ್ಯ ಸಚಿವರು 26,817 ಎಂದು ಉತ್ತರ ಕೊಟ್ಟಿದ್ದಾರೆ. ನಮ್ಮ ಸರ್ಕಾರ ಅಧಿಕಾರಕ್ಕೆ

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಬಂದ ಮೇಲೆ 16,214 ಲೈನ್‌ಮ್ಯಾನ್‌ಗಳ ನೇಮಕಾತಿಯನ್ನು ಮಾಡಿದ್ದೇವೆಂದು ಉತ್ತರ ಕೊಟ್ಟಿದ್ದಾರೆ. ಆದರೂ ಸಹ ರಾಜ್ಯದಲ್ಲಿರುವ ಖಾಲಿಯಿರುವ ಕಿರಿಯ ಮಾರ್ಗದಾಳುಗಳು, ಸಹಾಯಕ ಮಾರ್ಗದಾಳುಗಳು, ಮಾರ್ಗದಾಳುಗಳ ವಿವರವನ್ನು ಕೇಳಿದ್ದೇನೆ. ಅದಕ್ಕೆ, 1,653 ಕಿರಿಯ ಮಾರ್ಗದಾಳುಗಳು, 5,157 ಸಹಾಯಕ ಮಾರ್ಗದಾಳುಗಳು ಮತ್ತು 1,891 ಮಾರ್ಗದಾಳುಗಳ ಕೊರತೆಯಿದೆಯೆಂದು ಹೇಳಿದ್ದಾರೆ. ಅದೇ ರೀತಿ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದಿಂದ 85, 261, 307 ಮತ್ತು 53 ಒಟ್ಟು ಕೊರತೆ ಇದೆಯಂದು ಉತ್ತರ ನೀಡಿದ್ದಾರೆ. ಈ ಅಂತರ್‌ಜಿಲ್ಲಾ ವರ್ಗಾವಣೆಯಿಂದ ಈಗಾಗಲೇ 175 ಜನ ವರ್ಗಾವಣೆಯಾಗಿದ್ದಾರೆ. ಆದುದರಿಂದ, ಈ ಕೊರತೆಯನ್ನು ತುಂಬತಕ್ಕಂಥದ್ದನ್ನು ಯಾವಾಗ ಮಾಡಲಾಗುವುದು ಮತ್ತು ಇದು ಅತೀ ಅವಶ್ಯಕತೆಯಿರತಕ್ಕಂತಹ ಹಿನ್ನೆಲೆಯಲ್ಲಿ ಜರೂರಾಗಿ ಮಾಡಲಾಗುವುದೇ?

**ಶ್ರೀ ಡಿ.ಕೆ. ಶಿವಕುಮಾರ್:-** ಮಾನ್ಯ ಸಭಾಪತಿಯವರೆ, ನಾನು ಈ ಇಲಾಖೆಗೆ ಬಂದ ನಂತರ ಇದೇ ಕೆಲಸವನ್ನೇ ಮೊದಲು ಮಾಡಿದ್ದು. ಸುಮಾರು 26,700 ಜನ ಈಗಾಗಲೇ ಕೆಲಸ ಮಾಡುತ್ತಿರುವವರಲ್ಲಿ 16,214 ಜನರನ್ನು ತುಂಬಿದ್ದೇವೆ. ಇನ್ನು 9,000 ಹುದ್ದೆಗಳನ್ನು ನೇಮಕ ಮಾಡಬೇಕೆಂಬ ಪಟ್ಟಿಯನ್ನು ಈಗಾಗಲೇ ನಾವು ಕೊಟ್ಟಿದ್ದೇವೆ. ಅದರಲ್ಲಿ 7,000 vacancy due to promotion ನಾವು ಕೊಡಬೇಕಾಗುತ್ತದೆ. ಉಳಿದಿರುವ ಹುದ್ದೆಗಳನ್ನು ಈ ವರ್ಷ ಆದ್ಯತೆಯ ಮೇರೆಗೆ ನೇಮಕ ಮಾಡಿಕೊಳ್ಳುತ್ತೇವೆ. ಏಕೆಂದರೆ, ಒಂದೇ ಬಾರಿಗೆ ನೇಮಕ ಮಾಡಿಕೊಳ್ಳಬಾರದೆಂಬ ದೃಷ್ಟಿಯಿಂದ phased manner ನಲ್ಲಿ ಮಾಡಿ 16,214 ಹುದ್ದೆಗಳನ್ನು ನಾವು ಈಗಾಗಲೇ ತುಂಬಿದ್ದೇವೆ. ಉಳಿದ ಹುದ್ದೆಗಳನ್ನು ಸಹ ಅದೇ ರೀತಿಯಲ್ಲಿ ನೇಮಕ ಮಾಡುತ್ತೇವೆ. ಆದರೆ, ವರ್ಗಾವಣೆಯನ್ನು ಹೊರಗಡೆಗೆ ಎಲ್ಲಿಯೂ ನಾವು ಮಾಡುತ್ತಿಲ್ಲ. ಉದಾಹರಣೆಗೆ, ಬೆಂಗಳೂರಿನಿಂದ HESCOM ಗೆ ಅಥವಾ ಬೆಂಗಳೂರಿನಿಂದ GESCOM ಗೆ ವರ್ಗಾವಣೆ ಮಾಡುವುದಕ್ಕೆ ಬರುವುದಿಲ್ಲ. ನಮ್ಮ ಕಂಪನಿ ವ್ಯಾಪ್ತಿಯೇನಿದೆ ಆ ವ್ಯಾಪ್ತಿಯಲ್ಲಿಯೇ ಮಾತ್ರ ವರ್ಗಾವಣೆ ಮಾಡುವುದು. ಆದರೆ, ಕೆಲವು ಅಂತರ್‌ಜಿಲ್ಲಾ ವರ್ಗಾವಣೆ ಮಾಡುತ್ತೇವೆ. ಅಂತರ್‌ಜಿಲ್ಲಾ ವರ್ಗಾವಣೆ ಮಾಡಿದಾಗ ಅವರಿಗೆ ಪ್ರಮೋಷನ್ ಅವಕಾಶಗಳು ಸಿಗುವುದಿಲ್ಲ. ಏಕೆಂದರೆ, ಮೊದಲಿನಂತೆ ಕೆ.ಪಿ.ಟಿ.ಸಿ.ಎಲ್. ನಲ್ಲಿ ಎಲ್ಲಿಂದ ಎಲ್ಲಿಗೆ ಬೇಕಾದರೂ ಆಗುವುದಿಲ್ಲ. ಬಿಜಾಪುರ-ಬಾಗಲಕೋಟೆಯವರದ್ದು ಶೇಕಡ 90-95ರಷ್ಟು ಬರುತ್ತದೆ. ಶಿವಮೊಗ್ಗ, ಬೆಂಗಳೂರು ಮತ್ತು ಮಂಗಳೂರಿನವರಿಗೆ ಅವಕಾಶವೇ ಇಲ್ಲ. ಆದುದರಿಂದ, ಈ ಪರಿಸ್ಥಿತಿಯಿಂದ ಆಯಾ ಜಿಲ್ಲೆಗೆ ಸಂಬಂಧಪಟ್ಟಂತೆ ಆಯಾ ಕಂಪನಿಗಳಲ್ಲಿಯೇ ಹುದ್ದೆಗಳನ್ನು ಸೃಷ್ಟಿ ಮಾಡುತ್ತೇವೆ. ಅದೇ ರೀತಿ ಮಾನ್ಯ ಸದಸ್ಯರ ಕಳಕಳಿಯನ್ನು ಪರಿಗಣಿಸಿ ಎಷ್ಟು ಮಾರ್ಗದಾಳುಗಳನ್ನು ತುಂಬುವುದಕ್ಕೆ ಸಾಧ್ಯವಿದೆ, ಈ ವರ್ಷ ಸಂಪೂರ್ಣವಾಗಿ ಅಷ್ಟು ಹುದ್ದೆಗಳನ್ನು ನೇಮಕ ಮಾಡಿಕೊಳ್ಳುತ್ತೇವೆ.

**ಶ್ರೀ ಭಾನುಪ್ರಕಾಶ:-** ಮಾನ್ಯ ಸಭಾಪತಿಯವರೆ, Lineman ಎನ್ನುವುದಕ್ಕೆ ಮಾರ್ಗದಾಳು ಎಂದು ಕರೆಯುತ್ತಾರೆಯೇ ಎಂದು ನಾನು ಮಾನ್ಯ ಸಚಿವರಿಂದ ಅನುವಾದ ಕೇಳುತ್ತಿದ್ದೇನೆ.?

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಸಭಾಪತಿಯವರು:–** ಮಾನ್ಯ ಇಂಧನ ಸಚಿವರೆ, ಮಾನ್ಯ ಸದಸ್ಯರು ಉಪ ಪ್ರಶ್ನೆಯನ್ನು ಕೇಳುತ್ತಿದ್ದಾರೆ.

**ಶ್ರೀ ಭಾನುಪ್ರಕಾಶ:–** ಮಾನ್ಯ ಸಭಾಪತಿಯವರೆ, 'Lineman' ಎನ್ನುವುದಕ್ಕೆ ಕಿರಿಯ ಮಾರ್ಗದಾಳು... ನಾವು ಈಗ Lineman ಎಂದು ಕರೆಯುತ್ತೇವೆ. ಅವರನ್ನೇ ಕಿರಿಯ ಮಾರ್ಗದಾಳು ಎಂದು ಕರೆಯುವುದೇ ಎಂದು ಸ್ಪಷ್ಟನೆ ಕೇಳುತ್ತಿದ್ದೇನಷ್ಟೇ. ಏಕೆಂದರೆ, ನಾವುಗಳು ಊರಿನಲ್ಲಿ Lineman ಎಂದು ಕರೆಯುವುದು. ಆದರೆ, ಈಗ ಮಾರ್ಗದಾಳು, ಮಾರ್ಗದಾಳು ಎಂದು ಕರೆಯಬೇಕಾಗುತ್ತದೆ.

**ಶ್ರೀ ಡಿ.ಕೆ. ಶಿವಕುಮಾರ್:–** ಮಾನ್ಯ ಸಭಾಪತಿಯವರೆ, ನಾನು ಈಗ ಸಾರ್ವಜನಿಕರಿಗೆ ಒಂದು ಅವಕಾಶವನ್ನು ಕೊಟ್ಟಿದ್ದೇನೆ. ಅದೇನೆಂದರೆ, ಈ Lineman ಎಂಬ ಪದವನ್ನು ತೆಗೆದುಬಿಟ್ಟು ಬೇರೆ ಯಾವುದಾದರೂ ಪದ ಇದ್ದರೆ ಅದನ್ನು ಸೂಚಿಸಿ ಎಂದು ಕೇಳಿದ್ದೇನೆ.

**ಸಭಾಪತಿಯವರು:–** ಮಾನ್ಯ ಸದಸ್ಯರು ಕನ್ನಡ–ಇಂಗ್ಲೀಷ್ ಅನುವಾದ ಕೇಳುತ್ತಿದ್ದಾರೆ. ಇಷ್ಟು ಉತ್ತರ ಸಾಕು.

**ಶ್ರೀ ಡಿ.ಕೆ. ಶಿವಕುಮಾರ್:–** ಮಾನ್ಯ ಸಭಾಪತಿಯವರೆ, ಸಾಧ್ಯವಾದರೆ ಈ Lineman ಎಂಬ ಪದವನ್ನು upgrade ಮಾಡೋಣ. ಈ Lineman ಎನ್ನುವುದು ಯಾವುದೋ ಕಾಲದ ಪದವಾಗಿದೆ.

**ಶ್ರೀ ಭಾನುಪ್ರಕಾಶ:–** ಮಾನ್ಯ ಸಭಾಪತಿಯವರೆ, ಮಾರ್ಗದಾಳು ಎಂದು ಕರೆಯುವುದಕ್ಕೆ ಒಂದು ರೀತಿಯ ಮುಜುಗರ. ಅದು ಏತಕ್ಕೆ ಎಂದು ನನಗೆ ಗೊತ್ತಿಲ್ಲ.

**ಶ್ರೀ ಡಿ.ಕೆ. ಶಿವಕುಮಾರ್:–** ಮಾನ್ಯ ಸಭಾಪತಿಯವರೆ, ಬೇಡ. I am giving it openly. ನಾನು ಬೇರೆಯವರಿಗೆ ಈ ಬಗ್ಗೆ ಸಲಹೆಯನ್ನು ಕೇಳಿದ್ದೇನೆ.

**ಶ್ರೀ ಕೆ.ಟಿ. ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೆ, ಈಗ ಬಸ್ ಮತ್ತು ರೈಲು ಈ ರೀತಿಯ ಹೆಸರುಗಳನ್ನು ಬದಲಾಯಿಸಿಕೊಳ್ಳಲಾಗಿಲ್ಲ. ಹಾಗೆ, ಜನಬಳಕೆಯಲ್ಲಿ Lineman ಎಂಬ ಹೆಸರು ಇದೆ. ಈಗ ಮಾರ್ಗದಾಳುಗಳೆಂದರೆ ಏನೆಂದು ನಾವುಗಳು ಹುಡುಕಬೇಕಾಗುತ್ತದೆ.

**ಸಭಾಪತಿಯವರು:–** ಮಾನ್ಯ ಶ್ರೀಕಂಠೇಗೌಡರೆ...

**ಶ್ರೀ ಕೆ.ಟಿ. ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೆ, ಭಾಷೆ ವಿಸ್ತಾರ, ಬೇರೆ ಬೇರೆ ಪದಗಳು ನಮ್ಮ ಭಾಷೆಗಳಿಗೆ ಸೇರಿಕೊಂಡಿರುವುದರಿಂದ ಆಗಿದೆ.

**(ಗೊಂದಲ)**

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಸಭಾಪತಿಯವರು:-** ಮಾನ್ಯ ಶ್ರೀಕಂಠೇಗೌಡರೆ, ಈಗ ಮಾನ್ಯ ಸಚಿವರು ಎಲ್ಲಾ ಸದಸ್ಯರ ಅಭಿಪ್ರಾಯ ತೆಗೆದುಕೊಳ್ಳುತ್ತೇನೆ. ಅದೇ ರೀತಿ ಬೇರೆಯವರ ಅಭಿಪ್ರಾಯವನ್ನು ಸಹ ಕೇಳುತ್ತೇನೆಂದು ಹೇಳಿದ್ದಾರೆ. ಈಗ ಅದರ ಬಗ್ಗೆ ಚರ್ಚೆ ಬೇಡ.

**ಶ್ರೀ ಕೆ.ಟಿ. ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೆ, Lineman ಎಂಬ ಪದವೇ ಇರಲಿ.

**ಶ್ರೀ ಡಿ.ಕೆ. ಶಿವಕುಮಾರ್:-** ಮಾನ್ಯ ಸಭಾಪತಿಯವರೆ, Lineman ಎಂಬ ಪದ ಇಂಗ್ಲೀಷ್. ಮಾರ್ಗದಾಳು ಎಂಬ ಪದ ಕನ್ನಡ.

**ಶ್ರೀ ಭಾನುಪ್ರಕಾಶ:-** ಮಾನ್ಯ ಸಭಾಪತಿಯವರೆ, Lineman ಎಂಬುದಕ್ಕೆ ತಂತಿ ಮನುಷ್ಯ ಎಂದು ಕರೆಯುವುದಕ್ಕಾಗುವುದಿಲ್ಲ.

**ಸಭಾಪತಿಯವರು:-** ಧನ್ಯವಾದಗಳು. ಮುಂದಿನ ಪ್ರಶ್ನೆ ಕ್ಯಾಪ್ಟನ್ ಗಣೇಶ್ ಕಾರ್ಣಿಕ್‌ರವರದು.

**ಶ್ರೀ ಎಸ್. ನಾಗರಾಜ್(ಸಂದೇಶ್ ನಾಗರಾಜ್):-** ಮಾನ್ಯ ಸಭಾಪತಿಯವರೆ, ಸಂಬಳ ಜಾಸ್ತಿ ಕೊಟ್ಟರೆ ಒಳ್ಳೆಯ ಹೆಸರನ್ನು ನಾವು ಸೂಚಿಸುತ್ತೇವೆ.

(ಮುಂದುವರೆದಿದೆ...)

(676)13-06-2017 12-10 ಎಲ್‌ಎಂ-ಬಿಎನ್‌ಎಸ್

**ಪ್ರಶ್ನೆ ಸಂಖ್ಯೆ:2850**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಮಾನ್ಯ ಸಭಾಪತಿಗಳೆ, ರಾಜ್ಯದಲ್ಲಿ ಒಟ್ಟು ಎಷ್ಟು ಅನಧಿಕೃತ ಪಂಪ್‌ಸೆಟ್‌ಗಳನ್ನು ಹಾಕಿಕೊಂಡಿದ್ದಾರೆ ಎನ್ನುವುದಕ್ಕೆ ಅಂಕಿ-ಸಂಖ್ಯೆಗಳನ್ನು ಕೊಟ್ಟಿದ್ದಾರೆ. ಇದರ ಬಗ್ಗೆ ಸರ್ಕಾರದ ನಿಲುವೇನು ಎನ್ನುವುದಕ್ಕೆ ಸರ್ಕಾರದಿಂದ ಯಾವುದೇ ಉತ್ತರ ಬಂದಿರುವುದಿಲ್ಲ. ನದಿಗಳಿಂದ, ಕೆರೆಗಳಿಂದ ದೊಡ್ಡ ಪ್ರಮಾಣದಲ್ಲಿ ಅನಧಿಕೃತವಾಗಿ ನೀರನ್ನು ಎತ್ತುತ್ತಿದ್ದಾರೆ. ಇದನ್ನು ಒಂದಿಲ್ಲಾ ಒಂದು ರೀತಿಯಲ್ಲಿ ಅಧಿಕೃತಗೊಳಿಸಬೇಕಾಗುತ್ತದೆ. ಏಕೆಂದರೆ ಈ ನೀರು ಕೃಷಿಗಾಗಿ ಉಪಯೋಗವಾಗುತ್ತಿದೆ. ಸರ್ಕಾರದ ಉತ್ತರದಲ್ಲಿ ರಾಜ್ಯದಲ್ಲಿ 4,81,690 ಅನಧಿಕೃತ ಪಂಪ್‌ಸೆಟ್‌ಗಳನ್ನು ಸಕ್ರಮಗೊಳಿಸಲಾಗಿದೆ ಎಂದು ಹೇಳಿದ್ದಾರೆ. ರೈತರು ಅನಧಿಕೃತವಾಗಿ ಹಾಕಿಕೊಂಡ ಮೇಲೆ ಅದನ್ನು ಸಕ್ರಮಗೊಳಿಸುವುದಕ್ಕಿಂತ ಅವರು ಯಾವಾಗ ಪಂಪ್‌ಸೆಟ್‌ಗೆ ಅರ್ಜಿಯನ್ನು ಹಾಕಿಕೊಳ್ಳುತ್ತಾರೆ ಆಗಲೇ ಏಕೆ ಅವರಿಗೆ ಪಂಪ್‌ಸೆಟ್‌ಗಳ ಕನೆಕ್ಷನ್ ಕೊಡುವುದಿಲ್ಲ? ಅನಧಿಕೃತ ಪಂಪ್‌ಸೆಟ್‌ಗಳು ಎಂದ ಮೇಲೆ ವಿದ್ಯುತ್ ಕಳ್ಳತನ ಖಂಡಿತವಾಗಿ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಆಗುತ್ತದೆ. ಇದರ ಬಗ್ಗೆ ಸರ್ಕಾರ ನೀತಿ ಏನು ಎನ್ನುವುದಕ್ಕೆ ಸರ್ಕಾರ ಏನೂ ಉಲ್ಲೇಖ ಮಾಡಿರುವುದಿಲ್ಲ. ಮತ್ತೆ ಕೇಳುತ್ತೇನೆ ಇದರ ಬಗ್ಗೆ ಸರ್ಕಾರದ ನಿಲುವೇನು ಎನ್ನುವುದನ್ನು ದಯಮಾಡಿ ಹೇಳಬೇಕು.

**ಶ್ರೀ ಡಿ.ಕೆ.ಶಿವಕುಮಾರ್:-** ಮಾನ್ಯ ಸಭಾಪತಿಗಳೆ, ಕ್ಯಾಪ್ಟನ್ ಗಣೇಶ್ ಕಾರ್ಣಿಕ್‌ರವರು very technical question ಅನ್ನು ಕೇಳಿದ್ದಾರೆ. ಇದರಲ್ಲಿ ಸತ್ಯಾಂಶ ಬೇರೆ ಇದೆ, ವಾಸ್ತವಾಂಶ ಬೇರೆ ಇದೆ. ಮಲೆನಾಡಿನಲ್ಲಿ, ಕರಾವಳಿ ಪ್ರದೇಶದಲ್ಲಿ, ಹುಬ್ಬಳ್ಳಿ, ಬಾಗಲಕೋಟೆ, ವಿಜಯಪುರ, ಬಳ್ಳಾರಿ ಕಡೆಗಳಲ್ಲಿ ಪಂಪ್‌ಸೆಟ್‌ಗಳನ್ನು... ಸದಸ್ಯರು ಕೇಳಿರುವ ಪ್ರಶ್ನೆ ಎಂದರೆ ರಾಜ್ಯದಲ್ಲಿ ಇರುವ ನದಿ, ಕೆರೆ, ಕಾಲುವೆಗಳಿಂದ ಅನಧಿಕೃತ ಪಂಪ್‌ಸೆಟ್‌ಗಳ ಮುಖಾಂತರ ಕೃಷಿಗಾಗಿ ನೀರನ್ನು ಬಳಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು. ಆದರೆ ನನಗೆ official ಆಗಿ ಉತ್ತರ ಯಾವುದು ಇಲ್ಲ ಎಂದೇ ಬಂದಿದೆ. I stopped it. ಯಾವುದೂ ಅನಧಿಕೃತವಿಲ್ಲ ಎಂದು ಹೇಳಲು ಆಗುವುದಿಲ್ಲ, let me admit it. ನದಿ ನೀರಿಗಾಗಿ ಯಾರು ಪಂಪ್‌ಸೆಟ್ ಕೊಡಿ ಎಂದು ಕೇಳುವುದಿಲ್ಲ. ಕೇಳಿದರೂ ನಾವು ಕೊಡುವುದಿಲ್ಲ. ರೈತ ಏನು ಮಾಡುತ್ತಾನೆ ಎಂದರೆ, ನದಿ ಪಕ್ಕದಲ್ಲಿಯೇ 10 ಗುಂಟೆ ಜಮೀನು ತೆಗೆದುಕೊಂಡಿರುತ್ತಾನೆ, ಅದಕ್ಕೆ ಬೋರವೆಲ್ ಹಾಕಿಕೊಳ್ಳುತ್ತಾನೆ, ಇಲ್ಲದಿದ್ದರೆ ಅಲ್ಲಿ ಸಣ್ಣ ಮೋಟರ್ ಹಾಕಿಕೊಂಡು, he will take permission. ನಂತರ ಮೂರು ತಿಂಗಳ ಆದಮೇಲೆ ಸೀದಾ ನದಿ ಒಳಗೆ ಪೈಪ್‌ನ್ನು ಬಿಟ್ಟುಬಿಡುತ್ತಾನೆ. ಬೆಳಗಾವಿ, ವಿಜಯಪುರದ ನಾಯಕರನ್ನು ಕೇಳಿ ನೋಡಿ 20 ಕಿ.ಮೀ. ದೂರದಿಂದ ನೀರನ್ನು ತೆಗೆದುಕೊಂಡು ಹೋಗುತ್ತಿದ್ದಾರೆ. How can we stop them? ಇದೊಂದು ದೊಡ್ಡ ಸಮಸ್ಯೆಯಾಗಿದೆ. ನಮ್ಮ Karnataka Power Corporation (KPC) ಗೆ power ಗಾಗಿ ನದಿಯಲ್ಲಿ ನೀರೇ ಬರುತ್ತಿಲ್ಲ. ವಿದ್ಯುತ್ ತಯಾರಿಸಬೇಕು ಎಂದರೆ ನಮಗೆ ನೀರು ಬೇಕು. ಅದಕ್ಕಾಗಿ ಆ ಲೈನ್‌ನಲ್ಲಿ ಬರುವ ಪೂರ್ತಿ ಪಂಪ್‌ಸೆಟ್‌ಗಳ ಮೋಟರ್ಸ್‌ನ್ನು ಬಂದ್ ಮಾಡಿಸಿ ನೀರು ಬಿಡಿಸಿಕೊಳ್ಳುವ ಪರಿಸ್ಥಿತಿ ಬಂದಿದೆ. ಇದಕ್ಕೆ ಹೊಸದಾಗಿ ಸರ್ಕಾರ ಬಂದಾಗಲೇ ಏನಾದರೂ ಕ್ರಮ ತೆಗೆದುಕೊಳ್ಳಬಹುದಾಗಿತ್ತು. ಈಗ ಏನಾದರೂ ಕ್ರಮ ತೆಗೆದುಕೊಳ್ಳಲು ಹೋದರೆ ನಿಮ್ಮ ಕುರ್ಚಿ ಹಾಗೂ ನಮ್ಮ ಕುರ್ಚಿಗೆ ಸಮಸ್ಯೆಯಾಗುತ್ತದೆ. ವಾಸ್ತವಾಂಶವನ್ನು ತಮಗೆ ತಿಳಿಸಿದ್ದೇನೆ. 25 ಕಿ.ಮೀ., 10 ಕಿ.ಮೀ. ದೂರದಿಂದ ನೀರನ್ನು ತೆಗೆದುಕೊಂಡು ಹೋಗುವವರು ಇದ್ದಾರೆ. 10 ಎಚ್.ಪಿ. ಮಾತ್ರ ವಿದ್ಯುತ್ ಕೊಡುತ್ತೇವೆ ಎಂದು ನಾವು ಹೇಳಿದ್ದೇವೆ. ಆದರೆ 20 ಎಚ್.ಪಿ. ವಿದ್ಯುತ್ ಕದ್ದು ಮೋಟರ್ ಹಾಕಿಸಿಕೊಂಡು ಮತ್ತೆ extend ಮಾಡಿಕೊಂಡವರು ಇದ್ದಾರೆ. ಅರ್ಧ ಕಿ.ಮೀ. ಆದಮೇಲೆ 100 ಎಚ್.ಪಿ. ತೆಗೆದುಕೊಂಡು ಮತ್ತೆ ಮೇಲಕ್ಕೆ ತೆಗೆದುಕೊಂಡು ಹೋದವರು ಇದ್ದಾರೆ. ಇದೊಂದು ದೊಡ್ಡ ದಂಧೆಯಾಗಿದೆ. ಆದ್ದರಿಂದ ಇದರ ಬಗ್ಗೆ ನಾವು-ನೀವು ಎಲ್ಲಾ ಕುಳಿತುಕೊಂಡು ಚರ್ಚೆ ಮಾಡಿ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಏನಾದರೂ ಒಂದು ತೀರ್ಮಾನಕ್ಕೆ ಬಂದರೆ ಈ ರಾಜ್ಯವನ್ನು ವಿದ್ಯುತ್ ಬರದಿಂದ ಉಳಿಸಬಹುದಾಗಿದೆ. 9 ರಿಂದ 10 ಸಾವಿರ ಕೋಟಿ ರೂ.ಗಳಷ್ಟು subsidy ಗಾಗಿ ಹೋಗುತ್ತಿದೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಮಾನ್ಯ ಸಭಾಪತಿಗಳೆ, ನನ್ನ ಎರಡನೇ ಪ್ರಶ್ನೆಗೆ ಅರ್ಧ ಉತ್ತರವನ್ನು ಕೊಟ್ಟಿದ್ದಾರೆ. 4,81,690 ಅನಧಿಕೃತ ಪಂಪ್‌ಸೆಟ್‌ಗಳಲ್ಲಿ 3,63,065 ಪಂಪ್‌ಸೆಟ್‌ಗಳಿಗೆ 10,000 ರೂಪಾಯಿಯಂತೆ ಪಾವತಿಸಿಸುತ್ತಾರೆ ಎಂದು ಹೇಳಿದ್ದಾರೆ. ನನ್ನ ಪ್ರಶ್ನೆ ಎಂದರೆ, ಇವುಗಳನ್ನು ಸಕ್ರಮಗೊಳಿಸಲು ಏನು ಮಾನದಂಡವನ್ನು ಅನುಸರಿಸುತ್ತೀರಿ?

**ಶ್ರೀ ಡಿ.ಕೆ.ಶಿವಕುಮಾರ್:-** ಮಾನ್ಯ ಸಭಾಪತಿಗಳೆ, ಅವರು ಮೊದಲು ಪಂಪ್‌ಸೆಟ್‌ನ್ನು ಅನಧಿಕೃತವಾಗಿ ತೆಗೆದುಕೊಂಡು ನಂತರ 50 ರೂ.ಗಳನ್ನು ಕಟ್ಟಿದ್ದಾರೆ. ನಂತರ ನಾವು ಕೆ.ಇ.ಆರ್.ಸಿ.ಯಿಂದ charge ಮಾಡುವುದಿಲ್ಲವೆಂದು, we have given that number. ನಂತರ ಅದು regularise ಆಗಬೇಕು. ಇಲ್ಲದಿದ್ದರೆ disconnect ಮಾಡುತ್ತೇವೆ ಎಂದು ಹೇಳಿದ್ದೆವು. ಹೀಗೆ ಹೇಳಿದ ಮೇಲೆ 10,000 ರೂ.ಗಳಷ್ಟು ಹಣವನ್ನು ಡೆಪಾಸಿಟ್ ಕಟ್ಟಿದ್ದಾರೆ, 4 ರಿಂದ 5 ಸಾವಿರ ರೂ.ಗಳ ಶುಲ್ಕವನ್ನು ಕಟ್ಟಿದ್ದಾರೆ. ಒಬ್ಬನಿಗೆ regularise ಮಾಡಲು 70 ಸಾವಿರ ರೂ.ಗಳಿಂದ ಒಂದುವರೆ ಲಕ್ಷ ರೂ.ಗಳಷ್ಟು we have invested. ಅದಕ್ಕೆ transformer, line ಎಲ್ಲವನ್ನು ಮಾಡಿ, separate ಆಗಿ unauthorised I.P. sets ಎಂದು ಈ ರೀತಿ ಎಲ್ಲವನ್ನು ಮಾಡಬೇಕಾಗುತ್ತದೆ. ಇದೇ ರೀತಿ ನಮ್ಮ ಸರ್ಕಾರ ಬಂದ ಮೇಲೆ ರಾಜ್ಯದಲ್ಲಿ 3,63,065 ಪಂಪ್‌ಸೆಟ್‌ಗಳಿಗೆ 10,000 ರೂ.ಗಳನ್ನು ಕಟ್ಟಿಸಿಕೊಂಡಿದ್ದೇವೆ. ಇನ್ನು 1,08,719 ಪಂಪ್‌ಸೆಟ್‌ಗಳಿಗೆ 10,000 ರೂ.ಗಳನ್ನು ಕಟ್ಟಿಸಿಕೊಳ್ಳುವುದು ಬಾಕಿ ಇದೆ. ಇನ್ನೂ ಸ್ವಲ್ಪ ರೈತರು ಹಣವನ್ನು ಕಟ್ಟುತ್ತಿದ್ದಾರೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಮಾನ್ಯ ಸಭಾಪತಿಗಳೆ, ನನ್ನ ಪ್ರಶ್ನೆ ಇರುವುದು, ರೈತರು ತಮ್ಮದೇ ಆದ ಬಾವಿ ತೋಡಿಕೊಂಡು, ಕೆರೆ ಮಾಡಿಕೊಂಡು, ಬೋರ್‌ವೆಲ್ ಹಾಕಿಕೊಂಡು ಮಾಡಿದರೆ ಅದಕ್ಕೆ ಒಂದು ಕ್ರಮ ಇದೆ ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ನದಿ ಮತ್ತು ಕೆರೆ ಸಾರ್ವಜನಿಕರ ಆಸ್ತಿ. ಒಂದು ನೀತಿ ಇಲ್ಲದೇ ಅದನ್ನು ತಾವು ಹೇಗೆ ಸಕ್ರಮಗೊಳಿಸುತ್ತೀರಿ?

**ಶ್ರೀ ಡಿ.ಕೆ.ಶಿವಕುಮಾರ್:-** ಪಾಲಿಸಿ ಪ್ರಕಾರ ನದಿಗಳಿಗೆ ಕೊಡಲು ಅವಕಾಶವೇ ಇಲ್ಲ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಮತ್ತೆ ಹೇಗೆ ಮಾಡಿದ್ದೀರಿ ಎಂದು ನಾನು ಕೇಳುವುದು.

**ಶ್ರೀ ಡಿ.ಕೆ.ಶಿವಕುಮಾರ್:-** ಕೊಟ್ಟಿರುವುದಿಲ್ಲ ಎಂದು ಹೇಳುತ್ತಿದ್ದೇನೆ. ಆದರೆ ಏನು ಮಾಡುತ್ತಿದ್ದಾರೆಂದರೆ, ಇಲ್ಲಿ ಹಾಕಿಕೊಂಡು ಅಲ್ಲಿ ಎತ್ತಿಕೊಳ್ಳುತ್ತಿದ್ದಾರೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** 4,81,690 ಅನಧಿಕೃತ ಪಂಪ್‌ಸೆಟ್ಸ್‌ಗಳನ್ನು ಅಧಿಕೃತಗೊಳಿಸಿದ್ದೀರಲ್ಲ?

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಡಿ.ಕೆ.ಶಿವಕುಮಾರ್:-** ಅದು ಇಡೀ ರಾಜ್ಯದ ಲೆಕ್ಕ. ನದಿಗಳದ್ದೇ ಒಂದು ಬೇರೆ ಮಾಡಿರುವುದಿಲ್ಲ. ನದಿ ಪಕ್ಕದಲ್ಲಿ ಎಷ್ಟು ಇದೆ ಎಂದು I can give the statistics. ಈಗ ಒಂದು ಸಣ್ಣ ಸಮಿತಿಯನ್ನು ಮಾಡಿ ನಿಮ್ಮನ್ನು ಕಳುಹಿಸಿಕೊಡುತ್ತೇನೆ, you just go and give us some suggestion on this. You only advise us.

**ಶ್ರೀ ಕವಟಗಿಮಠ ಮಹಂತೇಶ್ ಮಲ್ಲಿಕಾರ್ಜುನ:-** ಮಾನ್ಯ ಸಭಾಪತಿಗಳೆ, ಸತ್ಯಾಸತ್ಯತೆಯ ಚರ್ಚೆ ಬೇಡ.

**ಸಭಾಪತಿಯವರು:-** ವ್ಯಾಖ್ಯಾನ ಬೇಡ, ಪ್ರಶ್ನೆ ಕೇಳಿ.

**ಶ್ರೀ ಕವಟಗಿಮಠ ಮಹಂತೇಶ್ ಮಲ್ಲಿಕಾರ್ಜುನ:-** ಮಾನ್ಯ ಸಭಾಪತಿಗಳೆ, ಇಂಧನ ಸಚಿವರು ಅಧಿಕಾರಕ್ಕೆ ಬಂದ ತಕ್ಷಣ ಸೋಲಾರ್ ಪಂಪ್‌ಸೆಟ್‌ಗಳಿಗೆ ಉತ್ತೇಜನ ಕೊಡುತ್ತೇವೆ ಎಂದು ಹೇಳಿದರು. ಬಹುತೇಕವಾಗಿ ಗ್ರಾಮೀಣ ಪ್ರದೇಶದಲ್ಲಿ ಅದು ಕೃಷ್ಣಾ ನದಿ ದಂಡೆಯಲ್ಲಿ ಇರಬಹುದು ಅಥವಾ ಬೇರೆ ಕಡೆಗಳಲ್ಲಿ ಇರಬಹುದು, ರೈತರು ಸ್ವಂತ ಸೋಲಾರ್ ಪಂಪ್‌ಸೆಟ್‌ಗಳನ್ನು ಹಾಕಿಕೊಳ್ಳಲು ಮುಂದೆ ಬರುತ್ತಿದ್ದಾರೆ. ಸ್ವತಃ ಮಾಡಿಕೊಂಡಿದ್ದಾರೆ. ಅದರೆ ಸರ್ಕಾರ ಏಕೆ ಸೋಲಾರ್ ಪಂಪ್ ಬಗ್ಗೆ ತನ್ನ ನಿಲುವನ್ನು ಹೇಳುತ್ತಿಲ್ಲ.

**ಸಭಾಪತಿಯವರು:-** ನದಿ ದಂಡೆಯಲ್ಲಿ ಅನಧಿಕೃತವಾಗಿ ಪಂಪ್‌ಸೆಟ್ಸ್ ಹಾಕಿಕೊಂಡಿರುವ ಬಗ್ಗೆ ಚರ್ಚೆ ನಡೆಯುತ್ತಿದೆ. Policy matter ಬಗ್ಗೆ ಈಗ ಚರ್ಚೆ ಬೇಡ.

**ಶ್ರೀ ಕವಟಗಿಮಠ ಮಹಂತೇಶ್ ಮಲ್ಲಿಕಾರ್ಜುನ:-** ಸೋಲಾರ್ ಪಂಪ್‌ಸೆಟ್ಸ್‌ಗೆ ಸಬ್ಸಿಡಿ ಕೊಡುವ ಬಗ್ಗೆ ಸರ್ಕಾರ ತನ್ನ ಧೋರಣೆಯನ್ನು ಸ್ಪಷ್ಟಪಡಿಸಿದರೆ ಬಹಳಷ್ಟು ಜನ ಮುಂದೆ ಬರುತ್ತಾರೆ. ಕೆಲವು ರೈತರು ತಮ್ಮ ಸ್ವಂತ ಖರ್ಚಿನಲ್ಲಿ ಹಾಕಿಕೊಳ್ಳಲು ಮುಂದೆ ಬಂದಿದ್ದಾರೆ, ಇದರಿಂದ ಸರ್ಕಾರ ತನ್ನ ಹಣವನ್ನು ಉಳಿಸಬಹುದು ಮತ್ತು ರೈತರಿಗೆ ಬೆಂಬಲವನ್ನು ಕೊಟ್ಟ ಹಾಗೆ ಆಗುತ್ತದೆ. ಆದ್ದರಿಂದ ಸರ್ಕಾರ ತನ್ನ ನಿಲುವನ್ನು ಹೇಳಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ರಮೇಶ್‌ಬಾಬು:-** ಮಾನ್ಯ ಸಭಾಪತಿಗಳೆ, ಸರ್ಕಾರ ಕೊಟ್ಟಿರುವ ಅಂಕಿ-ಅಂಶಗಳ ಪ್ರಕಾರ ಇನ್ನು 1,08,719 ರಷ್ಟು ಅನಧಿಕೃತ ಪಂಪ್‌ಸೆಟ್‌ಗಳು ಇವೆ ಎಂದು ಹೇಳಿದ್ದಾರೆ. Penalty clause ನಲ್ಲಿ 10,000 ರೂ.ಗಳಿಗೆ provision ಮಾಡಿ ಈಗಾಗಲೆ 3,63,065 ಪಂಪ್‌ಸೆಟ್‌ಗಳನ್ನು ಸಕ್ರಮಗೊಳಿಸಿದ್ದಾರೆ. ಮಾನ್ಯ ಮಂತ್ರಿಗಳು ಮಾತನಾಡುತ್ತಾ ವಾಸ್ತವಾಂಶ ಮತ್ತು ಸತ್ಯಾಂಶ ಎನ್ನುವ ಪದವನ್ನು ಬಳಸಿದರು. ವಾಸ್ತವಾಂಶ ಸತ್ಯಾಂಶ ಎಂದರೆ ರೈತರು ಬರಗಾಲದಿಂದ ಕಟ್ಟಲು ಆಗಿಲ್ಲ ಇಷ್ಟೆ. 10,000 ರೂ.ಗಳನ್ನು penalty clause ಎಂದು ಏನು ಮಾಡಿದ್ದೀರಿ ಅದನ್ನು ತೆಗೆದುಬಿಟ್ಟರೆ... ಒಂದು ಲಕ್ಷ ಪಂಪ್‌ಸೆಟ್ಸ್ ಹಾಕುವುದಕ್ಕೆ 10ಕೋಟಿ ರೂ.ಗಳ ಖರ್ಚಾಗುತ್ತದೆ. ತಾವು ಅದನ್ನು ಮನ್ನಾ

" ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಮಾಡಿಬಿಟ್ಟರೆ, at a stretch ನಲ್ಲಿ ಕೊಟ್ಟು regularise ಮಾಡಿದ ಹಾಗಾಗುತ್ತದೆ. ಅವರಿಗೆ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಿರುವುದಿಲ್ಲ ಎನ್ನುವ ಮಾತನ್ನು ಮಂತ್ರಿಗಳು ಹೇಳಿದ್ದಾರೆ. ಅದಕ್ಕೆ ಆದ್ಯತೆಯನ್ನು ಕೊಡಿ. ರೈತರು ಅನಧಿಕೃತವಾಗಿ ಏಕೆ ತೆಗೆದುಕೊಳ್ಳುತ್ತಾರೆ ಎಂದರೆ, ಅವರು ಒಂದು ಬೋರ್‌ವೆಲ್ ಕೊರೆಯುತ್ತಾರೆ, ಆದರೆ ಆ ಬೋರ್‌ವೆಲ್ ಒಂದು ತಿಂಗಳಲ್ಲಿ, ಆರು ತಿಂಗಳಲ್ಲಿ ಅಥವಾ ಒಂದು ವರ್ಷದಲ್ಲಿ dry ಆಗಬಹುದು. ಬೋರ್‌ವೆಲ್ ಬಗ್ಗೆ ಆ ರೈತನಿಗೆ ಗೊತ್ತಿರುವುದಿಲ್ಲ. ಇದನ್ನು ಪಾಲಿಸಿಯಾಗಿ ತೆಗೆದುಕೊಂಡು ದಯಮಾಡಿ 1,08,719 ಪಂಪ್‌ಸೆಟ್‌ಗಳನ್ನು ಸಕ್ರಮಗೊಳಿಸಬೇಕು ಮತ್ತು ಆ 10,000 ರೂ.ಗಳ penalty ಯನ್ನು ಮನ್ನಾ ಮಾಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

**ಶ್ರೀ ಡಿ.ಕೆ.ಶಿವಕುಮಾರ್:-** ಮಾನ್ಯ ಸಭಾಪತಿಗಳೆ, this is not penalty. 10,000 ರೂ.ಗಳ deposit ಕಟ್ಟುವುದು. ಎಲ್ಲದಕ್ಕೂ ಲೆಕ್ಕ ಕೊಡಬೇಕಾಗುತ್ತದೆ. ಸರ್ಕಾರ ನಡೆಸುವುದು ಎಂದರೆ ಬರೀ ಬೆಳಿಗ್ಗೆ ಎದ್ದು ನಾವು soups ಕೊಡುವುದಲ್ಲ, they should be accountable. ಎಷ್ಟು ಪವರ್ ತೆಗೆದುಕೊಳ್ಳುತ್ತಾರೆ, ಏನು ಮಾಡುತ್ತಾರೆ ಎನ್ನುವುದನ್ನು ನೋಡಬೇಕಾಗುತ್ತದೆ. ನಾವು 10,000 ರೂ.ಗಳನ್ನು ಕಟ್ಟಿಸಿಕೊಳ್ಳುವುದು ಕೇವಲ ಡೆಪಾಸಿಟ್. ಇದರ ಜೊತೆ 4 ರಿಂದ 5 ಸಾವಿರ ರೂ.ಗಳ ಶುಲ್ಕವನ್ನು ಕಟ್ಟುತ್ತಾರೆ. ಇದರ ಜೊತೆಗೆ ಎಂಬತ್ತರಿಂದ ಒಂದೂವರೆ ಲಕ್ಷ ರೂ.ಗಳವರೆಗೆ investment ಮಾಡುತ್ತೇವೆ, ಪ್ರತಿ ವರ್ಷ 60,000 ರೂ.ಗಳ ವಿದ್ಯುತ್ ಬಿಲ್ ಕಟ್ಟುತ್ತಿದ್ದೇವೆ. 10,000 ರೂ.ಗಳಲ್ಲ ಇನ್ನು ಹೆಚ್ಚು ಕಟ್ಟಲು ತಯಾರಿದ್ದಾರೆ. ತಮಿಳುನಾಡಿನಲ್ಲಿ ಹಣ ಕಟ್ಟಿ 10 ವರ್ಷವಾದರೂ ವಿದ್ಯುತ್‌ನ್ನು ಕೊಡುವುದಿಲ್ಲ. ಆ border village ನನ್ನ ಕ್ಷೇತ್ರದಲ್ಲಿ ಇದೆ. ಅಲ್ಲಿ 10 ವರ್ಷವಾದರೂ ಇನ್ನು ವಿದ್ಯುತ್ ಕೊಟ್ಟಿರುವುದಿಲ್ಲ. ನಮ್ಮಲ್ಲಿ ರೈತರಿಗಾಗಿ ನಾವು ಹಿಂದಿನಿಂದಲೂ ಬಹಳ yield ಆಗಿದ್ದೇವೆ. ಬೇರೆ ರಾಜ್ಯಗಳಿಗೆ ಹೋಲಿಕೆ ಮಾಡಿದರೆ ನಮ್ಮ ರಾಜ್ಯದಲ್ಲಿ ಕೊಟ್ಟಿರುವಷ್ಟು ಉಚಿತ ವಿದ್ಯುತ್‌ನ್ನು ಇಡೀ ದೇಶದಲ್ಲಿ ಯಾವ ರಾಜ್ಯದಲ್ಲಿಯೂ ಕೊಟ್ಟಿಲ್ಲ. ನಾನು ಗುಜರಾತ್, ಮಹಾರಾಷ್ಟ್ರ ಇನ್ನು ಉಳಿದ ರಾಜ್ಯಗಳಿಗೆ ಹೋಗಿ ನೋಡಿಕೊಂಡು ಬಂದಿದ್ದೇನೆ. ನಮ್ಮ ರಾಜ್ಯದಲ್ಲಿ ಉಪಯೋಗಿಸುತ್ತಿರುವ ಪವರ್‌ನಲ್ಲಿ 39% ಪವರ್ ಅನ್ನು ರೈತರಿಗೆ ಕೊಡುತ್ತಿದ್ದೇವೆ. ಅದು ಸಬ್ಸಿಡಿ ಕೊಟ್ಟು ಕೊಡುತ್ತಿದ್ದೇವೆ. ರೈತರಿಗೆ value of power ಸ್ವಲ್ಪ ಗೊತ್ತಾಗಬೇಕು. ರೈತ ಬೆಳೆದುಕೊಳ್ಳಲಿ, ಅವನಿಗೆ ಒಳ್ಳೆಯದಾಗಲಿ, ಅದರ ಬಗ್ಗೆ ನಾವೇನು ಚರ್ಚೆ ಮಾಡುತ್ತಿಲ್ಲ. ಮೀಟರ್ ಹಾಕುವುದಕ್ಕೆ ಕೆ.ಇ.ಆರ್.ಸಿ. ಅವರು ಹೇಳಿದ್ದಾರೆ. ಕೇಂದ್ರ ಸರ್ಕಾರದವರು ಕಡ್ಡಾಯವಾಗಿ ಮೀಟರ್ ಅಳವಡಿಸಿ ಎಂದು ಹೇಳಿದ್ದಾರೆ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

Separate line ಅನ್ನು ಮಾಡಿದ್ದೇವೆ. ಕೆ.ಇ.ಆರ್.ಸಿ. ಯವರು ನಮಗೆ condition ಹಾಕಿದ್ದಾರೆ. ಆದರೆ, ಸುಮ್ಮನೆ ಗಲಾಟೆಗಳಾಗುತ್ತವೆ, law and order problem ಗಳಾಗುತ್ತವೆಂದು ರೈತರಿಗಾಗಿ ನಾವು ತಲೆ ಬಗ್ಗಿಸಿಕೊಂಡು ಸುಮ್ಮನಿದ್ದೇವೆ.

**ಶ್ರೀ ಕವಟಗಿಮಠ ಮಹಂತೇಶ್ ಮಲ್ಲಿಕಾರ್ಜುನ :-** ಸೋಲಾರ್ ಪಂಪ್‌ಸೆಟ್ಸ್ ಬಗ್ಗೆ ಏನು ಹೇಳಲಿಲ್ಲ.

**ಸಭಾಪತಿಯವರು:-** ಈಗ ಅನಧಿಕೃತ ಪಂಪ್‌ಸೆಟ್‌ಗಳ ಬಗ್ಗೆ ಚರ್ಚೆ ನಡೆಯುತ್ತಿದೆ. ಸೋಲಾರ್ ಪಂಪ್‌ಸೆಟ್ಸ್ ಬಗ್ಗೆ ಅಲ್ಲ.

**Sri K.B.SHANAPPA**:- That is a very useful plan. Encourage ಮಾಡಿದ್ರೆ ......

**ಶ್ರೀ ಎಚ್.ಎಂ.ರೇವಣ್ಣ :-** ಮಾನ್ಯ ಸಭಾಪತಿಗಳೆ, ಅರ್ಕಾವತಿ ನದಿ ದಂಡೆಯಲ್ಲಿಯೂ ಪಂಪ್‌ಸೆಟ್‌ಗಳನ್ನು ಹಾಕಿಕೊಂಡಿದ್ದಾರೆ. ಅವುಗಳನ್ನು ಸಕ್ರಮಗೊಳಿಸುತ್ತೀರಾ ಎನ್ನುವುದನ್ನು ದಯಮಾಡಿ ಸರ್ಕಾರ ಹೇಳಬೇಕು.

**ಸಭಾಪತಿಯವರು:-** ಈಗಾಗಲೆ ಹೇಳಿದ್ದಾರೆ ಮತ್ತೆ ಹೇಳಬೇಕಾ?

**ಶ್ರೀ ಡಿ.ಕೆ.ಶಿವಕುಮಾರ್:-** ಮಾನ್ಯ ಸಭಾಪತಿಗಳೆ, ನದಿ ದಂಡೆಯಲ್ಲಿ ಹಾಕಿಕೊಂಡಿರುವ ಪಂಪ್‌ಸೆಟ್‌ಗಳನ್ನು ಸಕ್ರಮಗೊಳಿಸುವುದಿಲ್ಲ. ರೈತ ನದಿ ಪಕ್ಕದಲ್ಲಿನ ಜಮೀನಿಗೆ ಕನೆಕ್ಷನ್ ತೆಗೆದುಕೊಳ್ಳುತ್ತಾನೆ. ಮೂರು ತಿಂಗಳ ನಂತರ ನದಿ ಒಳಗೆ foot valve ಹಾಕಿಕೊಳ್ಳುತ್ತಾರೆ.

**ಶ್ರೀ ಕವಟಗಿಮಠ ಮಹಂತೇಶ್ ಮಲ್ಲಿಕಾರ್ಜುನ :-** ಸೋಲಾರ್ ಪವರ್ ಬಗ್ಗೆ ಹೇಳಿ.

**ಶ್ರೀ ಡಿ.ಕೆ.ಶಿವಕುಮಾರ್:-** ಮಾನ್ಯ ಸಭಾಪತಿಗಳೆ, ಸೋಲಾರ್ ಪವರ್ ಅನ್ನು ನಿಮ್ಮ ಜಿಲ್ಲೆಯಲ್ಲಿ ಪ್ರಾರಂಭ ಮಾಡಿದ್ದೆವು. ನಾವು 5 ಎಚ್.ಪಿ.ಗೆ ಪ್ರಾರಂಭ ಮಾಡಿದ್ದೇವೆ. ಆದರೆ 5 ಎಚ್.ಪಿ. ಗೆ ಯಾರು ಬರುವುದಿಲ್ಲ. ಅವರಿಗೆ ಜಾಸ್ತಿ ನೀರು ಎಳೆಯಬೇಕು. ನಾವು encourage ಮಾಡಿದ್ದೇವೆ. ಎಲ್ಲಾ ತಾಲ್ಲೂಕುಗಳಲ್ಲಿಯೂ 25 ಎಚ್‌ಪಿ ಕೊಟ್ಟಿದ್ದೇವೆ. ನಿಮ್ಮ ಜಿಲ್ಲೆಯ ನಿಮ್ಮ ಕ್ಷೇತ್ರದಲ್ಲಿಯೂ ಸುಮಾರು 2-3 ತಾಲ್ಲೂಕುಗಳಲ್ಲಿ 150 ಎಚ್.ಪಿ ಕೊಟ್ಟಿದ್ದೇವೆ. ಸೋಲಾರ್ ಪವರ್‌ನಲ್ಲಿ ಮಾಡುವವರಿಗೆ encourage ಮಾಡಲು ನಾವು ತಯಾರಿದ್ದೇವೆ. Long distance ಗೆ pick up ಮಾಡಿಕೊಂಡು ಹೋಗಬೇಕು ಅದಕ್ಕಾಗಿ ಅವರು ಸ್ವಲ್ಪ ಹಿಂದೆ-ಮುಂದೆ ನೋಡುತ್ತಿದ್ದಾರೆ.

**ಶ್ರೀ ಕವಟಗಿಮಠ ಮಹಂತೇಶ್ ಮಲ್ಲಿಕಾರ್ಜುನ:-** ಸಬ್ಸಿಡಿ ಹಣ ......

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**Sri D.K.SHIVAKUMAR**:- The Government is ready, Energy Department, Minor Irrigation Department and Agriculture Department, ಈ ಮೂರು ಇಲಾಖೆಗಳು ಸಹಾಯ ಮಾಡುತ್ತಾರೆ.

(ಮುಂದು)

(677)13-06-2017 12-20 YL(KS)/AK

**(ಸಭಾಪತಿಯವರ ಉಪಸ್ಥಿತಿ)**

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ; 2875**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಸೋಮಣ್ಣ ಮ ಬೇವಿನಮರದ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಆದರೆ, ನಾನು ಕೇಳಿರತಕ್ಕಂಥ ಪ್ರಶ್ನೆ ರಾಜ್ಯದ ರೈತರಿಗೆ ಸ್ವಾವಲಂಬಿ ಜೀವನ ನಡೆಸಲು ಪಶುಭಾಗ್ಯ ಯೋಜನೆಯನ್ನು ಜಾರಿಗೆ ತಂದಿದ್ದು bank link ಇರುವುದರಿಂದ ಪಶುಭಾಗ್ಯ ಯೋಜನೆಯಡಿ ಆಯ್ದೆಯಾದ ರೈತರಿಗೆ ಸಾಲ ನೀಡದೆ ಇರುವುದರಿಂದ ಮತ್ತು ರೈತರಿಗೆ ನಿಗದಿತ ಅವಧಿಯಲ್ಲಿ ಯೋಜನೆಯ ಲಾಭ ಸಿಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎನ್ನತಕ್ಕಂಥ ಪ್ರಶ್ನೆಯನ್ನು ಕೇಳಿದ್ದೇನೆ. ಅದಕ್ಕೆ ಮಾನ್ಯ ಸಚಿವರು ಜಿಲ್ಲೆಯಲ್ಲಿ ಶಾಸಕರ ಅಧ್ಯಕ್ಷತೆಯಲ್ಲಿ ಆಯ್ಕೆಯಾದ ಫಲಾನುಭವಿಗಳ ಪಟ್ಟಿಯನ್ನು ಬ್ಯಾಂಕಿಗೆ ಕಳುಹಿಸಿಕೊಡುತ್ತಾರೆ. ಆದರೆ, ಆಯ್ಕೆಯಾದ ಫಲಾನುಭವಿಗಳು ಬ್ಯಾಂಕಿನಿಂದ ಸಾಲ ಅಥವಾ ಸಹಾಯ ಸಿಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲವೆಂಬ ಉತ್ತರವನ್ನು ನೀಡಿದ್ದಾರೆ.

ಅನೇಕ ಬಾರಿ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಸರ್ಕಾರದ ಯೋಜನೆಗಳನ್ನು ಆಯಾಯ ಸಮಿತಿಯಲ್ಲಿ ಆಯ್ಕೆ ಮಾಡಿ, ಬ್ಯಾಂಕಿಗೆ ಕಳುಹಿಸಿಕೊಡುತ್ತೇವೆ. ಆದರೆ, ಬ್ಯಾಂಕಿನಿಂದ ಆಯ್ಕೆಯಾದ ಫಲಾನುಭವಿಗಳಿಗೆ ಸಾಲ ಸಿಗುವುದಿಲ್ಲ. ಈ ವಿಚಾರವಾಗಿ ನಾವು ಅನೇಕ ಬಾರಿ ಸರ್ಕಾರದ ಗಮನಕ್ಕೂ ತಂದಿದ್ದೇವೆ. ಯಾವ ರೀತಿ ಸರ್ಕಾರದ ಗಮನಕ್ಕೆ ತಂದಿದ್ದೇವೆಂದರೆ, Karnataka Development Programme (KDP) ಸಭೆಯಲ್ಲಿ ಮಾನ್ಯ ಮಂತ್ರಿಗಳಿಗೆ, ಜಿಲ್ಲಾಧಿಕಾರಿಗಳಿಗೆ, ಜಿಲ್ಲಾ ಪಂಚಾಯತ್ ಅಧಿಕಾರಿಗಳಿಗೆ ಮತ್ತು Lead Bank Manager ಗಳಿಗೆ ಈ ವಿಷಯವನ್ನು ತಿಳಿಸಿದ್ದೇವೆ. ಆದರೆ ಮಾನ್ಯ ಸಚಿವರು ಹೇಳುತ್ತಿರುವುದು, ನಮಗೆ ಮಾಹಿತಿ ಬಂದಿಲ್ಲ, ಮಾಹಿತಿ ಬಂದರೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆನ್ನುವ ಸಹಜ ಉತ್ತರ ನೀಡಿರುತ್ತಾರೆ. ಆದರೆ, ಆಯ್ಕೆಯಾದ ಫಲಾನುಭವಿಗಳು 6 ತಿಂಗಳವರೆಗೂ ಬ್ಯಾಂಕಿಗೆ ಹೋಗುತ್ತಾರೆ. ಅಲ್ಲಿ ಯಾವುದೇ ಪರಿಸ್ಥಿತಿಯಲ್ಲಿ ಸಾಲ ಸಿಗದೇ ಇರುವಾಗ ತಾಲ್ಲೂಕು ಮಟ್ಟದ ಅಧಿಕಾರಿಗಳನ್ನು ಭೇಟಿಯಾಗುತ್ತಾರೆ. ತಾಲ್ಲೂಕು ಮಟ್ಟದ ಅಧಿಕಾರಿಗಳು ನಾವು ಸರ್ಕಾರದ ಮಟ್ಟದಲ್ಲಿ ಆಯ್ಕೆ ಮಾಡಿ,

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಬ್ಯಾಂಕಿಗೆ ಕಳುಹಿಸಿದ್ದೇವೆಂದು ಹೇಳುತ್ತಾರೆ. ಆದರೆ, ಈ ವಿಷಯವನ್ನು ಫಲಾನುಭವಿಗಳು ಸರ್ಕಾರದ ಗಮನಕ್ಕೆ ತರಬೇಕೋ ಅಥವಾ ಅಧಿಕಾರಿಗಳು ಸರ್ಕಾರದ ಗಮನಕ್ಕೆ ತರಬೇಕೋ? ಚುನಾಯಿತ ಪ್ರತಿನಿಧಿಗಳು, ಜಿಲ್ಲಾ ಪಂಚಾಯಿತಿ ಸಭೆಯಲ್ಲಿ ಮತ್ತು ಏಆಕ ಸಭೆಯಲ್ಲಿ ಮಾನ್ಯ ಮಂತ್ರಿಗಳಿಗೆ, ಜಿಲ್ಲಾಧಿಕಾರಿಗಳಿಗೆ, ಜಿಲ್ಲಾ ಪಂಚಾಯಿತಿ ಅಧಿಕಾರಿಗಳಿಗೆ ನಾವು ಮಾಹಿತಿ ಕೊಟ್ಟರೆ, ಅದು ಸರ್ಕಾರಕ್ಕೆ ಏಕೆ ಬರುವುದಿಲ್ಲವೆಂಬುದನ್ನು ದಯಮಾಡಿ ಮಾನ್ಯ ಸಚಿವರು ತಿಳಿಸಬೇಕು.

**ಶ್ರೀ ಎ.ಮಂಜು (ಪಶುಸಂಗೋಪನೆ ಮತ್ತು ರೇಷ್ಮೆ ಇಲಾಖೆ ಸಚಿವರು):-** ಮಾನ್ಯ ಸಭಾಪತಿಯ್ಯವರೆ, ಇದು ಗೌರವಾನ್ವಿತ ಸದಸ್ಯರು ಕೇಳಿರತಕ್ಕಂಥ ಭಾರಿ ಉಪಯುಕ್ತವಾದಂತಹ ಪ್ರಶ್ನೆ. 2015-16ನೇ ಸಾಲಿನಲ್ಲಿ ಕೃಷಿ ಕಾರ್ಮಿಕರಿಗೆ, ಸಣ್ಣ ರೈತರಿಗೆ, ಅತೀ ಸಣ್ಣ ರೈತರಿಗೆ ಸ್ವಾವಲಂಬಿ ಜೀವನ ನಡೆಸುವುದಕ್ಕೆ ಪಶುಭಾಗ್ಯ ಯೋಜನೆಯನ್ನು ಕಾಂಗ್ರೆಸ್ ಸರ್ಕಾರ ತಂದಿದೆ. ಇದರಲ್ಲಿ ಹೈನುಗಾರಿಕೆ ಮತ್ತು ಇತ್ಯಾದಿಗಳಾದ ಎಮ್ಮೆ ಸಾಗಾಣಿಕೆ, ಕೋಳಿ ಸಾಗಾಣಿಕೆ, ಕುರಿ ಸಾಗಾಣಿಕೆ, ಹಂದಿ ಸಾಗಾಣಿಕೆ ಯೋಜನೆಗಳಲ್ಲಿ ಒಟ್ಟು 9 ವಿವಿಧ ಘಟಕಗಳನ್ನು ನಾವು ತಂದಿದ್ದೇವೆ. ಇವುಗಳಲ್ಲಿ ಹೈನುಗಾರಿಕೆಗೆ 1,20,000/- ರೂಪಾಯಿಗಳು. 10+1 ಕುರಿಯಲ್ಲಿ ರೂಪಾಯಿ 67,400/- ಗಳು. 3 ಕುರಿ/ಮೇಕೆ ಘಟಕದಲ್ಲಿ ರೂ.10,000/- ಗಳು. 3+1 ಹಂದಿ ಘಟಕದಲ್ಲಿ 94,000/- ರೂಪಾಯಿಗಳು. 10 ಹಂದಿ ಮರಿಗಳು ಕೊಬ್ಬು ಕರಗಿಸುವ ಘಟಕಗಳಿಗೆ 93,000/- ರೂಪಾಯಿಗಳು. ಕೋಳಿ ಮಾಂಸದ ಘಟಕಗಳಿಗೆ ರೂಪಾಯಿ 85,000/-, 250 ಮೊಟ್ಟೆ ಕೋಳಿ ಘಟಕದಲ್ಲಿ 1,09,000/- ರೂಪಾಯಿಗಳು. 100+4 ಕುರಿ/ ಮೇಕೆ ಘಟಕಗಳಿಗೆ 7,00,000/- ರೂಪಾಯಿಗಳು. ಈ ರೀತಿಯಾಗಿ 9 ಘಟಕಗಳನ್ನು ತಂದಿದ್ದೇವೆ. ಇದರಲ್ಲಿ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಗಳಿಗೆ 50% subsidy ಕೊಡತಕ್ಕಂಥದ್ದು, ಸಾಮಾನ್ಯ ವರ್ಗದವರಿಗೆ 25% ಸಹಾಯ ಧನವನ್ನು ಕೊಡತಕ್ಕಂಥದ್ದು, ಅಮೃತ ಯೋಜನೆಯಡಿಯಲ್ಲಿ ಪರಿಶಿಷ್ಟ ಜಾತಿಗೆ 75% ಸಹಾಯ ಧನವನ್ನು ಕೊಡತಕ್ಕಂಥದ್ದನ್ನು 90% ಗೆ ತಂದಿದ್ದೇವೆ. ಇದನ್ನು ನಮ್ಮ ಶಾಸಕರೇ ಮಾಡತಕ್ಕಂಥ ಜವಾಬ್ದಾರಿಯನ್ನು ಕೂಡ... ಮೊದಲನೆಯದಾಗಿ ನಾನು ಮಂತ್ರಿಯಾದ ಮೇಲೆ ಕಾಂಗ್ರೆಸ್ ಸರ್ಕಾರದ ಅಧ್ಯಕ್ಷತೆಯಲ್ಲಿ ತಂದಿದ್ದೇವೆ. ಉದಾಹರಣೆಗೆ ಹೇಳುವುದಾದರೆ ಹಾವೇರಿ ಜಿಲ್ಲೆಯಲ್ಲಿ ಒಟ್ಟು 2015-16ನೇ ಸಾಲಿನಲ್ಲಿ 522 ಫಲಾನುಭವಿಗಳ ಯೋಜನೆಗೆ ಅನುಷ್ಠಾನಗೊಳಿಸಿದ್ದೇವೆ. ಅದೇ ರೀತಿಯಲ್ಲಿ 2016-17ನೇ ಸಾಲಿನಲ್ಲಿ 357 ಮಾಡಿದ್ದೇವೆ. 2017-18ನೇ ಸಾಲಿನಲ್ಲಿ ಒಟ್ಟು 42.92 ಕೋಟಿ ರೂಪಾಯಿ ಅನುದಾನದಲ್ಲಿ 21391 ಫಲಾನುಭವಿಗಳನ್ನು ಜಿಲ್ಲಾವಾರು ಗುರುತು ಮಾಡಿ ಕೊಟ್ಟಿದ್ದೇವೆ. ಇದನ್ನು ಅನುಷ್ಠಾನ ಮಾಡತಕ್ಕಂಥದ್ದು, ಸಮಿತಿಗೆ ಬಿಟ್ಟ ವಿಚಾರ. Selection of Candidates ಮಾಡತಕ್ಕಂಥದ್ದು ಸಮಿತಿಯೇ ಮಾಡಬೇಕು. ಆಯ್ಕೆಯ ಅಧಿಕಾರವನ್ನು ಸಮಿತಿಗೆ ಬಿಟ್ಟಿದ್ದೇವೆ. ಬಹುಶ: ಇದರಲ್ಲಿ ನಮ್ಮ ಅಧಿಕಾರಿ ಕೂಡ Officer ಆಗಿರುತ್ತಾರೆ. ಬ್ಯಾಂಕ್‌ಗಳಿಗೆ ಕಳುಹಿಸುತ್ತೇವೆ. Lead Bank Manager ಅದನ್ನು co-ordinate ಮಾಡಬೇಕು. ಈ ರೀತಿ ಮಾಡತಕ್ಕಂಥ ಜವಾಬ್ದಾರಿ Lead Bank Manager ಗೆ ಇದೆ. ಸರ್ಕಾರದ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಕಾರ್ಯಕ್ರಮವನ್ನು ಅನುಷ್ಠಾನ ಮಾಡುವಲ್ಲಿ ಶ್ರಮವಹಿಸಬೇಕು. ಇದು Lead Bank Manager ರವರ ಜವಾಬ್ದಾರಿ. ಬ್ಯಾಂಕಿಗೆ ಏನು target fix ಮಾಡಿರುತ್ತೇವೆ. ಆ ಟಾರ್ಗೆಟ್‌ನಲ್ಲಿ ಕೊಡತಕ್ಕಂಥದ್ದನ್ನು Lead Bank Manager ಮಾಡಬೇಕು. ಉಪ ನಿರ್ದೇಶಕರ ಕಾಲದಿಂದ ನಮಗೆ... ಮಾನ್ಯ ಸದಸ್ಯರು ಸರ್ಕಾರಕ್ಕೆ ವರದಿ ಬಂದಿಲ್ಲವೇ ಎಂದು ಕೇಳಿದ್ದಾರೆ. ನಿಜವಾಗಿ ಹೇಳಬೇಕೆಂದರೆ, ವರದಿ ಬಂದಿದೆ ನೀವು ಮಾಡಿಲ್ಲವೆಂದು ಹೇಳುತ್ತಿದ್ದೆ. ನಿಜವಾಗಿಯೂ ಕೂಡ ನಮಗೆ ಇಲ್ಲಿಯವರೆಗೆ ಅನುಷ್ಠಾನವಾಗಿದೆ ಎಂಬ ವರದಿ ಬಂದಿದೆಯೇ ಹೊರತು, ಯಾರ್ಯಾರಿಗೆ ಕೊಟ್ಟಿಲ್ಲ ಎನ್ನತಕ್ಕಂಥ ವರದಿ ಬಂದಿಲ್ಲ. ದಯಮಾಡಿ ಮಾನ್ಯ ಸದಸ್ಯರು ನಿಗದಿತವಾಗಿ ಯಾವ್ಯಾವುದು ಆಗಿಲ್ಲವೆಂದು ಹೇಳಿದರೆ ನಮ್ಮ ನಿರ್ದೇಶಕರಿಗೆ ಹೇಳಿ, ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲಿೆ Lead Bank Manager ಗಳನ್ನು ಸಭೆಗೆ ಕರೆದು, ಅನುಷ್ಠಾನ ಮಾಡಿಸುವಲ್ಲಿ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

**ಶ್ರೀ ಸೋಮಣ್ಣ ಮ ಬೇವಿನಮರದ:-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಹೇಳಿದೆಲ್ಲಾ ಸರಿ. ಆಯ್ಕೆ ಮಾಡಿ ಬ್ಯಾಂಕಿಗೆ ಕಳುಹಿಸಿದ ಮೇಲೆಯೂ ಕೂಡ ಉತ್ತರ ಬರುವುದೇನೆಂದರೆ ನಿಗದಿತವಾಗಿ ಕೊಡಿ ಎನ್ನತಕ್ಕಂಥ ಮಾತನ್ನು ಹೇಳುತ್ತಾರೆ. ಒಂದು ಉದಾಹರಣೆಗೆ ಹೇಳುವುದಾದರೆ, 522 ಫಲಾನುಭವಿಗಳಿಗೆ ಸಹಾಯಧನ ನೀಡಲಾಗಿದೆ ಎನ್ನತಕ್ಕಂಥ ಉತ್ತರವನ್ನು ಕಳುಹಿಸಿಕೊಟ್ಟಿದ್ದಾರೆ. 522 ನ್ನು ಎಲ್ಲಾ ಸಂಬಂಧಪಟ್ಟ ಫಲಾನುಭವಿಗಳಿಗೆ, ಬ್ಯಾಂಕುಗಳಿಗೆ ಹೆಸರನ್ನು ಕೊಟ್ಟು, ಆದೇಶವನ್ನು ಕೊಟ್ಟಿದ್ದಾರೆ. Subsidy ಎಷ್ಟು ಕೊಡುತ್ತಾರೆ. ಸಾಲ ಎಷ್ಟು ಕೊಡಬೇಕೆಂಬ ವರದಿಯೂ ಬಂದಿದೆ. 522 ಫಲಾನುಭವಿಗಳಲ್ಲಿ ಸಾಲ ತೆಗೆದುಕೊಂಡವರು ಎಷ್ಟು.... ನಾನು ಹೇಳುತ್ತಿದ್ದೇನೆ. ಇದಕ್ಕೆ ಸಚಿವರು ಉತ್ತರವನ್ನು ಕೊಡುವುದೇನು ಬೇಡ. ನಾನು ಸಚಿವರ ಗಮನಕ್ಕೆ ತರುತ್ತಿದ್ದೇನೆ. ಎಷ್ಟರಮಟ್ಟಿಗೆ ಸರ್ಕಾರದ ಯೋಜನೆಗಳು ಫಲಾನುಭವಿಗಳಿಗೆ ಮುಟ್ಟುತ್ತದೆ ಎನ್ನುವುದಕ್ಕೆ ಉದಾಹರಣೆಯನ್ನು ಕೊಡುತ್ತಿದ್ದೇನೆ. ನಾನು ಹೇಳಿದ್ದು, ಅನೇಕ ಬಾರಿ ಜಿಲ್ಲಾ ಪಂಚಾಯಿತಿಯಲ್ಲಿ ತಿಂಗಳಿಗೊಮ್ಮೆ ಒಂದು ಸಭೆಯನ್ನು ಮಾಡಿ, ಚರ್ಚೆ ಮಾಡುತ್ತೇವೆ. 3 ತಿಂಗಳೊಳಗೆ KDP ಸಭೆಯಲ್ಲಿ ಯಾರ್ಯಾರಿಗೆ ಆಗಿಲ್ಲವೆನ್ನುವುದನ್ನು ಚರ್ಚೆ ಮಾಡುತ್ತೇವೆ. ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ಸರ್ಕಾರಕ್ಕೆ ಈ ರೀತಿ ನಿಮ್ಮ ಯೋಜನೆಗಳನ್ನು ಬ್ಯಾಂಕಿಗೆ ಕಳುಹಿಸಿದ್ದೇವೆ. ಬ್ಯಾಂಕಿನವರು ಕೊಟ್ಟಿಲ್ಲವೆನ್ನುವುದನ್ನು ಒಬ್ಬ ಅಧಿಕಾರಿಯೂ ಮಾತನಾಡುತ್ತಿಲ್ಲ. ವಿಶೇಷವಾಗಿ ಹಾವೇರಿ ಜಿಲ್ಲೆ ಬಗ್ಗೆ, ಜಿಲ್ಲಾಧಿಕಾರಿಗಳನ್ನು, ಜಿಲ್ಲಾ ಪಂಚಾಯಿತಿಯ CEO ಗಳನ್ನು ಮತ್ತು ಸಂಬಂಧಪಟ್ಟ ಪಶುಸಂಗೋಪನಾ ಇಲಾಖೆಯ ಜಿಲ್ಲಾ ಅಧಿಕಾರಿಗಳನ್ನು ಕರೆಸಿ, ಸಚಿವರು ಇದರ ಬಗ್ಗೆ ಚರ್ಚೆ ಮಾಡಲಿ. ಇದಕ್ಕೆ ಬ್ಯಾಂಕಿನವರು 50% ಸಹ ಸಾಲ ಕೊಡುತ್ತಿಲ್ಲ. ಇದನ್ನು ಮಾನ್ಯ ಸಚಿವರ ಗಮನಕ್ಕೆ ತರಬೇಕು. ಇದೇ ಉತ್ತರ ಕೊಡಿ ಎಂದು ನಾನು ಹೇಳುವುದಿಲ್ಲ. ಮಾಡಿದಂತಹ ಯೋಜನೆಗಳ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳನ್ನು ಕರೆದು ಯಾವಾಗ ಸಭೆ ಮಾಡುತ್ತಾರೆ ಎನ್ನುವ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಬಗ್ಗೆ ಒಂದು ನಿಗದಿತ ಸಮಯವನ್ನು ಹೇಳಬೇಕೆಂದು ಕೇಳಿಕೊಳ್ಳುತ್ತೇನೆ. ಇದರ ಜೊತೆಗೆ ಇನ್ನೊಂದು ಪ್ರಶ್ನೆ ಇದೆ. ಅದನ್ನು ಆಮೇಲೆ ಕೇಳುತ್ತೇನೆ.

**ಶ್ರೀ ಎ.ಮಂಜು:-** ಮಾನ್ಯ ಸಭಾಪತಿಯವರೆ, ನಮಗೆ ಬಂದಿರುವ ಮಾಹಿತಿ ಪ್ರಕಾರ ಅನುಷ್ಠಾನಗೊಳಿಸಿದ್ದೇವೆ ಎನ್ನತಕ್ಕಂಥ ಉತ್ತರ ಬಂದಿದೆ.

**ಶ್ರೀ ಸೋಮಣ್ಣ ಮ ಬೇವಿನಮರದ:-** ಮಾನ್ಯ ಸಭಾಪತಿಯವರೆ, ಸುಳ್ಳು ಮಾಹಿತಿಯನ್ನು ಕೊಟ್ಟಿರುತ್ತಾರೆ.

**ಶ್ರೀ ಎ.ಮಂಜು:-** ಮಾನ್ಯ ಸಭಾಪತಿಯವರೆ, Selection of Candidates ಮಾಡಿದ್ದೇವೆ ಎನ್ನತಕ್ಕಂಥ ಉತ್ತರ ಬಂದಿದೆ. ಆದರೆ, ಮಾನ್ಯ ಸದಸ್ಯರು ಹೇಳುವ ಪ್ರಕಾರ ಬ್ಯಾಂಕ್‌ನವರು ಕೆಲವರಿಗೆ ಕೊಟ್ಟಿಲ್ಲ ಎನ್ನುವುದನ್ನು ಈಗಾಗಲೇ ನನಗೆ ಹೇಳಿದ್ದಾರೆ. ಕೆಲವು ಕಡೆ ಕೊಟ್ಟಿಲ್ಲವೆನ್ನುವುದು ನನಗೆ ಮಾಹಿತಿ ಬಂದಿದೆ. ನಾನು ನಮ್ಮ ಇಲಾಖೆಯ ಉಪ ನಿರ್ದೇಶಕರನ್ನು ಕರೆಸಿ, ಹಾವೇರಿ ಜಿಲ್ಲೆಯಲ್ಲಿ ಮಾತ್ರವಲ್ಲ, ಇಡೀ ನಮ್ಮ ರಾಜ್ಯದಲ್ಲಿ ಯಾವ್ಯಾವ ಬ್ಯಾಂಕಿನವರು ಎಲ್ಲೆಲ್ಲಿ ಕೊಟ್ಟಿಲ್ಲ ಎನ್ನುವುದನ್ನು ಕರೆಸಿ ಕೇಳುತ್ತೇನೆ. ಏಕೆಂದರೆ ಎಲ್ಲಾ ಕಡೆಯಲ್ಲಿ ಈ ರೀತಿಯ ಸಮಸ್ಯೆಯಾಗಿರಬಹುದೆಂದು ನನ್ನ ಭಾವನೆ. ಒಂದು ವೇಳೆ ಮಾಡದೇ ಇದ್ದರೆ ಮುಖ್ಯ ಕಾರ್ಯದರ್ಶಿಗಳ ಮುಖಾಂತರ.... ಇದು ಬ್ಯಾಂಕಿನವರ ಕೆಲಸ ಹಾಗೂ ಬ್ಯಾಂಕಿನವರ ಜವಾಬ್ದಾರಿ. ಸರ್ಕಾರದ ಕಾರ್ಯಕ್ರಮಗಳನ್ನು ಏಕೆ ಮಾಡಿಲ್ಲವೆನ್ನುವುದಕ್ಕೆ.... ಮಾಡದೇ ಇದ್ದರೆ ಬ್ಯಾಂಕಿನವರಿಗೆ ಯಾವ ರೀತಿಯಾದಂತಹ ನಿರ್ದೇಶನವನ್ನು ಕೊಡಬೇಕು... ಇದು ಬ್ಯಾಂಕಿನವರ ಹಕ್ಕು. ಫಲಾನುಭವಿಗಳಿಗೆ ಕೊಡತಕ್ಕಂಥ ಲಾಭ ಸಿಗಬೇಕು. ಫಲಾನುಭವಿಗಳಿಗೆ ಅದು ತಲುಪಬೇಕೆನ್ನುವುದು ನಮ್ಮ ಆಸೆ. ಬಹುಶ: ಮಾಡದೇ ಇದ್ದರೆ ನಮ್ಮ ಅಧಿಕಾರಿಗಳ ಮುಖಾಂತರ implement ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ.

**ಶ್ರೀ ಸೋಮಣ್ಣ ಮ ಬೇವಿನಮರದ:-** ಮಾನ್ಯ ಸಭಾಪತಿಯವರೆ, 2016-17ನೇ ಸಾಲಿನ ಪಶುಭಾಗ್ಯಕ್ಕೆ ಸಂಬಂಧಪಟ್ಟಂತೆ ಉತ್ತರವನ್ನು ಕೇಳಿದ್ದು, ಆದರೆ, ಮಾನ್ಯ ಸಚಿವರು ಕೊಟ್ಟಿರತಕ್ಕಂಥ ಉತ್ತರ ಕೋಳಿಭಾಗ್ಯಕ್ಕೆ ಸಂಬಂಧಪಟ್ಟಿರುವುದಾಗಿರುತ್ತದೆ. ನಾನು ಕೇಳಿದ್ದು ಪಶುಭಾಗ್ಯದ ಬಗ್ಗೆ. ಕೊಟ್ಟಿರತಕ್ಕಂಥ ಉತ್ತರ ಕೋಳಿಭಾಗ್ಯದ ಬಗ್ಗೆ. 357 ಫಲಾನುಭವಿಗಳು ಆಯ್ಕೆ ಆಗಿದ್ದು ತಾಲ್ಲೂಕುವಾರು ಫಲಾನುಭವಿಗಳ ವಿವರವನ್ನು ಅನುಬಂಧ-2 ರಲ್ಲಿ ನೀಡಿದೆ ಎಂದು ಸಚಿವರು ಹೇಳಿರುತ್ತಾರೆ. ಆದರೆ, ನೀಡಿರತಕ್ಕಂಥ ಉತ್ತರದಲ್ಲಿ ಅನುಬಂಧ-2 ಇಲ್ಲ. 2016-17ನೇ ಸಾಲಿನ ಪಶುಭಾಗ್ಯ ಯೋಜನೆಯಡಿಯಲ್ಲಿ ಕೋಳಿ ಘಟಕಕ್ಕೆ ಆಯ್ದ ಫಲಾನುಭವಿಗಳ ಸಂಖ್ಯೆಯನ್ನು ಕೊಟ್ಟಿದ್ದಾರೆ. ಕೊಟ್ಟಿರತಕ್ಕಂಥ ಸಂಖ್ಯೆ ಎಷ್ಟೆಂದರೆ 31 ರಿಂದ 40 ಜನರ ಪಟ್ಟಿಯನ್ನು ಕೊಟ್ಟಿದ್ದಾರೆ. 357 ಎಂದು ಮಾನ್ಯ ಸಚಿವರು ಹೇಳಿದ್ದಾರೆ. ಇದು ಪಶುಭಾಗ್ಯಕ್ಕೆ ಸಂಬಂಧಪಟ್ಟಿದ್ದಲ್ಲ. ಕೋಳಿಭಾಗ್ಯಕ್ಕೆ ಸಂಬಂಧಪಟ್ಟಿರುವುದನ್ನು ಕೊಟ್ಟಿದ್ದಾರೆ. ಇದೇ ರೀತಿ ಅಲ್ಲಿ ಸಾಲ ಯಾವ ರೀತಿ ಸಿಗುತ್ತದೆ ಎನ್ನುವುದನ್ನು ದಯಮಾಡಿ ಲೆಕ್ಕ ಹಾಕಿ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಎ.ಮಂಜು:-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ಹೇಳಿದ ಹಾಗೆ ಅನುಬಂಧ-2 ಎಂಬುದನ್ನು ಕೊಟ್ಟಿಲ್ಲ. ನಾನು ಸಹ ನೋಡಿದ್ದೇನೆ. ಬಹುಶ: ಏತಕ್ಕೆ ಕೊಟ್ಟಿಲ್ಲವೆಂಬುದಕ್ಕೆ ಅಧಿಕಾರಿಗಳನ್ನು ಕರೆಸಿ, ಅವರ ಜೊತೆ ಚರ್ಚೆ ಮಾಡಿ, ತೀರ್ಮಾನವನ್ನು ತೆಗೆದುಕೊಳ್ಳುತ್ತೇನೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಉತ್ತರವನ್ನು ಕೊಡಬೇಕಾದರೆ ಅಧಿಕಾರಿಗಳ ಜೊತೆ ಚರ್ಚೆ ಮಾಡಬೇಕಲ್ಲವೇ? ಕೋಳಿ, ಕುರಿ....

**ಸಭಾಪತಿಯವರು:-** ಅದು ಕೋಳಿಭಾಗ್ಯವಲ್ಲ, ಪಶುಭಾಗ್ಯ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೆ, ಯಾವುದೇ ಇರಲಿ, ಮಾನ್ಯ ಸಚಿವರು ಸದನಕ್ಕೆ ಬರುವ ಮೊದಲು ಅಧಿಕಾರಿಗಳ ಜೊತೆ ಚರ್ಚೆ ಮಾಡುತ್ತಾರೆ. ಚರ್ಚೆ ಮಾಡುವಾಗ ಮಾನ್ಯ ಸಚಿವರು ನೋಡಬೇಕಲ್ಲವೇ? ಅಧಿಕಾರಿಗಳು ಕೊಟ್ಟಿರುವುದನ್ನು ಹೇಳಿಬಿಟ್ಟರೆ ಮುಜುಗರಕ್ಕೆ ಒಳಗಾಗುವವರ್ಯಾರು ಎಂದರೆ ಮಾನ್ಯ ಸಚಿವರು. ಮೊದಲು ಮಾನ್ಯ ಸಚಿವರಾಗಿರುವವರು ಅದನ್ನು ಸರಿಯಾಗಿ ನೋಡಬೇಕು.

**ಶ್ರೀ ಎ.ಮಂಜು:-** ಮಾನ್ಯ ಸಭಾಪತಿಯವರೆ, ಆಗಬಹುದು. ಹಿರಿಯ ಸದಸ್ಯರು ಅದನ್ನು ನೋಡಿದ್ದಾರೆ. ತಿನ್ನುವುದು ಗೊತ್ತಿದೆ. ಸ್ವಲ್ಪ ತಪ್ಪಾಗಿದೆ.

(ಗೊಂದಲ)

(ಮುಂದು) . . .

(678)13-06-2017 12-30 ಬಿಎಸ್‌ಡಿ-ಕೆವಿಶ್(ಎಕೆ)

**ಶ್ರೀ ಸೋಮಣ್ಣ ಮ. ಬೇವಿನಮರದ:-** ಮಾನ್ಯ ಸಭಾಪತಿಯವರೇ, ನನ್ನ ಉಪ ಪ್ರಶ್ನೆ ಏನೆಂದರೆ, ಕಳೆದ ಬಾರಿಯ ಅಧಿವೇಶನದಲ್ಲಿ ಮಾನ್ಯ ಮಂತ್ರಿಗಳು ಹಾವೇರಿ ಜಿಲ್ಲೆಗೆ ಒಂದೂವರೆ ವರ್ಷಗಳಿಂದ ಸತ್ತಂತ ಕುರಿಗಳಿಗೆ ಪರಿಹಾರ ಕೊಟ್ಟಿಲ್ಲ. ಒಂದು-ಒಂದೂವರೆ ತಿಂಗಳೊಳಗೆ ಪರಿಹಾರ ಕೊಡುತ್ತೇನೆ ಎಂದು ಹೇಳಿ ಇವತ್ತಿನವರೆಗೂ ಕೊಟ್ಟಿಲ್ಲ. ಆದ್ದರಿಂದ ಹಣವನ್ನು ಯಾವಾಗ ಬಿಡುಗಡೆ ಮಾಡುತ್ತಾರೆ ಎಂದು ಹೇಳಬೇಕು. ಈ ಬಗ್ಗೆ ನಾನೇ ಸ್ವತಃ ಪತ್ರವನ್ನು ಕೊಟ್ಟಿದ್ದೇನೆ.

**ಶ್ರೀ ಎ. ಮಂಜು:-** ನಾನು last time ಹೇಳಿರುವುದು ನಿಜ. ಸತ್ತ ಬಗ್ಗೆ post mortem report ಅನ್ನು ವೈದ್ಯರು ಕೊಡಬೇಕು.

**ಶ್ರೀ ಸೋಮಣ್ಣ ಮ. ಬೇವಿನಮರದ:-** ಒಂದೂವರೆ ವರ್ಷ ಕಳೆದಿದೆ, ಇಲಾಖೆಯವರು ಕಳುಹಿಸಿಕೊಟ್ಟಿದ್ದು, ಇಷ್ಟು ಹಣ ಬಾಕಿ ಬರಬೇಕು ಎಂದು ಹೇಳುತ್ತಾರೆ. ಇವರು ನೋಡಿದರೆ ಇನ್ನೂ post mortem report

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಬಂದಿಲ್ಲ ಎಂದು ಹೇಳುತ್ತಿದ್ದಾರೆ. ಮಾನ್ಯ ಸಭಾಪತಿಯವರೇ, ವರ್ಷ ಕಳೆದ ಮೇಲೆ post mortem report ಬರುತ್ತದೆಯೇ?

**ಶ್ರೀ ಎ. ಮಂಜು:-** ಮಾನ್ಯ ಸಭಾಪತಿಯವರೇ, ಅನುಬಂಧ-2ನ್ನು ಕೊಟ್ಟಿರಲಿಲ್ಲ. ದಯವಿಟ್ಟು ಕ್ಷಮಿಸಿ, ಅಧಿಕಾರಿಯ ತಪ್ಪಿನಿಂದ ಆಗಿದೆ. ಈಗ ತಂದು ಕೊಡುತ್ತಿದ್ದಾರೆ. ಇದನ್ನು ಮಾನ್ಯ ಸದಸ್ಯರಿಗೆ ಕಳುಹಿಸಿಕೊಡುತ್ತೇನೆ. ಸತ್ತ ಕುರಿಗಳಿಗೆ ಕೊಡುವ ರೂ.5 ಸಾವಿರ ಹಣವನ್ನು ಇವತ್ತೇ ಕೂಡಲೇ ಅವರನ್ನು ಕರೆಸಿ, ಜೊತೆಗೆ Commissioner ಅವರನ್ನು ಕರೆಸಿ, ಮಧ್ಯಾಹ್ನದೊಳಗೆ ಹಣ ಬಿಡುಗಡೆ ಮಾಡುತ್ತೇನೆ.

**ಶ್ರೀ ಸೋಮಣ್ಣ ಮ. ಬೇವಿನಮರದಃ-** ಮಧ್ಯಾಹ್ನದೊಳಗೆ ಹಣ ಬಿಡುಗಡೆ ಮಾಡುತ್ತಾರೆಯೇ? ಸರಿಯಾದ ಎಲ್ಲಾ ಫಲಾನುಭವಿಗಳಿಗೆ.....

**ಶ್ರೀ ಎ. ಮಂಜು:-** ಕಾನೂನು ಪ್ರಕಾರ ಸತ್ತಿರುವುದು ವರದಿಯಾಗಿದ್ದರೆ ಅವರನ್ನು ಸಭೆಗೆ ಕರೆದು ಹಣ ಬಿಡುಗಡೆ ಮಾಡುತ್ತೇನೆ.

**ಶ್ರೀ ಸೋಮಣ್ಣ ಮ. ಬೇವಿನಮರದಃ-** ಇವತ್ತೇ ಆಗಬೇಕು.

**ಸಭಾಪತಿಯವರು:-** ಸಾಕು, ಮಾಡುತ್ತೇನೆ ಎಂದು ಹೇಳಿದ್ದಾರೆ.

**ಶ್ರೀ ಸೋಮಣ್ಣ ಮ. ಬೇವಿನಮರದಃ-** ಮಾನ್ಯ ಸಭಾಪತಿಯವರೇ, ಮಾನ್ಯ ಮಂತ್ರಿಯವರು ಹಣವನ್ನು ಕೊಡುತ್ತಿರುವುದರಿಂದ advance ಆಗಿ ಧನ್ಯವಾದಗಳನ್ನು ಹೇಳುತ್ತಿದ್ದೇನೆ.

**ಸಭಾಪತಿಯವರು:-** ಒಂದು announcement ಇದೆ. ನಮ್ಮ ಸದನದ ವೀಕ್ಷಣೆಗೆ ಬೇರೆ ದೇಶದಿಂದ Parliamentarians ಬಂದಿದ್ದು, ಅವರಿಗೆ ಅರ್ಥವಾಗಲಿ ಎಂದು ನಾನು ಇಂಗ್ಲೀಷ್‌ನಲ್ಲಿ ಹೇಳುತ್ತೇನೆ. The Officers of Sri Lankan Parliament are witnessing the proceeding of this August Session from the Distinguisher's Gallery. On behalf of the Hon'ble Members, I welcome them, and I wish them a pleasant stay in Karnataka.

(ಸದನದಲ್ಲಿದ್ದ ಸದಸ್ಯರೆಲ್ಲರೂ ಮೇಜು ಕುಟ್ಟಿ ಸ್ವಾಗತಿಸಿದರು)

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಪ್ರಶ್ನೆ ಸಂಖ್ಯೆ: 2830**

**ಉತ್ತರದ ಪ್ರತಿ ಲಗತ್ತಿಸಿದೆ**

**ಶ್ರೀ ಎಂ.ಎ. ಗೋಪಾಲಸ್ವಾಮಿಃ-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದು, ಗೊಮ್ಮಟೇಶ್ವರ ಮಹಾಮಸ್ತಕಾಭಿಷೇಕ ಮಹೋತ್ಸವದ ಅಧ್ಯಕ್ಷರಾದ ಶ್ರೀ ಎ. ಮಂಜುರವರು ಬಿಡುಗಡೆಯಾಗಿರುವ

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ರೂ.175 ಕೋಟಿ ಹಣದ ಖರ್ಚಿನ ಬಗ್ಗೆ ಜಿಲ್ಲಾಧಿಕಾರಿ ಮತ್ತು ಇತರ ಅಧಿಕಾರಿಗಳನ್ನು ಕರೆದು ಚರ್ಚೆ ಮಾಡುತ್ತಿದ್ದಾರೆ. ಸುಮಾರು 8 ಜಿಲ್ಲೆಗಳಲ್ಲಿ ಲಕ್ಷಾಂತರ ವಾಹನಗಳು 2017 ಮಸ್ತಕಾಭಿಷೇಕಕ್ಕೆ ಬರುತ್ತಿದ್ದು, ರಸ್ತೆಗಳ ಅಭಿವೃದ್ಧಿಗೆ ಹೆಚ್ಚಿನ ಹಣವನ್ನು ಕೊಡಬೇಕು ಎಂದು ನನ್ನ ಮನವಿಯಾಗಿದೆ. ರಸ್ತೆಗಳು ಹಾಳಾಗುವುದರಿಂದ ಹೆಚ್ಚಿನ ಹಣವನ್ನು ಬಿಡುಗಡೆ ಮಾಡಬೇಕು. 2017-18ರ ಸಾಲಿನಲ್ಲಿ ಸುಮಾರು ರೂ.200-300 ಕೋಟಿಗಳನ್ನು ಬಿಡುಗಡೆ ಮಾಡಿದರೆ ತುಮಕೂರು ರಸ್ತೆ ಇರಬಹುದು, ಶಿವಮೊಗ್ಗ ಹಾಗೂ ಇತರ ಕಡೆಗಳಿಂದ ಬರುವ ರಸ್ತೆಗಳ ಅಭಿವೃದ್ಧಿ ಮಾಡಬೇಕೆಂಧು ಮನವಿ ಮಾಡುತ್ತೇನೆ.

**ಶ್ರೀ ಹೆಚ್.ಸಿ. ಮಹದೇವಪ್ಪ:-** ಮಾನ್ಯ ಸಭಾಪತಿಯವರೇ, ಮಹಾ ಮಸ್ತಕಾಭಿಷೇಕವು ಫೆಬ್ರವರಿ 17ನೇ ತಾರೀಖು ಜರುಗುತ್ತದೆ. ಹಣ ಕೊಡುವ ಬಗ್ಗೆ ಸುಮಾರು ರೂ.700 ಕೋಟಿಗಳ ಅಂದಾಜು ಮಾಡಿ, ಕೇಂದ್ರ ಸರ್ಕಾರ ಸಹಾಯ ಮಾಡಬೇಕೆಂದು ಕೇಳಿದ್ದು, ಕೇಂದ್ರ ಸರ್ಕಾರವು ಹಣ ಕೊಡಲಿಲ್ಲ. ಮಾಜಿ ಪ್ರಧಾನ ಮಂತ್ರಿಯವರಾದ ಶ್ರೀ ದೇವೇಗೌಡರು ಸ್ವತಃ ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡಿ ಮನವಿ ಮಾಡಿದ್ದಾರೆ ಎಂದು ಪತ್ರಿಕೆಗಳಲ್ಲಿ ಓದಿದ್ದೇನೆ. ಈಗ ಕಂದಾಯ ಇಲಾಖೆಯವರು ರೂ.175 ಕೋಟಿ ಹಣ ಮಂಜೂರಾತಿಗೆ Cabinet ನಲ್ಲಿಟ್ಟು, ಒಪ್ಪಿಗೆ ಪಡೆದು ಬಂದಿದೆ. ಇನ್ನೂ ಹೆಚ್ಚು ಹಣ ನೀಡುವ ಬಗ್ಗೆ ಮಾನ್ಯ ಸದಸ್ಯರು ಕೇಳುತ್ತಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ಸಮಿತಿ ಮಾಡಿದ್ದು, ಹಾಸನದ ಜಿಲ್ಲಾಧಿಕಾರಿಗಳು ಉಪಾಧ್ಯಕ್ಷರಾಗಿದ್ದು, ಕಾಮಗಾರಿಗಳ list ಮಾಡಿ, ವಾಹನಗಳು ಎಲ್ಲೆಲ್ಲಿ ಓಡಾಡುತ್ತವೆ ಎಂಬಿತ್ಯಾದಿ ಬಗ್ಗೆ ಒಂದು Action Plan ತಯಾರು ಮಾಡಿದ್ದಾರೆ. ಅದರ ಪ್ರಕಾರ ಸಭೆ ನಡೆಯುವ ಬಗ್ಗೆಯೂ ತಿಳಿದು ಬಂದಿದೆ. ನಾನು ಈ ವಿಚಾರಗಳನ್ನು ಯಾರನ್ನೂ ಕೇಳದೇ ಇಲ್ಲಿ ಹೇಳುತ್ತಿದ್ದೇನೆ. ಕಂದಾಯ ಇಲಾಖೆಯವರಿಗೆ ಇನ್ನೂ ಹೆಚ್ಚಿನ ಹಣ ಕೇಳಿದಾಗ ಪರಿಶೀಲನೆ ಮಾಡುವ ಹಂತದಲ್ಲಿ ಇಲ್ಲ ಎಂದು ತಿಳಿದುಕೊಂಡಿದ್ದೇನೆ. ಜಿಲ್ಲಾ ಉಸ್ತುವಾರಿ ಮಂತ್ರಿಗಳು, ಕಂದಾಯ ಮಂತ್ರಿಗಳು ಮತ್ತು ಮಾನ್ಯ ಮುಖ್ಯ ಮಂತ್ರಿಗಳು ಅಗತ್ಯತೆಯನ್ನು ಪರಿಶೀಲನೆ ಮಾಡಿ, ಏನಾದರೂ ಕೊಡುವುದಕ್ಕೆ ಅಗತ್ಯ ಇದೆಯೋ ಅಥವಾ ಇರುವುದರಲ್ಲಿ ಮಾಡುವುದಕ್ಕೆ ಆಗುತ್ತದೆಯೋ ಎನ್ನುವ ಬಗ್ಗೆ ನೋಡಬೇಕಾಗುತ್ತದೆ. ಈಗಾಗಲೇ Cabinet approval ಕೊಟ್ಟಿದೆ.

**ಶ್ರೀ ಎ. ಮಂಜು (ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು):-** ಮಾನ್ಯ ಸಭಾಪತಿಯವರೇ, ಶ್ರವಣ ಬೆಳಗೊಳದಲ್ಲಿ ನಡೆಯುವ ಮಹಾಮಸ್ತಕಾಭಿಷೇಕಕ್ಕೆ ರೂ.175 ಕೋಟಿ ಹಣ ಬಿಡುಗಡೆಯಾಗಿದೆ. ಅದರ ಜೊತೆಗೆ ಮಾನ್ಯ ಸದಸ್ಯರು ಬೇರೆ ಎಲ್ಲಾ ಜಿಲ್ಲೆಗಳಿಂದ ಹಾಸನ ಜಿಲ್ಲೆಗೆ ಬರುವ ರಸ್ತೆಗಳಿಗೆ ರೂ.272 ಕೋಟಿಗಳನ್ನು ಲೋಕೋಪಯೋಗಿ ಇಲಾಖೆಗೆ ಪ್ರತ್ಯೇಕವಾಗಿ ನೀಡಲಾಗಿದೆ. ಇವತ್ತು ಸಭೆ ಆಗಿದೆ. 15-20 ದಿನಗಳಲ್ಲಿ tender processing ಕೂಡ ಆಗುತ್ತದೆ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಹೆಚ್.ಸಿ. ಮಹದೇವಪ್ಪ:-** ಬೇರೆ ಬೇರೆ ಅಭಿವೃದ್ಧಿ ಮಾಡಿದರೂ ಮಹಾಮಸ್ತಕಾಭಿಷೇಕಕ್ಕೆ ಎಂದು Head create ಮಾಡುತ್ತಾರೆ. We are doing from the departmental side and it is a continuous process.

**ಶ್ರೀ ವಿ.ಎಸ್. ಉಗ್ರಪ್ಪ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ಬಹಳ ಒಳ್ಳೆಯ ಪ್ರಶ್ನೆ ಕೇಳಿದ್ದು, ಗೊಮ್ಮಟೇಶ್ವರರು ರಾಜ್ಯ, ಸಂಪತ್ತು ಬೇಡ ಮತ್ತು ಯಾವುದೇ ವೈಭವೀಕರಣ ಬೇಡ ಹಾಗೂ ಸಂಸಾರ ಬೇಡ ಎಂದು ಎಲ್ಲವನ್ನು ತ್ಯಾಗ ಮಾಡಿದವರಿಗೆ ರೂ.175 ಮತ್ತು ರೂ.272 ಕೋಟಿ ಎಂದು ಹೇಳುತ್ತಿದ್ದಾರೆ.

**ಸಭಾಪತಿಯವರು:-** ಪ್ರಶ್ನೆ ಕೇಳಿ, ವ್ಯಾಖ್ಯಾನ ಬೇಡ.

**ಶ್ರೀ ವಿ.ಎಸ್. ಉಗ್ರಪ್ಪ:-** ದಯಮಾಡಿ ಸರ್ಕಾರ ರೂ.175 ಕೋಟಿ ಮತ್ತು ಕೇಳಿರುವ ರೂ.700 ಕೋಟಿಗಳನ್ನು ಯಾವ ವಿಚಾರಕ್ಕೆ ಬಳಕೆ ಮಾಡುತ್ತಾರೆ ಎನ್ನುವ ಬಗ್ಗೆ ರಾಜ್ಯದ ಜನತೆಗೆ ತಿಳಿಸಬೇಕು. ಉತ್ತರದಲ್ಲಿ ರೂ.175 ಕೋಟಿ ಮತ್ತು ಕೇಳಿರುವ ರೂ.700 ಕೋಟಿಗಳನ್ನು ಆದಮೇಲೆ ಉಳಿದ ಪ್ರಶ್ನೆಗಳಿಗೆ ಉದ್ಭವಿಸುವುದಿಲ್ಲ ಎಂದು ಹೇಳಿದ್ದಾರೆ. ಅದರಲ್ಲಿ ಟಾರ್ ಹಾಕುವುದು ಅಥವಾ ರಸ್ತೆ ಅಭಿವೃದ್ಧಿ ಉದ್ಭವಿಸುವುದಿಲ್ಲ ಎಂದು ಹೇಳುತ್ತಿದ್ದಾರೆ. ರೂ.175.80 ಕೋಟಿಗಳನ್ನು ಯಾವುದಕ್ಕೆ ಬಳಕೆ ಮಾಡುತ್ತಾರೆ ಎನ್ನುವ ವಿಚಾರವು ಸದನದ ಮೂಲಕ ರಾಜ್ಯದ ಜನತೆಗೆ ತಿಳಿಸಬೇಕೆಂದು ಕೋರುತ್ತೇನೆ.

**ಶ್ರೀ ಬಿ.ಜೆ. ಪುಟ್ಟಸ್ವಾಮಿ:-** ಗೊಮ್ಮಟೇಶ್ವರನಿಗೆ ಹೋಗುವವರೆಲ್ಲರೂ ಗೊಮ್ಮಟೇಶ್ವರನ ಹಾಗೆ ಹೋಗಬೇಕೆಂದು ಅರ್ಥವೇ? ಅದನ್ನು ಜನಗಳಿಗಾಗಿ ಮಾಡುವುದು.

(ಗೊಂದಲ)

**ಶ್ರೀ ಹೆಚ್.ಸಿ. ಮಹದೇವಪ್ಪ:-** ಹಾಸನ ಜಿಲ್ಲಾ ಉಸ್ತುವಾರಿ ಸಚಿವರು ಸಮಿತಿಗೆ ಅಧ್ಯಕ್ಷರಾಗಿದ್ದು, ಮಾನ್ಯ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ಚರ್ಚೆ ಮಾಡಿದಾಗ ನಾನೂ ಸದಸ್ಯನಾಗಿ ಇದ್ದೆನು. ಅದಕ್ಕೆ ರಸ್ತೆ, ಕುಡಿಯುವ ನೀರು, ಸ್ವಚ್ಛತೆ ಕಾರ್ಯಕ್ರಮ, ಮಹಾಮಸ್ತಕಾಭಿಷೇಕಕ್ಕೆ Action Plan ತಯಾರು ಮಾಡಿಕೊಂಡಿದ್ದಾರೆ. ಇದರಲ್ಲಿ ದಿಗಂಬರ ಮತ್ತು ಶ್ವೇತಾಂಬರ ಎಂದು ಎರಡು ಗುಂಪುಗಳಿದ್ದು, ದಿಗಂಬರರು ಬಟ್ಟೆಯನ್ನು ಇಟ್ಟುಕೊಂಡಿದ್ದು, ಹೋಗುತ್ತಾ ಹೋಗುತ್ತಾ ಯಾರೋ ಚಳಿಯಲ್ಲಿ ನಡುಗುತ್ತಿದ್ದನ್ನು ಕಂಡು ಇದ್ದ ಶಾಲನ್ನು ಕೊಟ್ಟರು. ಆಗ ದಿಗಂಬರ ಎಂದಾದರು. ಏನೂ ಬೇಡ ಎಂದು ವಿರಾಗಿಯಾದ ದಿಗಂಬರರ ಗುಂಪು ಇದೆ. ಅಲ್ಲದೇ ಶ್ವೇತಾಂಬರರ ಗುಂಪು ಇದೆ. ನಮಗೆ infrastructure development ಬೇಕಾಗಿದೆ. ಅ infrastructure development ಗೆ ಅಗತ್ಯ ಇರುವುದನ್ನು ಮಾಡುತ್ತೇವೆ. ಪರಿಸ್ಥಿತಿ ನೋಡಿಕೊಂಡು ಎಲ್ಲರೂ ಒಂದು ತೀರ್ಮಾನ ಮಾಡೋಣ.

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಪ್ರಶ್ನೆ ಸಂಖ್ಯೆ: 2878**

**ಉತ್ತರದ ಪ್ರತಿ ಲಗತ್ತಿಸಿದೆ**

**ಶ್ರೀಮತಿ ವೀಣಾ ಅಚ್ಚಯ್ಯ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ನೀಡಿದ್ದು, ಅವರಲ್ಲಿ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಬಯಸುತ್ತೇನೆ. ಹಸುಭಾಗ್ಯ ಯೋಜನೆಯಡಿ ಫಲಾನುಭವಿಗಳಿಗೆ ಹಸುವನ್ನು ಕೊಡುವ ಸಂದರ್ಭದಲ್ಲಿ ಮಡಿಕೇರಿ ಮತ್ತು ಸೋಮವಾರ ಪೇಟೆಯ ಶಾಂತಳ್ಳಿ ಹೋಬಳಿಯಲ್ಲಿ ಮಿಶ್ರತಳಿ ಹಸುಗಳನ್ನು ವಿತರಿಸಬೇಕೆಂದು ಕೇಳಿಕೊಳ್ಳುತ್ತೇನೆ. ಏಕೆಂದರೆ ಎರಡು ಕಡೆಗಳಲ್ಲಿ ವಿಪರೀತ ಮಳೆ ಮತ್ತು ಹವಾಮಾನ ವೈಪರೀತ್ಯದಿಂದ ಹಸುಗಳು ಸಾವನ್ನು ಅಪ್ಪಿದಂತಹ ಪ್ರಕರಣಗಳು ತಿಳಿದುಬಂದಿವೆ. ಅದರ ಜೊತೆಗೆ ಇಲಾಖೆಯಲ್ಲಿ ಕೆಲವು ಕಡೆ ಸಿಬ್ಬಂದಿಗಳ ಕೊರತೆ ಇದೆ. ಮಹಿಳಾ ಪಶು ವೈದ್ಯಾಧಿಕಾರಿಗಳು ಈಗಾಗಲೇ ಕೆಲಸ ಮಾಡುತ್ತಿದ್ದು, ಅವರಿಗೆ ಕೊಡಗಿನಲ್ಲಿ ಓಡಾಡುವ ವಾಹನದ ವ್ಯವಸ್ಥೆ ಮಾಡಬೇಕಾಗಿದೆ. ಏಕೆಂದರೆ ಕೊಡಗು ಎಲ್ಲರಿಗೂ ತಿಳಿದಿರುವಂತೆ ಒಳ್ಳೆಯ ರಸ್ತೆಗಳಿದ್ದರೂ four-wheel jeep ಗಳು ಬೇಕಾಗುತ್ತವೆ. ಹಾಗಾಗಿ ಈ ಬೇಡಿಗಳನ್ನು ಈಡೇರಿಸಬೇಕೆಂದು ಮಾನ್ಯ ಸಚಿವರಲ್ಲಿ ವಿನಂತಿಸುತ್ತೇನೆ.

(ಮುಂದು)

(679)13-06-2017 12-40 ಎಸ್‌ಕೆ-ಜಿಆರ್

**(ಸಭಾಪತಿಯವರ ಉಪಸ್ಥಿತಿ )**

**ಶ್ರೀ ಎ. ಮಂಜು:-** ಮಾನ್ಯ ಸಭಾಪತಿಯವರೇ, ಈಗ ಮಾನ್ಯ ಸದಸ್ಯರು ಕೇಳುತ್ತಿರುವ ಪ್ರಶ್ನೆ ಬೇರೆ ಮತ್ತು ಲಿಖಿತವಾಗಿ ಕೇಳಿರುವ ಪ್ರಶ್ನೆಯೇ ಬೇರೆ. ಈಗಾಗಲೇ ನಾವು ಜಾನುವಾರು ಗಣತಿಯ ಪ್ರಕಾರ 1,77,000 ಅಲ್ಲಿದೆ. ಮಡಿಕೇರಿಯಲ್ಲಿ 51,000, ಸೋಮವಾರ ಪೇಟೆಯಲ್ಲಿ 68,000 ಮತ್ತು ವಿರಾಜಪೇಟೆಯಲ್ಲಿ 56,000 ಈ ರೀತಿಯ ಅನೇಕ ಜಾನುವಾರುಗಳಿವೆ ಎಂಬ ಮಾಹಿತಿಯನ್ನು ಕೊಟ್ಟಿದ್ದೇವೆ. ನಾವು 'ಪಶು ಭಾಗ್ಯ'ವನ್ನು ಕೊಡತಕ್ಕಂಥದ್ದು ಇದೆ. ಆ ರೈತ ಯಾವ ಜಾನುವಾರು ಬೇಕು ಮತ್ತು ಅದರ ಅನುಗುಣವಾಗಿ ಆಯ್ಕೆ ಮಾಡುವ ಜವಾಬ್ದಾರಿಯನ್ನು ಅವರಿಗೆ ಬಿಟ್ಟಿರುತ್ತೇವೆ. ಜಾನುವಾರುಗಳಿಗೆ lady Doctor ಇದ್ದಾರೆ ಮತ್ತು ಇನ್ನೊಬ್ಬ Doctor ಇದ್ದಾರೆ ಎನ್ನುವುದಕ್ಕಿಂತ, ಆ ಡಾಕ್ಟರ್‌ಗಳು ಹಳ್ಳಿಗಳಿಗೆ ಹೋಗುವುದಕ್ಕೆ ಆಗುವುದಿಲ್ಲವೆಂದು, ಎಲ್ಲಾ ತಾಲ್ಲೂಕುಗಳಿಗೂ ಕೂಡ ಈಗಾಗಲೇ ನಾವು ಆಂಬುಲೆನ್ಸ್‌ಗಳನ್ನು ಕೊಟ್ಟಿದ್ದೇವೆ. ಆ ಅಂಬುಲೆನ್ಸ್‌ಗಳನ್ನು ಉಪಯೋಗಿಸಿಕೊಂಡು ಜಾನುವಾರುಗಳನ್ನು ರಕ್ಷಣೆ ಮಾಡುವುದರಲ್ಲಿ ಮುಂದಾಗಬೇಕು. ಮೊದಲು ಎಲ್ಲಾ ಮೋಟಾರ್‌ಸೈಕಲ್‌ನಲ್ಲಿ ಹೋಗುತ್ತಾರೆ, ನಾವು ಹೋಗುವುದಕ್ಕೆ ಆಗುವುದಿಲ್ಲ, ಅಲ್ಲಿ ಇದ್ದೇವೆ, ಇಲ್ಲಿ ಇದ್ದೇವೆ ಎಂದು ಸುಳ್ಳು ಹೇಳುತ್ತಿದ್ದರು ಎಂದು ಹೇಳಿ, ಈಗಾಗಲೇ mobile

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

GPS ಕೂಡ ಕೊಡುತ್ತಿದ್ದೇವೆ. ಎಲ್ಲೆಲ್ಲಿ ಹೋಗಿದ್ದಾರೆ ಎಂದು track ಮಾಡುವುದಕ್ಕೋಸ್ಕರ, Jeep ನ್ನು ಕೂಡ ಒಂದೊಂದು ತಾಲ್ಲೂಕವಾರು ಕೊಟ್ಟಿದ್ದೇವೆ. ಈಗ trial basis ನಲ್ಲಿ ಹೋಬಳಿವಾರು ಕೊಡುವುದಕ್ಕೆ ಕೂಡ ಮಾಡುತ್ತಿದ್ದೇವೆ. Important ಹೋಬಳಿಯಲ್ಲಿ ಯಾವುದಾದರೂ ಬೇಕು ಎನ್ನುವುದು ಇದ್ದರೆ ಹೋಬಳಿವಾರು ಕೊಡುವುದಕ್ಕೆ ನಾವು ಮುಂದಾಗುತ್ತೇವೆ.

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 2904**
**(ಉತ್ತರವನ್ನು ಒದಗಿಸಲಾಗಿದೆ.)**

**ಶ್ರೀ ಎನ್.ಅಪ್ಪಾಜಿಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಕೃಷಿ ಸಚಿವರು ಬಹಳ ಸವಿಸ್ತಾರವಾಗಿ ಉತ್ತರವನ್ನು ಒದಗಿಸಿದ್ದಾರೆ. ಮಂಡ್ಯ ಜಿಲ್ಲೆಗೆ ಸಂಬಂಧಪಟ್ಟಂತೆ ಮೂರು ಪ್ರಶ್ನೆಗಳನ್ನು ಕೇಳಿದ್ದೇನೆ. ಅದರಲ್ಲಿ ಮುಖ್ಯವಾಗಿ ಈ ಉಪಕರಣಗಳ ಬಾಡಿಗೆಯ ವಿವರ ಹಾಗೂ ಯಾವ ಯಾವ ಕೃಷಿ ಉಪಕರಣಗಳನ್ನು ಬಾಡಿಗೆಗೆ ನೀಡಲಾಗುವುದು ಎನ್ನುವ ಪ್ರಶ್ನೆಯನ್ನು ಕೇಳಿದ್ದೇನೆ. ಇಲ್ಲಿ ಸವಿಸ್ತಾರವಾಗಿ ಏನು ಉತ್ತರವನ್ನು ಹೇಳಿದ್ದಾರೆಂದರೆ ಜಿಲ್ಲೆ ಮತ್ತು ತಾಲ್ಲೂಕು ಜೊತೆಗೆ ಹೋಬಳಿ ಮಟ್ಟದಲ್ಲಿಯೂ ಕೂಡ ರೈತರಿಗೆ ಸರಿಯಾದ ಮಾಹಿತಿಯಿಲ್ಲ. ಅಧಿಕಾರಿಗಳು ಏನಿದ್ದಾರೆ ಇವರು ಇದನ್ನು ಪೇಪರ್‌ನಲ್ಲಿ ಅಷ್ಟೇ ಇರುವುದನ್ನು ಬಿಟ್ಟರೆ ಇಲ್ಲಿಯ ತನಕ ಎಷ್ಟು ಜನ ರೈತರು ಈ ಉಪಕರಣಗಳನ್ನು ಉಪಯೋಗಿಸಿದ್ದಾರೆಂಬ ಬಗ್ಗೆ ಕೂಡ ಸರಿಯಾಗಿ ಮಾಹಿತಿಯಿಲ್ಲ. "ಕೃಷಿ ಯಂತ್ರಧಾರೆ" ಎನ್ನುವ ಒಂದು ಕಾರ್ಯಕ್ರಮ ಮಾಡಿದ್ದಾರೆ. ನಾವು ಕೂಡ ಆ ಭಾಗದ ಸದಸ್ಯರಾಗಿರುವುದರಿಂದ ಆ ಕಾರ್ಯಕ್ರಮಕ್ಕೆ ನಮ್ಮನ್ನು ಕೂಡ ಸೇರಿಸಿಕೊಂಡು ಮಾಡುವಂತಹ ಪರಿಪಾಠವಿಲ್ಲ. ನಮ್ಮ ಮಾನ್ಯ ಕೃಷಿ ಸಚಿವರು ಕೂಡ ಬಹಳ ಸಮರ್ಥರಿದ್ದಾರೆ. ರೈತರಿಗೆ ಅನುಕೂಲವಾಗುವ ರೀತಿಯಲ್ಲಿ ಏನೇನು ಉಪಕರಣಗಳನ್ನು ಮಾಡಿದ್ದಾರೆ, ಇದು ರೈತರಿಗೆ ತಲುಪಬೇಕು ಮತ್ತು ಜೊತೆಗೆ ಜನಪ್ರತಿನಿಧಿಗಳು ಯಾರಿದ್ದಾರೆ ಜಿಲ್ಲಾ ಮತ್ತು ತಾಲ್ಲೂಕು ಹಾಗೂ ಗ್ರಾಮ ಪಂಚಾಯ್ತಿಯ ಸದಸ್ಯರನ್ನು ಕೂಡ ಈ ಒಂದು ಕೆಲಸದಲ್ಲಿ involve ಮಾಡಬೇಕು ಎನ್ನುವುದು ನನ್ನ ಮನವಿಯಾಗಿದೆ.

**ಶ್ರೀ ಕೃಷ್ಣ ಬೈರೇಗೌಡ:-** ಮಾನ್ಯ ಸಭಾಪತಿಯವರೇ, ಇತ್ತೀಚೆಗೆ ವ್ಯವಸಾಯ ಮಾಡುವುದಕ್ಕೆ ಕೆಲಸದವರು ಸಿಗುತ್ತಿಲ್ಲ. ಕೆಲಸದವರು ಸಿಕ್ಕಿದರೂ ಕೂಡ ಅವರ ದರ ಬಹಳ ದುಬಾರಿ ಮತ್ತು ಖರ್ಚು-ವೆಚ್ಚಗಳು ಜಾಸ್ತಿಯಾಗಿ ಕೃಷಿ ಲಾಭದಾಯಕವಾಗುತ್ತಿಲ್ಲ. ಅದಕ್ಕೆ ರೈತರಿಗೆ ಯಂತ್ರೋಪಕರಣಗಳನ್ನು ಬಳಕೆ ಮಾಡಬೇಕು ಎನ್ನುವುದು ಸರ್ಕಾರದ ಸಲಹೆಯಾಗಿದೆ. ಬರೀ ಸಲಹೆ ಕೊಟ್ಟರೆ ಆಗುವುದಿಲ್ಲ ಎಂದು ಆ ಯಂತ್ರೋಪಕರಣಗಳನ್ನು ಬಾಡಿಗೆಯ ಆಧಾರದ ಮೇಲೆ ಸಹ ರೈತರಿಗೆ ಕೊಡುವ ವ್ಯವಸ್ಥೆಯನ್ನು ಮಾಡಿದ್ದೇವೆ. ಸರ್ಕಾರ ಮತ್ತು ಖಾಸಗಿ ಸಹಭಾಗಿತ್ವದಲ್ಲಿ ಕೇಂದ್ರವನ್ನು ಮಾಡಿ, ಪ್ರತಿ ಕೇಂದ್ರದಲ್ಲಿ ಸುಮಾರು 75 ಲಕ್ಷ ರೂಪಾಯಿಗಳ ಯಂತ್ರೋಪಕರಣಗಳನ್ನು ಇಟ್ಟು, ಮಾರುಕಟ್ಟೆ ದರಕ್ಕಿಂತ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಕಡಿಮೆ ದರಕ್ಕೆ ಇವುಗಳನ್ನು ರೈತರಿಗೆ ಬಾಡಿಗೆ ಆಧಾರದ ಮೇಲೆ ಕೊಡುತ್ತಿದ್ದೇವೆ. ಇದರ ಅನುಕೂಲವೇನೆಂದರೆ ರೈತರೇ ಬಂಡವಾಳ ಹಾಕಿ, ಮಿಷನರಿ ಇಟ್ಟುಕೊಂಡು ಅದರ ಕಷ್ಟನಷ್ಟಗಳನ್ನು ಅನುಭವಿಸುವುದನ್ನು ತಪ್ಪಿಸಬೇಕು ಮತ್ತು ಅದರ ವೆಚ್ಚಗಳು ಮತ್ತು ಬಂಡವಾಳ ಸಹ ಕಡಿಮೆಯಾಗುತ್ತದೆ. ಕೃಷಿಯಲ್ಲಿ ಲಾಭದಾಯಕತೆಯನ್ನು ಕಂಡುಕೊಳ್ಳಬಹುದು. ಕೆಲಸದವರು ಸಿಗಲಿಲ್ಲ ಎಂದು ಹೇಳಿ ವ್ಯವಸಾಯ ಕುಂಠಿತವಾಗಬಾರದೆಂದು ಸಹ ಪರಿಹಾರ ಕೊಡಬೇಕೆಂದು ಹೇಳಿ ಈ ಯೋಜನೆಯನ್ನು ಮಾಡಿದ್ದೇವೆ. ರಾಜ್ಯದಲ್ಲಿ ಒಟ್ಟು 314 ಕೇಂದ್ರಗಳನ್ನು ಮಾಡಿದ್ದೇವೆ. ಅದರಲ್ಲಿ 19 ಕೇಂದ್ರಗಳು ಮಂಡ್ಯ ಜಿಲ್ಲೆಯಲ್ಲಿ ಮಾಡಿದ್ದೇವೆ. 19 ಕೇಂದ್ರದೊಳಗೆ 4 ಯಂತ್ರೋಪಕರಣಗಳನ್ನು ದಾಸ್ತಾನು ಮಾಡಿದ್ದೇವೆ ಮತ್ತು ಇನ್ನು ಕೆಲವೇ ದಿನಗಳಲ್ಲಿ ಕಾರ್ಯ ಆರಂಭವಾಗುತ್ತದೆ. ಮಂಡ್ಯ ಜಿಲ್ಲೆಯಲ್ಲಿ ಇನ್ನು 12 ಹೋಬಳಿಗಳು ಉಳಿದಿದೆ. ಈ ವರ್ಷ ಅದನ್ನು ಮಾಡಬೇಕೆಂದು ಯೋಜನೆಯನ್ನು ಹಾಕಿಕೊಂಡಿದ್ದೇವೆ. ಮಂಡ್ಯ ಜಿಲ್ಲೆಯ ಎಲ್ಲಾ ಹೋಬಳಿಗಳಲ್ಲಿ ಹೆಚ್ಚು ಕಡಿಮೆ ಕೇಂದ್ರ ಮಾಡಿದಂತಾಗುತ್ತದೆ. ಮಾನ್ಯ ಸದಸ್ಯರಿಗೆ ಸರಿಯಾದ ಮಾಹಿತಿಯಿಲ್ಲ ಎಂದು ಹೇಳಿದ್ದಾರೆ, ಇದು ತಮಗೆ ಪೂರಕವಾದ ಮಾಹಿತಿ. ಮಂಡ್ಯ ಜಿಲ್ಲೆಯಲ್ಲಿ ಎಷ್ಟು ಜನರು ಉಪಕರಣಗಳನ್ನು ಉಪಯೋಗಿಸಿದ್ದಾರೆಂದು ಮಾನ್ಯ ಸದಸ್ಯರು ಕೇಳಿದ್ದಾರೆ. ಈಗ 19 ಕೇಂದ್ರಗಳು ಸ್ಥಾಪನೆಯಾಗಿ, ಅದರಲ್ಲಿ 15 ಕೇಂದ್ರಗಳು ಕೆಲಸ ಮಾಡುತ್ತಿದೆ. 15 ಕೇಂದ್ರಗಳಿಂದ ಇಲ್ಲಿಯವರೆಗೂ ಸುಮಾರು 18,807 ರೈತರು ಉಪಯೋಗವನ್ನು ಪಡೆದುಕೊಂಡಿದ್ದಾರೆ. ಅಲ್ಲಿ ಬಂದು ಯಂತ್ರಗಳನ್ನು ಬಾಡಿಗೆ ಆಧಾರದಲ್ಲಿ ಪಡೆದುಕೊಂಡಿದ್ದಾರೆ. ಸುಮಾರು ಒಂದು ಕೇಂದ್ರದ 2.31 ಲಕ್ಷ ರೂಪಾಯಿಗಳಷ್ಟು ವಹಿವಾಟು ಎಂದರೆ ಬಾಡಿಗೆಯನ್ನು ಸಂದಾಯ ಮಾಡಿ ಇವುಗಳನ್ನು ಪಡೆದುಕೊಂಡಿದ್ದಾರೆ. ರಾಜ್ಯದಲ್ಲಿ ಒಟ್ಟು 314 ಕೇಂದ್ರಗಳಲ್ಲಿ 65 ಕೋಟಿ ರೂಪಾಯಿಗಳಷ್ಟು ರೈತರು ಯಂತ್ರಗಳಿಗೆ ಬಾಡಿಗೆ ಕೊಟ್ಟು ಉಪಯೋಗ ಪಡೆದುಕೊಂಡಿದ್ದಾರೆ. ಸುಮಾರು 5,85,000 ರೈತರು ಇದನ್ನು ಇಲ್ಲಿಯವರೆಗೂ ಸಹ ಉಪಯೋಗ ಪಡೆದುಕೊಂಡಿದ್ದಾರೆ. ಮಾನ್ಯ ಸದಸ್ಯರು ಏನು ಹೇಳುತ್ತಿದ್ದಾರೆಂದರೆ, ಜನ ಪ್ರತಿನಿಧಿಗಳಿಗೂ ಇದರ ಮಾಹಿತಿ ಕೊರತೆಯಿದೆ ಎಂದು ನಾನು ತಕ್ಷಣ ಸೂಚನೆ ಕೊಡುತ್ತೇನೆ. ಇನ್ನು ಹೆಚ್ಚಿನದಾಗಿ ಹೇಳಬೇಕೆಂದರೆ ಬೇರೆ ಜಿಲ್ಲೆಗಳ ಪ್ರತಿ ಕೇಂದ್ರದಲ್ಲಿ ಎಷ್ಟು ಉಪಯೋಗವಾಗಿದೆ ಅಷ್ಟು ಉಪಯೋಗ ಮಂಡ್ಯ ಜಿಲ್ಲೆಯಲ್ಲಿ ಆಗಿಲ್ಲ. ಬಹುಶಃ ಇದಕ್ಕೆ ಮಾಹಿತಿಯ ಕೊರತೆ ಇರಬಹುದು. ಬೇರೆ ಜಿಲ್ಲೆಗಳ ಪ್ರತಿ ಕೇಂದ್ರದಲ್ಲಿ 20, 30 ಮತ್ತು 40 ಲಕ್ಷದಷ್ಟು ಬಾಡಿಗೆಯನ್ನು ಕೊಟ್ಟು ರೈತರು ಉಪಯೋಗವನ್ನು ಪಡೆದುಕೊಂಡಿದ್ದಾರೆ. ಅಂತಹದು ಬರೀ 13, 14 ಮತ್ತು 15 ಲಕ್ಷವಷ್ಟೇ ಒಂದೊಂದು ಕೇಂದ್ರದಲ್ಲಿ ವಹಿವಾಟು ಆಗಿರುವುದರಿಂದ, ಮಾಹಿತಿ ಕೊರತೆ ಇರುವುದು ಸಹ ಕಾರಣ ಎಂದು ನಾನು ಸಹ ನಿಮ್ಮ ಜೊತೆ ಸಮರ್ಥನೆಯನ್ನು ವ್ಯಕ್ತಪಡಿಸಿ, ಇದರ ಬಗ್ಗೆ ಜನಪ್ರತಿನಿಧಿಗಳಿಗೂ ಸಹ ಮಾಹಿತಿ ಕೊಟ್ಟು, ಹೆಚ್ಚಿಗೆ ಪ್ರಚಾರವನ್ನು ಕೊಡುವುದಕ್ಕೆ, ಹೆಚ್ಚು ರೈತರು ಉಪಯೋಗವನ್ನು ಪಡೆದುಕೊಳ್ಳುವುದಕ್ಕೆ ಖಂಡಿತ ನಿಮ್ಮ ಸಲಹೆಯನ್ನು ನಾವು ಸ್ವೀಕಾರ ಮಾಡುತ್ತೇವೆ.

**ಸಭಾಪತಿಯವರು:–** ಧನ್ಯವಾದಗಳು.

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ರಮೇಶ ಬಾಬು:-** ಮಾನ್ಯ ಸಭಾಪತಿಯವರೇ, ಒಂದೇ ಪ್ರಶ್ನೆ.

**ಸಭಾಪತಿಯವರು:-** ಬೇಡ ಬೇಡ.

**ಶ್ರೀ ರಮೇಶ ಬಾಬು:-** ಮಾನ್ಯ ಸಭಾಪತಿಯವರೇ, ಸರಳ ಪ್ರಶ್ನೆ.

**ಸಭಾಪತಿಯವರು:-** ಮಾನ್ಯ ರಮೇಶ್‌ರವರೇ ಒಂದು ಕಾಲು ಗಂಟೆ ಆಯಿತು. ಏನು ಕೇಳೇ ಬಿಡುತ್ತೀರಾ?

**ಶ್ರೀ ರಮೇಶ ಬಾಬು:-** ಮಾನ್ಯ ಸಭಾಪತಿಯವರೇ, ಬಸವ ಭೀಮ ಯೋಜನೆಯ ಬಗ್ಗೆ ಸಾಕಷ್ಟು ಗೊಂದಲವಾಗಿದೆ. ಒಂದು ರೂಪಾಯಿ ತಾವು ಖಾತೆಗೆ ಜಮಾ ಮಾಡಿದರೆ . . .

**ಸಭಾಪತಿಯವರು:-** ಅವರು ಕೇಳುತ್ತಿರುವುದು ಸಾಮಗ್ರಿಗಳ ಬಾಡಿಗೆ ಬಗ್ಗೆ ನೀವು ಬೇರೆ ಯಾವುದೋ ಕೇಳಿದರೆ ಏನಾಗುತ್ತೇ? ಸಾಮಗ್ರಿಗಳ ಬಾಡಿಗೆ ಬಗ್ಗೆ ಉತ್ತರ ಕೊಟ್ಟಿದ್ದಾರೆ.

**ಶ್ರೀ ಕೃಷ್ಣ ಭೈರೇಗೌಡ :-** ಮಾನ್ಯ ಸಭಾಪತಿಯವರೇ, ಅದು ಬಹಳ ಗೊಂದಲವಾಗಿದೆ. ಇದರಿಂದ ತಪ್ಪು ಮಾಹಿತಿಗಳು ಹೋಗುತ್ತಿದೆ. ಮೊನ್ನೆ ಏನು ಮಾಡಿದ್ದೇವೆ ಎಂದರೆ ಯಾರಿಗೆ ಈ ಬರ ಪರಿಹಾರದ ಹಣ ಸರ್ಕಾರ ಕೊಡಬೇಕಾಗಿತ್ತೋ, ಅದರಲ್ಲಿ 22 ಲಕ್ಷ ರೈತರಿಗೆ ಈಗಾಗಲೇ Account ಗೆ ಪಾವತಿ ಮಾಡಿದ್ದೇವೆ. ಅದರಲ್ಲಿ ಮತ್ತೆ ಕೆಲವು ರೈತರದ್ದು ಬಿಟ್ಟು ಹೋಗಿದೆ ಎಂದು ದೂರು ಬಂತು. ಈಗ ಮತ್ತೆ ಹೆಸರುಗಳನ್ನು enter ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೇವೆ. ಅವರ Bank Account Number ಮತ್ತು ಆಧಾರ್ ನಂಬರ್‌ನ್ನೆಲ್ಲಾ ಎಂಟ್ರಿ ಮಾಡಿ, ಅಕೌಂಟ್ ಸರಿಯಿದೆಯೇ ಎಂದು ನಾವು ಟೆಸ್ಟ್ ಮಾಡುವುದಕ್ಕೋಸ್ಕರ ನಾವು ಒಂದು ರೂಪಾಯಿಯನ್ನು ಅವರ ಅಕೌಂಟ್‌ಗೆ ಹಾಕಿದ್ದೇವೆ. ಅದನ್ನು ನಾವು ಟೆಸ್ಟ್ ಮಾಡಿದ್ದೇವೆ, ಏಕೆಂದರೆ ನಾವು ಏನಾದರೂ ತಪ್ಪು ಮಾಡಿ, ಯಾವುದೋ ಒಂದು ತಪ್ಪು ಅಕೌಂಟಿಗೆ amount ಹೋಗುವುದು ಈ ತರಹ ಆಗಬಾರದೆಂದು ಆಡಳಿತ ಸುಧಾರಣೆ ದೃಷ್ಟಿಯಿಂದ ಒಂದು ರೂಪಾಯಿಯನ್ನು ಹಾಕಿ ಅಕೌಂಟ್ ಸರಿಯಿದೆಯೇ ಎಂದು ಚೆಕ್ ಮಾಡಿ, ಉಳಿದ ಹಣವನ್ನು ಆಮೇಲೆ ಹಾಕಬೇಕು ಎನ್ನುವುದಕ್ಕೆ ಮಾಡಿದ್ದು ಅದು. ಅದನ್ನು ಅರ್ಥಮಾಡಿಕೊಳ್ಳದೇ ಅನಾವಶ್ಯಕವಾಗಿ ಅದರ ಬಗ್ಗೆ ಗೊಂದಲವನ್ನು ಸೃಷ್ಟಿ ಮಾಡಿದ್ದಾರೆ.

**ಶ್ರೀ ರಮೇಶ ಬಾಬು:-** ಮಾನ್ಯ ಸಭಾಪತಿಯವರೇ, ಪ್ರಾಯೋಗಿಕವಾಗಿ . .

**ಶ್ರೀ ಕೃಷ್ಣ ಭೈರೇಗೌಡ:-** ಮಾನ್ಯ ಸಭಾಪತಿಯವರೇ, ಒಂದು ರೂಪಾಯಿ ಹಾಕಿದ್ದು, ಅದು test run. ಟೆಸ್ಟ್ ಮಾಡುವುದಕ್ಕೋಸ್ಕರ ಎಲ್ಲಾ ಸರಿಯಿದೆಯೇ, ಅಕೌಂಟ್ ನಂಬರ್ mismatch ಆಗಬಾರದು, ತಪ್ಪಿದ್ದರೆ ಮೊದಲೇ ಸರಿ ಮಾಡಿಕೊಂಡು, ಆಮೇಲೆ ಉಳಿದ ಹಣವನ್ನು ಹಾಕೋಣ ಎಂದು ಮಾಡಿದ್ದು ಅಷ್ಟೇ. ಅದು ಏಕೆ ತಪ್ಪು ಗ್ರಹಿಕೆ ಆಯಿತೋ ಅದು ನನಗೆ ಅರ್ಥವಾಗುತ್ತಿಲ್ಲ.

ತಿದ್ದುಪಡಿಯಾಗದ ಪ್ರತಿ; ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಸಭಾಪತಿಯವರು:- ಈಗ ಶ್ರೀ ಪ್ರಸನ್ನಕುಮಾರ್‌ರವರ ಪ್ರಶ್ನೆ. ಶ್ರೀ ವೀರಯ್ಯನವರೇ ಬೇಡ ಬೇಡ. ನಾನು ಮುಂದಿನ ಪ್ರಶ್ನೆಯನ್ನು ಕೇಳಿದ್ದೇನೆ. ಈ ಎಲ್ಲಾ ಪ್ರಶ್ನೆ ಮುಗಿದ ಮೇಲೆ ಎಂದರೆ ಹೇಗೆ? ಶ್ರೀ ಪ್ರಸನ್ನಕುಮಾರ್‌ರವರು ಪ್ರಶ್ನೆಯನ್ನು ಕೇಳುತ್ತಾರೆ.

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 2917**

**(ಉತ್ತರವನ್ನು ಒದಗಿಸಲಾಗಿದೆ.)**

**ಶ್ರೀ ಆರ್.ಪ್ರಸನ್ನಕುಮಾರ್:-** ಮಾನ್ಯ ಸಭಾಪತಿಯವರೇ, ವಿವರವಾದಂತಹ ಉತ್ತರವನ್ನು ಕೊಟ್ಟಿದ್ದಾರೆ. ಆದರೆ ನನ್ನ ಪ್ರಶ್ನೆ ಏನೆಂದರೆ ಶಿವಮೊಗ್ಗ ಜಿಲ್ಲೆಯಲ್ಲಿ 49,000 ಎಕರೆ ಅಡಿಕೆ ಬೆಳೆ ಇದೆ. ಇನ್ನು ಸುಮಾರು 17,000 ಎಕರೆಗೆ ಮಾತ್ರ ಹನಿ ನೀರಾವರಿಯಾಗಿದೆ. ಇನ್ನು ಉಳಿದಂತಹ 32,000 ಎಕರೆಗೆ ಹನಿ ನೀರಾವರಿ ಯೋಜನೆ ಮಾಡುವುದಕ್ಕೆ ಪ್ರಚಾರವನ್ನು ಕೊಡವುದರ ಜೊತೆಗೆ ಹೆಚ್ಚಿನ ಅನುದಾನವನ್ನು ಕೊಡಬೇಕಾಗುತ್ತದೆ. ಇದಕ್ಕೆ ಕಾರಣವೇನೆಂದರೆ, ಏನು ಈ ಭೀಕರ ಬರಗಾಲ ಬಂತು, ಈ ಬರಗಾಲದ ಕಾಲದಲ್ಲಿ ಸಾಕಷ್ಟು ಅಡಿಕೆ ತೋಟ ಒಣಗಿ ಹೋಗಿದೆ. ಇವತ್ತು ಕಡಿಮೆ ನೀರನ್ನು ಉಪಯೋಗಿಸಿಕೊಂಡಿದ್ದರೆ ತೋಟ ಉಳಿಯುತಿತ್ತು. ಇದಕ್ಕೆ ಇನ್ನೂ ಹೆಚ್ಚಿನ ಒತ್ತನ್ನು ಕೊಡಬೇಕೆಂದು ಕೇಳುತ್ತಿದ್ದೇನೆ. ತೋಟಗಾರಿಕೆ ಬೆಳೆಗೆ ವಿಮೆ ಸೌಲಭ್ಯವಿಲ್ಲ. ಅ ವಿಮಾ ಸೌಲಭ್ಯವನ್ನು ಕೊಡಬೇಕೆಂದು ಮಾನ್ಯ ಸಚಿವರಲ್ಲಿ ನಾನು ವಿನಂತಿ ಮಾಡುತ್ತೇನೆ.

**ಶ್ರೀ ಕೃಷ್ಣ ಭೈರೇಗೌಡ (ಕೃಷಿ ಸಚಿವರು) (ತೋಟಗಾರಿಕೆ, ಕೃಷಿ ಮಾರುಕಟ್ಟೆ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಹನಿ ನೀರಾವರಿಗೆ ಹೆಚ್ಚಿನ ಆದ್ಯತೆಯನ್ನು ಕೊಡಬೇಕೆಂದು ಮಾನ್ಯ ಸದಸ್ಯರು ಒತ್ತಾಯ ಮಾಡುತ್ತಿದ್ದಾರೆ. ಅವರ ಒತ್ತಾಯಕ್ಕೆ ಸರ್ಕಾರದ ಸಂಪೂರ್ಣ ಸಹಮತವಿದೆ. ಹನಿ ಹನಿ ನೀರನ್ನು ಸಹ ಸದ್ಬಳಕೆ ಮಾಡಿದರೆ ಮಾತ್ರ ನಾವು ಭವಿಷ್ಯದಲ್ಲಿ ಬರೀ ಕೃಷಿಯೊಂದೇ ಅಲ್ಲ, ಜನರ ಬದುಕಿಗಾಗಿ ಕೂಡ ಹನಿ ಹನಿ ನೀರನ್ನು ಸಹ ಸದ್ಬಳಕೆ ಮಾಡಿದರೆ ಮಾತ್ರ ಸಾಧ್ಯ. ಅದರ ಜೊತೆಗೆ ನಮ್ಮ ಸಂಪೂರ್ಣ ಸಹಮತವಿದೆ.

(ಮುಂದು..)

(680)13-06-2017 12-50 ಹೆಚ್‌ವಿ-ಜಿಆರ್ **(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಕೃಷ್ಣ ಭೈರೇಗೌಡ(ಮುಂದುವರೆದದ್ದು):-**

ಸನ್ಮಾನ್ಯ ಸಭಾಪತಿಯವರೇ, 'ಹಣ ಕೊಡುತ್ತೇವೆಂದು ಸರ್ಕಾರ ಬರೀ ಬಾಯಿ ಮಾತಿನಲ್ಲಿ ಹೇಳಿದರೆ ಸಾಕಾಗುವುದಿಲ್ಲ, ಹಣ ಕೊಡಬೇಕು' ಎನ್ನುವ ವಿಚಾರವನ್ನು ಮಾನ್ಯ ಸದಸ್ಯರು ಹೇಳಿದ್ದಾರೆ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಈಗಾಗಲೇ ನಾವು ಹನಿ ನೀರಾವರಿಗೆ ಹೆಚ್ಚಿನ ಒತ್ತನ್ನು ಕೊಟ್ಟಿದ್ದೇವೆ. ಉದಾಹರಣೆಗೆ ಹೇಳಬೇಕಾದರೆ, ನಮ್ಮ ಸರ್ಕಾರ ಅಧಿಕಾರಕ್ಕೆ

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಬಂದ ಮೊದಲನೆಯ ವರ್ಷದಲ್ಲಿ ನನ್ನ ಇಲಾಖೆಯಲ್ಲಿ ಹನಿ ನೀರಾವರಿಗಾಗಿ 107 ಕೋಟಿ ರೂ.ಗಳನ್ನು ಮೀಸಲಿಡಲಾಗಿತ್ತು. ಕಳೆದ ವರ್ಷ 398 ಕೋಟಿ ರೂಪಾಯಿಗಳಷ್ಟು ಹಣವನ್ನು ಹನಿ ನೀರಾವರಿಗಾಗಿ ಮೀಸಲಿಡಲಾಗಿದೆ. ಅಂದರೆ, ನಾಲ್ಕು ವರ್ಷಗಳಲ್ಲಿ ಸರಿಸುಮಾರು ನಾಲ್ಕು ಪಟ್ಟು ಹೆಚ್ಚುವರಿ ಹಣವನ್ನು ಇದಕ್ಕಾಗಿ ಒದಗಿಸಲಾಗಿದೆ. ಅದೇ ರೀತಿಯಲ್ಲಿ ತೋಟಗಾರಿಕಾ ಇಲಾಖೆಯಲ್ಲಿ ಕಳೆದ ವರ್ಷ 237 ಕೋಟಿ ರೂಪಾಯಿಗಳನ್ನು ಹನಿ ನೀರಾವರಿಗಾಗಿ ವೆಚ್ಚ ಮಾಡಿದ್ದೇವೆ. ಈ ವರ್ಷದ ಆಯವ್ಯಯದಲ್ಲಿ 401 ಕೋಟಿ ರೂಪಾಯಿಗಳನ್ನು ಹನಿ ನೀರಾವರಿಗಾಗಿ ಮೀಸಲಿಟ್ಟಿದ್ದೇವೆ. ಅಂದರೆ, ಈ ವರ್ಷ ಸುಮಾರು ಶೇಕಡಾ 60ರಷ್ಟು ಹೆಚ್ಚಿನ ಹಣವನ್ನು ಹನಿ ನೀರಾವರಿಗಾಗಿ ವೆಚ್ಚ ಮಾಡಲು ಅವಕಾಶವನ್ನು ಮಾಡಿಕೊಂಡಿದ್ದೇವೆ. ಹಿಂದೆ ಹನಿ ನೀರಾವರಿಗಾಗಿ ಕೇಂದ್ರ ಸರ್ಕಾರ ಶೇಕಡಾ 45ರಷ್ಟು ಅನುದಾನವನ್ನು ಕೊಡುತ್ತಿತ್ತು. ರಾಜ್ಯ ಸರ್ಕಾರ ಶೇಕಡಾ 50ರಷ್ಟು ಕೊಡುತ್ತಿತ್ತು. ಈಗ ಕೇಂದ್ರ ಸರ್ಕಾರದಿಂದ ಬರುತ್ತಿರುವ ಅನುದಾನದ ಪಾಲು ಶೇಕಡಾ 30ಕ್ಕೆ ಇಳಿದಿದೆ. ರಾಜ್ಯ ಸರ್ಕಾರದ ಪಾಲು ಶೇಕಡಾ 60ಕ್ಕೆ ಹೆಚ್ಚಾಗಿದೆ. ತೋಟಗಾರಿಕಾ ಇಲಾಖೆಯಲ್ಲಿ 400 ಕೋಟಿ, ಕೃಷಿ ಇಲಾಖೆಯಲ್ಲಿ 400 ಕೋಟಿ ಹಾಗೂ ರೇಷ್ಮೆ ಇಲಾಖೆಯಲ್ಲಿ 350 ಕೋಟಿ ರೂಪಾಯಿಗಳಷ್ಟು ಅನುದಾನವನ್ನು ಹನಿ ನೀರಾವರಿಗಾಗಿ ಪಡೆದುಕೊಳ್ಳುವುದಕ್ಕೆ ಆಯವ್ಯಯದಲ್ಲಿ ಅವಕಾಶವನ್ನು ಮಾಡಿಕೊಂಡಿದ್ದೇವೆ. ಕೃಷಿ ಮತ್ತು ತೋಟಗಾರಿಕಾ ಇಲಾಖೆಗಳಿಂದ ಒಟ್ಟು 800 ಕೋಟಿ ರೂಪಾಯಿಗಳನ್ನು ಹನಿ ನೀರಾವರಿಗಾಗಿ ಪ್ರಾವಿಜನ್ ಮಾಡಿಕೊಂಡಿದ್ದೇವೆ. ಅದರಲ್ಲಿ ಹೆಚ್ಚಿನ ಅನುದಾನವನ್ನು ಮಾನ್ಯ ಸದಸ್ಯರ ಜಿಲ್ಲೆಗೆ ಅಡಿಕೆ ಬೆಳೆಗಾಗಿ ಕೊಡಲಾಗುತ್ತದೆ ಎನ್ನುವ ಭರವಸೆಯನ್ನು ಅವರಿಗೆ ನೀಡುತ್ತಿದೇನೆ.

ಸನ್ಮಾನ್ಯ ಸಭಾಪತಿಯವರೇ, ಎರಡನೆಯದಾಗಿ ಅಡಿಕೆ ಬೆಳೆಗೆ ವಿಮೆ ಕೊಡುವುದರ ಬಗ್ಗೆ ಮಾನ್ಯ ಸದಸ್ಯರು ಪ್ರಶ್ನೆ ಕೇಳಿದ್ದಾರೆ. ಅಡಿಕೆ ಬೆಳೆಗೆ ವಿಮೆ ಸೌಲಭ್ಯವನ್ನು ನೀಡಲಾಗುತ್ತಿದೆ. ಅದರ ಬಗ್ಗೆ ಮಾನ್ಯ ಸದಸ್ಯರುಗಳು ಹೆಚ್ಚಿನ ಪ್ರಚಾರವನ್ನು ನೀಡಿ ರೈತರು ಅದರ ಪ್ರಯೋಜನವನ್ನು ಪಡೆದುಕೊಳ್ಳುವಂತೆ ಮಾಡಬೇಕಾಗುತ್ತದೆ. ಅದಕ್ಕೆ ನಾವು ಸಹ ಸಹಕಾರವನ್ನು ನೀಡುತ್ತೇವೆ ಎನ್ನುವ ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ. ಕೆಲವು ಬೆಳೆಗಳು ಅಂದರೆ, ತೆಂಗು, ಬಾಳೆ ಮುಂತಾದವುಗಳು ಮಾತ್ರ ಬೆಳೆ ವಿಮೆಯಿಂದ ಹೊರಗುಳಿದಿವೆ. ಅಡಿಕೆ ಬೆಳೆಗೆ ವಿಮಾ ಸೌಲಭ್ಯ ಇದೆ. ಇದರ ಬಗ್ಗೆ ಮಾನ್ಯ ಸದಸ್ಯರು ರೈತರಲ್ಲಿ ಅರಿವನ್ನುಂಟು ಮಾಡಬೇಕಾಗಿದೆ. ನಾವು ಸಹ ಆ ನಿಟ್ಟಿನಲ್ಲಿ ಪ್ರಯತ್ನ ಮಾಡುತ್ತೇವೆ ಎನ್ನುವ ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ.

<u>**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:2854**</u>

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಆರ್.ಧರ್ಮಸೇನ:-** ಸನ್ಮಾನ್ಯ ಸಭಾಪತಿಯವರೇ, 'ಕೃಷಿ ಉತ್ಪನ್ನ ಮಾರುಕಟ್ಟೆಗಳಲ್ಲಿ ಉಪಯೋಗಿಸುತ್ತಿರುವ ತೂಗು ಯಂತ್ರಗಳು ಅನೇಕ ಕಡೆಗಳಲ್ಲಿ ದೋಷಪೂರಿತವಾಗಿದ್ದು ಇದರಿಂದ ರೈತರಿಗೆ ವಂಚನೆಯಾಗುತ್ತಿರುವ ವಿಷಯ

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಸರ್ಕಾರದ ಗಮನಕ್ಕೆ ಬಂದಿದೆಯೇ' ಎನ್ನುವ ನನ್ನ ಪ್ರಶ್ನೆಗೆ 'ಯಾವುದೇ ದೂರುಗಳು ಇರುವುದಿಲ್ಲ' ಎನ್ನುವ ಉತ್ತರವನ್ನು ನೀಡಿದ್ದಾರೆ. ಆದರೆ, ಟಿ. ನರಸೀಪುರದ ಕೃಷಿ ಇಲಾಖೆಯ ಸಭೆಯಲ್ಲಿ 'ಕೃಷಿ ಉತ್ಪನ್ನ ಮಾರುಕಟ್ಟೆಗಳಲ್ಲಿ ಉಪಯೋಗಿಸುತ್ತಿರುವ ತೂಗು ಯಂತ್ರಗಳಲ್ಲಿ ಸರಿಯಾದ ತೂಕ ಬರುತ್ತಿಲ್ಲ, ನಮಗೆ ಮೋಸವಾಗುತ್ತಿದೆ' ಎಂದು ರೈತರೇ ದೂರು ನೀಡಿದ್ದಾರೆ. ರಾಜ್ಯದಲ್ಲಿರುವ ಸುಮಾರು 161 ಕೃಷಿ ಉತ್ಪನ್ನ ಮಾರುಕಟ್ಟೆಗಳಲ್ಲಿ ಕೇವಲ 89 ಕೃಷಿ ಉತ್ಪನ್ನ ಮಾರುಕಟ್ಟೆಗಳಲ್ಲಿ ಮಾತ್ರ ತೂಗು ಯಂತ್ರಗಳನ್ನು ಅಳವಡಿಸಲಾಗಿದೆ ಎಂದು ಹೇಳುತ್ತಿದ್ದಾರೆ. ಉಳಿದಿರುವ 72 ಕೃಷಿ ಉತ್ಪನ್ನ ಮಾರುಕಟ್ಟೆಗಳಲ್ಲಿಯೂ ತೂಗು ಯಂತ್ರಗಳನ್ನು ಅಳವಡಿಸಬೇಕೆನ್ನುವುದು ನನ್ನ ಒತ್ತಾಯವಾಗಿದೆ. ಸರ್ಕಾರ ನೀಡಿರುವ ಲಿಖಿತ ರೂಪದ ಉತ್ತರದಲ್ಲಿ, 'ಮಾರುಕಟ್ಟೆ ಸಮಿತಿಯ ಸಂಪನ್ಮೂಲ ಮತ್ತು ಬೇಡಿಕೆಗಳನ್ನು ಆಧರಿಸಿ ಆಯಾಯ ಮಾರುಕಟ್ಟೆ ಸಮಿತಿಗಳು ವೇಬ್ರಿಡ್ಜ್‌ಗಳನ್ನು ಅಳವಡಿಸಲು ಕ್ರಮ ವಹಿಸುತ್ತವೆ' ಎಂದು ತಿಳಿಸಲಾಗಿದೆ. ಈ ರೀತಿ ಮಾಡದೇ ಸರ್ಕಾರದ ವತಿಯಿಂದ ಎಲ್ಲ ಕೃಷಿ ಉತ್ಪನ್ನ ಮಾರುಕಟ್ಟೆಗಳಲ್ಲಿ ವೇಬ್ರಿಡ್ಜ್‌ಗಳನ್ನು ಅಳವಡಿಸುವಂತಹ ಕ್ರಮವನ್ನು ತೆಗೆದುಕೊಳ್ಳಬೇಕೆನ್ನುವುದು ನನ್ನ ಒತ್ತಾಯವಾಗಿದೆ. ಹಳೆಯ ವೇಬ್ರಿಡ್ಜ್‌ಗಳಿಂದ ರೈತರಿಗೆ ಆಗುತ್ತಿರುವ ಅನ್ಯಾಯವನ್ನು ಕೂಡಲೇ ಸರಿಪಡಿಸಿ ಹೊಸ ವೇಬ್ರಿಡ್ಜ್‌ಗಳನ್ನು ಅಳವಡಿಸಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

**ಶ್ರೀ ಕೃಷ್ಣ ಭೈರೇಗೌಡ(ಕೃಷಿ ಸಚಿವರು) (ತೋಟಗಾರಿಕೆ ಮತ್ತು ಕೃಷಿ ಮಾರುಕಟ್ಟೆ ಸಚಿವರ ಪರವಾಗಿ):-** ಸನ್ಮಾನ್ಯ ಸಭಾಪತಿಯವರೇ, ಎ.ಪಿ.ಎಂ.ಸಿ. ಪ್ರಾಂಗಣದ ಒಳಗೆ ಇರುವಂತಹ ವೇಬ್ರಿಡ್ಜ್‌ಗಳನ್ನು ಕೃಷಿ ಮಾರುಕಟ್ಟೆ ಇಲಾಖೆಯ ವತಿಯಿಂದ ನಡೆಸುತ್ತಿದ್ದೇವೆ. ಹೊರಗಡೆ ಇರುವಂತಹ ವೇಬ್ರಿಡ್ಜ್‌ಗಳನ್ನು ತೂಕ ಮತ್ತು ಮಾಪನ ಇಲಾಖೆಯವರು ಅಳವಡಿಸಿರುತ್ತಾರೆ. ಅವುಗಳಲ್ಲಿ ಏನಾದರೂ ಲೋಪದೋಷಗಳಿದ್ದರೆ ಅದಕ್ಕೆ ಅವರು ಜವಾಬ್ದಾರರಾಗಿರುತ್ತಾರೆ. ಮಾನ್ಯ ಸದಸ್ಯರು ಹೇಳುತ್ತಿರುವಂತೆ, ಟಿ. ನರಸೀಪುರ ಕೃಷಿ ಉತ್ಪನ್ನ ಮಾರುಕಟ್ಟೆಯ ಒಳಗಡೆ ಇರುವಂತಹ ವೇಬ್ರಿಡ್ಜ್‌ನಲ್ಲಿ ಏನಾದರೂ ತೊಂದರೆಗಳಿದ್ದರೆ, ಅದನ್ನು ಪರೀಕ್ಷೆ ಮಾಡುವ ಬಗ್ಗೆ ನಾನು ತಕ್ಷಣ ಅಧಿಕಾರಿಗಳಿಗೆ ಸೂಚನೆ ಕೊಡುತ್ತೇನೆ ತೂಕ ಮತ್ತು ಮಾಪನ ಇಲಾಖೆಯವರನ್ನು ಸಹ ಜೊತೆಗೆ ಕರೆದುಕೊಂಡು ಹೋಗಿ ವೇಬ್ರಿಡ್ಜ್ ಅನ್ನು ಪರೀಕ್ಷೆ ಮಾಡಿಸುವುದಕ್ಕೆ ಕ್ರಮ ತೆಗೆದುಕೊಳ್ಳಲಾಗುತ್ತದೆ.

**ಶ್ರೀ ಆರ್.ಧರ್ಮಸೇನ:-** ಸನ್ಮಾನ್ಯ ಸಭಾಪತಿಯವರೇ, ವೇಬ್ರಿಡ್ಜ್‌ಗಳು ಹಳೆಯದಾಗಿವೆ. ಹೊಸ ವೇಬ್ರಿಡ್ಜ್‌ಗಳನ್ನು ಅಳವಡಿಸಬೇಕೆನ್ನುವುದು ರೈತರ ಒತ್ತಾಯವಾಗಿದೆ. ದಯಮಾಡಿ ಸರ್ಕಾರ ಹೊಸ ವೇಬ್ರಿಡ್ಜ್‌ಗಳನ್ನು ಅಳವಡಿಸಿಕೊಡಬೇಕೆನ್ನುವುದು ನನ್ನ ವಿನಂತಿಯಾಗಿದೆ.

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಕೃಷ್ಣ ಭೈರೇಗೌಡ:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರುವ ಮೊದಲನೆಯ ಉಪ ಪ್ರಶ್ನೆಗೆ ನಾನು ಉತ್ತರವನ್ನು ಹೇಳಿದ್ದೇನೆ. ಎರಡನೆಯ ಉಪ ಪ್ರಶ್ನೆಗೆ ನಾನು ಇನ್ನೂ ಉತ್ತರವನ್ನು ನೀಡಿಲ್ಲ. ಮಾನ್ಯ ಸದಸ್ಯರು ಮಾತನಾಡುತ್ತಾ, 'ಟಿ.ನರಸೀಪುರ ವೇಬ್ರಿಡ್ಜ್ ಬಗ್ಗೆ ಅಲ್ಲಿನ ರೈತರೇ ದೂರು ಕೊಟ್ಟಿದ್ದಾರೆ' ಎನ್ನುವ ಮಾತನ್ನು ಹೇಳಿದ್ದಾರೆ. ಎ.ಪಿ.ಎಂ.ಪಿ. ಒಳಗಡೆ ಇರುವಂತಹ ವೇಬ್ರಿಡ್ಜ್‌ಗಳಲ್ಲಿ ದೋಷವಿದ್ದರೆ ತಕ್ಷಣ ನಮ್ಮ ಇಲಾಖೆಯ ಅಧಿಕಾರಿಗಳಿಗೆ, 'ಅವುಗಳು ಸರಿ ಇವೆಯೇ ಇಲ್ಲವೇ ಎನ್ನುವುದನ್ನು ಪರೀಕ್ಷೆ ಮಾಡಿ' ಎಂದು ಸೂಚನೆ ಕೊಡುತ್ತೇನೆ.

**ಶ್ರೀ ಆರ್.ಧರ್ಮಸೇನ:-** ಸನ್ಮಾನ್ಯ ಸಭಾಪತಿಯವರೇ, ಈಗ ಇರುವಂತಹ ಹಳೆಯ ವೇಬ್ರಿಡ್ಜ್‌ಗಳ ಬಗ್ಗೆ ರೈತರಿಗೆ ನಂಬಿಕೆ ಇಲ್ಲ.

**ಶ್ರೀ ಕೃಷ್ಣ ಭೈರೇಗೌಡ:-** ಸನ್ಮಾನ್ಯ ಸಭಾಪತಿಯವರೇ, ಈಗ ಇರುವಂತಹ ವೇಬ್ರಿಡ್ಜ್‌ಗಳ ಬಗ್ಗೆ ರೈತರಿಗೆ ನಂಬಿಕೆ ಇಲ್ಲದಿದ್ದರೆ, ಅವುಗಳು ಸರಿಯಾಗಿವೆಯೇ ಇಲ್ಲವೇ ಎನ್ನುವುದರ ಬಗ್ಗೆ ಪರೀಕ್ಷೆ ಮಾಡಿಸಲಾಗುತ್ತದೆ. ಯಾವುದೋ ಒಂದು ನಿರ್ದಿಷ್ಟ ಮಾನದಂಡದ ಆಧಾರದ ಮೇಲೆ ಆ ವೇಬ್ರಿಡ್ಜ್‌ಗಳು ಸರಿ ಇವೆ ಅಥವಾ ಇಲ್ಲ ಎಂದು ಹೇಳಬೇಕಾಗುತ್ತದೆ. ಸಾರ್ವತ್ರಿಕವಾಗಿ ಸುಮ್ಮನೆ ಅವುಗಳು ಸರಿಯಿಲ್ಲವೆಂದು ಹೇಳುವುದಕ್ಕೆ ಬರುವುದಿಲ್ಲ. ತೂಕ ಮತ್ತು ಮಾಪನ ಇಲಾಖೆಯಲ್ಲಿ ಇದನ್ನು ಪರೀಕ್ಷೆ ಮಾಡುವುದಕ್ಕಾಗಿಯೇ ಕೆಲವೊಂದು ಪ್ರಕ್ರಿಯೆಗಳನ್ನು ನಡೆಸಲಾಗುತ್ತದೆ. ಆ ಇಲಾಖೆಯ ಅಧಿಕಾರಿಗಳು ಮತ್ತು ನಮ್ಮ ಇಲಾಖೆಯ ಅಧಿಕಾರಿಗಳು ಜೊತೆಯಾಗಿ ಹೋಗಿ ಆ ವೇಬ್ರಿಡ್ಜ್‌ಗಳಲ್ಲಿ ಏನಾದರೂ ನ್ಯೂನ್ಯತೆಗಳು ಇವೆಯೇ ಎನ್ನುವುದನ್ನು ಪರೀಕ್ಷೆ ಮಾಡುತ್ತಾರೆ. ಎ.ಪಿ.ಎಂ.ಸಿ. ಪ್ರಾಂಗಣದ ಒಳಗಡೆ ಸುಮಾರು 89 ವೇಬ್ರಿಡ್ಜ್‌ಗಳಿವೆ ಅವುಗಳ ಬಗ್ಗೆ ನಮಗೆ ಇಲ್ಲಿಯವರೆಗೆ ಯಾವುದೇ ದೂರುಗಳು ಬಂದಿಲ್ಲ. ರೈತರ ಪರವಾಗಿ ಮಾನ್ಯ ಸದಸ್ಯರು ಆ ವೇಬ್ರಿಡ್ಜ್‌ಗಳಲ್ಲಿ ನ್ಯೂನ್ಯತೆಗಳಿವೆ ಎಂದು ಹೇಳುತ್ತಿದ್ದಾರೆ. ಆ ರೀತಿಯಾಗಿ ಯಾವುದಾದರು ಲೋಪಗಳು ಇವೆಯೇ ಎನ್ನುವುದರ ಬಗ್ಗೆ ಪರೀಕ್ಷೆ ಮಾಡಿಸುತ್ತೇವೆ. ಒಂದು ವೇಳೆ ಲೋಪಗಳು ಕಂಡು ಬಂದರೆ ಅದನ್ನು ಸರಿಪಡಿಸಲಾಗುತ್ತದೆ. ಎ.ಪಿ.ಎಂ.ಪಿ.ಯಲ್ಲಿ ಚುನಾಯಿತ ಸಮಿತಿ ಇರುವಾಗ, ಈ ರೀತಿ ವೇಬ್ರಿಡ್ಜ್‌ಗಳಲ್ಲಿ ಲೋಪವುಂಟಾಗುವುದಕ್ಕೆ ಸಾಧ್ಯವಿಲ್ಲ. ಆದರೂ ಸಹ ಮಾನ್ಯ ಸದಸ್ಯರು ಉಲ್ಲೇಖ ಮಾಡುತ್ತಿರುವುದರಿಂದ ನಾವು ಅದರ ಬಗ್ಗೆ ಪರೀಕ್ಷೆ ಮಾಡಿಸುತ್ತೇವೆ.

ಸನ್ಮಾನ್ಯ ಸಭಾಪತಿಯವರೇ, ಉಳಿದಿರುವ 72 ಕೃಷಿ ಉತ್ಪನ್ನ ಮಾರುಕಟ್ಟೆಗಳಲ್ಲಿಯೂ ಸಹ ಸರ್ಕಾರದ ವತಿಯಿಂದಲೇ ವೇಬ್ರಿಡ್ಜ್‌ಗಳನ್ನು ನಿರ್ಮಾಣ ಮಾಡಬೇಕೆನ್ನುವ ಒತ್ತಾಯವನ್ನು ಮಾನ್ಯ ಸದಸ್ಯರು ಮಾಡಿದ್ದಾರೆ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ವೇಬ್ರಿಡ್ಜ್‌ಗಳನ್ನು ಅಳವಡಿಸಿಕೊಳ್ಳುವುದಕ್ಕೆ ಎರಡು ರೀತಿಯ ಅವಕಾಶಗಳಿವೆ. ಒಂದು ಎ.ಪಿ.ಎಂ.ಸಿ.ಗಳಿಗೆ ಬರುತ್ತಿರುವ ಆದಾಯದ ಸಂಪನ್ಮೂಲಗಳಿಂದ ಅವರೇ ಸ್ವಂತ ವೇಬ್ರಿಡ್ಜ್‌ಗಳನ್ನು ಅಳವಡಿಸಿಕೊಳ್ಳಬಹುದಾಗಿದೆ. ಒಂದು ವೇಳೆ ಅವರಲ್ಲಿ ಲಭ್ಯವಿರುವ ಸಂಪನ್ಮೂಲ ಸಾಕಾಗುವುದಿಲ್ಲ ಎನ್ನುವುದಾದರೆ, ಖಾಸಗಿ ಸಹಭಾಗಿತ್ವದಲ್ಲಿ ವೇಬ್ರಿಡ್ಜ್‌ಗಳನ್ನು ಅಳವಡಿಕೆ ಮಾಡಿಕೊಳ್ಳುವ ಅವಕಾಶವನ್ನು ಅವರಿಗೆ ಮಾಡಿಕೊಟ್ಟಿದ್ದೇವೆ. ವೇಬ್ರಿಡ್ಜ್ ಅನ್ನು ಅಳವಡಿಸುವುದಕ್ಕೆ ಜಾಗವನ್ನು ಎ.ಪಿ.ಎಂ.ಸಿ.ಯವರು ಕೊಡುತ್ತಾರೆ. ಖಾಸಗಿಯವರು ಬಂದು ಅಲ್ಲಿ ವೇಬ್ರಿಡ್ಜ್ ಅನ್ನು ಸ್ಥಾಪನೆ ಮಾಡುತ್ತಾರೆ. ರಾಜ್ಯದಲ್ಲಿ ಆರು ಕಡೆಗಳಲ್ಲಿ ಈ ಮಾದರಿಯಲ್ಲಿ ವೇಬ್ರಿಡ್ಜ್‌ಗಳನ್ನು ಅಳವಡಿಸಲಾಗಿದೆ. ಈ ಎರಡು ರೀತಿಗಳಲ್ಲಿ ವೇಬ್ರಿಡ್ಜ್‌ಗಳನ್ನು ಅಳವಡಿಕೆ ಮಾಡಿಕೊಳ್ಳುವ ಅವಕಾಶ ಎ.ಪಿ.ಎಂ.ಸಿ.ಯವರಿಗೆ ಇರುವುದರಿಂದ ಯಾವ ರೀತಿಯನ್ನು ಅನುಸರಿಸಿ ವೇಬ್ರಿಡ್ಜ್‌ಗಳನ್ನು ಅಳವಡಿಸಿಕೊಳ್ಳಬೇಕು ಎನ್ನುವ ತೀರ್ಮಾನವನ್ನು ಎ.ಪಿ.ಎಂ.ಸಿ. ಚುನಾಯಿತ ಸಮಿತಿಯೇ ತೆಗೆದುಕೊಳ್ಳುತ್ತದೆ. ಮಾನ್ಯ ಸದಸ್ಯರು ಮಾರುಕಟ್ಟೆ ಸಮಿತಿಯವರಿಗೆ ಈ ಬಗ್ಗೆ ಸೂಚನೆಯನ್ನು ನೀಡಿದರೆ, ಖಾಸಗಿ ಸಹಭಾಗಿತ್ವದಲ್ಲಿ ಯಾರಾದರೂ ವೇಬ್ರಿಡ್ಜ್‌ಗಳನ್ನು ಅಳವಡಿಸಿಕೊಡುವುದಕ್ಕೆ ತಯಾರಿದ್ದರೆ ಅವರೊಂದಿಗೆ ಸಂಪರ್ಕವನ್ನು ಏರ್ಪಡಿಸುವಂತಹ ಕೆಲಸವನ್ನು ನಾವು ಮಾಡುತ್ತೇವೆ.

**ಶ್ರೀ ಆರ್.ಧರ್ಮಸೇನ:-** ಸನ್ಮಾನ್ಯ ಸಭಾಪತಿಯವರೇ, ಕಳೆದ ಬೆಳಗಾವಿ ಅಧಿವೇಶನದಲ್ಲಿ ಹಾಪ್‌ಕಾಮ್ಸ್ ಬಗ್ಗೆ ಮಾನ್ಯ ಸಚಿವರಲ್ಲಿ ಮನವಿ ಮಾಡಿಕೊಂಡಾಗ ಅವರು ಆ ಕೆಲಸವನ್ನು ಮಾಡಿಕೊಟ್ಟಿದ್ದಾರೆ. ಅದೇ ರೀತಿಯಲ್ಲಿ ಈ ಕೆಲಸವನ್ನು ಮಾಡಿಕೊಡಿ ಎಂದು ನಾನು ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

**ಸಭಾಪತಿಯವರು:-** ಶ್ರೀ ರಮೇಶ್‌ಬಾಬುರವರು ಕೇಳಿರುವ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:2893ಕ್ಕೆ ಮಾನ್ಯ ಇಂಧನ ಸಚಿವರು ಕಾಲಾವಕಾಶವನ್ನು ಕೇಳಿದ್ದಾರೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ರಮೇಶ್‌ಬಾಬುರವರ ನಾಲ್ಕು ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಇಲ್ಲಿಯವರೆಗೆ ಒಂದಕ್ಕೂ ಉತ್ತರ ಬಂದಿಲ್ಲ.

**ಸಭಾಪತಿಯವರು:-** ಮಾನ್ಯ ರಮೇಶ್‌ಬಾಬುರವರು ಕೇಳಿರುವ ಎಲ್ಲ ಪ್ರಶ್ನೆಗಳಿಗೂ ಉತ್ತರ ಕೊಡಲು ಸರ್ಕಾರ ಕಾಲಾವಕಾಶವನ್ನು ಕೇಳಿದೆ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಸನ್ಮಾನ್ಯ ಸಭಾಪತಿಯವರೇ, ಸತತವಾಗಿ ನಾಲ್ಕು ದಿನಗಳಿಂದ ಮಾನ್ಯ ರಮೇಶ್‌ಬಾಬುರವರ ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಕಾಲಾವಕಾಶವನ್ನು ಕೇಳಲಾಗಿದೆ. ಅವರ ನಾಲ್ಕು ಪ್ರಶ್ನೆಗಳಿಗೂ ಉತ್ತರ ಬಂದಿಲ್ಲ.

**ಸಭಾಪತಿಯವರು:-** ಶ್ರೀಯುತರುಗಳಾದ ಕೆ.ಟಿ.ಶ್ರೀಕಂಠೇಗೌಡರು ಮತ್ತು ಟಿ.ಎ.ಶರವಣ ಅವರುಗಳ ಪ್ರಶ್ನೆಗಳಿಗೆ ಉತ್ತರ ಬಂದಿದೆ. ಆದರೆ, ಮಾನ್ಯ ರಮೇಶ್‌ಬಾಬುರವರ ಪ್ರಶ್ನೆಗಳಿಗೆ ಮಾತ್ರ ಉತ್ತರ ಬಂದಿಲ್ಲ.

**ಶ್ರೀ ಐವನ್ ಡಿ'ಸೋಜಾ:-** ಸನ್ಮಾನ್ಯ ಸಭಾಪತಿಯವರೇ, ಉತ್ತರ ಕೊಡುವುದಕ್ಕೆ ಸಾಧ್ಯವಾಗದೇ ಇರುವಷ್ಟು ಕ್ಲಿಷ್ಟಕರವಾದ ಪ್ರಶ್ನೆಗಳನ್ನು ಮಾನ್ಯ ರಮೇಶ್‌ಬಾಬುರವರು ಕೇಳುತ್ತಿರಬಹುದು. ಅದಕ್ಕಾಗಿಯೇ ಅವರ ನಾಲ್ಕು ಪ್ರಶ್ನೆಗಳಿಗೂ ಇಲ್ಲಿಯವರೆಗೆ ಕಾಲಾವಕಾಶವನ್ನು ಕೇಳಲಾಗಿದೆ.

**ಶ್ರೀ ರಮೇಶ್ ಬಾಬು:-** ಸನ್ಮಾನ್ಯ ಸಭಾಪತಿಯವರೇ, ಕಳೆದ 5 ದಿನಗಳಿಂದ ನಾನು ಕೇಳಿರುವ ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸರ್ಕಾರದಿಂದ ಉತ್ತರ ಬಂದಿಲ್ಲ.

**ಸಭಾಪತಿಯವರು:-** ಮಾನ್ಯ ರಮೇಶ್ ಬಾಬುರವರೇ ತಮ್ಮ ಪ್ರಶ್ನೆಗಳಿಗೆ ಮುಂದಿನ ವಾರ ಮಾನ್ಯ ಸಚಿವರು ಉತ್ತರವನ್ನು ನೀಡುತ್ತಾರೆ.

ಶ್ರೀಮತಿ ತಾರಾಅನೂರಾಧ ಮತ್ತು ಕ್ಯಾಪ್ಟನ್ ಗಣೇಶ್ ಕಾರ್ಣಿಕ್‌ರವರು ಕೇಳಿರುವ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 300(2922+2847)ಕ್ಕೆ ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು ಕಾಲಾವಕಾಶವನ್ನು ಕೇಳಿದ್ದಾರೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಸನ್ಮಾನ್ಯ ಸಭಾಪತಿಯವರೇ, ಇಡೀ ದೇಶದಲ್ಲಿ ಗೋಹತ್ಯೆ ನಿಷೇಧದ ಬಗ್ಗೆ ಚರ್ಚೆ ನಡೆಯುತ್ತಿರುವ "ಹಿನ್ನೆಲೆಯಲ್ಲಿ ಈ ಪ್ರಶ್ನೆಯನ್ನು ಕೇಳಲಾಗಿದೆ. ಗೋಹತ್ಯೆಯ ಬಗ್ಗೆ ಈ ಸರ್ಕಾರದ ನಿಲುವೇನು; ಗೋವುಗಳನ್ನು ಕಸಾಯಿಖಾನೆಗಳಿಗೆ ಕಳುಹಿಸಿಕೊಡಲಾಗುತ್ತಿದೆ ಅದರ ಬಗ್ಗೆ ಸರ್ಕಾರ ಯಾವ ಕ್ರಮವನ್ನು ತೆಗೆದುಕೊಂಡಿದೆ ಎನ್ನುವುದರ ಬಗ್ಗೆ ಸ್ಪಷ್ಟತೆಯನ್ನು ನೀಡುವುದಕ್ಕೆ ಸರ್ಕಾರಕ್ಕೆ ಕಾಲಾವಕಾಶದ ಅಗತ್ಯತೆ ಇದೆಯೇ ಎನ್ನುವುದು ನನ್ನ ಪ್ರಶ್ನೆಯಾಗಿದೆ. ರಾಷ್ಟ್ರಪಿತ ಮಹಾತ್ಮಗಾಂಧಿಯವರು ಮತ್ತು ಸಂವಿಧಾನ ಶಿಲ್ಪಿ ಡಾ:ಬಿ.ಆರ್.ಅಂಬೇಡ್ಕರ್‌ರವರು ಬಹಳ ಸ್ಪಷ್ಟವಾಗಿ ಗೋಹತ್ಯೆ ನಿಷೇಧ ಮಾಡಬೇಕೆಂದು ಹೇಳಿದ್ದರು. ಸ್ವಾತಂತ್ರ್ಯಪೂರ್ವದಲ್ಲಿ ಮಹಾತ್ಮಗಾಂಧಿಯವರು 'ದೇಶಕ್ಕೆ ಸ್ವಾತಂತ್ರ್ಯ ಬಂದ ಕೂಡಲೇ ಮೊದಲು ಗೋಹತ್ಯೆ ನಿಷೇಧವನ್ನು ಜಾರಿಗೆ ತರುತ್ತೇವೆ' ಎಂದು ಹೇಳಿದ್ದರು. ಅಂತಹ ಮಹಾನ್ ವ್ಯಕ್ತಿಗಳಿಗೆ ಅಪಮಾನ ಮಾಡುವ ರೀತಿಯಲ್ಲಿ ಇವರುಗಳು ನಡೆದುಕೊಂಡರೆ ನಾವು ಪ್ರಶ್ನೆಗಳನ್ನು ಏತಕ್ಕೋಸ್ಕರ ಕೇಳಬೇಕು? ಮಾನ್ಯ ಸದಸ್ಯರು ಬಹಳ ಸ್ಪಷ್ಟವಾಗಿ, 'ಗೋಹತ್ಯೆ ನಿಷೇಧಕ್ಕೆ ಇರುವ ಮಾನದಂಡಗಳೇನು' ಎನ್ನುವ ಪ್ರಶ್ನೆಯನ್ನು ಕೇಳಿದ್ದಾರೆ. ಇದರ ಬಗ್ಗೆ ಕೋರ್ಟ್‌ಗಳು

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಗೋಹತ್ಯೆ ನಿಷೇಧ ಮಾಡುವುದು ಅಗತ್ಯವಿದೆ. ಆ ಕೆಲಸವನ್ನು ರಾಜ್ಯ ಸರ್ಕಾರಗಳು ಮಾಡಬೇಕಾಗಿದೆ ಎಂದು ಹೇಳಿದ್ದರೂ ಸಹ ಈ ಸರ್ಕಾರದವರು ಉತ್ತರ ಕೊಡದೇ ನುಣುಚಿಕೊಳ್ಳುವ ರೀತಿಯಲ್ಲಿ ಕಾಲಾವಕಾಶವನ್ನು ಕೇಳಿರುವುದನ್ನು ನೋಡಿದರೆ ಇವರು ಈ ದೇಶದ ಧರ್ಮಕ್ಕೆ ಮಾತ್ರವಲ್ಲ ಜನರಿಗೆ, ಮಹಾತ್ಮಗಾಂಧಿಯವರಿಗೆ ಮತ್ತು ಡಾಃಬಿ.ಆರ್.ಅಂಬೇಡ್ಕರ್‌ರವರಿಗೆ ಮಾಡುತ್ತಿರುವ ಅಪಮಾನವೆಂದು ನಾನು ಭಾವಿಸುತ್ತೇನೆ. ಕಾಲಾವಕಾಶವನ್ನು ಕೇಳುವ ಮೂಲಕ ಉತ್ತರ ನೀಡುವುದರಿಂದ ನುಣುಚಿಕೊಂಡು ಹೋಗುವಂತಹ ಮನೋಭಾವ ಸರಿಯಾದುದಲ್ಲ. ಈ ಪ್ರಶ್ನೆಗೆ ಯಾವಾಗ ಉತ್ತರ ನೀಡಲಾಗುತ್ತದೆಂದು ನಾನು ಮಾನ್ಯ ಸಭಾನಾಯಕರಲ್ಲಿ ಕೇಳುತ್ತಿದ್ದೇನೆ.

**ಸಭಾಪತಿಯವರುಃ–** ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು ಈಗ ಸದನಕ್ಕೆ ಬಂದಿದ್ದಾರೆ. ಮಾನ್ಯ ಸಚಿವರೇ, ಶ್ರೀಮತಿ ತಾರಾ ಅನೂರಾಧ ಮತ್ತು ಕ್ಯಾಪ್ಟನ್ ಗಣೇಶ್ ಕಾರ್ಣಿಕ್‌ರವರು ಕೇಳಿರುವ ಪ್ರಶ್ನೆಗೆ ಯಾವಾಗ ಉತ್ತರ ನೀಡಲಾಗುತ್ತದೆಂದು ಮಾನ್ಯ ವಿರೋಧ ಪಕ್ಷದ ನಾಯಕರು ಕೇಳುತ್ತಿದ್ದಾರೆ.

(ಮುಂದುವರಿದಿದೆ)

(681)13–06–2017 1–00 ಟಿಸಿಹೆಚ್–ಎಂಡಿ

**(ಸಭಾಪತಿಯವರ ಉಪಸ್ಥಿತಿ)**

**ಸಭಾಪತಿಯವರು(ಮುಂದು):–** ಈ ಪ್ರಶ್ನೆಗೆ ತಾವು ಉತ್ತರ ಕೊಡಲು ಕಾಲಾವಕಾಶವನ್ನು ಕೇಳಿದ್ದೀರಿ. ಉತ್ತರವನ್ನು ಯಾವಾಗ ಕೊಡುತ್ತೀರಿ ಎಂದು ಕೇಳುತ್ತಿದ್ದಾರೆ.

**ಶ್ರೀ ಎ.ಮಂಜು, (ಪಶುಸಂಗೋಪನೆ ಮತ್ತು ಪಶು ವೈದ್ಯಕೀಯ ಹಾಗೂ ರೇಷ್ಮೆ ಸಚಿವರು):–** ಮಾನ್ಯ ಸಭಾಪತಿಯವರೆ, ಕಾಲಾವಕಾಶವೆಂದರೆ, ಗೋಹತ್ಯೆ ನಿಷೇದಕ್ಕೆ ಈಗಾಗಲೇ ನಮ್ಮ ಮುಖ್ಯಮಂತ್ರಿಯವರು ಇದು ಇರತಕ್ಕಂಥದ್ದಕ್ಕೆ . ..

**ಶ್ರೀ ಕೆ.ಎಸ್.ಈಶ್ವರಪ್ಪ, ವಿರೋಧ ಪಕ್ಷದ ನಾಯಕರು:–** ಮಾನ್ಯ ಸಭಾಪತಿಯವರೆ, ಈ ಪ್ರಶ್ನೆಗೆ ಉತ್ತರ ಕೊಡುತ್ತೀರಾ ಮಾನ್ಯ ಸಚಿವರೆ?

**ಶ್ರೀ ಎ.ಮಂಜು, (ಪಶುಸಂಗೋಪನೆ ಮತ್ತು ಪಶು ವೈದ್ಯಕೀಯ ಹಾಗೂ ರೇಷ್ಮೆ ಸಚಿವರು):–**ಮಾನ್ಯ ಸಭಾಪತಿಯವರೆ, ಆ ಪ್ರಶ್ನೆಗೆ ಸಮಯಾವಕಾಶ ಕೇಳಿದ್ದೇವೆ.

**ಶ್ರೀ ಕೆ.ಎಸ್.ಈಶ್ವರಪ್ಪ, ವಿರೋಧ ಪಕ್ಷದ ನಾಯಕರು:–** ಮಾನ್ಯ ಸಭಾಪತಿಯವರೆ, ಅದಕ್ಕೆ ಯಾವಾಗ ಉತ್ತರವನ್ನು ಕೊಡುತ್ತೀರಿ?

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಎ.ಮಂಜು, (ಪಶುಸಂಗೋಪನೆ ಮತ್ತು ಪಶು ವೈದ್ಯಕೀಯ ಹಾಗೂ ರೇಷ್ಮೆ ಸಚಿವರು):-**ಮಾನ್ಯ ಸಭಾಪತಿಯವರೆ, ಎರಡು ವಾರದಲ್ಲಿ ಉತ್ತರ ಕೊಡಲಾಗುವುದು ಎಂದು ಕೇಳಿಕೊಂಡಿದ್ದೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ, ವಿರೋಧ ಪಕ್ಷದ ನಾಯಕರು:-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಉತ್ತರ ಕೊಡಲು ಆಗ ಈ ಸದನವೇ ಇರುವುದಿಲ್ಲ. ಇದಕ್ಕೆ ಸಮಯ ಏತಕ್ಕೆ ಬೇಕು ಹೇಳಿ ನೋಡೋಣ. ಗೋಹತ್ಯೆ ನಿಷೇಧ ಮಾಡಬೇಕು ಎನ್ನುವಂತಹ ಅಂಶದಲ್ಲಿ ಕೋರ್ಟ್ ಸ್ಪಷ್ಟವಾಗಿ ಹೇಳಿದೆ. ಆದುದರಿಂದ ಇದರಲ್ಲಿ ಸಮಯ ಕೇಳುವುದು ಏನಿದೆ.

**ಶ್ರೀ ಕೆ.ಎಸ್.ಈಶ್ವರಪ್ಪ, ವಿರೋಧ ಪಕ್ಷದ ನಾಯಕರು:-** ಮಾನ್ಯ ಸಭಾಪತಿಯವರೆ, ಈಗ. . .

**ಶ್ರೀ ಬಸವನಗೌಡ ಆರ್.ಪಾಟೀಲ್ (ಯತ್ನಾಳ್)(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಉದ್ದೇಶಪೂರ್ವಕವಾಗಿ ಗೋಹತ್ಯೆ ನಿಷೇಧವನ್ನು ವಿರೋಧ ಮಾಡುವ ಸಲುವಾಗಿ ಉತ್ತರವನ್ನು ಕೊಡುತ್ತಿಲ್ಲ. ಎರಡು ವಾರದ ನಂತರ ಉತ್ತರ ಕೊಡುತ್ತೇನೆ ಎಂದರೆ ಏನು ಅರ್ಥ? ಅವರೇನು ವಿಧಾನಸೌಧದ ಮುಂದೆ ಇರುವ ಮಾನ್ಯ ಕೆಂಗಲ್ ಹನುಮಂತಯ್ಯರವರ ಮುಂದೆ ಕೊಡುತ್ತಾರಾ ಅಥವಾ ಇನ್ಯಾರ ಮುಂದೆ ಕೊಡುತ್ತಾರೆ? ಈ ರೀತಿ ಈ ರಾಷ್ಟ್ರದ ಅತ್ಯಂತ ಮಹತ್ವವಾದಂತಹ ವಿಚಾರ ಗೋಹತ್ಯೆ ನಿಷೇಧ ಆಗಬೇಕೆಂದು ಡಾ॥ ಬಾಬಾ ಸಾಹೇಬ್ ಅಂಬೇಡ್ಕರ್‌ರವರು ಏನು ಕನಸು ಕಂಡಿದ್ದರು ಅದನ್ನು ಇವತ್ತಿನ ದಿವಸ ಕೇಂದ್ರ ಸರ್ಕಾರ ಜಾರಿಗೆ ತರುವುದಕ್ಕೆ ಹೊರಟಿದೆ, ಅದನ್ನು ಕರ್ನಾಟಕ ಸರ್ಕಾರ ಸಹ ಜಾರಿಗೆ ತರಬೇಕು. ಗೋಹತ್ಯೆ ನಿಷೇಧ ಆಗಬೇಕು. ಗೋ ರಕ್ಷಣೆಗಾಗಿ, ದೇಶೀಯ ತಳಿಯ ರಕ್ಷಣೆಗಾಗಿ ವಿಶೇಷವಾದಂತಹ ಪ್ಯಾಕೇಜ್ ಅಗತ್ಯವಿದೆ. ಎಷ್ಟೋ ಭಾಗ್ಯಗಳನ್ನು ಸರ್ಕಾರ ಕೊಟ್ಟಿದೆ. ಅದರಂತೆ ಅದಕ್ಕೆ ಗೋ ಭಾಗ್ಯವನ್ನು ಕೊಡಬೇಕೆಂದು ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ.

**ಸಭಾಪತಿಯವರು:-** ಅವರು ಸಮಯಾವಕಾಶವನ್ನು ಕೋರಿದ್ದಾರೆ. ಮಾನ್ಯ ಸಚಿವರೇ, ಉತ್ತರವನ್ನು ಮುಂದಿನ ವಾರ ಕೊಡುವುದಕ್ಕೆ ಆಗುತ್ತದೆಯೋ?

**ಶ್ರೀ ಎ.ಮಂಜು, (ಪಶುಸಂಗೋಪನೆ ಮತ್ತು ಪಶು ವೈದ್ಯಕೀಯ ಹಾಗೂ ರೇಷ್ಮೆ ಸಚಿವರು):-**ಮಾನ್ಯ ಸಭಾಪತಿಯವರೆ, ಒಂದು ನಿಮಿಷ. . .

**ಶ್ರೀ ಕೆ.ಎಸ್.ಈಶ್ವರಪ್ಪ, ವಿರೋಧ ಪಕ್ಷದ ನಾಯಕರು:-** ಮಾನ್ಯ ಸಭಾಪತಿಯವರೆ, ಇಲ್ಲ, ಇಲ್ಲ, ನಾನು ಹೇಳುವುದು ಬೇರೆ. ಅನಧಿಕೃತವಾಗಿ ಕಸಾಯಿ ಖಾನೆಗೆ ತೆಗೆದುಕೊಂಡು ಹೋಗುತ್ತಿದ್ದಾರೆ. ಇದರಲ್ಲಿ ಸಮಯ ಕೇಳುವುದೇನಿದೆ.

**ಶ್ರೀ ಹೆಚ್.ಎಂ.ರೇವಣ್ಣ:-** ಮಾನ್ಯ ಸಭಾಪತಿಯವರೆ,...

(ಗೊಂದಲ)

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಸಭಾಪತಿಯವರು:-** ಮಾನ್ಯ ರೇವಣ್ಣರವರೆ, you are not the Government ಮಾನ್ಯ ಸಚಿವರು ನಿಂತಿದ್ದಾರೆ. ನಿಮಗೆ ಅವರು authorize ಮಾಡಿದರೆ, ತಾವು ಉತ್ತರ ಕೊಡಬಹುದು. ಉತ್ತರ ಕೊಡಬೇಡಿ. ಸಚಿವರು ಉತ್ತರ ಕೊಡುತ್ತಿದ್ದಾರೆ. He is capable. ತಾವು ಮಾತನಾಡುವುದಕ್ಕೆ ಬರುವುದಿಲ್ಲ. You are not the Government. Please sit down. ತಾವು ಈಗ ಕುಳಿತುಕೊಳ್ಳಿ. ಸಚಿವರು ಉತ್ತರ ಕೊಡುತ್ತಾರೆ. You are not the Government.

(ಗೊಂದಲ)

**ಸಭಾಪತಿಯವರು:-** ನಿಂತಿರುವ ಸದಸ್ಯರೆಲ್ಲರೂ ಒಂದು ನಿಮಿಷ ಕುಳಿತುಕೊಳ್ಳಿ. ತಾವು ಮಾತನಾಡಿದ್ದು ಸಾಕು ಕುಳಿತುಕೊಳ್ಳಿ. ಮಾನ್ಯ ಮಲ್ಕಾಪೂರೆಯವರೆ, ತಾವು ದಯಮಾಡಿ ಕುಳಿತುಕೊಳ್ಳಿ. ನೋಡಿ ಇಲ್ಲಿ ನಾನು ಸಭಾ ನಾಯಕರನ್ನು ಕೇಳುತ್ತಿದ್ದೇನೆ. ಸರ್ಕಾರದ ಪರವಾಗಿ ತಮ್ಮ ಪಕ್ಷದ ಸದಸ್ಯರು ಯಾರಾದರೂ ಉತ್ತರ ಕೊಡುವುದಕ್ಕೆ ಅವರು ಜವಾಬ್ದಾರಿ ಕೊಟ್ಟಿದ್ದರೆ, ತಾವು ನನಗೆ ತಿಳಿಸಬೇಕು. They cannot answer for the questions. ಏನಿದ್ದರೂ ಸಚಿವರು ಉತ್ತರ ಕೊಡಬಹುದು. ಪರಸ್ಪರ ಬೇರೆ ಬೇರೆ ಸಚಿವರು ಅವರ ಜವಾಬ್ದಾರಿ ಕೊಟ್ಟು ಉತ್ತರ ಕೊಡಬಹುದು.

(ಗೊಂದಲ)

**ಶ್ರೀ ಹೆಚ್.ಎಂ.ರೇವಣ್ಣ:-** ನಾವು ಉತ್ತರ ಕೊಡುವುದಕ್ಕೆ ನಿಂತಿರಲಿಲ್ಲ.

**ಸಭಾಪತಿಯವರು:-** ನೀವು ಉತ್ತರ ಕೊಡುವುದಕ್ಕೆ ಬರುವುದಿಲ್ಲ. Nothing will go on record. ಅವರು ಹೇಳುವುದು ರೆಕಾರ್ಡ್‌ಗೆ ಹೋಗುವುದಿಲ್ಲ.

(ಗೊಂದಲ)

**ಶ್ರೀ ಕೆ.ಎಸ್.ಈಶ್ವರಪ್ಪ:-** ಇಲ್ಲಿ ನೀವು ಗೂಂಡಾಗಿರಿ ಮಾಡುವುದಕ್ಕೆ ಆಗುವುದಿಲ್ಲ. ನಿಮಗೆ ಸಚಿವರು ಉತ್ತರ ಕೊಡಲಿ. ನೀವು ಇಲ್ಲಿಗೆ ಗೂಂಡಾಗಿರಿ ಮಾಡುವುದಕ್ಕೆ ಬಂದಿದ್ದೀರಾ? ಇಲ್ಲಿ ಗೂಂಡಾಗಿರಿಗೆ ಅವಕಾಶವಿಲ್ಲ. ಉತ್ತರ ಕೊಡುವುದಕ್ಕೆ ಸಚಿವರು ಇದ್ದಾರೆ. ಅವರು ಕೊಡಲಿ, ಇವರಿಗೇನು ಕೆಲಸ.

**ಸಭಾಪತಿಯವರು:-** ಆಡಳಿತ ಪಕ್ಷಕ್ಕೆ ಅವರೇ ನಾಯಕರೆಂದು ಒಪ್ಪಿಕೊಳ್ಳುತ್ತಿದ್ದಾರೆ.

**ಶ್ರೀ ರಘುನಾಥ್‌ರಾವ್ ಮಲ್ಕಾಪೂರೆ:-** ಮಾನ್ಯ ಮಂತ್ರಿಗಳು ಉದ್ದೇಶಪೂರ್ವಕವಾಗಿ ಉತ್ತರವನ್ನು ಕೊಡದೇ ಇರುವುದು ಈ ಸರ್ಕಾರದ ದ್ವಂಧ್ವ ನೀತಿ. ಇದು ಸರಿಯಲ್ಲ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಸಭಾಪತಿಯವರು:-** ತಾವು ಮಾತನಾಡುವುದು ಬೇಡ. ತಾವು ದಯವಿಟ್ಟು ಕುಳಿತುಕೊಳ್ಳಿ. Please sit down. ಅವರನ್ನು ಕೂರಿಸುತ್ತೇನೆ, ತಾವು ಕುಳಿತುಕೊಳ್ಳಿ. You cannot take the House to your own... No, no I will not tolerate this. Please sit down.

(ಗೊಂದಲ)

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ವಿರೋಧ ಪಕ್ಷ ಸರ್ಕಾರವನ್ನು ಕೇಳುವುದಕ್ಕೇ ಇರುವುದು. ಉತ್ತರ ಕೊಡುವುದಕ್ಕೆ ಇವರಿಗೆ ಅಧಿಕಾರವಿಲ್ಲ. ಮಾನ್ಯ ಸಚಿವರು ಇದ್ದಾರೆ. ವಿರೋಧ ಪಕ್ಷ ಇರುವುದು ಕೇಳುವುಕ್ಕೇನೆ. ಮಾನ್ಯ ಸಚಿವರು ಉತ್ತರ ಕೊಡಲಿ, ಇವರೇನು ಮಾನ್ಯ ಸಚಿವರೇ?

**ಸಭಾಪತಿಯವರು:-** ಅವರು ಜವಾಬ್ದಾರಿಯನ್ನು ಕೊಟ್ಟರೆ ಉತ್ತರ ಕೊಡಲಿ.

(ಗೊಂದಲ)

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ವಿರೋಧ ಪಕ್ಷ ಇರುವುದೇ ಪ್ರಶ್ನೆ ಕೇಳುವುದಕ್ಕೆ.

**Mr.CHAIRMAN:-** I know how to handle the situation. ಮಾನ್ಯ ಸಭಾ ನಾಯಕರು ಮಾತನಾಡಲು ಎದ್ದು ನಿಂತಿದ್ದಾರೆ. ಸಭಾ ನಾಯಕರು ಮಾತನಾಡುವಾಗ ಸದಸ್ಯರೆಲ್ಲರೂ ಕುಳಿತುಕೊಳ್ಳಬೇಕು.

**ಡಾ॥ ಜಿ.ಪರಮೇಶ್ವರ, (ಸಭಾ ನಾಯಕರು):-** ಮಾನ್ಯ ಸಭಾಪತಿಯವರೆ, ಸದನದಲ್ಲಿ ಗೌರವಾನ್ವಿತ ಸದಸ್ಯರುಗಳು ಪ್ರಶ್ನೆ ಕೇಳುವುದು ಅವರ ಹಕ್ಕು ಆಗಿರುತ್ತದೆ. ಅದನ್ನು ಅವರು ಕೇಳಿದ್ದಾರೆ. ಸರ್ಕಾರದಿಂದ ಅದಕ್ಕೆ ಸಂಬಂಧಪಟ್ಟ ಸಚಿವರು ಉತ್ತರವನ್ನು ಒದಗಿಸುತ್ತಾರೆ. ಆದರೆ, ಒಂದೊಂದು ಬಾರಿ ಅನೇಕ ಕಾರಣಗಳಿಂದ ಮಾಹಿತಿ ಸಂಗ್ರಹಣೆ ಮಾಡಬೇಕು. ಅಥವಾ ಇನ್ನೂ ಕೆಲವು ಕಾರಣಗಳಿಂದ ನಮಗೆ ಸಮಯ ಕೊಡಿ ಎಂದು ಮಾನ್ಯ ಸಚಿವರು ಕೇಳುತ್ತಾರೆ. ಅದಕ್ಕೆ ತಾವು ಸಮಯವನ್ನು ಕೊಡುತ್ತೀರಿ. ಇದು ನಡೆದುಕೊಂಡು ಬಂದಿರುವಂಥದ್ದು. ಆದರೆ, ನೀವು ಹೀಗೆ ಉತ್ತರ ಕೊಡಬೇಕು. ಈಗಲೇ ಉತ್ತರವನ್ನು ಕೊಡಬೇಕು, ಈ ರೀತಿಯೇ ಉತ್ತರ ಕೊಡಬೇಕು ಎನ್ನುವುದು ಸರಿ ಕಾಣಿಸುವುದಿಲ್ಲ. ಸರ್ಕಾರ, ಮಾನ್ಯ ಸಚಿವರು ಸಮರ್ಥರಿದ್ದಾರೆ. ಅವರು ಅವರದ್ದೇ ಕಾರಣದಿಂದ ಅವರು ನನಗೆ ಕಾಲಾವಕಾಶವನ್ನು ಮಾಡಿಕೊಡಿ ಎಂದು ಕೇಳಿದ್ದಾರೆ. ತಾವು ಕೊಟ್ಟಿದ್ದೀರಿ. ಹಾಗಾಗಿ, ಸಮಯ ತೆಗೆದುಕೊಂಡು ಅವರು ಕೊಡುತ್ತಾರೆ. ಅವರು ಎರಡು ವಾರವೆಂದು ಹೇಳಿದ್ದಾರೆ. ಎರಡು ವಾರ ಬೇಡ, ಈ ಸದನ ಮುಗಿಯುವುದರೊಳಗಾಗಿ ಉತ್ತರ ಕೊಡಿ ಎಂದು ತಾವು ಕೇಳಿ, ಅದು ತಪ್ಪಿಲ್ಲ. ಆದರೆ, ಎಲ್ಲರೂ ಈ ರೀತಿ ಒತ್ತಾಯ ಮಾಡಿ, ಅವರಿಗೆ ನೀವು ಈಗಲೇ ಹೇಳಬೇಕು, ಈ ರೀತಿಯೇ ಹೇಳಬೇಕು ಎನ್ನುವುದು ಸರಿ ಕಾಣುವುದಿಲ್ಲ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ,. ..

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಸಭಾನಾಯಕರು:-** ದಯವಿಟ್ಟು, ಮಾನ್ಯ ಈಶ್ವರಪ್ಪರವರೆ, ನಾನು ಮಾತನಾಡುತ್ತಿದ್ದೇನೆ. Let me complete. You cannot dictate terms. This is not a correct system.

**ಶ್ರೀ ಕೆ.ಎಸ್.ಈಶ್ವರಪ್ಪ:-** ಆಯಿತು, ತಾವು ಮಾತನಾಡಿ.

**ಡಾ॥ ಜಿ.ಪರಮೇಶ್ವರ:-** ನಾವು ಸರ್ಕಾರದಲ್ಲಿ ಜವಾಬ್ದಾರಿ ಸ್ಥಾನದಲ್ಲಿದ್ದೇವೆ. ಅದು ನಮಗೆ ಗೊತ್ತಿದೆ ಸರ್ಕಾರದಲ್ಲಿ ನೀವೆಲ್ಲಾ ಮಂತ್ರಿಗಳಾಗಿ ಇರಲಿಲ್ಲವೇ? ಆ ಸಂದರ್ಭದಲ್ಲಿ ನಿಮಗೆ ನಾವು ಉತ್ತರಗಳನ್ನು ಕೇಳಿದ್ದಾಗ, ನೀವು ಸಮಯವನ್ನು ಕೇಳುತ್ತಿರಲಿಲ್ಲವೇ? ಸರಿಯಾದ ರೀತಿಯಲ್ಲಿ ಸದನವನ್ನು ನಡೆಸಿಕೊಂಡು ಹೋಗುವುದಕ್ಕೆ ಅವಕಾಶ ಮಾಡಿಕೊಡಿ. ಏತಕ್ಕೆ ತಾವು ಈ ರೀತಿ ಮಾಡುತ್ತೀರಿ? ಅವರೇನು ಉತ್ತರವನ್ನು ಕೊಡುವುದಿಲ್ಲವೆಂದು ಹೇಳಿದರೇ? ನನಗೆ ಸಮಯಾವಕಾಶ ಕೊಡಿ ಎಂದು ಕೇಳಿದ್ದಾರೆ. ಅದಕ್ಕೆ ಸಮಯ ಕೊಡಿ. ಮಾನ್ಯ ಸಭಾಪತಿಗಳು ಸಮಯ ಕೊಟ್ಟಿದ್ದಾರೆ. ಅದಕ್ಕೆ ನಾವು ಸಹಕರಿಸದೇ ಈ ರೀತಿ ಮಾಡುವುದು ಸರಿ ಕಾಣಿಸುವುದಿಲ್ಲ. ಮಾನ್ಯ ಸಚಿವರೇ, ನೀವು ಸದನ ಮುಗಿಯುವುದರೊಳಗಾಗಿ ಉತ್ತರವನ್ನು ಕೊಡುತ್ತೇವೆಂದು ಹೇಳಿ. ನಾವು ಸದನಕ್ಕೆ ಗೌರವ ಕೊಟ್ಟು, ಸದನ ಮುಗಿಯುವುದರೊಳಗಾಗಿ ಉತ್ತರವನ್ನು ಒದಗಿಸುತ್ತೇವೆ.

**ಶ್ರೀ ಬಸವರಾಜ ಹೊರಟ್ಟಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಒಂದು ನಿಮಿಷ, ಮಾನ್ಯ ಸಭಾ ನಾಯಕರೆ, ಪ್ರಶ್ನೆ ಎಲ್ಲಿ ಬಂತು. ಸದನ ಮುಗಿಯುವುದರೊಳಗೆ ಉತ್ತರ ಕೊಡುತ್ತೇವೆ ಎನ್ನುವುದು ಬೇರೆ. ಆದರೆ ಎರಡು ವಾರಗಳು ಕಾಲಾವಕಾಶ ಕೋರಿದ್ದಾರೆ ಎಂದರೆ, ಎರಡು-ಮೂರು ವಾರ ಸಮಯಾವಕಾಶ ಕೋರಿದರೆ, ಅಲ್ಲಿಯವರೆಗೂ ಈ ಸದನ ನಡೆಯುವುದಿಲ್ಲ. ಸರ್ಕಾರ ಅದರ ಬಗ್ಗೆ ಸರಿಯಾದ ಕಾಳಜಿ ವಹಿಸುವುದಿಲ್ಲವೆನ್ನುವಂತಹ ಪ್ರಶ್ನೆ ಇಲ್ಲಿ ಉದ್ಭವವಾಗುತ್ತದೆ. ಆ ಹಿನ್ನೆಲೆಯಲ್ಲಿ, ಮಾನ್ಯ ವಿರೋಧ ಪಕ್ಷದ ನಾಯಕರೇ ನಿಮ್ಮನ್ನು ಕೇಳಿದರು. ನಾನೇನು ಹೇಳುತ್ತಿದ್ದೇನೆಂದರೆ, ಈಗ ಅವರು ಪ್ರಶ್ನೆ ಕೇಳಿದಾಗ ಅವರು ಕೇಳುತ್ತಾರೆ. ನೀವೇನು ದಿನಾಂಕ ಕೊಡುತ್ತೀರೋ ಆ ದಿನಾಂಕಕ್ಕೆ ಕೇಳುತ್ತಾರೆ. ಸರ್ಕಾರದ ಕೆಲಸವೇನೆಂದರೆ, ಕಷ್ಟಪಟ್ಟು ಅಥವಾ ಏನಾದರೂ ಮಾಡಿ ಅದಕ್ಕೆ ಉತ್ತರ ಕೊಡಬೇಕು. ಒಮ್ಮೊಮ್ಮೆ ಉತ್ತರ ಬರುವುದಿಲ್ಲ. ಆಯಿತು ನಾನು ಅದನ್ನು ಒಪ್ಪುತ್ತೇನೆ. ಆದರೆ ನಾವು ಸಚಿವರಾಗಿ ಕೆಲಸ ಮಾಡಿದ್ದೇವೆ, ಇವರು ಸಚಿವರಾಗಿ ಕೆಲಸ ಮಾಡಿದ್ದಾರೆ. ಆದರೂ ಉತ್ತರ ಬರುವುದಿಲ್ಲ. ಆದರೆ ಕೊನೆಪಕ್ಷ ಎರಡು ವಾರದೊಳಗೆ ಉತ್ತರ ಕೊಡುತ್ತೇನೆ ಎನ್ನುವುದರ ಬದಲು ಈ ಸದನ ಮುಗಿಯುವುದರೊಳಗೆ ಉತ್ತರ ಕೊಡುತ್ತೇನೆ ಎಂದರೆ ಈ ಪ್ರಶ್ನೆ ಉದ್ಭವವಾಗುತ್ತಿರಲಿಲ್ಲ. ಆದುದರಿಂದ ದಯಮಾಡಿ, ಸದನ ಮುಗಿಯುವುದರೊಳಗೆ ಉತ್ತರ ಕೊಟ್ಟರೆ ಈ ಪ್ರಶ್ನೆಗೆ ಉತ್ತರ ಒದಗಿಸಿದಂತಾಗುತ್ತದೆ.

**ಸಭಾಪತಿಯವರು:-** ಸಚಿವರು ಸದನದಲ್ಲಿ ಇದ್ದಾರೆ, ಆ ಬಗ್ಗೆ ಹೇಳುತ್ತಾರೆ.

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಎ.ಮಂಜು (ಪಶುಸಂಗೋಪನೆ ಮತ್ತು ಪಶು ವೈದ್ಯಕೀಯ ಹಾಗೂ ರೇಷೆ ಹಬ್ಮ ಸಚಿವರು):-** ಮಾನ್ಯ ಸಭಾಪತಿಯವರೆ, ಈಗ ಯಾರ್‍ಯಾರಿಗೆ ಲೈಸೆನ್ಸ್ ಇದೆ. ಯಾರ್‍ಯಾರಿಗೆ ಲೈಸೆನ್ಸ್ ಇಲ್ಲ ಎಂದು ಹೇಳಿ.

**ಸಭಾಪತಿಯವರು:-** ಮಾನ್ಯ ಸಚಿವರೇ, ಆ ಪ್ರಶ್ನೆಗೆ ಈಗ ಉತ್ತರ ಇಲ್ಲ. ಆಯಿತು. ಆ ಪ್ರಶ್ನೆಗೆ ಉತ್ತರವನ್ನು ಯಾವಾಗ ಕೊಡುತ್ತೀರಿ?

**ಶ್ರೀ ಎ.ಮಂಜು:-** ಮಾನ್ಯ ಸಭಾಪತಿಯವರೆ, ನಾನು ಈ ಸದನ ಮುಗಿಯುವುದರ ಒಳಗೆ ಉತ್ತರವನ್ನು ಕೊಡುತ್ತೇನೆ.

**<u>ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: (2086)</u>**

**(ಉತ್ತರ ಲಗತ್ತಿಸಿದೆ.)**

**ಶ್ರೀ ಈಶ್ವರ ಭೀಮಣ್ಣ ಖಂಡ್ರೆ:-** ಮಾನ್ಯ ಸಭಾಪತಿಯವರೆ, ಉತ್ತರವನ್ನು ಒದಗಿಸಲಾಗಿದೆ.

**ಶ್ರೀ ಆರ್.ಧರ್ಮಸೇನ:-** ಮಾನ್ಯ ಸಭಾಪತಿಯವರೆ, ಸರಿ.

**ಸಭಾಪತಿಯವರು:-** ಧನ್ಯವಾದಗಳು. ಈಗ ಸದನದಲ್ಲಿ ಉತ್ತರಿಸುವ ಪ್ರಶ್ನೆಗಳಿಗೆ ಕಾಲಾವಧಿ ಮುಗಿದಿದೆ.

**<u>ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು</u>**

**ಡಾ॥ ಜಿ.ಪರಮೇಶ್ವರ್ (ಸಭಾನಾಯಕರು):-** ಮಾನ್ಯ ಸಭಾಪತಿಯವರೆ, ದಿನಾಂಕ: 13ನೇ ಜೂನ್ 2017 ಸಮೂಹ-2ರ ಲಿಖಿತ ಮೂಲಕ ಉತ್ತರಿಸುವ ಒಟ್ಟು 102 ಪ್ರಶ್ನೆಗಳ ಪೈಕಿ, 83 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**(ಉತ್ತರಗಳನ್ನು ಲಗತ್ತಿಸಲಾಗಿದೆ.)**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**3. <u>ಸಭಾಪತಿಯವರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು</u>**

**ಅ) ವಿಷಯ:- ಉತ್ತರ ಕನ್ನಡ ಜಿಲ್ಲೆಯ ಕುಮಟಾ ತಾಲ್ಲೂಕಿನ ತಂಡ್ರಕುಳಿಯಲ್ಲಿ ಗುಡ್ಡ ಮನೆಯ ಮೇಲೆ ಕುಸಿದು ಮೂರು ಜನರು ಮೃತರಾಗಿರುವ ಕುರಿತು.**

****

**" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "**

**ಎಸ್.ಎಲ್.ಘೋಟ್ನೇಕರ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಉತ್ತರ ಕನ್ನಡ ಜಿಲ್ಲೆಯ ಕುಮಟಾ ತಾಲ್ಲೂಕಿನ ತಂಡ್ರಕುಳಿಯಲ್ಲಿ ಗುಡ್ಡ ಕುಸಿದು ಮನೆಯ ಮೇಲೆ ಬಿದ್ದಿರುವ ಪರಿಣಾಮ 3 ಮಕ್ಕಳು ಸ್ಥಳದಲ್ಲಿಯೇ ಸಾವನ್ನಪ್ಪಿದ್ದು ಹಾಗೂ 8 ಜನರು ಗಾಯಗೊಂಡಿರುವ ಹೃದಯ ವಿದ್ರಾವಕ ಘಟನೆ ದಿನಾಂಕ: 11.06.2017ರಂದು ರಾಷ್ಟ್ರೀಯ ಹೆದ್ದಾರಿಯಲ್ಲಿ ಜರುಗಿದೆ. ಕಳೆದ 2 ವರ್ಷಗಳಿಂದ ಜಿಲ್ಲೆಯ ಕರಾವಳಿಯಲ್ಲಿ ಹಾದು ಹೋಗುವ ಚತುಷ್ಪಥ ಹೆದ್ದಾರಿ ಕಾಮಗಾರಿಯಲ್ಲಿ ಒಂದಿಲ್ಲೊಂದು ಅನಾಹುತಗಳು ನಡೆಯುತ್ತಲೇ ಇದೆ. ಇದೀಗ ಮಳೆಗಾಲ ಆರಂಭವಾಗಿದ್ದು, ಕರಾವಳಿಯ ಉದ್ದಕ್ಕೂ ಹೆದ್ದಾರಿ ಅಂಚಿನಲ್ಲಿ ನೆಲೆಸಿರುವವರಿಗೆ ಗುಡ್ಡದ ಭೀತಿ ಕಾಡುತ್ತಿದೆ. ಈಗಾಗಲೇ ಚತುಷ್ಪಥ ಕಾಮಗಾರಿಗೆ ಸ್ವತಂತ್ರ ಇಂಜಿನಿಯರಿಂಗ್ ಸಲಹೆ ನೀಡುವ ಏಕೋಮ್ ಏಶಿಯಾ ಕಂಪನಿಯವರು ಈಗಾಗಲೇ ರಸ್ತೆ ಗುತ್ತಿಗೆ ಪಡೆದಿರುವ ಕಂಪನಿ ಐಆರ್‌ಬಿ ಯೋಜನಾ ನಿರ್ದೇಶಕರಿಗೆ ಕಳೆದ ತಿಂಗಳು ಪತ್ರ ಬರೆದು ಮಳೆಗಾಲದ ಮುನ್ನಾ ಸಾಕಷ್ಟು ಮುಂಜಾಗ್ರತಾ ಕ್ರಮ ಕೈಗೊಳ್ಳುವಂತೆ ತಿಳಿಸಿದ್ದರೂ, ನಿರ್ಲಕ್ಷಿಸಿದ್ದರಿಂದ ಒಂದರ ಹಿಂದೆ ಒಂದು ಅಪಾಯ ಎದುರಾಗುವ ಸನ್ನಿವೇಶ ಮೇಲಿಂದ ಮೇಲೆ ಮರುಕಳಿಸುತ್ತಿರುವುದರಿಂದ, ಅಲ್ಲದೇ ರಾಷ್ಟ್ರೀಯ ಹೆದ್ದಾರಿಯಲ್ಲಿ ಓಡಾಡುವ ವಾಹನಗಳಿಗೂ ಯಾವಾಗ ಆಪತ್ತು ಕಾದಿರುತ್ತದೆಯೆಂದು ತಿಳಿಯದೆ ಇರುವುದರಿಂದ, ಈ ವಿಷಯದಲ್ಲಿ ಆದಷ್ಟು ಬೇಗನೇ ಈ ಸಮಸ್ಯೆಗಳಿಗೆ ಸ್ಪಂದಿಸಲು ಸರ್ಕಾರ ಸಂಬಂಧಿಸಿದ ಕಂಪನಿಗೆ ಸೂಕ್ತ ತಿಳುವಳಿಕೆ ನೀಡಿ, ಈಗಾಗಲೇ ಸಾವನ್ನಪ್ಪಿರುವ ಕುಟುಂಬಕ್ಕೆ ಸೂಕ್ತ ಪರಿಹಾರ ಒದಗಿಸಬೇಕೆಂದು ಈ ವಿಷಯ ಶೂನ್ಯ ವೇಳೆಯಲ್ಲಿ ಮಾನ್ಯ ಲೋಕೋಪಯೋಗಿ ಸಚಿವರ ಮುಖಾಂತರ ಸರಕಾರಕ್ಕೆ ಒತ್ತಾಯಿಸುತ್ತಿದ್ದೇನೆ.

**ಸಭಾಪತಿಯವರು:-** ಸರ್ಕಾರದ ಪರವಾಗಿ ಯಾರು ಉತ್ತರ ಕೊಡುತ್ತೀರಿ. ಉತ್ತರ ರೆಡಿ ಇದ್ದರೆ ಕೊಡಿ. ಇಲ್ಲವೆಂದರೆ ಕಾಲಾವಕಾಶ ಪಡೆದುಕೊಳ್ಳಿ.

**ಡಾ॥ ಹೆಚ್.ಸಿ. ಮಹದೇವಪ್ಪ (ಲೋಕೋಪಯೋಗಿ ಸಚಿವರು):-** ಮಾನ್ಯ ಸಭಾಪತಿಯವರೆ, ನಾನು ಈ ಬಗ್ಗೆ ವರದಿ ತರಿಸಿಕೊಂಡು, ವಿವರವಾದ ಉತ್ತರವನ್ನು ಕೊಡುತ್ತೇನೆ ಮತ್ತು ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

**(ಮುಂದು...)**

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

(682)13-6-2017 1-10 ಪಿಕೆ-ಎಂಡಿ

**ಆ) ವಿಷಯ: ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ (ವಿಟಿಯು)ನ ಪರೀಕ್ಷೆ ಹಾಗೂ ಫಲಿತಾಂಶಗಳನ್ನು ನೀಡುವಲ್ಲಿ ವಿದ್ಯಾರ್ಥಿಗಳು ಗೊಂದಲಕ್ಕೀಡಾಗಿರುವುದರ ಬಗ್ಗೆ.**

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಡಿ.ಎಸ್.ವೀರಯ್ಯ (ವಿಧಾನಸಭೆಯಿಂದ ಆಯ್ಕೆಯಾದವರು):-**ಮಾನ್ಯ ಸಭಾಪತಿಗಳೆ, ರಾಜ್ಯದಲ್ಲಿರುವ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ (ವಿಟಿಯು)ನ ಪರೀಕ್ಷೆ ಹಾಗೂ ಫಲಿತಾಂಶಗಳನ್ನು ನೀಡುವಲ್ಲಿ ವಿದ್ಯಾರ್ಥಿಗಳು ಗೊಂದಲಕ್ಕೀಡಾಗಿರುವ ವಿಚಾರವನ್ನು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಬಯಸುತ್ತೇನೆ.

ಕಳೆದ ಡಿಸೆಂಬರ್‌ನಲ್ಲಿ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ (ವಿಟಿಯು)ನ ಎಲ್ಲಾ ಪರೀಕ್ಷೆಗಳು ನಡೆದಿದ್ದು ಈ ಪರೀಕ್ಷೆಯಲ್ಲಿ ರಾಜ್ಯದ ಸುಮಾರು 3,50,000 ವಿದ್ಯಾರ್ಥಿಗಳು ಪರೀಕ್ಷೆಯನ್ನು ಬರೆದಿದ್ದು, ಡಿಜಿಟಲ್ ಮುಖಾಂತರ ಮೌಲ್ಯಮಾಪನವನ್ನು ಮಾಡಲು ಹೊರಗುತ್ತಿಗೆಯನ್ನು ನೀಡಲಾಗಿದ್ದು, ತಾಂತ್ರಿಕ ಕಾರಣಗಳನ್ನು ನೀಡಿ, ಸರಿಯಾದ ಸಮಯಕ್ಕೆ ಫಲಿತಾಂಶವನ್ನು ನೀಡದೇ ಇರುವುದಕ್ಕೆ ಅನೇಕ ವಿದ್ಯಾರ್ಥಿಗಳು ಹಾಗೂ ವಿದ್ಯಾರ್ಥಿಗಳ ಸಂಘಟನೆಗಳು ದೂರುಗಳನ್ನು ನೀಡಲಾಗಿದ್ದು, ಈ ತಾಂತ್ರಿಕ ತೊಂದರೆಗಳನ್ನು ನಿವಾರಿಸಲು ಹೊಸದಾದ ತಂತ್ರಾಂಶವನ್ನು ರೂಪಿಸಿ ಅಗತ್ಯ ಪರಿಕರಗಳನ್ನು ಖರೀದಿಸಿ ಮೌಲ್ಯಮಾಪನ ಪ್ರಾರಂಭಿಸಿದ್ದರೂ ಸಹ ಇಲ್ಲಿಯವರೆಗೂ ಕೆಲವೊಂದು ಪರೀಕ್ಷೆಯ ಫಲಿತಾಂಶವನ್ನು ಪದೇ ಪದೇ ಮುಂದೂಡಿ ಇನ್ನೂ ನೀಡದೇ ಇರುವುದು ಶೋಚನೀಯ ಸಂಗತಿಯಾಗಿದೆ. ಏಕಾಏಕಿ ವಿಟಿಯು ಪರೀಕ್ಷಾ ಶುಲ್ಕವನ್ನು 100 ಕ್ಕಿಂತ ಹೆಚ್ಚಾಗಿ ಹೆಚ್ಚಿಸಿರುವುದು ವಿದ್ಯಾರ್ಥಿಗಳಲ್ಲಿ ಆತಂಕವನ್ನು ಮೂಡಿಸಿದೆ. ಈ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ (ವಿಟಿಯು)ನ ದ್ವಂದ್ವ ನೀತಿಯಿಂದ ರಾಜ್ಯದ ವಿದ್ಯಾರ್ಥಿಗಳು ಸಂಕಷ್ಟಕ್ಕೀಡಾಗಿ ವಿದ್ಯಾರ್ಥಿಗಳ ಭವಿಷ್ಯವೂ ಡೋಲಾಯಮಾನವಾಗಿರುತ್ತದೆ.

ಆದ್ದರಿಂದ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ (ವಿಟಿಯು)ನ ನಿಧಾನಗತಿಯ ಪ್ರಕ್ರಿಯೆಯು ಇನ್ನು ಮುಂದೆ ಮರುಕಳಿಸದಂತೆ ಮುಂಜಾಗರೂಕತಾ ಕ್ರಮ ಕೈಗೊಂಡು ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಪರೀಕ್ಷೆ ಹಾಗೂ ಫಲಿತಾಂಶವನ್ನು ಶೀಘ್ರಗತಿಯಲ್ಲಿಯೇ ಪ್ರಕಟಿಸಬೇಕೆಂದು ಈ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ.

**ಡಾ: ಜಿ.ಪರಮೇಶ್ವರ(ಸಭಾನಾಯಕರು):-** ಸಂಬಂಧಪಟ್ಟ ಸಚಿವರಿಂದ ಉತ್ತರ ಒದಗಿಸಲಾಗುವುದು.

**ಇ) ವಿಷಯ: ಬಿರುಗಾಳಿ ಮತ್ತು ಬೆಂಕಿಯ ಅವಘಡದಿಂದ ಬೀದಿ ಪಾಲಾಗಿರುವ ಹಂಚಿನಾಳ ರೈತ ಕುಟುಂಬಗಳಿಗೆ ಪರಿಹಾರ ಒದಗಿಸುವ ಬಗ್ಗೆ.**

**ಶ್ರೀ ಮಹಾಂತೇಶ ಮ.ಕವಟಗಿಮಠ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಗಳೆ, ಬೆಳಗಾವಿ ಜಿಲ್ಲೆಯ ಸವದತ್ತಿ ತಾಲ್ಲೂಕಿನ ಹಂಚಿನಾಳ ಗ್ರಾಮದಲ್ಲಿ 80 ಕೃಷಿ ಕಾರ್ಮಿಕರ ಕುಟುಂಬಗಳು ಬಿರುಗಾಳಿ, ಬೆಂಕಿಯ ಅವಘಡದಿಂದ ಮನೆ ಮತ್ತು ಜೀವನೋಪಾಯದ ಕೃಷಿ ಉಪಕರಣಗಳೊಂದಿಗೆ ಸರ್ವವೂ ಬೆಂಕಿಗೆ ಆಹುತಿಯಾಗಿವೆ. ಇಂದು ಈ ಕುಟುಂಬಗಳು ಇರುವುದಕ್ಕೆ ಸೂರಿಲ್ಲದೇ ಅಕ್ಷರಶಃ ಬೀದಿ ಪಾಲಾಗಿದ್ದಾರೆ. ಈ ಹಂಚಿನಾಳ ರೈತ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "**

ಕುಟುಂಬಗಳಿಗೆ ಸರ್ಕಾರವು ಸಂಪೂರ್ಣ ಪರಿಹಾರ ಒದಗಿಸದೇ ಇರುವ ಗಂಭೀರ ವಿಚಾರವನ್ನು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಬಯಸುತ್ತೇನೆ.

**ಡಾ: ಜಿ.ಪರಮೇಶ್ವರ(ಸಭಾನಾಯಕರು):-**ಮಾನ್ಯ ಸಭಾಪತಿಗಳೆ, ಇದಕ್ಕೆ ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರ ಕೊಡಿಸುತ್ತೇನೆ.

**ಈ) ವಿಷಯ: ಡೆಂಘಿ ರೋಗ ಉಲ್ಬಣವಾಗದಂತೆ ನಿಯಂತ್ರಣ ಮಾಡುವ ಬಗ್ಗೆ.**

**ಶ್ರೀ ಕೆ.ಟಿ.ಶ್ರೀಕಂಠೇಗೌಡ(ಪದವೀಧರ ಕ್ಷೇತ್ರ):-** ರಾಜ್ಯದಲ್ಲಿ ಮುಂಗಾರು ಮಾರುತದ ಪ್ರವೇಶದ ಜೊತೆ ಜೊತೆಗೆ ಡೆಂಘೀ ವೈರಾಣುಗಳ ವೃದ್ಧಿಗೆ ಪೂರಕ ವಾತಾವರಣವನ್ನು ಕಲ್ಪಿಸುವ ಮೂಲಕ ಜನಸಾಮಾನ್ಯರಲ್ಲಿ ತೀವ್ರ ಆತಂಕವನ್ನು ಉಂಟು ಮಾಡಿದೆ. ರಾಜ್ಯದೆಲ್ಲೆಡೆ ಶಂಕಿತ ಡೆಂಘೀ ಪ್ರಕರಣಗಳು ಹೆಚ್ಚುತ್ತಿದ್ದು, ಜನಸಾಮಾನ್ಯರ ಆರೋಗ್ಯದ ಬಗೆಗೆ ಗಂಭೀರ ಪರಿಣಾಮವನ್ನು ಉಂಟು ಮಾಡಿದೆ.

ಇದೇ ವರ್ಷ ಜನವರಿಯಿಂದ ಇದುವರೆಗೂ 11 ಸಾವಿರ ಡೆಂಘೀ ಪ್ರಕರಣಗಳು ವರದಿಯಾಗಿವೆ. ಮೇ 5ರವರೆಗೆ 9596 ಪ್ರಕರಣಗಳಲ್ಲಿ 5359 ಬೆಂಗಳೂರು ನಗರ ಜಿಲ್ಲೆಯೊಂದರಲ್ಲಿಯೇ ವರದಿಯಾಗಿದೆ. ನಂತರದ ಸ್ಥಾನದಲ್ಲಿ ಬಳ್ಳಾರಿ (798), ಉಡುಪಿ (560), ಚಿತ್ರದುರ್ಗ (346), ದಾವಣಗೆರೆ (311), ಧಾರವಾಡ (303), ರಾಯಚೂರು (181), ಮಂಡ್ಯ (150) ಪ್ರಕರಣಗಳು ವರದಿಯಾಗಿವೆ. ವಿಶೇಷವಾಗಿ ಮಂಡ್ಯ ಜಿಲ್ಲೆಯಲ್ಲಿ ಇದುವರೆಗೆ 150ಕ್ಕೂ ಹೆಚ್ಚು ಶಂಕಿತ ಪ್ರಕರಣಗಳು ಕಂಡು ಬಂದಿದ್ದು, ಮೇ 5 ರವರೆಗೆ 79 ಪ್ರಕರಣಗಳ ರಕ್ತದ ಮಾದರಿಯನ್ನು ಪರಿಶೀಲಿಸಲಾಗಿದ್ದು, 29 ಪ್ರಕರಣಗಳು ಪಾಸಿಟೀವ್ ಎಂದು ವರದಿಯಾಗಿದೆ. ಮದ್ದೂರು ತಾಲ್ಲೂಕಿನ ಮಾದರಹಳ್ಳಿಯಲ್ಲಿ ಶಂಕಿತ ಡೆಂಘೀ ಸಾವು ಪ್ರಕರಣ ಪತ್ತೆಯಾಗಿದೆ. ಮಂಡ್ಯ ಜಿಲ್ಲಾ ಆಸ್ಪತ್ರೆಯಲ್ಲಿ ಡೆಂಘೀ ಪೀಡಿತ ರೋಗಿಗಳನ್ನು ಮೈಸೂರು ಆಸ್ಪತ್ರೆಗಳಿಗೆ ಕಳುಹಿಸುತ್ತಿರುತ್ತಾರೆ. ಆರೋಗ್ಯ ಇಲಾಖೆ ರೋಗವನ್ನು ತಡೆಗಟ್ಟುವಲ್ಲಿ ವಿಫಲವಾಗಿದೆ.

ಹಾಗಾಗಿ ಸರ್ಕಾರ ಈ ಬಗ್ಗೆ ತುರ್ತಾಗಿ ಗಮನಹರಿಸಿ ರೋಗವು ಉಲ್ಬಣವಾಗದಂತೆ ತಡೆಯಲು ಲಾರ್ವಾ ಸಮೀಕ್ಷೆ ನಡೆಸುವುದು, ಹಳ್ಳಿಗಳಿಗೆ ತೆರಳಿ ಜನರಿಗೆ ಅರಿವು ಮೂಡಿಸುವುದು, ಸಾರ್ವಜನಿಕ ಸ್ಥಳಗಳಿಗೆ ಫಾಗಿಂಗ್ ಮಾಡಿಸುವುದು, ರಾಸಾಯನಿಕಗಳನ್ನು ಸಿಂಪಡಿಸುವುದು ಮತ್ತು ಡೆಂಘೀ ಪೀಡಿತರಿಗೆ ಆಯಾಯ ಜಿಲ್ಲಾ ಆಸ್ಪತ್ರೆಗಳಲ್ಲೇ ಚಿಕಿತ್ಸೆ ಕೊಡಿಸಲು ಕ್ರಮ ವಹಿಸಲು ಈ ಮೂಲಕ ಮಾನ್ಯ ಆರೋಗ್ಯ ಕುಟುಂಬ ಕಲ್ಯಾಣ ಸಚಿವರನ್ನು ಆಗ್ರಹಿಸುತ್ತೇನೆ. ಈ ಬಗ್ಗೆ ತೀವ್ರ ರೀತಿಯಲ್ಲಿ ಸರ್ಕಾರ ಗಮನಹರಿಸಬೇಕು.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಡಾ:ಜಿ.ಪರಮೇಶ್ವರ(ಸಭಾನಾಯಕರು):-**ಮಾನ್ಯ ಸಭಾಪತಿಗಳೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರಿಂದ ಉತ್ತರ ಕೊಡಿಸುತ್ತೇನೆ.

**ಉ) ವಿಷಯ: ಸರ್ಕಾರಿ ಗೋಮಾಳ ಜಮೀನನ್ನು ವಕ್ಫ್ ಆಸ್ತಿಗೆ ಸೇರ್ಪಡೆ ಮಾಡಿರುವುದನ್ನು ರದ್ದುಪಡಿಸಿ ಗೋಮಾಳ ಜಮೀನಿಗೆ ಸೇರಿಸಿ ಆದೇಶ ಹೊರಡಿಸುವ ಬಗ್ಗೆ.**

**ಶ್ರೀ ಬಸವನಗೌಡ ಆರ್.ಪಾಟೀಲ (ಯತ್ನಾಳ)(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-**ಮಾನ್ಯ ಸಭಾಪತಿಗಳೆ, ಕಳೆದ ಅಧಿವೇಶನದ ನನ್ನ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 1061ರಲ್ಲಿ ವಿಜಯಪುರ ಮತ್ತು ಬಾಗಲಕೋಟೆ ಜಿಲ್ಲೆಗಳಲ್ಲಿ ಗೋಮಾಳಕ್ಕಾಗಿ ಕಾಯ್ದಿರಿಸಿದ ಜಾಗದ ಬಗ್ಗೆ ಪ್ರಶ್ನಿಸಿದ್ದೆನು. ಸದರಿ ಪ್ರಶ್ನೆಗೆ ಮಾನ್ಯ ಕಂದಾಯ ಸಚಿವರು ದಿನಾಂಕ 22.3.2017ರಂದು ಉತ್ತರ ನೀಡಿದ್ದು ಅದರಲ್ಲಿ ವಿಜಯಪುರ ನಗರದ ಮಹಲ ಬಾಗಾಯತ ಗ್ರಾಮ ಸರ್ವೆ ನ:811(ಅ) ರ ಒಟ್ಟು 77 ಎಕರೆ 10 ಗುಂಟೆ ಜಮೀನು ಗೋಮಾಳ ಜಮೀನು ಆಗಿರುತ್ತದೆ ಎಂದು ತಿಳಿಸಿರುತ್ತಾರೆ. ಆದರೆ ಸದರಿ ರಿ.ಸಂ.ನ ಆರ್‌ಟಿ.ಸಿ. ಮತ್ತು ಉತಾರೆಯನ್ನು ತೆಗೆಸಿದಾಗ ಸದರಿ ಜಮೀನು ವಕ್ಫ್ ಬೋರ್ಡ್, ಬೆಂಗಳೂರು ಇದಕ್ಕೆ ಸೇರಿದ ಜಮೀನು ಎಂದು ನಮೂದಾಗಿರುತ್ತದೆ. ಈ ಗೋಮಾಳ ಆಸ್ತಿಯು ವಕ್ಫ್ ಆಸ್ತಿಯಾಗಿ ಹೇಗೆ ಮಾರ್ಪಟ್ಟಿತು? ಈ ರೀತಿ ಬದಲಾವಣೆಯು ಹಿಂದಿನ ಜಿಲ್ಲಾಧಿಕಾರಿಗಳ ಅವಧಿಯಲ್ಲಿ ಆಗಿರುತ್ತದೆ ಎಂದು ತಿಳಿದುಬಂದಿರುತ್ತದೆ. ಆದರೆ ಗೋಮಾಳಕ್ಕೆ ಸೇರಿದ ಯಾವುದೇ ಆಸ್ತಿಯನ್ನು ವಕ್ಫ್ ಆಸ್ತಿಯಾಗಿ ಮಾರ್ಪಾಡು ಬದಲಾವಣೆ ಮಾಡಲು ಬರುವುದಿಲ್ಲ. ಆದಾಗ್ಯೂ ಕೂಡ ಈಗಿನ ತಹಶೀಲ್ದಾರರು ಮಾನ್ಯ ಸಚಿವರಿಗೆ ಇದು ಗೋಮಾಳ ಜಮೀನು ಎಂದು ಲಿಖಿತವಾಗಿ ಹೇಳಿಕೆಯನ್ನು ನೀಡಿರುತ್ತಾರೆ.

ಆದರೆ ಸರ್ಕಾರವು ನನ್ನ ಪ್ರಶ್ನೆಗೆ ನೀಡಿರುವ ಉತ್ತರ ಸರಿಯಾಗಿದೆಯೋ? ತಹಶೀಲ್ದಾರರು ನೀಡಿರುವ ವರದಿ ಸರಿಯಾಗಿದೆಯೋ? ಅಥವಾ ಪಹಣಿ ಪತ್ರ(ಉತಾರೆ)ದಲ್ಲಿ ನಮೂದಿಸಿರುವುದು ಸರಿಯೋ ಎಂಬುದು ಗೊಂದಲಮಯವಾಗಿರುತ್ತದೆ. ಹಾಗೂ ಇದೇರೀತಿ ವಿಜಯಪುರದಲ್ಲಿ ನೂರಾರು ಎಕರೆ ಜಮೀನುಗಳು ವಕ್ಫ್ ಹೆಸರಿಗೆ ಬದಲಾವಣೆಗೊಂಡು ಗೆಜೆಟ್ ನೋಟಿಫಿಕೇಷನ್ ಆಗದ್ದವೆಷ್ಟು?

ಕಾರಣ ತಾವುಗಳು ಸದರಿ ಎಲ್ಲಾ ಗೊಂದಲಗಳನ್ನು ಪರಿಹರಿಸುವ ಸಲುವಾಗಿ ವಿಜಯಪುರ ನಗರದ ಮಹಲ ಬಾಗಾಯತ ಗ್ರಾಮ ಸರ್ವೆ ನಂ: 811(ಅ) ರ ಒಟ್ಟು 77 ಎಕರೆ 10 ಗುಂಟೆ ಜಮೀನು ಗೋಮಾಳ ಜಮೀನು ಎಂದು ಘೋಷಣೆ ಮಾಡಿ ಉತಾರಗಳನ್ನು ಸರಿಪಡಿಸಿಕೊಡಬೇಕೆಂದು ಮತ್ತು ಈ ರೀತಿ ಗೋಮಾಳ ಜಮೀನನ್ನು ಮಾರ್ಪಡಿಸಿ ವಕ್ಫ್ ಆಸ್ತಿ ಎಂದು ನಮೂದಿಸಿ ಸರ್ಕಾರದ ನಿಯಮಗಳನ್ನು ಉಲ್ಲಂಘನೆ ಮಾಡಿರುವ ಅಧಿಕಾರಿಗಳ ಮೇಲೆ ಸೂಕ್ತ ರೀತಿಯ ಕಾನೂನು ಕ್ರಮ ಜರುಗಿಸಬೇಕೆಂದು ಶೂನ್ಯ ವೇಳೆಯಲ್ಲಿ ಸರ್ಕಾರವನ್ನು ಒತ್ತಾಯಿಸುತ್ತೇನೆ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಡಾ:ಜಿ.ಪರಮೇಶ್ವರ(ಸಭಾನಾಯಕರು):-**ಮಾನ್ಯ ಸಭಾಪತಿಗಳೆ, ಕಂದಾಯ ಸಚಿವರಿಂದ ಇದಕ್ಕೆ ಉತ್ತರ ಒದಗಿಸುವ ವ್ಯವಸ್ಥೆ ಮಾಡುತ್ತೇನೆ.

**4. <u>ಸಚಿವರ ಹೇಳಿಕೆ</u>**

**ಅ) ವಿಷಯ: ಮಂಡ್ಯ ಜಿಲ್ಲೆ ಮಳವಳ್ಳಿ ತಾಲ್ಲೂಕಿನ ಗೌಡಗೆರೆ ಗ್ರಾಮದಲ್ಲಿನ ಜನರು ಜ್ವರದಿಂದ ಬಳಲುತ್ತಿರುವ ಬಗ್ಗೆ.**

**ಡಾ: ಜಿ.ಪರಮೇಶ್ವರ(ಸಭಾನಾಯಕರು):-** ಮಾನ್ಯ ಸಭಾಪತಿಗಳೆ, ದಿನಾಂಕ 9.6.2017ರಂದು ಮಾನ್ಯ ಶ್ರೀ ಕೆ.ಟಿ.ಶ್ರೀಕಂಠೇಗೌಡರವರು ಶೂನ್ಯವೇಳೆ ಅಡಿ ಎತ್ತಿದ ವಿಷಯಕ್ಕೆ ಸಂಬಂಧಪಟ್ಟಂತೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಪರವಾಗಿ ಸದನದಲ್ಲಿ ಉತ್ತರವನ್ನು ಮಂಡಿಸುತ್ತಿದ್ದೇನೆ.

**ಆ) ವಿಷಯ: ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ಟೌನ್‌ನಲ್ಲಿರುವ ಬಾಲಕರ ಜೂನಿಯರ್ ಕಾಲೇಜು ಕಟ್ಟಡವು 70 ವರ್ಷ ಹಳೆಯದಾಗಿದ್ದು ಮೇಲ್ಛಾವಣಿಗಳು ಕಿತ್ತು ಹೋಗಿದ್ದು ಅತ್ಯಂತ ಶಿಥಿಲಗೊಂಡಿದ್ದು ಮುಂದಾಗುವ ಅನಾಹುತ ತಪ್ಪಿಸಲು ಕ್ರಮ ಕೈಗೊಳ್ಳುವ ಬಗ್ಗೆ.**

**ಡಾ:ಜಿ.ಪರಮೇಶ್ವರ(ಸಭಾನಾಯಕರು):-** ಮಾನ್ಯ ಸಭಾಪತಿಗಳೆ, ದಿನಾಂಕ 9.6.2017ರಂದು ಶ್ರೀಮತಿ ಮೋಟಮ್ಮನವರು ಶೂನ್ಯವೇಳೆ ಅಡಿ ಎತ್ತಿದ್ದ ವಿಷಯಕ್ಕೆ ಸಂಬಂಧಪಟ್ಟಂತೆ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಪರವಾಗಿ ಸದನದಲ್ಲಿ ಉತ್ತರವನ್ನು ಮಂಡಿಸುತ್ತಿದ್ದೇನೆ.

**ಶ್ರೀ ಬಿ.ಜೆ.ಪುಟ್ಟಸ್ವಾಮಿ:-**ಮಾನ್ಯ ಸಭಾಪತಿಗಳೆ, ಕಳೆದ ಸೋಮವಾರ ಹಾಕಿದ್ದ ಪ್ರಶ್ನೆಗೆ ಇವತ್ತು ಉತ್ತರ ಕೊಡಿಸುತ್ತೇನೆ ಎಂದು ಹೇಳಿದ್ದಿರಿ.

**ಸಭಾಪತಿಯವರು:-** ನೀವು ಒಳ್ಳೆಯ ವಿಷಯವನ್ನು ಎತ್ತಿದ್ದೀರಿ. ದಯವಿಟ್ಟು ಕುಳಿತುಕೊಳ್ಳಿ ಹೇಳುತ್ತೇನೆ. ಈಗ ನಾನೊಂದು ವಿಚಾರ ಹೇಳಬಯಸುತ್ತೇನೆ. ಕೆಳಮನೆಯಲ್ಲಿ ಈ ಅಧಿವೇಶನವನ್ನು ಮುಂದಿನ ಸೋಮವಾರ, ಮಂಗಳವಾರ ಮತ್ತು ಬುಧವಾರದವರೆಗೆ ಮುಂದುವರೆಸಬೇಕು ಎಂದು ತೀರ್ಮಾನ ಮಾಡಿದ ಸುದ್ದಿ ನನಗೆ ಬಂದಿದೆ. ಆದರೆ ನಮ್ಮ ವಿಧಾನಪರಿಷತ್ತನ್ನು ಮುಂದುವರೆಸಬೇಕೋ ಬೇಡವೋ ಎನ್ನುವುದರ ಬಗ್ಗೆ ಸರ್ಕಾರದಿಂದ ನನಗೇನೂ ಮನವಿ ಬಂದಿಲ್ಲ. ಸ್ವಾಭಾವಿಕವಾಗಿ ಕೆಳಮನೆಯಲ್ಲಿ ಅಧಿವೇಶನವನ್ನು ಮುಂದುವರೆಸಿದರೆ ಮೇಲ್ಮನೆಯಲ್ಲೂ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಮುಂದುವರೆಸುತ್ತಾರೆ ಅಂದುಕೊಂಡಿದ್ದೆ. ಆದರೆ ಅದನ್ನು ಮುಂದುವರೆಸುವ ಅಧಿಕಾರ ನನಗಿಲ್ಲ. ಅದು ಬಿಎಸಿ ಯಲ್ಲಿ ತೀರ್ಮಾನವಾಗಬೇಕಾಗುತ್ತದೆ. ಹಾಗಾಗಿ ನಾನು ಮಂಡಿಸುವ ಬದಲು, ಮುಂದಿನ ಸೋಮವಾರ ಯಾವುದೇ ಪ್ರಶ್ನೆಗಳನ್ನು ನಿಮ್ಮಿಂದ ಆಹ್ವಾನ ಮಾಡಿಲ್ಲವಾದ್ದರಿಂದ, ಮೊದಲ ಸೋಮವಾರ ಮುಂದಕ್ಕೆ ಹೋದ ಇಡೀ ಪ್ರಶ್ನೋತ್ತರ ಪಟ್ಟಿಯನ್ನು ಮುಂದಿನ ಸೋಮವಾರ ಚರ್ಚೆ ಮಾಡುವುದಕ್ಕೆ ಸರ್ಕಾರದ ಕಡೆಯಿಂದ ಸಚಿವರನ್ನು ಕರೆಸೋಣ, ಈ ಕುರಿತು ಒಳ್ಳೆಯ ಚರ್ಚೆ ಆಗುತ್ತದೆ ಎಂದುಕೊಂಡಿದ್ದೇನೆ. ಇದರ ಬಗ್ಗೆ ಸರ್ಕಾರದ ಅಭಿಪ್ರಾಯವನ್ನು ತಿಳಿದುಕೊಳ್ಳೋಣ. ಯಾವುದಾದರೂ ಕಾರಣಕ್ಕೆ ಸರ್ಕಾರ ಬೇರೆ ನಿರ್ಣಯ ಮಾಡಿದರೆ ಆಗ ಆ ಪ್ರಶ್ನೆಗಳಿಗೆ ಯಾವರೀತಿ ಸದನದಲ್ಲಿ ಮಂಡಿಸುವುದಕ್ಕೆ ವ್ಯವಸ್ಥೆ ಮಾಡಬೇಕೋ ಆ ವ್ಯವಸ್ಥೆ ಮಾಡುತ್ತೇನೆ.

ಒಂದು ಗಂಭೀರವಾದ ವಿಷಯ ಇದೆ. ಮಾನ್ಯ ಉಗ್ರಪ್ಪನವರು, ಮಾನ್ಯ ಶರಣಪ್ಪ ಮಟ್ಟೂರ, ಮಾನ್ಯ ಕೆ.ಸಿ.ಕೊಂಡಯ್ಯ, ಮಾನ್ಯ ಕೆ. ಅಬ್ದುಲ್‌ಜಬ್ಬಾರ್, ಮಾನ್ಯ ಎಂ.ಎ.ಗೋಪಾಲಸ್ವಾಮಿ, ಮಾನ್ಯ ಆರ್.ಪ್ರಸನ್ನಕುಮಾರ್ ಹಾಗೂ ಮಾನ್ಯ ಹೆಚ್.ಎಂ. ರೇವಣ್ಣನವರು ಒಂದು ನಿರ್ಣಯವನ್ನು ನನ್ನ ಕಚೇರಿಗೆ ಕಾರ್ಯದರ್ಶಿಗಳ ಮೂಲಕ ಕಳುಹಿಸಿಕೊಟ್ಟಿದ್ದಾರೆ. ಆ ನಿರ್ಣಯದ ವಿಷಯ ಇಲ್ಲಿರುವವರಿಗೆ ಗೊತ್ತಿದೆ ಎಂದು ಭಾವಿಸುತ್ತೇನೆ. ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮ 165ರ ಅಡಿ, ಭಾರತ ಸಂವಿಧಾನದ 183ನೇ ಅನುಚ್ಛೇದ 'ಸಿ' ಅಡಿಯಲ್ಲಿ ಕೊಟ್ಟಿದ್ದಾರೆ. ಇದಕ್ಕೆ ರೂಲ್ಸ್ ಮತ್ತು ಪ್ರೊಸೀಜರ್ ಹೇಗಿದೆ ಎನ್ನುವುದು ಎಲ್ಲರಿಗೂ ಗೊತ್ತಿದೆ. ಹಾಗಾಗಿ ಅದನ್ನು ಮತ್ತೆ ಓದಿ ಹೇಳಬೇಕು ಎಂದೆನಿಸುತ್ತಿಲ್ಲ.

(ಮುಂದು . . .)

(683)13-6-2017 1-20 ಎಂಎಂ-ಎಕೆ

(ಸಭಾಪತಿಯವರ ಉಪಸ್ಥಿತಿ)

**ಸಭಾಪತಿಯವರು (ಮುಂದು):-** ಅವರು ಕೊಟ್ಟಿರುವಂತಹ ನಿರ್ಣಯವನ್ನು ಸಭೆ ತೆಗೆದುಕೊಳ್ಳಬೇಕೋ ಬೇಡವೋ ಅಥವಾ ಅದರ ಬಗ್ಗೆ ಚರ್ಚೆ ಮಾಡುವುದೋ, ಅದರ ಬಗ್ಗೆ ಮತದಾನವನ್ನು ಮಾಡಬೇಕೋ, ನಿರ್ಣಯವನ್ನು ಸಭೆಯು ಗಮನಿಸಬೇಕೋ ಬೇಡವೋ ಎನ್ನುವುದನ್ನು ಸಭೆಯೇ ನಿರ್ಣಯ ಮಾಡಬೇಕು. ನಿರ್ಣಯವನ್ನು ಹೇಗೆ ಮಾಡಬೇಕೆಂದು ತಮಗೆಲ್ಲಾ ಗೊತ್ತಿದೆ. ಆದರೂ ಮತ್ತೊಮ್ಮೆ ಹೇಳುತ್ತೇನೆ. ಈಗ ಅವರು ಮಂಡಿಸುವ ನಿರ್ಣಯದ ಪರವಾಗಿ ಒಪ್ಪಿಗೆ ಇರುವವರನ್ನು ಮಾತ್ರ ನಾನು ಕೇಳುತ್ತೇನೆ. ವಿರುದ್ಧವಾಗಿರುವವರು ಅದರ ಬಗ್ಗೆ ಮಾತನಾಡುವ ಹಾಗಿಲ್ಲ ಅಂದರೆ ಪರವಾಗಿರುವವರು ಮತ್ತು ವಿರುದ್ಧವಾಗಿರುವವರು ಇಬ್ಬರು ಮಾತನಾಡುವ ಹಾಗಿಲ್ಲ. ಪರವಾಗಿರುವವರು ಮಾತ್ರ ಎದ್ದು ನಿಲ್ಲುತ್ತಾರೆ. ಅವರ ಸಂಖ್ಯೆಯನ್ನು ಎಣಿಸುತ್ತೇವೆ. ವಿರುದ್ಧವಾಗಿರುವವರು ಎಷ್ಟು ಜನರಿದ್ದೀರಿ ಎದ್ದು ನಿಲ್ಲಬೇಕೆಂದು ನಾನು ಹೇಳುವುದಿಲ್ಲ. ಅದಕ್ಕೆ ಅವಕಾಶವು ಇಲ್ಲ. ಹಾಗೆ ಪರವಾಗಿ ಎದ್ದು

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ನಿಲ್ಲುವವರ ಸಂಖ್ಯೆ 10ಕ್ಕಿಂತ ಕಡಿಮೆ ಇದ್ದರೆ ಆ ನಿರ್ಣಯವು ಬಿದ್ದುಹೋಗುತ್ತದೆ. ಅಂದರೆ ಅವರ ವಿನಂತಿಯೇ ಬಿದ್ದು ಹೋಯಿತು ಎಂದರ್ಥ. ಹತ್ತಕ್ಕಿಂತ ಜಾಸ್ತಿ ಇದ್ದರೆ ಆ ನಿರ್ಣಯವನ್ನು ಚರ್ಚೆ ಮಾಡುವುದಕ್ಕೆ, ಮತದಾನ ಮಾಡುವುದಕ್ಕೆ ಈ ಸಭೆಯು ಒಪ್ಪಿಗೆ ಕೊಟ್ಟಿದೆಯೆಂದು ತೀರ್ಮಾನವಾಗುತ್ತದೆ. ಆದ್ದರಿಂದ ಆ ವಿಷಯದ ಬಗ್ಗೆ ಅವರು ಕೇಳುತ್ತಾರೆ. ಅವರ ಪರವಾಗಿ ನಾನೇ ಕೇಳುತ್ತೇನೆ. ಕೇಳುವುದಕ್ಕೆ ಮುಂಚೆ ಇದಕ್ಕೆ ಒಪ್ಪಿಗೆ ಕೊಡಬೇಕೋ ಬೇಡವೋ ಎನ್ನುವುದರ ಬಗ್ಗೆ ನಾನು ಕಾನೂನು ಪುಸ್ತಕ, ಭಾರತದ ಸಂವಿಧಾನ, ಕೌಲ್ & ಶಕ್ಧರ್ ಮತ್ತು ಎಲ್ಲಾ ಪುಸ್ತಕಗಳನ್ನು ರೆಫರ್ ಮಾಡಿದ್ದೇನೆ. ರೆಫರ್ ಮಾಡಿ ನಿರ್ಣಯವನ್ನು ತೀರ್ಮಾನ ಮಾಡಿದ್ದೇನೆ. ಆದ್ದರಿಂದ ನಾನು ಏನನ್ನು ರೆಫರ್ ಮಾಡಿದ್ದೇನೆ ಎಂಬುದನ್ನು ಸಭೆಯಲ್ಲಿ ಗುಟ್ಟಾಗಿ ಇಡುವುದಕ್ಕೆ ಬರುವುದಿಲ್ಲ. ಅದನ್ನು ಸಭೆಗೆ ತಿಳಿಸಬೇಕಾಗುತ್ತದೆ. ಹಾಗಾಗಿ ನಾನು Practice and Procedure of Parliament by M.N. Kaul and S.L. Shakdher ಮತ್ತು Parliamentary Procedure by Subhash C. Kashyap ಪುಸ್ತಕದಲ್ಲಿ ಏನು ಹೇಳಿದ್ದಾರೆ ಎನ್ನುವುದನ್ನು ಮೊದಲು ಓದಿ ಹೇಳುತ್ತೇನೆ. ದಯಮಾಡಿ ಇದನ್ನು ಗಮನವಿಟ್ಟು ಕೇಳಿ.

ಶ್ರೀಯುತ ಸುಭಾಷ್ ಸಿ. ಕಶ್ಯಪ್‌ರವರ Parliamentary Procedure ನ ಪುಸ್ತಕದ ಪುಟ ಸಂಖ್ಯೆ 81ರಲ್ಲಿ ಸಭಾಪತಿ ಅಥವಾ ಉಪಸಭಾಪತಿಯವರನ್ನು ಅವರುಗಳ ಸ್ಥಾನದಿಂದ ತೆಗೆಯಬೇಕೆಂಬ ಸೂಚನಾ ಪತ್ರವನ್ನು ಅಂಗೀಕರಿಸಬೇಕಾದಲ್ಲಿ ನಿರ್ಣಯವು ಈ ಕೆಳಕಂಡ ನಿಬಂಧನೆಗಳನ್ನು ಪೂರೈಸಿರಬೇಕೆಂದು ಇರುತ್ತದೆ:–

"Admissibility of Resolution- In order that such a resolution may be admissible, it shall satisfy the following conditions, namely:-

1. It shall be specific with respect to charges;

2. It shall be clearly and precisely expressed, and

3. It shall not contain arguments, inferences, ironical expressions, imputations or defamatory statements.

4. Resolutions regarding removal of Speaker should be specific with respect to charges. Such a resolution is governed not only by this rule but also by general rules applicable to other resolutions. Thus the conduct of the Speaker or Deputy Speaker can be discussed only on a specific resolution for his removal from his office. A motion that the conduct of Speaker or Deputy Speaker be taken into consideration, is inadmissible."

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಅದೇ ರೀತಿ ಶ್ರೀ ಎಂ.ಎನ್. ಕೌಲ್ ಮತ್ತು ಎಸ್.ಎಲ್. ಶಕ್ಧರ್ ರವರ Practice and Procedure of Parliament ನ ಪುಟ ಸಂಖ್ಯೆ 105ರಲ್ಲಿ ಈ ಕೆಳಕಂಡಂತಿರುತ್ತದೆ:–

"A resolution for the removal of the Speaker or Deputy Speaker must be specific with respect to charges and members should refer to specific points while speaking on such a resolution.

The Deputy Speaker made the following observations when a point of order was raised regarding the admissibility of the resolution for the removal of Speaker Mavalankar.

Unless there are specific charges which could be met, and of which due notice has been given, this Resolution is clearly out of order.

Again in a similar situation, the Deputy Speaker made the following observations regarding the admissibility of the resolution for removal of Speaker Dr. Bal Ram Jakhar.

Rule 173 of the Rules of Procedure inter alia, provides that in order that a resolution may be admissible, it shall satisfy the following conditions, namely,

1. It shall be clearly and precisely expressed.
2. It shall raise substantially one definite issue.

In the light of the foregoing, the resolution should have been specific with respect to the charges. The notice under consideration refers to 'rulings given by the Speaker of the House, including the one on 19th March, 1987 on the question of privilege and adjournment motions.' It also speaks of denial by the Speaker to the members their right to raise "vital constitutional issues and procedural issues and burning problems." It is, therefore, not at all specific with respect to the charges.

Viewed in the light of the constitutional provisions as well as the requirements of the Rules of Procedure, as mentioned above, I am of the view that it is not a matter of mere technicality but one of substance. As the Speaker has the right to participate in and to vote on such a resolution, it is only fit and proper that he must know

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "**

precisely what the charges against him are so that he could reply to them. Principles of natural justice also demand the same. Inasmuch as the charges are not specific, are not "clearly and precisely expressed" and do not raise "one definite issue" of which due notice has been given, the resolution would be prima facie out of order."

ಮೇಲ್ಕಂಡ ಅಂಶಗಳನ್ನು ವಿಶ್ಲೇಷಿಸಿದಾಗ ಮಾನ್ಯ ಗೌರವಾನ್ವಿತ ಸದಸ್ಯರಾದ ಶ್ರೀಯುತ ವಿ.ಎಸ್. ಉಗ್ರಪ್ಪ ಹಾಗೂ ಇತರರು ನನ್ನ ವಿರುದ್ಧ ನೀಡಿರುವ ನಿರ್ಣಯದ ಸೂಚನೆಯು ಯಾವುದೇ ನಿರ್ದಿಷ್ಟವಾದ ಆರೋಪ ಹಾಗು ಪ್ರಕರಣವನ್ನು ಒಳಗೊಂಡಿರುವುದಿಲ್ಲವಾದ್ದರಿಂದ ಹಾಗೂ ಮೇಲ್ಕಂಡ ಸೂಚನೆಯನ್ನು ಯಾವುದೇ ಆರೋಪ ರಹಿತವಾಗಿ ನೀಡಿರುವುದರಿಂದ ಸದರಿ ಸೂಚನೆ ಮೇಲೆ ಆರೋಪ ಹೊಂದಿರುವ ನಾನು ಉತ್ತರಿಸಲು ಸಾಧ್ಯವಾಗದಿರುವುದರಿಂದ ಈ ಸೂಚನೆಯು ಅರ್ಹ ಹಾಗೂ ಕ್ರಮಬದ್ಧವಾಗಿರುವುದಿಲ್ಲ ಹಾಗೂ ಈ ಸೂಚನೆಯು ಸ್ವಾಭಾವಿಕ ನ್ಯಾಯಕ್ಕೆ ವಿರುದ್ಧವಾದುದಾಗಿರುತ್ತದೆ.

ಆದಾಗ್ಯೂ ಪ್ರಜಾಪ್ರಭುತ್ವ ಹಾಗೂ ಭಾರತದ ಸಂವಿಧಾನದ ತತ್ವಗಳನ್ನು ಮೊದಲಿನಿಂದಲೂ ಶಿಸ್ತು ಹಾಗು ಬದ್ಧತೆಯಿಂದ ಪಾಲಿಸಿಕೊಂಡು ಬಂದಿರುವ ನಾನು ಮೇಲ್ಕಂಡ ಸೂಚನೆಯು ಅಂಗೀಕಾರಕ್ಕೆ ಅರ್ಹವಿಲ್ಲದಿದ್ದಾಗ್ಯೂ ಸಹ ಸದನದ ಹಾಗು ಸಭಾಪತಿ ಸ್ಥಾನದ ಘನತೆ ಹಾಗೂ ಗಾಂಭೀರ್ಯವನ್ನು ಎತ್ತಿ ಹಿಡಿಯುವ ಹಿನ್ನೆಲೆಯಲ್ಲಿ ಮಾನ್ಯ ಸದಸ್ಯರು ನೀಡಿರುವ ನಿರ್ಣಯವನ್ನು ಸದನದಲ್ಲಿ ಮಂಡಿಸಲು ಅನುಮತಿ ನೀಡುತ್ತಿದ್ದೇನೆ. ಸದನದ ಒಪ್ಪಿಗೆಗಾಗಿ ಯಾರಾದರು ಒಬ್ಬರು ಎದ್ದು ನಿಂತು ಅನುಮತಿಯನ್ನು ಕೇಳಬೇಕಾಗುತ್ತದೆ. ಅದಕ್ಕೆ ನಾನು ಅನುಮತಿಯನ್ನು ಕೊಟ್ಟಿದ್ದೇನೆ.

**5. <u>ನಿರ್ಣಯ</u>**

**ವಿಷಯ:– ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗು ನಡವಳಿಕೆಯ ನಿಯಮ 165ರ ಹಾಗು ಭಾರತ ಸಂವಿಧಾನದ 183ನೇ ಅನುಚ್ಛೇದ 'ಸಿ' ಖಂಡದಡಿಯಲ್ಲಿ ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಾದ ಶ್ರೀ ಡಿ.ಹೆಚ್. ಶಂಕರಮೂರ್ತಿಯವರನ್ನು ಸಭಾಪತಿ ಸ್ಥಾನದಿಂದ ತೆಗೆದುಹಾಕಬೇಕೆಂಬ ಬಗ್ಗೆ.**

– – – –

**ಶ್ರೀ ಹೆಚ್.ಎಂ. ರೇವಣ್ಣ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ವಿಧಾನಪರಿಷತ್ತಿನ ಮಾನ್ಯ ಸದಸ್ಯರುಗಳಾದ ಶ್ರೀ ವಿ.ಎಸ್. ಉಗ್ರಪ್ಪ, ಶ್ರೀ ಶರಣಪ್ಪ ಮಟ್ಟೂರ, ಶ್ರೀ ಕೆ.ಸಿ. ಕೊಂಡಯ್ಯ, ಶ್ರೀ ಕೆ. ಅಬ್ದುಲ್ ಜಬ್ಬಾರ್, ಶ್ರೀ ಎಂ.ಎ. ಗೋಪಾಲ ಸ್ವಾಮಿ, ಶ್ರೀ ಆರ್. ಪ್ರಸನ್ನಕುಮಾರ್ ಹಾಗೂ ನಾನು ಕರ್ನಾಟಕ ವಿಧಾನ ಪರಿಷತ್ತಿನ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಕಾರ್ಯವಿಧಾನ ಹಾಗು ನಡವಳಿಕೆಯ ನಿಯಮ 165 ಹಾಗು ಭಾರತ ಸಂವಿಧಾನದ 183ನೇ ಅನುಚ್ಛೇದ 'ಸಿ' ಖಂಡದಡಿಯಲ್ಲಿ ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಾದ ಶ್ರೀ ಡಿ.ಹೆಚ್. ಶಂಕರಮೂರ್ತಿಯವರನ್ನು ಸಭಾಪತಿ ಸ್ಥಾನದಿಂದ ತೆಗೆದು ಹಾಕಬೇಕೆಂದು ನೀಡಿರುವ ನಿರ್ಣಯವನ್ನು ಮಂಡಿಸಲು ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗು ನಡವಳಿಕೆಯ ನಿಯಮ 166 ಅಡಿಯಲ್ಲಿ ಸದನದ ಅನುಮತಿಯನ್ನು ಕೋರುತ್ತೇನೆ.

**ಸಭಾಪತಿಯವರು:-** ಈಗ ನಿಯಮಾನುಸಾರ ನಿರ್ಣಯಕ್ಕೆ ಅನುಮತಿ ಕೊಡುವ ಬಗ್ಗೆ ಸಮ್ಮತಿಯುಳ್ಳ ಸದಸ್ಯರು ತಮ್ಮ ತಮ್ಮ ಸ್ಥಾನದಲ್ಲಿ ಎದ್ದು ನಿಲ್ಲಬೇಕೆಂದು ಕೋರುತ್ತೇನೆ.

**(ಈ ಹಂತದಲ್ಲಿ ನಿರ್ಣಯದ ಪರವಾಗಿ ಸದನದಲ್ಲಿ ಹಾಜರಿದ್ದ ಕಾಂಗ್ರೆಸ್ ಪಕ್ಷದ ಸದಸ್ಯರುಗಳೆಲ್ಲರೂ ಎದ್ದು ನಿಂತರು)**
ನಿರ್ಣಯದ ಪರವಾಗಿ ಹತ್ತಕ್ಕಿಂತ ಹೆಚ್ಚು ಸದಸ್ಯರು ಬೆಂಬಲಿಸಿರುವುದರಿಂದ ನಿರ್ಣಯಕ್ಕೆ ಅನುಮತಿ ನೀಡಲಾಗಿದೆ. ಮೇಲ್ಕಂಡ ನಿರ್ಣಯವನ್ನು ಸೂಕ್ತ ದಿನಾಂಕದಂದು ಪರಿಶೀಲನೆಗೆ ತೆಗೆದುಕೊಳ್ಳಲು ನಿಯಮಾನುಸಾರ ದಿನಾಂಕವನ್ನು ನಂತರ ಗೊತ್ತುಪಡಿಸಲಾಗುವುದು. ನಿರ್ಣಯಕ್ಕೆ ಒಪ್ಪಿಗೆ ದೊರೆಯಿತು ಹಾಗೂ ಪರಿಶೀಲನೆಗೆ ತೆಗೆದುಕೊಳ್ಳಲು ಸದನವು ಸಮ್ಮತಿಸಿತು.

ಈಗ ಸದನವನ್ನು ಭೋಜನಕ್ಕಾಗಿ ಮದ್ಯಾಹ್ನ 3.00 ಗಂಟೆಯವರೆಗೆ ಮುಂದೂಡುತ್ತಿದ್ದೇನೆ.

(684)13-06-2017 3-20 ಬಿಕೆಪಿ-ಆರ್‌ಎನ್

**(ಮಧ್ಯಾಹ್ನ 1 ಗಂಟೆ 28 ನಿಮಿಷಕ್ಕೆ ಭೋಜನಕ್ಕಾಗಿ ಮುಂದೂಡಲ್ಪಟ್ಟ ಸದನವು ಪುನ: ಮಧ್ಯಾಹ್ನ 3 ಗಂಟೆ 26 ನಿಮಿಷಕ್ಕೆ ಪ್ರಾರಂಭವಾಯಿತು)**

**(ಮಾನ್ಯ ಉಪ ಸಭಾಪತಿಯವರಾದ ಶ್ರೀ ಮರಿತಿಬ್ಬೇಗೌಡರು ಪೀಠವನ್ನಲಂಕರಿಸಿದರು)**

**6.ವರದಿಯನ್ನೊಪ್ಪಿಸುವುದು**

**ಶ್ರೀ ಮಾನೆ ಶ್ರೀನಿವಾಸ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, 2016-17ನೇ ಸಾಲಿನ ಕರ್ನಾಟಕ ವಿಧಾನ ಮಂಡಲದ ಸ್ಥಳೀಯ ಸಂಸ್ಥೆಗಳ ಮತ್ತು ಪಂಚಾಯತ್ ರಾಜ್ ಸಂಸ್ಥೆಗಳ ಸಮಿತಿ ಸದಸ್ಯನಾದ ನಾನು ಮಾರ್ಚ್ 2014ಕ್ಕೆ ಅಂತ್ಯಗೊಂಡ ಸಿಐಜಿ ವರದಿಯಲ್ಲಿನ ಕಾರ್ಯನಿರ್ವಹಣಾ ಲೆಕ್ಕ ಪರಿಶೋಧನೆಯ ವರದಿಯ ಮೇಲೆ ನಗರಾಭಿವೃದ್ಧಿ ಹಾಗೂ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಇಲಾಖೆಗೆ ಸಂಬಂಧಿಸಿದಂತೆ 20,21 ಹಾಗೂ 22ನೇ ವರದಿಯನ್ನು ಸದನದಲ್ಲಿ ಮಂಡಿಸುತ್ತೇನೆ.

**ಉಪ ಸಭಾಪತಿಯವರು:-** ವರದಿಯನ್ನು ಒಪ್ಪಿಸಲಾಯಿತು.

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**7.ನಿಯಮ 68 ರಡಿಯಲ್ಲಿ ಸಾರ್ವಜನಿಕ ಮಹತ್ವದ ವಿಷಯದ ಮೇಲೆ ಚರ್ಚೆ.**

**ವಿಷಯ:- ರಾಜ್ಯದಲ್ಲಿ ಸತತ ಬರಗಾಲದಿಂದ ಉಂಟಾಗಿರುವ ಪರಿಸ್ಥಿತಿ ಬಗ್ಗೆ ಮುಂದುವರಿದ ಚರ್ಚೆ.**

- - -

**ಉಪ ಸಭಾಪತಿಯವರು:-** ಈಗ ಮಾನ್ಯ ಸದಸ್ಯರ ಗಮನಕ್ಕೆ ತರುವುದೇನೆಂದರೆ ದಯಮಾಡಿ ತಾವೆಲ್ಲರೂ ಸಹಕಾರ ಮಾಡಬೇಕು. ಈ ಬರ ಪರಿಸ್ಥಿತಿ ವಿಷಯದ ಬಗ್ಗೆ ಇಂದು ಸಾಧ್ಯವಾದ ಮಟ್ಟಿಗೆ ಎಲ್ಲಾ ಸದಸ್ಯರ ಚರ್ಚೆಯನ್ನು ಮುಕ್ತಾಯಗೊಳಿಸತಕ್ಕದ್ದು ಸೂಕ್ತ. ಅದಕ್ಕೆ ತಾವೆಲ್ಲರೂ ಸಹಕಾರ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಕೆ.ಬಿ.ಶಾಣಪ್ಪ:-** ಮಾನ್ಯ ಸಭಾಪತಿಯವರೆ, ನಿಯಮ 72 ಅಡಿಯಲ್ಲಿ ಚರ್ಚೆಗೆ ತೆಗೆದುಕೊಳ್ಳಿ.

**ಉಪ ಸಭಾಪತಿಯವರು:-** ಇಲ್ಲ, ಶಾಣಪ್ಪಾಜಿಯವರೆ, ಅಜೆಂಡಾ ಪ್ರಕಾರ ಹೋಗಬೇಕಾಗುತ್ತದೆ. ಈಗ ಬರ ಪರಿಹಾರದ ಬಗ್ಗೆ ಚರ್ಚೆ ಮಾಡಬೇಕಾಗುತ್ತದೆ. ಈಗ ನಿಯಮ 72ರ ಅಡಿಯಲ್ಲಿ ತೆಗೆದುಕೊಳ್ಳುವುದರಲ್ಲಿ ಅರ್ಥವಿಲ್ಲ. ದಯಮಾಡಿ ತಾವು ಸಹಕರಿಸಬೇಕು. ಈಗ ಶ್ರೀಯುತ ಕೆ.ಟಿ.ಶ್ರೀಕಂಠೇಗೌಡರವರು ತಮ್ಮ ಭಾಷಣವನ್ನು ಪ್ರಾರಂಭಿಸಬೇಕು.

**ಶ್ರೀ ಕೆ.ಟಿ.ಶ್ರೀಕಂಠೇಗೌಡ(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಹಿಂದೆ ಎಂದೂ ಕಾಣದ ಭೀಕರ ಬರಗಾಲ ನಮ್ಮನ್ನು ಕಾಡಿದೆ. ಎಲ್ಲೋ ಒಂದು ಕಡೆ ಈ ಬರಗಾಲದ ಬಗೆಗಿನ ಚರ್ಚೆಗೂ ಕೂಡ ಬರ ಬಂದಿದೆ ಎನ್ನುವ ಭಾವನೆ ನಮ್ಮನ್ನು ಕಾಡುತ್ತಿದೆ. ಅಧಿವೇಶನ ಪ್ರಾರಂಭವಾಗಿ 7 ದಿವಸಗಳು ಕಳೆದಿದೆ. ಕಳೆದವಾರ 5 ದಿವಸಗಳು, ಈ ವಾರ ಎರಡು ದಿವಸಗಳು ಸೇರಿ 7 ದಿವಸಗಳು ಕಳೆದಿವೆ. ಇಲ್ಲಿಯವರೆಗೆ ನಮ್ಮ ಗೆಳೆಯರಾದ ಶ್ರೀಯುತ ಸೋಮಣ್ಣ ಬೇವಿನ ಮರದ ರವರು ಮಾತನಾಡಿದ್ದಾರೆ. ನೂತನ ಸದಸ್ಯರಾದಂತ ಶ್ರೀಯುತ ರಮೇಶ್ ಬಾಬು ರವರು ಮಾತನಾಡಿದ್ದಾರೆ. ಇವರಿಬ್ಬರು ಅಷ್ಟೆ ಮಾತನಾಡಿದ್ದಾರೆ. ಈ ವಿಷಯವಾಗಿ ಅತ್ಯಂತ ಗಂಭೀರವಾಗಿ ಚರ್ಚೆ ಮಾಡಬೇಕಾದುದು ಇದೆ. ಕಾರಣ, ಬಹುಶ: ಈ ರಾಜ್ಯದ ಇತಿಹಾಸದಲ್ಲಿ ಇಷ್ಟೊಂದು ಘೋರ ಬರಗಾಲವನ್ನು ಕಂಡಿದ್ದಿಲ್ಲ. ನಮ್ಮಗಳ ಅನುಭವದಲ್ಲಿಯೇ ಇದು ಅತ್ಯಂತ ತೀವ್ರ ಎನ್ನುವುದು ರುಜುವಾತಾಗಿದೆ. ಬಹುಶ: ನಮ್ಮೂರಿನ ಕೆರೆ ನಾನು ಹುಟ್ಟಿದಾಗಿನಿಂದಲೂ ಕಳೆದ 6 ದಶಕಗಳಲ್ಲಿ ನೀರು ಖಾಲಿಯಾಗಿದ್ದನ್ನು ಕಂಡಿರಲಿಲ್ಲ. ಈಗ ನೀರು ಖಾಲಿಯಾಗಿ 4 ತಿಂಗಳು ಕಳೆದು ಹೋಗಿದೆ. ಇನ್ನೂ ಸಹ ಆ ಕೆರೆ ಇಷ್ಟು ಮಳೆ ಬಿದ್ದರೂ ನೀರನ್ನು ಕಂಡಿಲ್ಲ. ಇಂತಹ ತೀವ್ರವಾದ ಬರಗಾಲಗಳಿಂದ ಆದಂತಹ ಅನಾಹುತಗಳನ್ನು, ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಆದಾಗ ಅತ್ಯಂತ ಸಮರ್ಪಕವಾಗಿ ನಿಭಾಯಿಸುವಂತಹ ಕೆಲಸ ಸರ್ಕಾರದ ಕಡೆಯಿಂದಲೂ ಆಗಿಲ್ಲ. ಅದು ಸಹಜ ಕೂಡ. ಏಕೆಂದರೆ, ಇಡೀ ಪ್ರಕೃತಿ ಮುನಿದಾಗ ಯಾವುದೇ ಒಂದು ವ್ಯವಸ್ಥೆ ಆ ಪ್ರಕೃತಿಯನ್ನು ಮೀರಿ ಗೆಲ್ಲುತ್ತೇನೆ, ಅದನ್ನು ಮೀರಿ ನಾನು ನಿಲ್ಲುತ್ತೇನೆ ಎನ್ನುವುದು ಕಷ್ಟ. ಕಷ್ಟ ಎನ್ನುವುದು ಇವತ್ತು

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "**

ರುಜುವಾತಾಗಿದೆ. ಸಮಸ್ಯೆಗಳು ಬೆಟ್ಟದಷ್ಟಿವೆ. ಎಲ್ಲಿ ಬಿಡಿಸುವುದು, ಎಲ್ಲಿ ಅದಕ್ಕೆ ಪರಿಹಾರ ಕಂಡುಕೊಳ್ಳುವುದು ಎನ್ನುವ ಗೊಂದಲದಲ್ಲಿ ಸರ್ಕಾರ ಇದೆ. ಒಂದು ಊರಿಗೆ 4–5 ಬೋರ್‌ವೆಲ್‌ಗಳನ್ನು ತೆಗೆಸಿದರೆ ಆ ಬೋರ್‌ವೆಲ್‌ಗಳಲ್ಲೂ ನೀರು ಬರುವುದಿಲ್ಲ.

**ಶ್ರೀ ರಾಮಚಂದ್ರಗೌಡ:–** ಅದು ಕಷ್ಟಸಾಧ್ಯ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಹೌದು, ಅದು ಕಷ್ಟಸಾಧ್ಯ. ಆದರೆ, ಈ ಬರಕ್ಕೆ ಉತ್ತರ ಕೊಡ್ತುವಂತಹದ್ದು ತಲೆಮಾರುಗಳಲ್ಲಿ ಆಗಬೇಕಾದಂತಹ ಕೆಲಸ. ಅದು ನಿರಂತರವಾಗಿ ಒಂದು ಧೀರ್ಘ ಯೋಜನೆಗಳಿಂದ ಆಗಬೇಕಾದಂತಹ ಕೆಲಸ. ಆ ವಿಷಯಕ್ಕೆ ಆಮೇಲೆ ಬರುತ್ತೇನೆ.

**ಮುಂದು. . .**

(685)13–6–2017 3–30 ಎಸ್‌ಪಿಆರ್–ವಿಕೆ

**(ಉಪಸಭಾಪತಿಯವರ ಉಪಸ್ಥಿತಿ)**

**ಶ್ರೀ ಕೆ.ಟಿ.ಶ್ರೀಕಂಠೇಗೌಡ(ಮುಂದು):–**

ಪ್ರಸ್ತುತ ಬರದ ಭೀಕರ ಛಾಯೆ ಎಷ್ಟೊಂದು ಗಾಢವಾದ ಪರಿಣಾಮವನ್ನುಂಟು ಮಾಡಿದೆ ಎನ್ನುವುದರ ಬಗ್ಗೆ ಮೊದಲಿಗೆ ಗಂಭೀರವಾದ ಚರ್ಚೆಯನ್ನು ನಾವು ಮಾಡಬೇಕಾಗುತ್ತದೆ. ನಾನು ಮೊನ್ನೆಯ ದಿವಸ ಮೈಸೂರು ಜಿಲ್ಲೆಯ ಬಗ್ಗೆ ಪ್ರಕಟಗೊಂಡ ವರದಿಯನ್ನು ಗಮನಿಸಿದೆ. ಮೈಸೂರು ಜಿಲ್ಲೆಯಲ್ಲಿ 137 ಹಳ್ಳಿಗಳ ಜನ ಇಡೀ ಊರನ್ನು ಬಿಟ್ಟಿದ್ದಾರೆ. ಇವತ್ತಿನ ದಿವಸ 137 ಗ್ರಾಮಗಳಲ್ಲಿ ಒಬ್ಬ ಮನುಷ್ಯನೂ ಬದುಕಿಲ್ಲ. ಆ ಗ್ರಾಮಗಳ ವಿವರಗಳು ಈ ರೀತಿಯಾಗಿದೆ. ಕೆ.ಆರ್.ನಗರ ತಾಲ್ಲೂಕಿನ 25 ಹಳ್ಳಿಗಳು, ಹೆಚ್.ಡಿ.ಕೋಟೆ ತಾಲ್ಲೂಕಿನ 40 ಹಳ್ಳಿಗಳು, ಹುಣಸೂರು ತಾಲ್ಲೂಕಿನ 18 ಹಳ್ಳಿಗಳು, ಮೈಸೂರು ತಾಲ್ಲೂಕಿನ 17 ಹಳ್ಳಿಗಳು, ನಂಜನಗೂಡು ತಾಲ್ಲೂಕಿನ 20, ಪಿರಿಯಾಪಟ್ಟಣ ತಾಲ್ಲೂಕಿನ 7 ಹಳ್ಳಿಗಳು ಹಾಗೂ ಟೀ.ನರಸೀಪುರ ತಾಲ್ಲೂಕಿನ 10 ಗ್ರಾಮಗಳು. ಇದು ಮೈಸೂರು ಜಿಲ್ಲೆಯೊಂದರ ಚಿತ್ರಣವಾಗಿದೆ. 137 ಹಳ್ಳಿಗಳಲ್ಲಿ ಮನೆಗಳಿವೆ, ವ್ಯವಸ್ಥೆಗಳಿವೆ, ಶಾಲಾ–ಅಂಗನವಾಡಿ ಕಟ್ಟಡಗಳು ಖಾಲಿಯಿವೆ. ಒಟ್ಟಾರೆಯಾಗಿ ಏನೆಲ್ಲಾ ವ್ಯವಸ್ಥೆಗಳಿವೆ ಅವುಗಳೆಲ್ಲಾ ಖಾಲಿಯಿವೆ ಆದರೆ ಜನರು ಮಾತ್ರ ಒಬ್ಬರೂ ಇಲ್ಲ. ಮೈಸೂರು ಭಾಗವೊಂದರಲ್ಲಿ 137 ಹಳ್ಳಿಗಳಲ್ಲಿ ಒಬ್ಬರೂ ವಾಸವಿಲ್ಲ ; ನಿವಾಸಿಗಳು ನೆಲೆ ನಿಂತಿಲ್ಲವೆಂದರೆ ಇಡೀ ರಾಜ್ಯದ ಚಿತ್ರಣ ಹೇಗಿರುತ್ತದೆ? ಮುಂದುವರೆದು ಉತ್ತರ ಕರ್ನಾಟಕ ಪ್ರದೇಶದ ಪರಿಸ್ಥಿತಿ ಹೇಗಿರುತ್ತದೆ? ಪರಿಸ್ಥಿತಿ ಹೀಗಿರುವಾಗ ಎಷ್ಟು ಸಾವಿರ ಹಳ್ಳಿಗಳ ಜನರು ಇವತ್ತಿನ ದಿವಸ ಇಡಿಯಾಗಿ ಗುಳೆ ಅಥವಾ ವಲಸೆ ಹೋಗಿದ್ದಾರೆ. ಇಂತಹ ಪರಿಸ್ಥಿತಿ ಏಕಕಾಲದಲ್ಲಿ ಕಳೆದ ಒಂದೆರೆಡು–ಮೂರು ವರ್ಷಗಳಲ್ಲಿ ನಿರ್ಮಾಣವಾಗಿದೆ ಎನ್ನುವುದನ್ನು ನಾನು ಹೇಳುವುದಿಲ್ಲ. ನಿರ್ದಿಷ್ಟವಾಗಿ ಒಬ್ಬರ ಮೇಲೆ ಆರೋಪವನ್ನು ಮಾಡಲಿಕ್ಕೂ ನಾನು ತಯಾರಿಲ್ಲ. ಆದರೆ ಬರಗಾಲದ ಪರಿಸ್ಥಿತಿ ಇವತ್ತಿನ ದಿವಸ ತೀವ್ರವಾಗಿರಬಹುದು ಹಾಗೂ ಹೆಚ್ಚಾಗಿರಬಹುದು. ಆದರೆ ಕಳೆದ ಒಂದೆರೆಡು ದಶಕಗಳಿಂದ ನಿರಂತರವಾಗಿ ಬರಗಾಲದ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಬೇಗೆಯಿಂದ ಜನರು ದೊಡ್ಡ ಪ್ರಮಾಣದಲ್ಲಿ ಗುಳೆ ಹೋಗುತ್ತಾ ಹಳ್ಳಿಗಳೇ ಬರಿದಾಗುವಂತಹ ಸಂದರ್ಭಗಳು ಸೃಷ್ಟಿಯಾಗಿ ಹೋಗಿದೆ.

ಇವತ್ತಿನ ದಿನಪತ್ರಿಕೆಗಳಾದ ವಿಜಯ ಕರ್ನಾಟಕ, ಪ್ರಜಾವಾಣಿ ಹಾಗೂ ವಿಜಯ ವಾಣಿಗಳಲ್ಲಿ ನಮ್ಮ ಮುಖ್ಯಮಂತ್ರಿಗಳ ತವರು ಕ್ಷೇತ್ರ ವರುಣದಲ್ಲಿ ಅರಳಿಕಟ್ಟೆಹುಂಡಿ ಎಂಬ ಒಂದು ದೊಡ್ಡದಾದ ಗ್ರಾಮದ ಬಗ್ಗೆ ಲೇಖನವೊಂದು ಪ್ರಕಟವಾಗಿದೆ. ದಿನಪತ್ರಿಕೆಯ ಇಡೀ ಪುಟದಲ್ಲಿ ಸದರಿ ಗ್ರಾಮದ ಸ್ಪಷ್ಟ ಚಿತ್ರಣವನ್ನು ಕೊಟ್ಟಿದ್ದಾರೆ. ಸದರಿ ಗ್ರಾಮದ ಕುರಿತಾಗಿ ನನ್ನ ಸ್ನೇಹಿತರಾದ ರಾಜೀವ್ ಎಂಬುವವರ ಜೊತೆ ನಾನು ಒಂದೆರೆಡು ಗಂಟೆಗಳ ಕಾಲ ಮಾತನಾಡಿದ್ದೇನೆ. ನಾನು ಸದರಿ ಗ್ರಾಮಕ್ಕೆ ಭೇಟಿ ನೀಡಬೇಕೆಂದುಕೊಂಡಿದ್ದೆನು. ಅದು ಮೈಸೂರು ಜಿಲ್ಲೆಯಿಂದ 40 ಕಿಲೋಮೀಟರ್ ದೂರದಲ್ಲಿದೆ. ಆ ಗ್ರಾಮದಲ್ಲಿ 50-60 ಮನೆಗಳಿದ್ದು ಅಲ್ಲಿನ ಒಟ್ಟು ಜನಸಂಖ್ಯೆ 400-500 ಗಳಾಗಿರುತ್ತದೆ. ಅಲ್ಲಿ ಎರಡೇ ಸಮುದಾಯದವರು ವಾಸ ಮಾಡುತ್ತಿದ್ದರು. ಒಂದು ಹಾಲುಮತದವರು ಇದು ಮಾನ್ಯ ಮುಂತ್ರಿಮಂತ್ರಿಗಳ ಸಮುದಾಯವಾಗಿದ್ದು ಮತ್ತೊಂದು ಕಣಿ ಹೇಳುವ ಸಮುದಾಯ. ಆ ಗ್ರಾಮದಲ್ಲಿ ಕಣಿ ಹೇಳುವ ಸಮುದಾಯದ ಐದು ಕುಟುಂಬಗಳಿದ್ದವು. ಕಣಿ ಹೇಳುವ ಸಮುದಾಯವರು ಬಹಳ ಹಿಂದೆಯೇ ಗ್ರಾಮವನ್ನು ಬಿಟ್ಟು ಹೊರಟು ಹೋಗಿದ್ದರು. ಆ ಜನರಲ್ಲಿ ಸ್ವಲ್ಪ ಚಾಣಾಕ್ಷ್ಯತನವಿತ್ತು. ಅವರುಗಳು ಎಸ್.ಟಿ. ವರ್ಗಕ್ಕೆ ಬರುವಂತಹವರು. ಅವರುಗಳು ಜೋತಿಷ್ಯವನ್ನು ಹೇಳುತ್ತಿದ್ದರು. ಹೀಗಾಗಿ ನಮ್ಮ ಕಡೆಗಳಲ್ಲಿ ಕಣಿ ಹೇಳುವವರಿಗೆ ಅಲ್ಲಲ್ಲಿ ಊಟವನ್ನು ಕೊಟ್ಟು ಮಲಗಲು ಸ್ಥಳವನ್ನು ಕೊಡುತ್ತಾರೆ. ಹೀಗಾಗಿ ಆ ಸಮುದಾಯವರು ಬಹಳ ಹಿಂದೆಯೇ ಗ್ರಾಮವನ್ನು ತೊರೆದವರು. ಇನ್ನುಳಿದಂತೆ ಆ ಗ್ರಾಮದ 400-500 ಜನರು ಕಳೆದ ಹತ್ತು ಹದಿನೈದು ವರ್ಷಗಳಿಂದ ಕ್ರಮೇಣವಾಗಿ ಅಂದರೆ ಹಂತ ಹಂತವಾಗಿ ಊರನ್ನು ತೊರೆಯುತ್ತಾ ಬಂದರು. ಕಳೆದ ವರ್ಷದಲ್ಲಿ ಆ ಗ್ರಾಮದಲ್ಲಿ 15-16 ಜನ ಉಳಿದುಕೊಂಡಿದ್ದರು. ಈಗ ಅವರೂ ಸಹ ಪೂರ್ತಿಯಾಗಿ ಗ್ರಾಮವನ್ನು ತೊರೆದಿರುವುದರಿಂದ ಇವತ್ತಿನ ದಿವಸ ಇಡೀ ಊರೇ ಖಾಲಿಯಾಗಿ ಹೋಗಿದೆ. ಅವರುಗಳೆಲ್ಲಾ ಊರನ್ನು ತೊರೆದು ಎಲ್ಲಿಗೆ ಹೋಗಿದ್ದಾರೆ? ವಲಸೆ ಹೋದ ಜನರ ಪೈಕಿ ಶೇಕಡ 80 ರಷ್ಟು ಜನ ಮೈಸೂರು, ಶೇಕಡ 10 ರಷ್ಟು ಜನ ಬೆಂಗಳೂರು ಹಾಗೂ ಇನ್ನುಳಿದ ಶೇಕಡ 10 ರಷ್ಟು ನಿವಾಸಿಗಳು ನಂಜನಗೂಡು ಪ್ರದೇಶಗಳಿಗೆ ವಲಸೆ ಹೋಗಿದ್ದಾರೆ. ದಿನಪತ್ರಿಕೆಯವರು ಆ ಗ್ರಾಮದ ಬಗ್ಗೆ ಬಹಳ ವ್ಯಾಪಕವಾಗಿ ಅಧ್ಯಯನವನ್ನು ಮಾಡಿದ್ದಾರೆ. ನಾನು ಯಾವ ಕಾರಣಕ್ಕಾಗಿ ಈ ಹಳ್ಳಿಯನ್ನು ಮಾದರಿಯಾಗಿ ಹೇಳುತ್ತಿದ್ದೇನೆಂದರೆ ಹೀಗೆ ವಲಸೆ ಹೋಗಿರುವ ಎಲ್ಲಾ ಹಳ್ಳಿಗಳ ದಟ್ಟ ಚಿತ್ರಣ ಇದಾಗಿದೆ. ಈ ಸಂಗತಿಯು ಸರ್ಕಾರಕ್ಕೆ ಮತ್ತು ನಮ್ಮೆಲ್ಲರ ಗಮನಕ್ಕೆ ಬರಲೇ ಬೇಕಾದಂತಹ ವಿಚಾರವಾಗಿದೆ. ವಲಸೆಗೊಂಡ ಆ ಗ್ರಾಮದ ಎಲ್ಲಾ ಜನರು ಮೈಸೂರು ನಗರದಲ್ಲಿ ಯಾವ ಪ್ರದೇಶದಲ್ಲಿದ್ದಾರೆ? ಮೈಸೂರು ನಗರದಲ್ಲಿ ಟಿ.ಕೆ.ಬಡಾವಣೆಗೆ ಹೊಂದಿಕೊಂಡಂತಿರುವ ಬಂಗ್ಲೆಯಲ್ಲಿ ನಮ್ಮ ಮುಖ್ಯಮಂತ್ರಿಗಳ ಮನೆಯಿದೆ ಅಲ್ಲಿ ಮುಖ್ಯಮಂತ್ರಿಗಳಿದ್ದಾರೆ. ಇದಕ್ಕೆ ಹೊಂದಿಕೊಂಡಂತೆ ಜನತಾ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ನಗರ ಪ್ರದೇಶವಿದೆ. ಸದರಿ ಜನತಾ ನಗರದಲ್ಲಿ ಉಳಿದೆಲ್ಲಾ ವಲಸೆಗೊಂಡ ಜನರು ಬಾಡಿಗೆ ಮನೆಯಲ್ಲಿ ವಾಸವಾಗಿದ್ದಾರೆ. ವಲಸೆ ಹೊಂದಿದ ನಂತರ ಆ ಜನರು ಏನು ಮಾಡುತ್ತಿದ್ದಾರೆ? ಅವರುಗಳ ಪೈಕಿ ಗಂಡಸರು ತಳ್ಳುವ ಗಾಡಿಗಳ ಮುಖಾಂತರ ಸೊಪ್ಪು-ತರಕಾರಿಗಳನ್ನು ಮಾರಾಟ ಮಾಡುತ್ತಾರೆ, ಗಾರೆ ಕೆಲಸವನ್ನು ಮಾಡುತ್ತಾರೆ. ಹೆಣ್ಣುಮಕ್ಕಳು ಮನೆ-ಮನೆಗಳಿಗೆ ಹೋಗಿ ಬಟ್ಟೆಗಳನ್ನು ಒಗೆಯುವ, ಪಾತ್ರೆಗಳನ್ನು ತೊಳೆಯುವಂತಹ ಮನೆಗೆಲಸಗಳನ್ನು ಮಾಡುತ್ತಾರೆ. ಗಂಡಸರು ದಿನವೊಂದಕ್ಕೆ ರೂಪಾಯಿ 300-500 ಗಳನ್ನು ಸಂಪಾದನೆ ಮಾಡುತ್ತಾರೆ ಮತ್ತು ಹೆಂಗಸರು ಊಟದ ಜೊತೆಗೆ ತಿಂಗಳ ಸಂಬಳವನ್ನು ಪಡೆಯುತ್ತಾರೆ. ಇಡೀ ಗ್ರಾಮ ಬರಿದಾದರೂ ಆ ಊರಿನ ಮೇಲಿರುವ ಪ್ರೀತಿ ಅವರಿಗೆ ಹೋಗಿಲ್ಲ. ಇದು ತುಂಬಾ ಇತಿಹಾಸವನ್ನು ಹೊಂದಿದ ಊರಾಗಿದೆ. ಇದು ಕವಲಂದೆ ಹೋಬಳಿಯ ವ್ಯಾಪ್ತಿಗೆ ಬರುತ್ತದೆ. ಕವಲಂದೆ ಹೋಬಳಿ ವ್ಯಾಪ್ತಿಗೆ ಸೇರುವ ಹತ್ತಾರು ಹಳ್ಳಿಗಳ ಪರಿಸ್ಥಿತಿ ಹೀಗೆಯೇ ಇದೆ. ಅಲ್ಲಿನ ಶೇಕಡ 30-50 ರಷ್ಟು ಜನರು ವಲಸೆ ಹೋಗಿದ್ದಾರೆ. ಆದರೆ ಅರಳಿಕಟ್ಟೆಹುಂಡಿಯ ಇಡೀ ಗ್ರಾಮದ ಜನರು ವಲಸೆ ಹೋಗಿದ್ದಾರೆ. ಇದು ಸುತ್ತಮುತ್ತಲಿನ ಎಂಟು ಹಳ್ಳಿಗಳಿಗೆ ಕಟ್ಟೆಮನೆ ಗ್ರಾಮವಾಗಿದೆ. ಕಟ್ಟೆ ಮನೆ ಎಂದರೆ ಎಂಟು-ಹತ್ತು ಹಳ್ಳಿಗಳ ನ್ಯಾಯ ಪಂಚಾಯತಿ ಮಾಡುವಂತಹ ಗ್ರಾಮವಾಗಿರುತ್ತದೆ. ಈ ಗ್ರಾಮದ ನಂಜೇಗೌಡ ಎಂಬುವವರು ಈ ಕಟ್ಟೆಮನೆಯ ಯಜಮಾನರಾಗಿದ್ದಾರೆ. ಇವರು ಎಲ್ಲಾ ಹಳ್ಳಿಗಳ ಯಜಮಾನಿಕೆಯನ್ನು ಮಾಡುತ್ತಾ, ವ್ಯಾಜ್ಯಗಳನ್ನು ಇತ್ಯರ್ಥ ಮಾಡುವಂತಹ ಎಲ್ಲಾ ಕೆಲಸಗಳನ್ನು ಮಾಡುತ್ತಿದ್ದರು. ಆ ಮನುಷ್ಯನನ್ನೂ ಒಳಗೊಂಡಂತೆ ಇವತ್ತಿನ ದಿವಸ ಆ ಗ್ರಾಮದ ಎಲ್ಲಾ ನಿವಾಸಿಗಳು ಊರನ್ನು ಬಿಟ್ಟು ಹೋಗಿದ್ದಾರೆ. ಪತ್ರಕರ್ತರಾದ ಶ್ರೀ ರಾಜೀವ್ ರವರು ಅಲ್ಲಿಗೆ ಹೋದಾಗ ಅಪರೂಪಕ್ಕೆ ಸದರಿ ನಂಜೇಗೌಡ ದಂಪತಿಗಳು ಆ ಊರಿಗೆ ಬಂದಿರುತ್ತಾರೆ. ಸದರಿ ವ್ಯಕ್ತಿಯು ಈ ಹಿಂದೆ ಮಂಡಲ ಪಂಚಾಯತಿಯ ಪ್ರಧಾನ ಕಾರ್ಯದರ್ಶಿಯಾಗಿರುತ್ತಾರೆ. ಆ ಊರಿನಲ್ಲಿ ಸೊಸೈಟಿ ಇರುತ್ತದೆ. ನಾಲ್ಕೈದು ಹಳ್ಳಿಗಳಿಗೆ ಇಡೀ ಪಡಿತರ ವಿತರಣೆ ವ್ಯವಸ್ಥೆಯನ್ನು ಅವರು ಮಾಡಿರುತ್ತಾರೆ. ಆ ಊರಿನಲ್ಲಿರುವ ಅಂಗನವಾಡಿಗಳಿಗೆ ಮಕ್ಕಳು ಹೋಗುತ್ತಿರುತ್ತಾರೆ. ಪ್ರಾಥಮಿಕ ಶಾಲೆಗಳಲ್ಲಿ ಮಕ್ಕಳು ಓದುತ್ತಿರುತ್ತಾರೆ. ಆ ಊರಿನಿಂದ ಪಿ.ಯು.ಸಿ.ಯನ್ನು ಓದಿದ ಸಹಪಾಠಿಯು ಇನ್ನೊರ್ವ ಸಹಪಾಠಿಯೊಂದಿಗೆ ಮಾತನಾಡುತ್ತಿರುತ್ತಾರೆ. ಶಾಲಾ ಕಾಲೇಜುಗಳನ್ನು ಓದಲು ನಂಜನಗೂಡು ತಾಲ್ಲೂಕಿಗೆ ಬರುತ್ತಿರುತ್ತಾರೆ. ಅಂತಹ ಇಡೀಯ ಗ್ರಾಮವು ಇವತ್ತಿನ ದಿವಸ ಬರಿದಾಗಿ ಹೋಗಿದೆ. ಅಲ್ಲಿನ ನಿವಾಸಿಗಳ ಕಸುಬು ಏನಾಗಿತ್ತು? ಆ ಊರಿನಲ್ಲಿರುವವರೆಲ್ಲರೂ ಜಮೀನ್ದಾರರೇ ಆಗಿದ್ದರು. ಅವರುಗಳು 2, 3, 5, 7, 10 ಎಕರೆಗಳನ್ನು ಹೊಂದಿದ ಜಮೀನ್ದಾರರು. ಅವರುಗಳು ರೇಷ್ಮೆ ಮತ್ತು ಹತ್ತಿಯ ಬೆಳೆಗಳನ್ನು ಮಳೆಯ ಆಧಾರದ ಮೇಲೆ ಬೆಳೆಯುತ್ತಿದ್ದರು. ವರ್ಷಕ್ಕೆ ಮೂರ್‍ನಾಲ್ಕು ರೇಷ್ಮೆ, ಹತ್ತಿ ಬೆಳೆಗಳನ್ನು ಬೆಳೆಯುತ್ತಿದ್ದರು. ಕ್ರಮೇಣವಾಗಿ ಅದು ಒಂದು ಬೆಳೆಗೆ ಇಳಿಕೆಯಾಯಿತು. ಒಂದು ಹಂತದಲ್ಲಿ ಎಲ್ಲಿಯೋ ಒಂದು ಕಡೆ ರೇಷ್ಮೆಯ ಬೆಲೆಯು ಕುಸಿದು ಹೋಯಿತು. ಬೆಳೆಗಳನ್ನು ಬೆಳೆಯುವುದಕ್ಕೆ ಆಗಲಿಲ್ಲ. ಪರಿಸ್ಥಿತಿ ಹೀಗಿರುವಾಗ ಬದುಕುವಾದರೂ ಹೇಗೆ? ಹೀಗಾಗಿ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಇವತ್ತಿನ ದಿವಸ ಇಡೀ ಊರಿನ ಜನರು ವಲಸೆಗೊಂಡು ಮೈಸೂರು, ಬೆಂಗಳೂರು ಮತ್ತು ನಂಜನಗೂಡು ಪ್ರದೇಶಗಳಿಗೆ ಬಂದಿದ್ದಾರೆ. ಆದರೆ ಊರಿನ ಮೇಲಿನ ವ್ಯಾಮೋಹ ಆ ಜನಗಳಿಗೆ ಹೋಗಿಲ್ಲ. ಇತ್ತೀಚೆಗೆ ಆ ಗ್ರಾಮದ ಜನರು ಮದುವೆಯನ್ನು ಮಾಡುತ್ತಾರೆ. ಲಗ್ನ ಪತ್ರಿಕೆಯಲ್ಲಿ ಅರಳಿಕಟ್ಟೆಹುಂಡಿ ಗ್ರಾಮದ ವಿಳಾಸವನ್ನು ಮುದ್ರಿಸುತ್ತಾರೆ. ಮೈಸೂರಿನಲ್ಲಿ ನಿಮ್ಮ ಊರು ಯಾವುದು ಎಂದು ಕೇಳಿದಾಗ ಅರಳಿಕಟ್ಟೆಹುಂಡಿ ಗ್ರಾಮ ಎಂಬುದಾಗಿ ತಿಳಿಸುತ್ತಾರೆ. ಅವರುಗಳು ಊರನ್ನು ತೊರೆದು ಹತ್ತು ಹಲವಾರು ವರ್ಷಗಳಾದರೂ ಕೂಡ ಲಗ್ನ ಪತ್ರಿಕೆಯಲ್ಲಿ ಊರಿನ ವಿಳಾಸವನ್ನೇ ಮುದ್ರಿಸಿ, ಅವುಗಳನ್ನು ಎಲ್ಲರಿಗೂ ಹಂಚುತ್ತಾರೆ. ನಮ್ಮಲ್ಲಿ ಹೆಣ್ಣನ್ನು ತರುವ ಶಾಸ್ತ್ರದಲ್ಲಿ ಚಪ್ಪರವನ್ನು ಹಾಕಿಸಬೇಕು, ಸ್ನಾನ ಮಾಡಿಸಬೇಕು. ಆದರೆ ಇನ್ನಾರದೋ ಊರಿನ ಸಂಬಂಧಿಕರ ಮನೆಗೆ ಹೋಗಿ ಶಾಸ್ತ್ರಗಳನ್ನು ಮಾಡುತ್ತಾರೆ. ಅವರುಗಳ ಊರಿಗೆ ಹೋಗುವ ಸ್ಥಿತಿಯಿಲ್ಲ ಏಕೆಂದರೆ ಆ ಊರಿನಲ್ಲಿ ಯಾವುದೇ ರೀತಿಯಾದ ಸವಲತ್ತುಗಳು ಉಳಿದಿಲ್ಲ. ಆ ಊರಿನಲ್ಲಿ ನೀರು ನಿಲ್ಲುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ನೀರನ್ನು ತುಂಬಿಸುವ ಪ್ರಶ್ನೆಯೇ ಇಲ್ಲ. ಕೆರೆಗಳಿಗೆ ನೀರನ್ನು ತುಂಬಿಸುವ ಪ್ರಶ್ನೆಯೇ ಇಲ್ಲ. ಬೋರ್‌ವೆಲ್, ಬಾವಿಗಳಲ್ಲಿ ನೀರಿಲ್ಲ. ಪರಿಸ್ಥಿತಿ ಹೀಗಾದರೆ ಅಲ್ಲಿ ಜನ ಹೇಗೆ ವಾಸವಿರುತ್ತಾರೆ?

ನನಗೆ ದೊಡ್ಡ ಪ್ರಮಾಣದಲ್ಲಿ ಆಶ್ಚರ್ಯವಾಗಿರುವುದೇನೆಂದರೆ ನಮ್ಮಲ್ಲಿ ಬಹಳ ದೊಡ್ಡ ಯೋಜನೆಗಳಿವೆ, ಅವುಗಳಾವುವೆಂದರೆ ಅನ್ನಭಾಗ್ಯ ಯೋಜನೆ, ಕೃಷಿ ಭಾಗ್ಯ ಯೋಜನೆ. ಇದು ಮನೆಯ ಬಾಗಿಲಿಗೆ ನೀಡುವಂತಹ ಯೋಜನೆಯಾಗಿದ್ದು ಇದು ಮಾನ್ಯ ಕೃಷಿ ಸಚಿವರಾದ ಶ್ರೀ ಕೃಷ್ಣಭೈರೇಗೌಡರಿಗೆ ಬರುತ್ತದೆ. ನಮ್ಮಲ್ಲಿ ನೂರೆಂಟು ಯೋಜನೆಗಳಿವೆ. ಇವುಗಳು ತೋಟಗಾರಿಕೆ, ನರೇಗಾ ಉದ್ಯೋಗ ಖಾತ್ರಿ ಯೋಜನೆಗಳನ್ನು ಒಳಗೊಂಡಿವೆ. ನೂರೆಂಟು ಕೆಲಸಗಳಿವೆ. ಗ್ರಾಮ ಪಂಚಾಯಿತಿಯಿಂದ ಮೊದಲುಗೊಂಡು ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ ಹಾಗೂ ನಂತರದ ಸರ್ಕಾರದ ಮಟ್ಟದವರೆಗೆ ಹಲವಾರು ವ್ಯವಸ್ಥೆಗಳಿವೆ. ಇವತ್ತಿನ ದಿವಸ ಜನರಿಗೆ ಶಕ್ತಿಯನ್ನು ತುಂಬಲಿಕ್ಕೆ, ಅವರುಗಳ ನೋವನ್ನು ಪರಿಹರಿಸುವುದಕ್ಕಾಗಿ, ಕಣ್ಣೀರನ್ನು ಒರೆಸುವುದಕ್ಕಾಗಿ, ಅವರುಗಳಿಗೆ ನೆರವಾಗಿ ನಿಲ್ಲುವುದಕ್ಕಾಗಿ ಹಲವಾರು ಯೋಜನೆ, ಕಾರ್ಯಕ್ರಮಗಳಿವೆ. ಅಂತಹ ಯಾವ ಯೋಜನೆಗಳೂ ಸಹ ಅವರುಗಳನ್ನು ಅವರ ಊರಿನಲ್ಲಿಯೇ ಉಳಿಸುವುದಕ್ಕೆ ನೆರವಿಗೆ ಬಂದಿರುವುದಿಲ್ಲ. ಅವರುಗಳ ಬಳಿ ಪಡಿತರ ಚೀಟಿ, ಮತದಾನದ ಗುರುತಿನ ಚೀಟಿಗಳು ಆ ಊರಿನ ವಿಳಾಸಕ್ಕೆ ಇವೆ. ತಿಂಗಳಿಗೊಮ್ಮೆ ಪಡಿತರವನ್ನು ಪಡೆದುಕೊಂಡು ತಮ್ಮ ತಮ್ಮ ಸ್ಥಳಗಳಿಗೆ ಮರಳುತ್ತಾರೆ. ಚುನಾವಣಾ ಸಮಯದಲ್ಲಿ ಆ ಊರಿಗೆ ತಪ್ಪದೇ ಮತದಾನ ಮಾಡಲು ಹೋಗುತ್ತಾರೆ ಹಾಗೂ ನಮ್ಮ ಸಿದ್ದರಾಮಣ್ಣ ಸಾಹೇಬರಿಗೆ ಮತ ಹಾಕುವುದಾಗಿ ಹೇಳುತ್ತಾರೆ. ಇದು ನನಗೆ ಬಹಳ ಆಶ್ಚರ್ಯವೆಂದೆನಿಸುತ್ತದೆ. ಒಂದು ಬಾರಿ ಪಕ್ಕದ ಊರಿನಲ್ಲಿ ಇನ್ನೂ ಜನರಿದ್ದಾರೆ ಆದರೆ ನೀವು ಏಕೆ ಊರನ್ನು ಬಿಟ್ಟು ಹೋಗಿದ್ದೀರಿ ಎಂಬ ಪ್ರಶ್ನೆಯನ್ನು ಕೇಳಿದಾಗ ಪಕ್ಕದ ಊರಿನಲ್ಲಿ ನಾಲ್ಕೈದು ಸಮುದಾಯದ ಜನರಿದ್ದಾರೆ ; ಒಂದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಸಮುದಾಯದವರು ಇಲ್ಲೇ ಇದ್ದಾರೆ ನಾವೇಕೆ ಹೋಗಬೇಕು ಎಂಬ ವಾಂಛಲ್ಯಕ್ಕಾಗಿಯಾದರೂ ಅಥವಾ ಸ್ವಾಭಿಮಾನಕ್ಕಾಗಿಯಾದರೂ ಜನರು ಅಲ್ಲೇ ಇರಬೇಕಾಗುತ್ತದೆ. ಹೀಗಾಗಿ ನಾವುಗಳು ಇಲ್ಲಿಯೇ ಇದ್ದೇವೆ. ಆದರೆ ನಾವುಗಳು ಇವತ್ತಿನ ದಿವಸ ಇಲ್ಲಿ ಬದುಕುವುದಕ್ಕಾಗಿ ಯಾವ ಕಾರಣವೂ ಇಲ್ಲವೆಂಬುದಾಗಿ ಹೇಳುತ್ತಾರೆ. ನೀರಿಲ್ಲದ, ಬೆಳೆಯನ್ನು ಬೆಳೆಯಲಾಗದ, ಯಾವುದೇ ಸವಲತ್ತು ಸೌಕರ್ಯಗಳಿಲ್ಲದ ಹಾಗೂ ವಾಸ ಮಾಡಲಿಕ್ಕೆ ಸಕಾರಣವಿಲ್ಲದ ಜನರು ಇವತ್ತಿನ ದಿವಸ ಪೂರ್ತಿಯಾಗಿ ಗ್ರಾಮದಿಂದ ವಲಸೆ ಹೋಗಿದ್ದಾರೆ. ಇಲ್ಲಿರುವ ನನ್ನ ಪ್ರಶ್ನೆ ಏನೆಂದರೆ, ಮೈಸೂರು ಜಿಲ್ಲೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳ ಸ್ವಕ್ಷೇತ್ರವನ್ನು ಒಳಗೊಂಡಂತೆ 137 ಹಳ್ಳಿಗಳು ಗುಳೆ ಹೋಗಿವೆ ಎನ್ನುವುದಾದರೆ ಇಡೀ ರಾಜ್ಯದಲ್ಲಿ ಇಷ್ಟೊಂದು ದೊಡ್ಡ ವಲಸೆ ಒಂದು ರೀತಿಯಲ್ಲಿ ಸಾಗರೋಪಾದಿಯಲ್ಲಿ ಆಗುತ್ತಿದೆ ಎಂದಾಗ ನಾವುಗಳೆಲ್ಲಾ ಎಚ್ಚೆತ್ತುಕೊಳ್ಳಲೇ ಬೇಕಾಗಿದೆ. ನಮ್ಮ ಯಾವ ಯೋಜನೆಗಳೂ ಜನರನ್ನು ಉಳಿಸುವ ದಿಸೆಯಲ್ಲಿ ಕೆಲಸ ಮಾಡಿಲ್ಲ. ನಮ್ಮ ಯಾವ ಕಾರ್ಯಕ್ರಮಗಳೂ ಜನರ ಹಸಿವನ್ನು ನೀಗಿಸಿಲ್ಲ ಹಾಗೂ ಇಂಗಿಸಿಲ್ಲ. ಯಾವ ಯೋಜನೆಗಳೂ ಜನರಿಗೆ ಬದುಕನ್ನು, ಭವಿಷ್ಯವನ್ನು ಕಟ್ಟಿಕೊಟ್ಟಿಲ್ಲ. ಈ ವಿಷಯದಲ್ಲಿ ನಾವು ಮರು ಚಿಂತನೆಯನ್ನು ಮಾಡಬೇಕಾಗಿದೆ. ಜನರಿಗೆ ಅವರ ಬದುಕನ್ನು ಕಟ್ಟಿಕೊಡಲಿಕ್ಕೆ ... ಉದಾಹರಣೆಗೆ ಒಂದು ಹಳ್ಳಿ ಹೋಯಿತು ಎಂದರೆ ಹಳ್ಳಿಯ ಬದುಕು, ಸಂಸ್ಕೃತಿ, ಜನಪದಗಳು ಹೋದವು. ಅರಳಿಕಟ್ಟೆ ಪುಂಡಿಯ ತಲೆಮಾರು ಹೋಯಿತು. ಅದು ನಮ್ಮ ಊರು ಎಂದು ಮಕ್ಕಳು, ಮೊಮ್ಮಕ್ಕಳು ಏಕೆ ಹೇಳುತ್ತಾರೆ. ಹಳ್ಳಿಗಳು ಉಳಿಯಬೇಕು ಎಂದು ಮಹಾತ್ಮಾ ಗಾಂಧೀಜಿಯವರು ಹೇಳಿದ್ದರು. ಗ್ರಾಮ ರಾಜ್ಯದ, ಸ್ವರಾಜ್ಯದ, ರಾಮರಾಜ್ಯದ ಕಲ್ಪನೆಗಳನ್ನು ಕಂಡಿದ್ದರು. ಈಗ ಹಳ್ಳಿಗಳು ಏನಾಗುತ್ತಿವೆ ಎಂದರೆ . . .

(ಮುಂದು)

(686)13-6-2017 3-40 ಎಂಎಸ್ಎಸ್(ಪಿಕೆ)-ವಿಕೆ

**ಶ್ರೀ ಶರಣಪ್ಪ ಮಟ್ಟೂರ:-** ತಾವು ಕೆಲವು ವಾಸ್ತವ ಸಂಗತಿಗಳ ಬಗ್ಗೆ ಹೇಳುತ್ತಿದ್ದೀರಿ. ನಮ್ಮ ಸರ್ಕಾರ ಹಸಿದವನಿಗೆ ಅನ್ನಭಾಗ್ಯವನ್ನು ಕೊಟ್ಟಿದೆ. ಮಾನ್ಯ ಕೃಷಿ ಸಚಿವರು ಮತ್ತು ಮಾನ್ಯ ಕಂದಾಯ ಸಚಿವರು ಇಲ್ಲೇ ಇದ್ದಾರೆ. ನಮ್ಮ ಮಾನ್ಯ ಸಿದ್ಧರಾಮಯ್ಯನವರ ನೇತೃತ್ವದ ಸರ್ಕಾರ ಸಾಕಷ್ಟು ಕಾರ್ಯಕ್ರಮಗಳನ್ನು ಕೊಟ್ಟಿದೆ. ಪ್ರತಿಯೊಬ್ಬರಿಗೂ ಮುಟ್ಟುವಂತಹ ಒಳ್ಳೊಳ್ಳೆ ಯೋಜನೆ ಕೊಟ್ಟಿದ್ದಾರೆ. ತಾವು ಒಳ್ಳೆಯ ರೀತಿಯಲ್ಲಿ ವಿಶ್ಲೇಷಣೆ ಮಾಡುತ್ತಿದ್ದೀರಿ, ಮನಮುಟ್ಟುವ ಹಾಗೆ ಹೇಳುತ್ತಿದ್ದೀರಿ. ಆದರೆ ತಮ್ಮ ಸಲಹೆ ಏನು ಅದನ್ನು ಹೇಳಿ. What is your valuable suggestion to put an end to this? Please tell us.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಆ ಕುರಿತು ಕೂಡ ಹೇಳುತ್ತೇನೆ. ನಾವು-ನೀವು ಎಲ್ಲರೂ ಕೂಡ ಇಂತಹ ಸಮಸ್ಯೆಗಳಿಗೆ ಪರಿಹಾರ ಹುಡುಕೋಣ. ಮಾನ್ಯ ಸಭಾಪತಿಗಳೆ, ಮೈಸೂರಿನಲ್ಲಿ ಸರ್ಕಾರ ಮಾಡಿದ ಸಾಧನ



ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಸಮಾವೇಶದ ಕಾರ್ಯಕ್ರಮ ಕೂಡ ಆ ರೈತರ ನೆರವಿಗೆ ಬರಲಿಲ್ಲ. ಅಂಥವರ ಭವಿಷ್ಯ ಕಟ್ಟಿಕೊಡುವ ನಿಟ್ಟಿನಲ್ಲಿ ನಾವು ಯೋಚನೆ ಮಾಡಬೇಕಿದೆ. ಒಂದು ಕಡೆ ಸಾರಾಸಗಟಾಗಿ ಹಳ್ಳಿಯ ಜನ ಗುಳೆ ಹೋದರು. ಅದಲ್ಲದೇ ರೈತರ ಆತ್ಮಹತ್ಯೆ ಕೂಡ ನಡೆಯುತ್ತಿದೆ. ನಾನು ನಿನ್ನೆಯ ಪತ್ರಿಕೆಯಲ್ಲಿ, ಪಿರಿಯಾಪಟ್ಟಣದಲ್ಲಿ ಒಬ್ಬ ರೈತ ಸತ್ತಿರುವ ಬಗ್ಗೆ ಓದಿದೆ. ಬೆಳಗಾವಿ, ಚಿಂತಾಮಣಿಯ ಹಳ್ಳಿಗಳಲ್ಲಿ ರೈತ ಸತ್ತಿದ್ದಾನೆ, ಮದ್ದೂರು ತಾಲ್ಲೂಕಿನ ಭಾರತಿನಗರದಲ್ಲಿ ಒಬ್ಬ ರೈತ ಸತ್ತಿದ್ದಾನೆ. ಪ್ರತಿನಿತ್ಯ ರೈತನ ಆತ್ಮಹತ್ಯೆ ವಿಷಯ ಬರುತ್ತಿದೆ. ನಾನು ಇವತ್ತಿನ ಕನ್ನಡಪ್ರಭ ದಿನಪತ್ರಿಕೆಯನ್ನು ಓದಿದೆ. ರಾಜ್ಯದಲ್ಲಿ 5 ತಿಂಗಳಲ್ಲಿ 300 ರೈತರ ಆತ್ಮಹತ್ಯೆ ಎನ್ನುವ ವಿಚಾರ ಬಂದಿದೆ. ನಾವೆಲ್ಲಾ ಹೇಳಿಯಾದ ಮೇಲೆ ಮೀಡಿಯಾದವರು ಇಂತಹ ಆತ್ಮಹತ್ಯೆ ಪ್ರಕರಣಗಳ ಬಗ್ಗೆ ಕಡಿಮೆ ವರದಿ ಮಾಡುತ್ತಿದ್ದಾರೆ. ಆದರೆ ಬಹುದೊಡ್ಡ ಪ್ರಮಾಣದಲ್ಲಿ ಆತ್ಮಹತ್ಯೆಗಳಾಗುತ್ತಿವೆ. ಈ 3 ತಿಂಗಳಲ್ಲಿ, ಯಾವುದು ನೀರಾವರಿ ಪ್ರದೇಶಗಳಿದೆಯೋ, ಈಗ ತೀವ್ರ ಬರಗಾಲಕ್ಕೆ ತುತ್ತಾಗಿದೆಯೋ ಅಂಥದ್ದನ್ನು ಗಮನಿಸಿದರೆ, ಹಾಸನ ಪ್ರಥಮ ಸ್ಥಾನದಲ್ಲಿದೆ. ಉತ್ತರ ಕರ್ನಾಟಕದ ಒಂದು ಜಿಲ್ಲೆ 2ನೇ ಸ್ಥಾನದಲ್ಲಿದೆ. ಮಂಡ್ಯ ಜಿಲ್ಲೆ 3ನೇ ಸ್ಥಾನದಲ್ಲಿದೆ. ಇಂತಹ ನಿರ್ದಿಷ್ಟ ಜಿಲ್ಲೆಯಲ್ಲಿ ಆತ್ಮಹತ್ಯೆ ನಡೆಯುತ್ತಿಲ್ಲ ಎಂದು ಹೇಳುವ ಹಾಗಿಲ್ಲ. ಹಾಸನ, ಹಾವೇರಿ ಮತ್ತು ಮಂಡ್ಯ ಜಿಲ್ಲೆಗಳಲ್ಲಿ 20ಕ್ಕಿಂತ ಹೆಚ್ಚು ಇಂತಹ ಪ್ರಸಂಗಗಳು ನಡೆದಿವೆ. ಕೊಪ್ಪಳ, ಬೆಳಗಾವಿ, ರಾಯಚೂರು, ಮೈಸೂರು ಮತ್ತು ತುಮಕೂರು ಜಿಲ್ಲೆಗಳಲ್ಲಿ 10 ಕ್ಕೂ ಹೆಚ್ಚು ನಡೆದಿದೆ. ದಕ್ಷಿಣಕನ್ನಡ ಮತ್ತು ಉಡುಪಿ ಸೇರಿದ ಹಾಗೆ ಎಲ್ಲಾ ಜಿಲ್ಲೆಗಳಲ್ಲಿ ನಿರಂತರ ಆತ್ಮಹತ್ಯೆ ಪ್ರಕರಣಗಳು ನಡೆಯುತ್ತಿವೆ. ಒಂದು ಕಡೆ ಹಳ್ಳಿಗಳು ಬರಿದಾಗುತ್ತಿವೆ, ಹಳ್ಳಿಯ ಜನ ಸಾರಾಸಗಟಾಗಿ ವಲಸೆ ಹೋಗುತ್ತಿದ್ದಾರೆ. ಇನ್ನೊಂದು ಕಡೆ ರೈತ ತನ್ನ ಬದುಕನ್ನೇ ಬರಿದು ಮಾಡಿಕೊಳ್ಳುತ್ತಿದ್ದಾನೆ. ತನ್ನ ಭವಿಷ್ಯವನ್ನು ಬರಿದು ಮಾಡಿಕೊಳ್ಳುತ್ತಿದ್ದಾನೆ. ಬರೆದಿಟ್ಟು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾನೆ. ಇಂತಹ ಸೊಸೈಟಿಯಲ್ಲಿ ನನಗೆ ಇಷ್ಟು ಸಾಲ ಇದೆ, ಇಂತಹ ಬ್ಯಾಂಕ್‌ನಲ್ಲಿ ಇಷ್ಟು ಸಾಲ ಇದೆ, ಖಾಸಗಿಯಾಗಿ ಇಷ್ಟು ಸಾಲ ಇದೆ, ನನ್ನ ಬೆಳೆ ನನ್ನ ಕೈಗೆ ಸಿಗುತ್ತಿಲ್ಲ, ಬೆಳೆಗಾಗಿ ಇಷ್ಟು ಖರ್ಚು ಮಾಡಿದೆ, ಬದುಕುವುದಕ್ಕೆ ಆಗುತ್ತಿಲ್ಲ, ಮಕ್ಕಳಿಗೆ ಭವಿಷ್ಯ ಕೊಡುವುದಕ್ಕೆ ಆಗುತ್ತಿಲ್ಲ, ನಾನು ಸಾಯಲೇಬೇಕು ಎಂದು ಬರೆದಿಟ್ಟು ಸಾಯುತ್ತಿದ್ದಾನೆ. ಯಾವುದೇ ಗೊಂದಲ ಆಗಬಾರದು ಎಂದು ಡೆತ್‌ನೋಟ್ ಬರೆದಿಟ್ಟು ಸಾಯುವ ಒಂದು ಪರಂಪರೆ ಹುಟ್ಟು ಹಾಕುತ್ತಿದ್ದಾನೆ. ಒಂದು ಕಡೆ ಬಹಳ ದೊಡ್ಡ ಸಂಖ್ಯೆಯಲ್ಲಿ ಆತ್ಮಹತ್ಯೆ ಮಾಡಿಕೊಳ್ಳುವುದು ಅವ್ಯಾಹತವಾಗಿ ನಡೆಯುತ್ತಿದೆ, ಮತ್ತೊಂದು ಕಡೆ ಬಹಳ ದೊಡ್ಡ ಸಂಖ್ಯೆಯಲ್ಲಿ ಹಳ್ಳಿಯ ಜನ ಗುಳೆ ಹೋಗುತ್ತಿದ್ದಾರೆ. ಈ ಎಲ್ಲದರ ಹಿನ್ನೆಲೆಯಲ್ಲಿ ಇವತ್ತು ನಾವು ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ದೊಡ್ಡ ಪ್ರಯತ್ನಕ್ಕೆ ಬರಬೇಕಿದೆ. ನಾನು ಹಾಗೆಯೇ ಗಮನಿಸುತ್ತಿದ್ದೆ. ಬ್ರೆಜಿಲ್ ದೇಶ ಇದೆ. ಈ ಜಗತ್ತಿನಲ್ಲಿ ಭೌಗೋಳಿಕವಾಗಿ ದೊಡ್ಡದಾಗಿರುವ ರಾಷ್ಟ್ರಗಳೆಂದರೆ ಕ್ರಮವಾಗಿ, ರಷ್ಯಾ, ಕೆನಡಾ, ಚೀನಾ, ಅಮೆರಿಕಾ ಮತ್ತು ಬ್ರೆಜಿಲ್ ಬರುತ್ತದೆ. ಆರನೆಯದು ಆಸ್ಟ್ರೇಲಿಯಾ, ಏಳನೆಯದು ಭಾರತ. ಕಳೆದ 10-15 ವರ್ಷಗಳಲ್ಲಿ ಮಳೆ ಬೀಳುವ ಪ್ರಮಾಣ ಕಡಿಮೆಯಾಗಿದೆ. ಈ ಹಿಂದೆ ಮಳೆಯಾಗುತ್ತಿದ್ದ

“ ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

ಸಂದರ್ಭದಲ್ಲಿ ನಾವು 10–15 ದಿವಸಗಳ ಕಾಲ ಮನೆಯೊಳಗೆ ಸೇರಿಬಿಡುತ್ತಿದ್ದೆವು. ಹೊರಗೆ ಬರುವುದಕ್ಕಾಗುತ್ತಿರಲಿಲ್ಲ. ಕುರಿ–ದನಗಳನ್ನು ಹೊಲಕ್ಕೆ ಬಿಡುವುದಕ್ಕಾಗುತ್ತಿರಲಿಲ್ಲ, ಮೊರದಲ್ಲಿ ಸೊಪ್ಪು ತಂದು ಹಾಕುತ್ತಿದ್ದೆವು. ಆ ಪರಿಸ್ಥಿತಿ ಈಗಿಲ್ಲ. ಮಲೆನಾಡಿನಲ್ಲೇ ತೆಂಗಿನ ಮರಗಳು–ತೋಟಗಳು ಒಣಗಿ ಹೋಗುವ ಸ್ಥಿತಿ ಇದೆ ಎಂದ ಮೇಲೆ ಬಯಲುಸೀಮೆ ಪ್ರದೇಶಗಳ ಬಗ್ಗೆ ಹೇಳುವ ಹಾಗೆಯೇ ಇಲ್ಲ. ಬ್ರೆಜಿಲ್‌ಗೆ ಅಮೆಜಾನ್ ಎಂಬ ಒಂದೇ ಒಂದು ನದಿ ಇದೆ. ನಮಗೆ ಸಾಕಷ್ಟು ನದಿಗಳಿವೆ. ನಮ್ಮಲ್ಲಿ ವರ್ಷತುಂಬಿ ಹರಿಯುವ ನದಿಗಳು ಎಷ್ಟಿವೆ? ರಾವಿ, ಬಿಯಾಸ್, ದ್ವಾಮೋದರ್, ಗಂಗಾ, ಯಮುನಾ, ಸಟ್ಲೆಜ್, ಬ್ರಹ್ಮಪುತ್ರ ಇತ್ಯಾದಿ 16 ಬೃಹತ್ ನದಿಗಳ ಜೊತೆ ಪೂರಕ 14 ನದಿಗಳು, ಹೀಗೆ ಒಟ್ಟು 30 ನದಿಗಳಿವೆ. 14 ನದಿಗಳು ದಕ್ಷಿಣ ಭಾರತದಲ್ಲಿದ್ದರೆ, 16 ನದಿಗಳು ಉತ್ತರ ಭಾರತದಲ್ಲಿವೆ. ಆದರೆ ಇಡೀ ಬ್ರೆಜಿಲ್ ನಲ್ಲಿ ಅಮೆಜಾನ್ ನದಿ ಮಾತ್ರ ಇದೆ. ಆ ನದಿಯ ಉಪನದಿಗಳಿಗೆ 7277 ಅಣೆಕಟ್ಟುಗಳನ್ನು ಕಟ್ಟಿಕೊಂಡಿದ್ದಾರೆ. ಆ ನದಿಯಿಂದ ಎಲ್ಲಾ ಅಣೆಕಟ್ಟುಗಳನ್ನು ತುಂಬಿಸುತ್ತಾರೆ. ಇಲ್ಲಿನ ಒಂದು ಘಟನೆ ಹೇಳಬಯಸುತ್ತೇನೆ. ಬ್ರೆಜಿಲ್‌ನ ಒಂದು ಮನೆಯ ಮುಂದೆ ಒಂದು ಮಾವಿನ ಮರ ಇತ್ತು. ಇದ್ದಕ್ಕಿದ್ದ ಹಾಗೆ ಆ ಮಾವಿನ ಮರ ಬಹಳ ಚೆನ್ನಾಗಿ ಚಿಗುರಿತು. ಅದು ವಿಶಾಲವಾಗಿ ಕವಲು ಒಡೆಯಿತು. ಉತ್ತಮ ಫಲ ನೀಡಿತು. ಆ ಮನೆಯವನು ಇದನ್ನು ನೋಡಿ, ನನ್ನ ಮರ ಬಹಳ ವರ್ಷಗಳಿಂದ ನಲುಗುತ್ತಿತ್ತು, ಈಗೇಕೆ ಬೃಹದಾಕಾರವಾಗಿ ಬೆಳೆಯಿತು, ಈ ರೀತಿ ಫಲ ಕೊಟ್ಟಿತು ಎಂದು ಯೋಚನೆ ಮಾಡಿದ. ಮರದ ಪಕ್ಕದ ಜಾಗವನ್ನು ಸ್ವಲ್ಪ ಅಗೆದು ನೋಡಿದಾಗ ನೀರು ಸಣ್ಣದಾಗಿ ಜಿನುಗುತ್ತಿರುವುದು ಕಂಡುಬಂತು. ಅವನಿಗೆ ಆಶ್ಚರ್ಯವಾಯಿತು. ಅದರ ಮೂಲ ಹುಡುಕಿಕೊಂಡು ಹೋದಾಗ, ಅದು ಅವನು ಸ್ನಾನ ಮಾಡಿದ ಮೇಲೆ ಹೊರಗೆ ಹೋಗುತ್ತಿದ್ದ ನೀರು, ಊಟ ಮಾಡಿ ತಟ್ಟೆ ತೊಳೆದು ಏನು ನೀರು ಹೋಗುತ್ತಿತ್ತೋ ಆ ನೀರು ಎಂದು ಗೊತ್ತಾಯಿತು. ಆತ ಒಬ್ಬ ಇಂಜಿನಿಯರನ್ನು ಕರೆದು ತೋರಿಸಿದ. ಅದನ್ನು ನೋಡಿ ಆ ಇಂಜಿನಿಯರ್ ತನ್ನ ಬೇರೆ ವೃತ್ತಿಗೆ ರಾಜೀನಾಮೆ ಕೊಟ್ಟ, ದೊಡ್ಡ ಶೋಧನೆ ಮಾಡಿದ. ಆಗ ಬಂದಿದ್ದೇ ಹನಿ ನೀರಾವರಿ. ಈ ಒಂದು ಜ್ಞಾನ ಇಡೀ ಜಗತ್ತಿಗೆ ಸಿಕ್ಕಿತು, ಒಂದು ಸಣ್ಣ ನೀರಿನ ಹನಿಯನ್ನು ಹೇಗೆ ಸಮರ್ಪಕವಾಗಿ ಬಳಸಬಹುದು ಎಂದು ಗೊತ್ತಾಯಿತು. ಇವತ್ತಿಗೂ ಬ್ರೆಜಿಲ್ ಜನ ಈ ಪದ್ಧತಿಯನ್ನೇ ಅನುಸರಿಸುತ್ತಿದ್ದಾರೆ. ಬ್ರೆಜಿಲ್‌ನಲ್ಲಿ 2 ಕಾರ್ಯಕ್ರಮ ಇವೆ. ಅವರು National Water Resource Policy ಇಟ್ಟುಕೊಂಡಿದ್ದಾರೆ. ನೀರನ್ನು ರಾಷ್ಟ್ರದ ಆಸ್ತಿ ಎಂದು, ಜನರ ಆಸ್ತಿ ಎಂದು ಘೋಷಣೆ ಮಾಡಿದ್ದಾರೆ. ಮತ್ತೆ, National Water Resource Management System ಅನ್ನೂ ಇಟ್ಟುಕೊಂಡಿದ್ದಾರೆ. ಅಲ್ಲಿ 26 ರಾಜ್ಯಗಳಿವೆ. ಭೌಗೋಳಿಕವಾಗಿ ನಮಗಿಂತಲೂ ವಿಸ್ತಾರ ಹೊಂದಿದೆ, ಆದರೆ ಜನಸಂಖ್ಯೆ ಪ್ರಮಾಣ ಕಡಿಮೆ ಇದೆ ಅಷ್ಟೆ. ಅಲ್ಲಿನ ನೀರಿನ ವ್ಯವಸ್ಥೆಯ ಜಾಲವನ್ನು ನೋಡಿದರೆ ನಾವು ಬೆಕ್ಕಸ ಬೆರಗಾಗುತ್ತೇವೆ. ನಮಗೆ ಈ ಬರಗಾಲದಲ್ಲಿ ಎಷ್ಟು ಮಳೆ ಬರುತ್ತದೆಯೋ ಅದಕ್ಕಿಂತಲೂ ಕಡಿಮೆ ಪ್ರಮಾಣದಲ್ಲಿ ಅಲ್ಲಿ ಮಳೆ ಬೀಳುತ್ತದೆ. ಆದರೂ ಅವರು ಬಹಳ ಚೆನ್ನಾಗಿದ್ದಾರೆ, ಆರಾಮವಾಗಿ ಇದ್ದಾರೆ. ಅಲ್ಲಿನ

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಬೇಸಾಯದ ಬಗ್ಗೆ ನೀವು ಕೇಳಿದ್ದೀರಿ. ಕಬ್ಬು, ತರಕಾರಿ ಮತ್ತು ಇತರ ವ್ಯವಸಾಯಗಳನ್ನು ಮಾಡುತ್ತಾರೆ. ಎಷ್ಟೋ ಬೆಳೆಗಳನ್ನು ಬೆಳೆಯುವುದಕ್ಕೋಸ್ಕರ ಅವರು ಉಳುಮೆಯನ್ನೇ ಮಾಡುವುದಿಲ್ಲ. ಉಳುಮೆ ಮಾಡಿ ಬೆಳಕಿಗೆ ಆ ಭೂಮಿಯನ್ನು ತೋರಿಸಿದರೆ ಭೂಮಿಯಲ್ಲಿರುವ ಖನಿಜ ಶಕ್ತಿ, ಅದರ ವಿಟಮಿನ್ ಹೋಗುತ್ತದೆ ಎಂದು, ಉಳುಮೆ ಮಾಡದೇ ಬೆಳೆ ತೆಗೆಯುವ ಮಟ್ಟಕ್ಕೆ ಅವರು ಹೋಗಿದ್ದಾರೆ. ಒಂದು ಕಾಲಕ್ಕೆ ನಾವು ನಮ್ಮ ಎಲ್ಲಾ ನದಿಗಳನ್ನು ಜೋಡಿಸಬೇಕು ಎಂದು ಯೋಚಿಸಿದ್ದೆವು. ಆ ಯೋಜನೆ ಎಲ್ಲಿಗೆ ಹೋಯಿತು? ಮಧ್ಯಪ್ರದೇಶದ ಒಂದು ಕಡೆ ಈ ರೀತಿ ನದಿ ಜೋಡಣೆಯ ಕಾರ್ಯ ಆಯಿತು ಅಷ್ಟೆ. 13ನೇ ಪಂಚವಾರ್ಷಿಕ ಯೋಜನೆ ಏಪ್ರಿಲ್ 1 ನೇ ತಾರೀಖಿನಿಂದ ಪ್ರಾರಂಭವಾಗಿದೆ. ಯಾವುದಾದರೂ ಒಂದು ಪಂಚವಾರ್ಷಿಕ ಯೋಜನೆಯಲ್ಲಿ ಈ 30 ನದಿಗಳನ್ನು ಕೂಡಿಸುವ ಕೆಲಸ ಮಾಡದೇ ಹೋದರೆ ಮುಂದಿನ ದಿನಮಾನಗಳಲ್ಲಿ ನಾವು ನೀರನ್ನು ಪೂರೈಸುವ ಕೆಲಸ ಮಾಡುವುದಕ್ಕೆ ಆಗುವುದೇ ಇಲ್ಲ. ನಮ್ಮಲ್ಲಿ 16 ನದಿಗಳು ವರ್ಷಪೂರ್ತಿ ಉಕ್ಕಿ ಹರಿಯುತ್ತವೆ ಎಂದಮೇಲೆ ಮತ್ತು 14 ನದಿಗಳು ವರ್ಷದಲ್ಲಿ ಒಂದೆರಡು ತಿಂಗಳು ಬಿಟ್ಟು ಬೇರೆ ಎಲ್ಲಾ ತಿಂಗಳುಗಳಲ್ಲಿ ಹರಿಯುತ್ತವೆ ಎಂದಮೇಲೆ ಅವುಗಳನ್ನು ಕೂಡಿಸುವುದರಿಂದ ಇಡೀ ದೇಶಕ್ಕೆ ಅತ್ಯಂತ ಸಮರ್ಪಕವಾಗಿ ನೀರು ಒದಗಿಸಬಹುದು ಎನ್ನುವ ಆಲೋಚನೆ, ಸಂಶೋಧನೆ, ಆವಿಷ್ಕಾರಗಳು ನಡೆಯುತ್ತಿರುವಾಗ ಆ ದಿಸೆಯಲ್ಲಿ ಪಂಚವಾರ್ಷಿಕ ಯೋಜನೆ ಅಡಿ ಕಾರ್ಯಕ್ರಮಗಳನ್ನು ಕೈಗೊಳ್ಳದೇ ಹೋದರೆ ಮುಂದಿನ ದಿನಮಾನಗಳಲ್ಲಿ ಬಹಳ ಕಷ್ಟವನ್ನು ಅನುಭವಿಸಬೇಕಾಗುತ್ತದೆ. ಮಹಾರಾಷ್ಟ್ರ, ಮಧ್ಯಪ್ರದೇಶಗಳಲ್ಲಿ ರೈತ ಚಳುವಳಿ ಆಗುತ್ತಿರುವ ಹಾಗೆ ಕರ್ನಾಟಕದಲ್ಲೂ ಚಳುವಳಿ ಆಗುತ್ತದೆ. ಎಲ್ಲಾ ಕಡೆ ಇವತ್ತು ರೈತರು ದಂಗೆ ಎದ್ದಿದ್ದಾರೆ. ಆಹಾರ ಉತ್ಪತ್ತಿ ಕುಸಿದಿದೆ. ಇದೇ ಪರಿಸ್ಥಿತಿ ಮುಂದುವರೆದರೆ ಆಹಾರಕ್ಕೆ ಹಾಹಾಕಾರ ಉಂಟಾಗುವ ಎಲ್ಲಾ ಸಾಧ್ಯತೆಗಳು ಇವೆ. ಆಹಾರ ಉತ್ಪತ್ತಿ, ಕೃಷಿ ಮುಗಿದ ಮೇಲೆ ನಮ್ಮ ವ್ಯವಸ್ಥೆಯೂ ಮುಗಿದು ಹೋಗುತ್ತದೆ. ಕೃಷಿ ಉಳಿಸುವುದಕ್ಕೆ, ಆಹಾರದ ಸ್ವಾವಲಂಬನೆಗೆ, ಹಸಿವನ್ನು ನೀಗಿಸುವುದಕ್ಕೆ ಒಂದು ರಚನಾತ್ಮಕ ಕಾರ್ಯ ಮಾಡುವುದಕ್ಕೆ ಈಗಲೇ ನಾಂದಿ ಹಾಡಬೇಕು ಅಲ್ಲವೇ? ನೀವೇನು ಒತ್ತಡ ಹಾಕುತ್ತೀರೋ ಗೊತ್ತಿಲ್ಲ. 16 + 14 ನದಿಗಳನ್ನು ಕೂಡಿಸುವ ಯೋಜನೆ ಮುಂದಿನ ದಿನಮಾನಗಳಲ್ಲಿ ಆಗಬೇಕು. ಅದು ರಾಜ್ಯಕ್ಕೆ ಸೀಮಿತ ಅಲ್ಲದ, ಅದನ್ನು ಮೀರಿದ, ಇಡೀ ರಾಷ್ಟ್ರಕ್ಕೆ ಹಾಕಿಕೊಳ್ಳಬೇಕಾದ ದೊಡ್ಡ ಕಾರ್ಯಕ್ರಮ ಆಗಬೇಕಿದೆ, ಈ ನಿಟ್ಟಿನಲ್ಲಿ ತುರ್ತು ಚಿಂತನೆಯನ್ನು ರಾಷ್ಟ್ರಮಟ್ಟದಲ್ಲಿ ಮಾಡಬೇಕಿದೆ. ಹಾಗೆ ಮಾಡದೇ ಹೋದರೆ ಮುಂದಿನ ದಿನಮಾನಗಳಲ್ಲಿ ನೀರಿನ ಹಾಹಾಕಾರವನ್ನು, ಆಹಾರದ ಕೊರತೆಯನ್ನು ನೀಗಿಸುವಂತಹ, ಹಳ್ಳಿಗಳನ್ನು ಉಳಿಸಿಕೊಳ್ಳುವಂತಹ ಕೆಲಸವನ್ನು, ದೇಶವನ್ನು ಉಳಿಸಿಕೊಳ್ಳುವಂತಹ ಕೆಲಸವನ್ನು ಮಾಡಲಿಕ್ಕೆ ಸಾಧ್ಯವಿಲ್ಲ ಎಂಬ ಸ್ಪಷ್ಟವಾದ ಮಾತನ್ನು ನಾನು ಹೇಳಬೇಕಿದೆ. ಮಾನ್ಯ ಸಭಾಪತಿಗಳೆ, ಅರಳೀಕಟ್ಟೆಹುಂಡಿಯ ಜನ ಹೇಳುವ ಮಾತೇನು? ನಮ್ಮ ಊರಿನಲ್ಲಿ ಮಳೆ ಬರುತ್ತದೆ, ನಂತರ ಹೊರಟು ಹೋಗುತ್ತದೆ ಎಂದು ಹೇಳುತ್ತಾರೆ. ಅದು ಸ್ವಲ್ಪ ಇಳಿಜಾರಿನ ಜಾಗವಾಗಿದ್ದು, ಅಲ್ಲಿ ನೀರು ನಿಲ್ಲುವುದಿಲ್ಲ. ನೀರನ್ನು ಸಂಗ್ರಹಿಸಿಡುವ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಕೆಲಸ ಇಲ್ಲಾಗಲೇ ಇಲ್ಲ ಎಂಬ ಮಾತನ್ನು ಹೇಳುತ್ತಾರೆ. ನಮ್ಮಲ್ಲಿ ತುಂಬಾ ಯೋಜನೆಗಳು ಬಂದಿವೆ, ಹೊಂಡ ತೋಡಿದ್ದೇವೆ, ಕಟ್ಟೆ ಕಟ್ಟಿದ್ದೇವೆ, ಬಾವಿ ತೋಡಿದ್ದೇವೆ ಎಂದು ಹೇಳುತ್ತಾರೆ. ಅರಣ್ಯ ಇಲಾಖೆಯ EMPRI(ಎಂಪ್ರಿ) ಎನ್ನುವ ಒಂದು ಸಂಶೋಧನಾ ಸಂಸ್ಥೆ ಅಧ್ಯಯನ ಮಾಡಿ ಮೈಸೂರು ಜಿಲ್ಲೆಯಲ್ಲಿ ಇದ್ದ ಕೆರೆಗಳ ಪೈಕಿ ಶೇಕಡ 60 ರಷ್ಟು ಕೆರೆಗಳು ಮುಚ್ಚಿ ಹೋಗಿವೆ ಎಂದು ತಿಳಿಸಿದೆ. ಇನ್ನು ಶೇಕಡ 20 ರಷ್ಟು ಕೆರೆಗಳು ಅವಸಾನದ ಅಂಚಿಯಲ್ಲಿವೆ. ಈ ಕೆರೆಗಳನ್ನು ನಮ್ಮ ಪೂರ್ವಿಕರು, ಹಿರಿಯರು, ನಾಲ್ಕೈದು ತಲೆಮಾರಿನ ಹಿಂದಿನವರು ಮಾಡಿರುವಂಥದ್ದು. ನಾವು ಯಾವುದೇ ಹೊಸ ಕೆರೆಗಳನ್ನು ಮಾಡುತ್ತಿಲ್ಲ. ಈ ದೇಶದಲ್ಲಿ 60-70 ಕೋಟಿ ಜನಸಂಖ್ಯೆ ಇದ್ದಾಗ ಏನು ಕೆರೆಗಳ ಜಾಲತಾಣ ಇತ್ತೋ ಅಥವಾ ರಾಜ್ಯದಲ್ಲಿದ್ದ ಕೆರೆಗಳ ಸಂಖ್ಯೆ ಎಷ್ಟಿತ್ತೋ ಅವುಗಳನ್ನು ಬಿಟ್ಟು ನಾವು ಹೊಸದಾಗಿ ಏನೂ ಮಾಡಿಲ್ಲ. ಹಿಂದೆ ಯಥೇಚ್ಛವಾಗಿ ಮಳೆ ಬೀಳುತ್ತಿತ್ತು. ಈಗ ಮಳೆ ಕಡಿಮೆ ಬೀಳುತ್ತಿದೆ. ಆ ಮಳೆ ನೀರನ್ನು ಹಿಡಿದಿಟ್ಟುಕೊಳ್ಳುವುದಕ್ಕೆ ನಾವು ಇವತ್ತು ಏನು ಕೆಲಸ ಮಾಡುತ್ತಿದ್ದೇವೆ? ಏನನ್ನೂ ಮಾಡುತ್ತಿಲ್ಲ. ಹೊಸ ಕೆರೆಗಳ ನಿರ್ಮಾಣ ಮಾಡುವ ಬದಲು, ಈ ಹಿಂದೆ ಇದ್ದ ಕೆರೆಗಳನ್ನು ಮುಚ್ಚುವ ಕೆಲಸ ಮಾಡುತ್ತಿದ್ದೇವೆ. ಇಡೀ ಜಗತ್ತಿಗೆ ನೀರಿನ ಮೂಲ ಮಳೆ. ಆ ಮಳೆ ನೀರನ್ನು ಸಂಗ್ರಹಿಸಿ ಇಟ್ಟುಕೊಳ್ಳಬೇಕಲ್ಲವೇ? ಮಳೆ ನೀರನ್ನು ಭೂಮಿಗೆ ಇಂಗಿಸಬೇಕಲ್ಲವೇ? ಇವತ್ತು ಇಂತಹ ಕೆಲಸ ಆಗಬೇಕಿದೆ. ಗುಳೆ ಹೋಗಿರುವ ಜನ ವಾಪಸ್ಸು ಬರುವುದಕ್ಕೆ ತಯಾರಿದ್ದಾರೆ. ಆ ಜನರನ್ನು ವಾಪಸ್ಸು ಕರೆಸಬೇಕಿದೆ.

(ಮುಂದು . . .)

(687)13-06-2017 3-50 ಎಸ್‌ವಿ-ಬಿಎನ್‌ಎಸ್

**ಶ್ರೀ ಕೆ.ಟಿ.ಶ್ರೀಕಂಠೇಗೌಡ(ಮುಂದು):-**

ಪಕ್ಕದಲ್ಲಿಯೇ ಕಬಿನಿ ನದಿ ಹರಿಯುತ್ತದೆ. ಅಲ್ಲಿಂದ ಎಲ್ಲಾ ಕೆರೆಗಳಿಗೂ ನೀರು ಹರಿಸುವಂತಹ ಕೆಲಸವನ್ನು ಸಮರೋಪಾದಿಯಲ್ಲಿ ಕೈಗೆತ್ತಿಕೊಳ್ಳಬೇಕಾಗಿದೆ. ಎಲ್ಲೆಲ್ಲಿ ನದಿಗಳಿವೆಯೋ ಆ ನದಿಗಳಿಂದ ಮೊದಲು ಕೆರೆಕಟ್ಟೆಗಳಿಗೆ ನೀರು ತುಂಬಿಸುವಂತಹ ಕೆಲಸವನ್ನು ಮಾಡಬೇಕಾಗಿದೆ. ರೈತರಿಗೆ ಏನೂ ಕೊಡಬೇಡಿ. ಅವನ ಭೂಮಿಯಲ್ಲಿ ಬೆಳೆ ಬೆಳೆಯಲು ಅಗತ್ಯವಾಗಿರುವ ನೀರು,ಒಳ್ಳೆಯ ಬಿತ್ತನೆ ಬೀಜ ಮತ್ತು ವಿದ್ಯುಚ್ಛಕ್ತಿಯನ್ನು ಕೊಡಿ. ಆ ಬಿತ್ತನೆಯ ಬೀಜದ ಜೊತೆಗೆ ಅವನ ಬೆಳೆಗೆ ಖಾತ್ರಿಯನ್ನು ಕೊಡಿ. ಅವನ ಬೆಳೆಗೆ ಮಾರುಕಟ್ಟೆಯನ್ನು ಕೊಡಿ. ಮಾರುಕಟ್ಟೆಯಲ್ಲಿ ನಿಖರವಾದ, ಲಾಭದಾಯಕವಾದ ಬೆಲೆಯನ್ನು ಕೊಡಿ. ಅವನಿನ್ನೇನನ್ನೂ ಕೇಳುವುದಿಲ್ಲ. ಅನ್ನಭಾಗ್ಯವನ್ನೂ ಕೇಳುವುದಿಲ್ಲ; ಸಬ್ಸಿಡಿಯನ್ನೂ ಕೇಳುವುದಿಲ್ಲ; ಯಾರಿಗೂ ನಮಸ್ಕಾರವನ್ನೂ ಹಾಕುವುದಿಲ್ಲ, ಸ್ವಾಭಿಮಾನದಿಂದ ಬದುಕುತ್ತಾನೆ. ಆ ಕೆಲಸ ಆಗಬೇಕಲ್ಲವೇ? ರೈತ ಬೇಸಾಯವನ್ನೇ ಮಾಡಲಿಕ್ಕಾಗುವುದಿಲ್ಲವೆಂದರೆ ಅವನು ಏಕೆ ಊರಿನಲ್ಲಿರುತ್ತಾನೆ? ರೇಷ್ಮೆಯನ್ನು ಬೆಳೆಯಲಿಕ್ಕಾಗುವುದಿಲ್ಲವೆಂದರೆ ಅವನು ಏಕೆ ಊರಿನಲ್ಲಿರುತ್ತಾನೆ? ಹತ್ತಿಯನ್ನು ಬೆಳೆಯುವುದಕ್ಕಾಗುವುದಿಲ್ಲವೆಂದರೆ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಅವನೇಕೆ ಊರಿನಲ್ಲಿರುತ್ತಾನೆ? ಹಾಗಾಗಿ ನಾವು ಮಳೆ ನೀರನ್ನು ಸಮರ್ಪಕವಾಗಿ ಸಂಗ್ರಹಿಸುವಂತಹ ಒಂದು ವ್ಯವಸ್ಥೆ ಹಾಗೂ ಇರುವ ನದಿಗಳ ನೀರಿನಿಂದ ಕೆರೆಕಟ್ಟೆಗಳನ್ನು ತುಂಬಿಸುವಂತಹ ಕೆಲಸ ವ್ಯಾಪಕವಾಗಿ, ಕ್ರಾಂತಿಕಾರಕವಾಗಿ ಆಗಬೇಕಾಗಿದೆ. ಬಹುಶಃ ಆಗ ಮನುಷ್ಯ ಊರಿನಲ್ಲಿ ನಿಲ್ಲುತ್ತಾನೆ. ಅವನಿಗೆ ಮಾಡುವುದಕ್ಕೆ ಕೆಲಸ ಸಿಕ್ಕುತ್ತದೆ.

ಅರಳೀಕಟ್ಟೆ ಹುಂಡಿಯ ಕಥೆಯನ್ನು ಕೇಳಬೇಕು. ಒಂದು ಕಾಲಕ್ಕೆ ಆ ಊರಿನಲ್ಲಿ ಒಂದೊಂದು ಮನೆಯಲ್ಲಿ 50-100 ಕುರಿಗಳು ಇರುತ್ತಿದ್ದವು. ಈಗ ಕುರಿಗಳಿಗೂ ಮೇವಿಲ್ಲದೆ, ಕುರಿಗಳನ್ನೂ ಮಾರಿ ಊರನ್ನು ತೊರೆದಿದ್ದಾರೆ. ಜೂನ್ 5ನೇ ತಾರೀಖಿನಂದು ಪರಿಸರ ದಿನಾಚರಣೆಯ ಸಂದರ್ಭದಲ್ಲಿ ಪತ್ರಿಕೆಯಲ್ಲಿ ಬಹಳ ಸಮಗ್ರವಾದ ಅಧ್ಯಯನವನ್ನು ಮಾಡಿ ಲೇಖನವನ್ನು ಬರೆದಿದ್ದಾರೆ. ಅದನ್ನು ಎಲ್ಲರೂ ಓದಬೇಕು. ಎಲ್ಲಾ ಪತ್ರಿಕೆಗಳೂ ಆ ವರದಿಯನ್ನು ಮಾಡಿವೆ. ಬಹುಶಃ ಅದು ಕೇವಲ ಆ ಒಂದು ಹಳ್ಳಿಯ ಚಿತ್ರಣವಲ್ಲ. ಈ ನಾಡಿನ ಅದೆಷ್ಟೋ ಹಳ್ಳಿಗಳಲ್ಲಿ ಅದೇ ಚಿತ್ರಣವಿದೆ. ಹಾಗಾಗಿ 14 ನದಿಗಳ ಜೋಡಣೆಯ ಜೊತೆಗೆ ಮಳೆ ನೀರನ್ನು ಸಂಗ್ರಹಿಸುವ, ಇಂಗಿಸುವ ಮತ್ತು ಕೆರೆಗಳಿಗೆ ನೀರು ತುಂಬಿಸುವಂತಹ ಕೆಲಸವನ್ನು ಸಮರೋಪಾದಿಯಲ್ಲಿ ಮಾಡುವ ಒಂದು ದೊಡ್ಡ ಜವಾಬ್ದಾರಿಯನ್ನು ಹೊರಬೇಕಾಗಿದೆ. ಕೆರೆಗಳ ಹೂಳೆತ್ತುವುದರ ಬಗ್ಗೆ ಬಹಳಷ್ಟು ಮಾತನಾಡಿದ್ದೇವೆ. ಬಹುಶಃ ಈ ಬಾರಿಯಷ್ಟು ಕೆರೆಕಟ್ಟೆಗಳು ಖಾಲಿ ಬಿದ್ದದ್ದು ಯಾವಾಗಲೂ ಇಲ್ಲ. ಕೆರೆಗಳ ಹೂಳೆತ್ತುವುದರ ಬಗ್ಗೆ ಒಂದು ದೊಡ್ಡ ಕಾರ್ಯಕ್ರಮವನ್ನು ಹಾಕಿಕೊಳ್ಳಲಾಗುವುದು ಎಂದು ಸರ್ಕಾರ ಹೇಳಿತ್ತು. ಆದರೆ ಅದು ಎಲ್ಲಿಗೆ ಬಂದಿತೆಂದು ನಮಗೆ ತಿಳಿಯಲೇ ಇಲ್ಲ. ನಾನು ಹಿಂದೆ ಚಿಕ್ಕವನಿದ್ದಾಗ ಬೆಂಗಳೂರಿಗೆ ಕರಗ ನೋಡಲು ಬರುತ್ತಿದ್ದೆವು. "ಕರಗ ಬಂತು, ಕರಗ ಬಂತು" ಎನ್ನುತ್ತಿದ್ದರು. ನಾವು ಮಲಗಿದ್ದವರು ಎದ್ದು ಓಡಿಹೋಗುವಷ್ಟರಲ್ಲಿ ಕರಗ ಹೊರಟುಹೋಗಿರುತ್ತಿತ್ತು. ಕರಗ ಕಪ್ಪುಬಣ್ಣದ್ದಾಗಿತ್ತೋ, ಬಿಳಿಯ ಬಣ್ಣದ್ದಾಗಿತ್ತೋ ಎಂಬುದೇ ನಮಗೆ ಅರ್ಥವಾಗುತ್ತಿರಲಿಲ್ಲ. ಅದೇ ರೀತಿಯಲ್ಲಿ ಕೆರೆ ಹೂಳೆತ್ತುವ ವಿಷಯ ಎಲ್ಲಿಯವರೆಗೆ ಬಂದಿತೆಂಬುದೇ ನನಗೆ ತಿಳಿಯಲಿಲ್ಲ. ಇನ್ನು ಮಳೆ ಬಂದಿತೆಂದರೆ ಹೂಳೆತ್ತುವುದಕ್ಕೆ ಪ್ರಾರಂಭವೇ ಮಾಡುವುದಿಲ್ಲ. ಕಾವೇರಿ ನೀರಾವರಿ ಪ್ರದೇಶದ ಜನರಿಗೆ ಇದೊಂದು ಕಷ್ಟವಾಗಿದೆ. ನಾಲಾ ಆಧುನೀಕರಣಕ್ಕಾಗಿ ನೀರು ಕೊಡಲು ಒಂದು ತಿಂಗಳು ತಡ ಮಾಡಲಾಯಿತು. ಬೆಳೆಗಳನ್ನು ಹಾಕಲಾಗಿತ್ತು. ತಮಿಳುನಾಡಿಗೆ ನೀರನ್ನು ಹರಿಸಲಾಯಿತು. ಹಾಕಿದ್ದ ಬೆಳೆಗಳು ಇನ್ನೇನು ಕಾಳ್ಳಿನ ಹಂತಕ್ಕೆ ಬರುವಷ್ಟರಲ್ಲಿ ಹೊರಟುಹೋಯಿತು. ಒಂದು ತಿಂಗಳ ಮುಂಚೆ ಹಾಕಿದ್ದಿದ್ದರೆ ಆ ಬೆಳೆ ನಮ್ಮ ಕೈಸೇರುತ್ತಿತ್ತು. ಆ ಕಾಮಗಾರಿಯ ವಿಳಂಬದಿಂದ ಒಂದು ಬೆಳೆಯೇ ನಷ್ಟವಾಯಿತು. ಮೂರು ವರ್ಷಗಳಿಂದ ಇನ್ನೂ ಚೇತರಿಸಿಕೊಳ್ಳುವುದಕ್ಕಾಗುತ್ತಿಲ್ಲ. ಹಾಗಾಗಿ ಏನಾದರೊಂದು ದೊಡ್ಡ ತಪ್ಪಾದರೆ ಎಷ್ಟು ಅನಾಹುತಗಳಾಗುತ್ತದೆ ಇದೊಂದು ಉದಾಹರಣೆ. ಸರ್ಕಾರ ಏನು ತೀರ್ಮಾನ ತೆಗೆದುಕೊಳ್ಳುತ್ತದೆಯೋ, ಯಾವ ತೀರ್ಮಾನ ತೆಗೆದುಕೊಳ್ಳುತ್ತದೆಯೋ ನಮಗೆ ಗೊತ್ತಿಲ್ಲ. ಯುದ್ಧೋಪಾದಿಯಲ್ಲಿ immediate ಆಗಿ ಬೇಸಿಗೆಯ ಬರದ ಕಾಲದಲ್ಲಿಯೇ ಹೂಳೆತ್ತಬೇಕು. ಇನ್ನು ಮಳೆ ಬಂದರೆ ಹೂಳೆತ್ತುವ ಪ್ರಶ್ನೆಯೇ ಇರುವುದಿಲ್ಲ. ಮತ್ತೆ ಈ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ರೀತಿಯ ಸಂದರ್ಭ ಎಷ್ಟು ವರ್ಷಕ್ಕೊಮ್ಮೆ ಬರುತ್ತದೆಯೋ? ಇವತ್ತು ಇಡೀ ನಾಡು ಬರಗಾಲದಿಂದ ತತ್ತರಿಸಿ ಹೋಗಿದೆ. ಇಡೀ ಹಳ್ಳಿಗಳ ಜನರ ಬದುಕು ತತ್ತರಿಸಿ ಹೋಗಿದೆ. ಅದನ್ನು ಅವಲಂಬಿಸಿರುವ ಪಶು, ಪಕ್ಷಿ – ಹಳ್ಳಿಯ ವ್ಯವಸ್ಥೆಯೇ ಇದರಿಂದ ಪರಿತಪಿಸಿಹೋಗಿದೆ. ಎಲ್ಲಾ ಹಳ್ಳಿಗಳನ್ನು ಪುನರ್‌ನಿರ್ಮಿಸುವ, ಹಳ್ಳಿಗಳಿಗೆ ಚೈತನ್ಯ ತುಂಬುವ, ಎಲ್ಲಾ ಹಳ್ಳಿಗಳಿಗೆ ನೀರು ಕೊಡುವ, ಎಲ್ಲಾ ಹಳ್ಳಿಗಳ ಕೆರೆಗಳನ್ನು ತುಂಬಿಸುವ, ನೀರನ್ನು ಇಂಗಿಸುವ, ಸಂಗ್ರಹಿಸುವ ಒಂದು ದೊಡ್ಡ ಕಾಯಕಕ್ಕೆ ನಾವು ನಾಂದಿ ಹಾಡದಿದ್ದಲ್ಲಿ, ಬಹುಶಃ ಬರಗಾಲದ ಬವಣೆಯಿಂದ ತಪ್ಪಿಸಿಕೊಳ್ಳುವುದಕ್ಕೆ ಸಾಧ್ಯವಾಗುವುದೇ ಇಲ್ಲ.

ಬ್ರೆಝಿಲ್‌ನಂತಹ ರಾಷ್ಟ್ರಗಳ ಆಲೋಚನೆಯನ್ನು ಅನುಷ್ಠಾನಕ್ಕೆ ತಂದುಕೊಳ್ಳುವಂತಹ ದಿಸೆಯಲ್ಲಿ, ಆ ಮೂಲಕ ಕೃಷಿಕರಿಗೆ ಬದುಕನ್ನು ಕಟ್ಟಿಕೊಡುವ ದಿಸೆಯಲ್ಲಿ ಬರಗಾಲಕ್ಕೆ ಒಂದು ಶಾಶ್ವತವಾದ ಪರಿಹಾರವನ್ನು ನೀಡಬೇಕಾಗಿದೆ. ಏಕೆಂದರೆ ಇನ್ನು ಮುಂದೆ ಬರಗಾಲ ಬರುತ್ತಲೇ ಇರುತ್ತದೆ. ಏಕೆಂದರೆ ಕಳೆದ 10–15 ವರ್ಷಗಳಿಗೆ ಹೋಲಿಸಿ ನೋಡಿದಾಗ ಮಳೆ ಬೀಳುವ ಪ್ರಮಾಣ ಸತತವಾಗಿ ಇಳಿಮುಖವಾಗುತ್ತಾ ಬರುತ್ತಿದೆ. ಶೇ.18 ಭಾಗ ಕಾಡು ಇದೆ.

ಶೇ.32–35 ಭಾಗ ಇರಬೇಕೆಂದು ಹೇಳುತ್ತೇವೆ. ಇವತ್ತಿನ ಜನಸಂಖ್ಯೆಯನ್ನು ನೋಡಿದರೆ ಅದು ಶೇ.40 ಭಾಗವೇ ಇರಬೇಕು. ಆದರೆ ಈಗ ಪಶ್ಚಿಮ ಘಟ್ಟಗಳ ಆದಿಯಾಗಿ ಎಲ್ಲವನ್ನೂ ನಾವು ಕಡಿದು ಹಾಳು ಮಾಡುತ್ತಿದ್ದೇವೆ. ಮಳೆ ಬೀಳುವ ಪ್ರಮಾಣ ತೀರಾ ಕಡಿಮೆಯಾಗಿದೆ. ಮಲೆನಾಡಿನಲ್ಲಿಯೇ ಮಳೆಯಿಲ್ಲದೆ ತೆಂಗಿನ ತೋಟಗಳು ಒಣಗಿ ಹೋಗಿವೆ ಎಂದರೆ ಇನ್ನೆಲ್ಲಿ ಇರಲು ಸಾಧ್ಯ? ಆಗುಂಬೆಯಲ್ಲಿಯೇ ಮಳೆ ಇಲ್ಲವೆಂದರೆ ಇನ್ನೆಲ್ಲಿ ಮಳೆ ಬರಲು ಸಾಧ್ಯ? ಬದಲಾದ ವ್ಯವಸ್ಥೆಯಲ್ಲಿ ಬದಲಾದ ಆಲೋಚನೆಯ ಮೂಲಕ ಬದಲಾದ ಕಾರ್ಯಕ್ರಮಗಳ ಮೂಲಕ ನಮ್ಮ ಜನರಿಗೆ ಬದುಕನ್ನು ಕಟ್ಟಿಕೊಡುವ ಭವಿಷ್ಯವನ್ನು ಕಟ್ಟಿಕೊಡುವಂತಹ ಹೊಸ ಆಲೋಚನೆಗಳ ಮೂಲಕ ದೀರ್ಘಾವಧಿ ಕಾರ್ಯಕ್ರಮಗಳನ್ನು ರಾಜ್ಯ ಸರ್ಕಾರವೂ ಮಾಡಬೇಕಾಗಿದೆ; ಕೇಂದ್ರ ಸರ್ಕಾರವೂ ಮಾಡಬೇಕಾಗಿದೆ.

ಮಾನ್ಯ ಸಭಾಪತಿಯವರೆ, ಇಂದು ಒಂದು ಹೇಳಿಕೆಯನ್ನು ಗಮನಿಸಿದೆ. ಕೇಂದ್ರ ಸರ್ಕಾರದ ಶ್ರೀ ಅರುಣ್ ಜೇಟ್ಲಿಯವರು "ಸಾಲ ಮನ್ನಾ ಮಾಡುವುದಿಲ್ಲ" ಎನ್ನುವ ಒಂದು ಮಾತನ್ನು ಹೇಳಿದ್ದಾರೆ. ಸಾಲ ಮನ್ನಾ ಬೇಕಾದರೆ ರಾಜ್ಯ ಸರ್ಕಾರಗಳು ಮಾಡಿಕೊಳ್ಳಲಿ ಎಂದು ಹೇಳಿದ್ದಾರೆ. ನಾನು ರಾಜಕಾರಣ ಮಾಡುವುದಕ್ಕೆ ಹೋಗುವುದಿಲ್ಲ; ರಾಜಕಾರಣ ಮಾಡುವುದು ನನ್ನ ಕೆಲಸವೂ ಅಲ್ಲ. ಕಳೆದ ಒಂದೂವರೆ–ಎರಡು ವರ್ಷಗಳಿಂದ ಏನಾಗುತ್ತಿದೆ? ಈಗ ತಮಿಳುನಾಡಿನವರು ಹೋಗಿ ದೆಹಲಿಯಲ್ಲಿ ಹೋರಾಟ ಮಾಡಿದರು. ಮಧ್ಯಪ್ರದೇಶದಲ್ಲಿ ಹೋರಾಟ ಮಾಡುವ ಮೂಲಕ ಒಂದಷ್ಟು ಜನ ರೈತರು ಬಲಿಯಾಗಿ, ಕೊನೆಯಲ್ಲಿ ಸಾಲವನ್ನು ಮನ್ನಾ ಮಾಡಿಸಿಕೊಂಡರು. ಮಹಾರಾಷ್ಟ್ರದಲ್ಲಿ ಸಾಲ ಮನ್ನಾ ಆಯಿತು. ಕಳೆದ ಮೂರು–ನಾಲ್ಕು ಅಧಿವೇಶನಗಳಿಂದ ನಮ್ಮ ಮುಖ್ಯಮಂತ್ರಿಗಳು ನಿರಂತರವಾಗಿ "ಕೇಂದ್ರ ಮಾಡಲಿ, ನಾನು ಮಾಡುತ್ತೇನೆ" ಎಂದು ಹೇಳುತ್ತಲೇ ಬಂದಿದ್ದಾರೆ. ಶ್ರೀ ಯಡಿಯೂರಪ್ಪನವರು ಮತ್ತು ಶ್ರೀ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಈಶ್ವರಪ್ಪನವರು "ನೀವು ಮಾಡಿ, ನೀವು ಮಾಡಿ" ಎಂದು ಹೇಳುತ್ತಿದ್ದಾರೆ. ಇಬ್ಬರೂ ಮಾಡಬೇಕಾಗಿದೆ. ಇಬ್ಬರ ಮೇಲೂ ದೊಡ್ಡ ಜವಾಬ್ದಾರಿ ಇದೆ. ಇಬ್ಬರೂ ಮಾಡಿದರೆ ಮಾತ್ರ ರೈತ ಉಳಿಯುತ್ತಾನೆ. ಅದೂ ಸಹ ಶಾಶ್ವತ ಪರಿಹಾರವಲ್ಲ; ತಾತ್ಕಾಲಿಕ ಪರಿಹಾರ. ಕೇವಲ ರೈತನ ಆತ್ಮಹತ್ಯೆಯನ್ನು ತಪ್ಪಿಸುವಂತಹ ಕೆಲಸ. ಆದರೆ ಅವನನ್ನು ಪುನಃ ಹಳ್ಳಿಗೆ ಕರೆತರುವಂತಹ ಕೆಲಸವಲ್ಲ. ಹಳ್ಳಿಗೆ ಕರೆ ತರುವುದಕ್ಕೆ ಬೇರೆಯದೇ ಆಲೋಚನೆ ಮಾಡಬೇಕಾಗಿದೆ. ಕೇಂದ್ರದ ಶ್ರೀ ಮೋದಿಯವರಾಗಲೀ ಅಥವಾ ಶ್ರೀ ಅರುಣ್ ಜೇಟ್ಲಿಯವರಾಗಲೀ ಯಾವುದೇ ಕಾರಣಕ್ಕೂ ಸಾಲಮನ್ನಾ ಮಾಡುವುದಿಲ್ಲ ಎಂಬುದನ್ನು ಸರ್ಕಾರ ಸ್ಪಷ್ಟ ಮಾಡಿಕೊಳ್ಳಬೇಕು. ಸಾಲ ಮನ್ನಾ ಮಾಡುವುದಿಲ್ಲ ಎಂದು ಎಲ್ಲಾ ಪತ್ರಿಕೆಗಳಲ್ಲೂ ಬಂದಿದೆ. ಈಗ ಸರ್ಕಾರ ಏನು ಕ್ರಮ ಕೈಗೊಳ್ಳುತ್ತದೆ? ರೈತನ ಆತ್ಮಹತ್ಯೆಯನ್ನು ತಪ್ಪಿಸಬೇಕಲ್ಲವೆ? ಇದಕ್ಕೆ ನಿದರ್ಶನವೇನೆಂದರೆ ಈ ಹಿಂದೆ ಶ್ರೀ ಹೆಚ್.ಡಿ.ಕುಮಾರಸ್ವಾಮಿಯವರು ಸಾಲಮನ್ನಾ ಮಾಡಿಯೇ ತೀರುತ್ತೇನೆಂದು ಹೇಳಿ ಕೇವಲ 20 ತಿಂಗಳುಗಳಲ್ಲಿ ರಾಜ್ಯದ ಸಹಕಾರ ಸಂಸ್ಥೆಗಳಲ್ಲಿದ್ದಂತಹ ಸಾಲವನ್ನು ಮನ್ನಾ ಮಾಡುವ ಕೆಲಸಕ್ಕೆ ಮುಂದಾದರು. ಆ ಮೂಲಕ ಒಂದು ಇತಿಹಾಸವನ್ನು ಬರೆದರು. ಇವತ್ತು ಮೇಲಿಂದ ಮೇಲೆ ಮೂರು ಪಕ್ಷಗಳು ಹೇಳುತ್ತಿವೆ. ಬಿ.ಜೆ.ಪಿ.ಯವರು ನಾವು ಸಾಲ ಮನ್ನಾ ಮಾಡುತ್ತೇವೆಂದು ಹೇಳುತ್ತಿದ್ದಾರೆ. ಒಂದು ಕಾಲದಲ್ಲಿ ಅಧಿಕಾರಕ್ಕೆ ಬಂದಾಗ ಆಗುವುದಿಲ್ಲ ಎಂದವರು ಈಗ ಸಾಲ ಮನ್ನಾ ಮಾಡುವುದಕ್ಕೆ ಸಿದ್ಧರಿದ್ದಾರೆ. ಶ್ರೀ ಹೆಚ್.ಡಿ.ಕುಮಾರಸ್ವಾಮಿಯವರು ಅಧಿಕಾರಕ್ಕೆ ಬಂದ 24 ತಾಸುಗಳಲ್ಲಿಯೇ ಮಾಡುತ್ತೇನೆ ಎಂದು ಹೇಳಿದ್ದಾರೆ. ಹಿಂದೆ ಮಾಡಿ ತೋರಿಸಿದ್ದಾರೆ; ಈಗ ಮಾಡಲು ತಯಾರಿದ್ದಾರೆ. ಈಗ ನಿನ್ನೆ ಶ್ರೀ ರಾಹುಲ್ ಗಾಂಧಿಯವರು ಬಂದುದಕ್ಕಾಗಿ ನಮಗೂ ಅರ್ಧ ದಿನ ಬಿಡುವು ದೊರೆತ ಮೇಲೆ ಎಲ್ಲೋ ಒಂದು ಕಡೆ ಆಶಾಭಾವನೆ ಮೂಡಿದೆ. ಅವರೂ ಸಹ ಸಾಲ ಮನ್ನಾ ಮಾಡಿ ಎಂದು ಕಿವಿಯಲ್ಲಿ ಹೇಳಿ ಹೋಗಿದ್ದಾರೆ ಎನ್ನುವ ಸುದ್ದಿ ಬಂದಿತು.

**ಶ್ರೀ ಶರಣಪ್ಪ ಮಟ್ಟೂರು(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಹಿಂದೆ ಇದೇ ಸದನದಲ್ಲಿ ವಿರೋಧಪಕ್ಷದ ನಾಯಕರಾಗಿದ್ದ ಮಾನ್ಯ ಉಗ್ರಪ್ಪನವರು ಎತ್ತಿದ ಪ್ರಶ್ನೆಗೆ ಶ್ರೀ ಯಡಿಯೂರಪ್ಪನವರು "ನಾನೇನು ಪ್ರಿಂಟ್ ಮಾಡಿಕೊಡಲೇ? ನನಗೆ printing machine ಕೊಟ್ಟಿರುತ್ತಾರೆಯೇ?" ಎಂದು ಕೇಳಿದರು. ತಾವು ಹೇಳುತ್ತಿರುವ ಅಂಶಗಳು ಬಹಳ ಒಳ್ಳೆಯದಿವೆ. ರಾಷ್ಟ್ರದ ಮಾಜಿ ಪ್ರಧಾನಿಗಳಾದ ಶ್ರೀ ಹೆಚ್.ಡಿ.ದೇವೇಗೌಡರವರು ಈಗ ಲೋಕಸಭಾ ಸದಸ್ಯರಾಗಿದ್ದಾರೆ. ಅವರೂ ಸಹ ಶ್ರೀ ಮೋದಿಯವರ ಮತ್ತು ಶ್ರೀ ಜೇಟ್ಲಿಯವರ ಮೇಲೆ ಒತ್ತಡವನ್ನು ಹೇರಿ ಕರ್ನಾಟಕದ ಪರಿಸ್ಥಿತಿ ಏನಾಗಿದೆ ಎಂಬುದನ್ನು ಮನವರಿಕೆ ಮಾಡಿಕೊಡಲಿ. ನಮ್ಮ ಕಾಂಗ್ರೆಸ್ ಸರ್ಕಾರ ಶ್ರೀ ಸಿದ್ದರಾಮಯ್ಯನವರ ನೇತೃತ್ವದಲ್ಲಿ ಹಳ್ಳಿಗಳಿಂದ ಜನರು ಗುಳೆ ಹೋಗಬಾರದೆಂದು ಸಾಕಷ್ಟು ಯೋಜನೆಗಳನ್ನು ಕೈಗೆತ್ತಿಕೊಂಡು ದವಸಧಾನ್ಯಗಳನ್ನು ಕೊಡುತ್ತಿದೆ.

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೆ, ನಾನು ಎಲ್ಲಾ ಭಾಗ್ಯಗಳ ಬಗ್ಗೆಯೂ ಪ್ರಸ್ತಾಪ ಮಾಡಿದೆ. ಬಹುಶಃ ಮಾನ್ಯ ಮಟ್ಟೂರರವರು ಕೇಳಿಸಿಕೊಂಡಿರಲಿಕ್ಕಿಲ್ಲ.

**ಉಪ ಸಭಾಪತಿಯವರು:-** ಮಾನ್ಯ ಶ್ರೀಕಂಠೇಗೌಡರೆ, ನೀವು ಈ ಕಡೆ ತಿರುಗಿ ಮಾತನಾಡಿ. ನೀವು ಮಾನ್ಯ ಶ್ರೀಮತಿ ಜಯಮಾಲ ಅವರ ಕಡೆ ತಿರುಗಿಯೇ ಮಾತನಾಡುತ್ತಿದ್ದೀರಿ.

**(ಸದನದಲ್ಲಿ ನಗುವಿನ ಅಲೆ)**

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೆ, ನಿಮ್ಮನ್ನು ನೋಡುತ್ತಾ ಮಾತನಾಡಿದರೆ, ನೀವು ಬೇಗ ಮುಗಿಸಿ ಕುಳಿತುಕೊಳ್ಳಿ ಎಂದು ಹೇಳುತ್ತೀರಿ.

ಮಾನ್ಯ ಸಭಾಪತಿಯವರೆ, ಎಲ್ಲಾ ಭಾಗ್ಯಗಳೂ ಇವೆ. ಆದರೆ ಯಾವ ಭಾಗ್ಯವೂ ನಮ್ಮ ಜನರನ್ನು ಹಳ್ಳಿಯಲ್ಲಿ ಉಳಿಸಿಲ್ಲ. ಹಳ್ಳಿಗಳಲ್ಲಿ ಜನರನ್ನು ಉಳಿಸಿಕೊಳ್ಳುವ ದಿಸೆಯಲ್ಲಿ ಶಾಶ್ವತವಾದ ಕಾರ್ಯಕ್ರಮಗಳನ್ನು ಹಾಕಬೇಕೆಂಬುದು ನನ್ನ ಆಗ್ರಹ. ರೈತನ ಆತ್ಮಹತ್ಯೆಯನ್ನು ತಪ್ಪಿಸುವುದಕ್ಕಾಗಿ ಇಂದು ಮೂರು ಪಕ್ಷಗಳೂ ಪೈಪೋಟಿಯಲ್ಲಿವೆ. ಕೇಂದ್ರ ಸರ್ಕಾರ ಸಾಲ ಮನ್ನಾ ಮಾಡುವುದಿಲ್ಲ, ನಮ್ಮನ್ನು ಕೇಳಬೇಡಿ, ರಾಜ್ಯದವರು ಬೇಕಾದರೆ ಮಾಡಿಕೊಳ್ಳಿ ಎಂದು ಸ್ಪಷ್ಟ ಪಡಿಸಿದೆ. ಈಗ ಚೆಂಡು ಸರ್ಕಾರದ ಅಂಗಳದಲ್ಲಿದೆ. ಈಗ ಅವರು ಚೆಂಡನ್ನು ಒದೆಯಬೇಕು. ಶ್ರೀ ಯಡಿಯೂರಪ್ಪನವರು ನನಗೆ ಒಂದು ಅವಕಾಶವನ್ನು ಕೊಟ್ಟರೆ ಒದೆಯುತ್ತೇನೆಂದು ಹೇಳಿದ್ದಾರೆ. ಮಾನ್ಯ ಮಟ್ಟೂರರವರು ಹೇಳಿರುವುದು ನಿಜ. ಈಗ ಅವರ ನಿಲುವು ಬದಲಾಗಿದೆ. ಎಲ್ಲರೂ ರೈತರ ಪರ ಬರಲಿ ಎಂದು ನಾನು ಈ ಮಾತನ್ನು ಹೇಳುತ್ತಿದ್ದೇನೆ. ಯಡಿಯೂರಪ್ಪನವರೂ ಅದೇ ಆಸೆಯನ್ನು ಇಟ್ಟುಕೊಳ್ಳಲಿ, ನಾವೂ ಇಟ್ಟುಕೊಳ್ಳುತ್ತೇವೆ; ಸರ್ಕಾರವೂ ಇಟ್ಟುಕೊಳ್ಳಲಿ. ಶ್ರೀ ಮೋದಿಯವರಿಗೂ ದೇವರು ಅದರ ಬಗ್ಗೆ ಜ್ಞಾನವನ್ನು ಕೊಡಲಿ. ಏಕೆಂದರೆ ಸ್ವಿಸ್ ಬ್ಯಾಂಕ್‌ನಿಂದ ನಮ್ಮ ಖಾತೆಗಳಿಗೆ ರೂ.15 ಲಕ್ಷ ಇನ್ನೂ ಬಂದಿರುವುದಿಲ್ಲ. ನಾವು ಕಾಯುತ್ತಿದ್ದೇವೆ. ಅದು ಬರಲಿ. ತೊಂದರೆಯಿಲ್ಲ. ಆದರೆ ರೈತರಿಗೆ, ಬಡವರಿಗೆ, ಕಷ್ಟದಲ್ಲಿರುವವರಿಗೆ, ದಲಿತರಿಗೆ, ನೊಂದವರಿಗೆ, ಹಿಂದುಳಿದವರಿಗೆ ಶಾಶ್ವತವಾದ ಕಾರ್ಯಕ್ರಮಗಳನ್ನು ಕೊಡಬೇಕು. ಅವರಿಗೆ ಬದುಕನ್ನು ಕೊಡಬೇಕು. ಅವರು ಬದುಕಬೇಕಾದರೆ ಸಾಲ ಮನ್ನಾ ಮಾಡಬೇಕು. ಅದಕ್ಕಾಗಿ ರಾಜ್ಯ ಸರ್ಕಾರ ಬಹುಶಃ ಈ ಅಧಿವೇಶನದಲ್ಲಿಯೇ ರೈತರ ಸಾಲ ಮನ್ನಾ ಮಾಡುವ ಕುರಿತು ತನ್ನ ವ್ಯಾಪ್ತಿಯಲ್ಲಿ ಏನು ಮಾಡಲು ಸಾಧ್ಯವೋ ಅದನ್ನು ಮಾಡಿಬಿಡಲಿ. ಕೇಂದ್ರವು ಆಗುವುದಿಲ್ಲ ಎಂದು ಹೇಳಿ ಆಗಿರುವುದರಿಂದ ನಿಮ್ಮ ಕರ್ತವ್ಯವನ್ನು ನೀವು ನಿಭಾಯಿಸಿಬಿಡಿ. ಬಹುಶಃ ಆಗ ರೈತ ತಾತ್ಕಾಲಿಕವಾಗಿ ಬದುಕಿಕೊಳ್ಳುತ್ತಾನೆ ಮತ್ತು ಅಲ್ಲಿಂದ ಶಾಶ್ವತವಾಗಿ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರ ಸೇರಿ ಬ್ರೆಜಿಲ್ ಮಾದರಿಯಲ್ಲಿ ಶಾಶ್ವತವಾಗಿ ನೀರು ಕೊಡಿಸುವ, ನೀರು ಇಂಗಿಸುವ, ರೈತರಿಗೆ ಬದುಕು ಕೊಡುವ, ಅವರ ಬೆಳೆಗಳಿಗೆ ಲಾಭದಾಯಕ ಬೆಲೆ ಕೊಡುವ ಒಂದು ದೂರದೃಷ್ಟಿ ಯೋಜನೆಯನ್ನು ಸಾಧ್ಯವಾದಲ್ಲಿ ಪಂಚವಾರ್ಷಿಕ

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಯೋಜನೆಯನ್ನು ಸಂಪೂರ್ಣವಾಗಿ ರೈತರಿಗೇ ಮೀಸಲಿಟ್ಟು, ಏನಾದರೊಂದು ಹೊಸ ಬದಲಾವಣೆಯನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರದವರು ಮಾಡದಿದ್ದಲ್ಲಿ ಮುಂಬರುವ ದಿನಗಳಲ್ಲಿ ರೈತನೂ ಇರುವುದಿಲ್ಲ; ಬೇಸಾಯವೂ ಇರುವುದಿಲ್ಲ; ಹಳ್ಳಿಗಳೂ ಇರುವುದಿಲ್ಲ ಎನ್ನುವ ಮಾತಿನೊಂದಿಗೆ ನನ್ನ ಮಾತನ್ನು ಮುಗಿಸುತ್ತೇನೆ. ನಮಸ್ಕಾರ.

(...ಮುಂದು)

(688)13-06-2017 4-00 ಆರ್‌ಸಿ-ಬಿಎನ್‌ಎಸ್

(ಉಪ ಸಭಾಪತಿಯವರ ಉಪಸ್ಥಿತಿ)

**ಶ್ರೀ ಕೃಷ್ಣ ಬೈರೇಗೌಡ(ಕೃಷಿ ಸಚಿವರು):-** ಸನ್ಮಾನ್ಯ ಸಭಾಪತಿಯವರೆ, ಈ ಸಂದರ್ಭದಲ್ಲಿ ತಾವು ಅನುಮತಿ ಕೊಡುವುದಾದರೆ ನಾನು ಒಂದು ಸಣ್ಣ ಹೇಳಿಕೆಯನ್ನು ಕೊಡಬಯಸುತ್ತೇನೆ. ಇಂದು ಮುಂಜಾನೆ ಮಾನ್ಯ ರಮೇಶ್ ಬಾಬು ರವರು ರೈತರ ಅಕೌಂಟ್‌ಗೆ ಒಂದು ರೂಪಾಯಿ ಹಾಕಿದ್ದೀರಿ ಎಂಬ ವಿಷಯವನ್ನು ಪ್ರಸ್ತಾಪ ಮಾಡಿದರು. ನಾನು ಬೆಳಿಗ್ಗೆಯೇ ಅದರ ಬಗ್ಗೆ ಸ್ಪಷ್ಟೀಕರಣ ಕೊಟ್ಟಿದ್ದೆ. ಅದಕ್ಕೆ ಇನ್ನೊಂದು ಸ್ವಲ್ಪ ಸೇರಿಸಿ ಹೇಳುವುದಾದರೆ, ನಾವು ಸುಮಾರು 22 ಲಕ್ಷ 99 ಸಾವಿರ ರೈತರ ಅಕೌಂಟ್‌ಗಳಿಗೆ ನೇರವಾಗಿ 1,530 ಕೋಟಿ ರೂಪಾಯಿಗಳನ್ನು ಹಾಕಿದ್ದೇವೆ. ದೇಶದಲ್ಲಿಯೇ ಎಲ್ಲಿಯೂ ಸಹ ಈ ವ್ಯವಸ್ಥೆ ಇಲ್ಲ. 'Aadhaar Enabled Payment System' ಎಂದು ಇದೆ. ಆ ಸಿಸ್ಟಂ ಮುಖಾಂತರವೇ ನೇರವಾಗಿ ಅವರ ಅಕೌಂಟ್‌ಗಳಿಗೆ ಹೋಗುವಂತೆ ಮಾಡಲಾಗಿದೆ. ಬೆಳಿಗ್ಗೆ ನಾನು ಹೇಳುವಾಗ ಕೆಲವು ರೈತರು ಬಿಟ್ಟು ಹೋಗಿದ್ದಾರೆಂದು ಹೇಳಿದೆ. ಮಾನ್ಯ ಕಂದಾಯ ಸಚಿವರು ಒಂದು ಸಭೆ ಮಾಡಿ ಬಿಟ್ಟು ಹೋಗಿರುವಂತಹ ರೈತರಿಗೆ ನಾವು ಇನ್ನೊಂದು ಅವಕಾಶವನ್ನು ಕೊಡೋಣ. ಏಕೆಂದರೆ ಅಧಿಕಾರಿಗಳಿಂದ ತಪ್ಪಾಗಿದೆ. ರೈತರ ಹೆಸರನ್ನು ಬಿಟ್ಟಿರುವವರು ಅಧಿಕಾರಿಗಳು. ಈ ರೀತಿ ಇರುವಾಗ ನಾವು ರೈತರಿಗೆ ಏಕೆ ಶಿಕ್ಷೆ ಕೊಡಬೇಕೆಂದು ಹೇಳಿ ಮಾನ್ಯ ಅಧ್ಯಕ್ಷರು ಸಚಿವ ಸಂಪುಟದ ಉಪ ಸಮಿತಿಯಲ್ಲಿ ಇನ್ನೊಂದು ಅವಕಾಶವನ್ನು ಕೊಟ್ಟರು. ಆಗ ಅಧಿಕಾರಿಗಳು ಸುಮಾರು 2 ಲಕ್ಷ ರೈತರ ಹೆಸರುಗಳನ್ನು ಹೆಚ್ಚುವರಿಯಾಗಿ ಸೇರಿಸಿದರು. ಆಗ ನಾವು 2 ಲಕ್ಷ ರೈತರ ಪ್ರತಿ ಅಕೌಂಟ್‌ಗೆ ಒಂದು ರೂಪಾಯಿಯನ್ನು ಹಾಕಿದೆವು. ಆಗ 1 ಲಕ್ಷ 8 ಸಾವಿರ ರೈತರ ಅಕೌಂಟ್‌ಗೆ ಒಂದು ರೂಪಾಯಿ ಹೋಯಿತು. ಅದೇ 1 ಲಕ್ಷ 8 ಸಾವಿರ ರೈತರಿಗೆ ಆ ಒಂದು ರೂಪಾಯಿ ಅವರ ಅಕೌಂಟ್‌ಗೆ ಹೋದಮೇಲೆ ಅದೇ ಅಕೌಂಟ್‌ಗಳಿಗೆ 72 ಕೋಟಿ ರೂಪಾಯಿ 23 ಲಕ್ಷ ರೂಪಾಯಿ ಹೋಗಿದೆ. ಟೀಕೆ ಟಿಪ್ಪಣಿ ಮಾಡುವವರು ವಿಚಾರವನ್ನು ಅರ್ಥ ಮಾಡಿಕೊಂಡು ಮಾಡಿದರೆ ನಿಜವಾಗಿಯೂ ಸರ್ಕಾರ ಎಡವಿದಾಗ ನಮ್ಮನ್ನು ನೀವು ಎಚ್ಚರಿಸಿದರೆ ಪರವಾಗಿಲ್ಲ. ನಾವು ಅದನ್ನು sportive ಆಗಿ ತೆಗೆದುಕೊಳ್ಳುತ್ತೇವೆ.

**ಶ್ರೀ ರಾಮಚಂದ್ರಗೌಡ:-** ಮಾನ್ಯ ಸಭಾಪತಿಯವರೆ, ನಿದ್ದೆ ಮಾಡಿದ್ದರೆ ಅವರನ್ನು ಎಬ್ಬಿಸಬಹುದು. ಆದರೆ ಬಿದ್ದು ಹೋಗಿದ್ದರೆ ನಾವು ಹೇಗೆ ಎಬ್ಬಿಸುವುದು?



" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಕೃಷ್ಣ ಬೈರೇಗೌಡ:-** ಮಾನ್ಯ ಸಭಾಪತಿಯವರೆ, 72 ಕೋಟಿ ರೂಪಾಯಿಯನ್ನು ರೈತರ ಅಕೌಂಟ್‌ಗೆ ಹಾಕಿರುವವರು ಬಿದ್ದು ಹೋಗಿದ್ದಾರೆಯೇ? ನಾನು ಈ ಮಾತನ್ನು ಏಕೆ ಹೇಳುತ್ತಿದ್ದೇನೆಂದರೆ, ಸಕಾರಾತ್ಮಕವಾದಂತಹ ಟೀಕೆ ಟಿಪ್ಪಣಿಗಳು ಆಡಳಿತ ಸುಧಾರಣೆಗೆ, ಜನಗಳಿಗೆ ಅನುಕೂಲವಾಗುತ್ತದೆ. ಆದರೆ ಟೀಕೆ ಮಾಡಬೇಕೆಂದೇ, ವಿಚಾರವನ್ನು ತಿಳಿದುಕೊಳ್ಳದೆಯೇ ವಿಚಾರ ಏನೆಂದು ಪರಾಮರ್ಶೆ ಮಾಡದೆ, ಹಿಂದೆ ಮುಂದೆ ಏನನ್ನೂ ತಿಳಿದುಕೊಳ್ಳದೆಯೇ ರೈತರು ಎಂದರೆ ಸರ್ಕಾರಕ್ಕೆ "ಕಾಲಿನ ಕಸಕ್ಕೆ" ಸಮಾನ ಎಂದು ಹೇಳುವುದು ಎಷ್ಟರಮಟ್ಟಿಗೆ ಸರಿ? ಈ ವಿಷಯವನ್ನು ತಿಳಿದುಕೊಂಡು ಹೇಳಿದ್ದೋ ಅಥವಾ ತಿಳಿಯದೆಯೇ ಹೇಳಿದ್ದೋ ಎಂದು ತಾವೇ ಹೇಳಬೇಕು. ಆ ಮಾತನ್ನು ನೀವು ಹೇಳಲಿಲ್ಲ.

**ಶ್ರೀ ಪುಟ್ಟಣ್ಣ:-** ಮಾನ್ಯ ಸಚಿವರೆ, ನೀವು ಮೊದಲೇ ಈ ವಿಷಯವನ್ನು ಹೇಳಿದ್ದರೆ ಇಷ್ಟೊಂದು ಗೊಂದಲ ಉಂಟಾಗುತ್ತಿರಲಿಲ್ಲ. ನೀವು ಈ ವಿಷಯವನ್ನು ಹೇಳದೆ ಇದ್ದ ಕಾರಣ ಇಷ್ಟೊಂದು ಗೊಂದಲ ಉಂಟಾಗಿದೆ.

**ಶ್ರೀ ಕೃಷ್ಣ ಬೈರೇಗೌಡ:-** ಇರಲಿ. ನಿಮ್ಮ ಸಲಹೆಗಳನ್ನು ಸಹ ನಾವು ಸ್ವೀಕಾರ ಮಾಡುತ್ತೇವೆ. ಆದರೆ ನಾವು ಅದನ್ನು ಮಾಡಿದ್ದು ಏಕೆ, ಮಾಡುವ ಕೆಲಸ ಸರಿಯಾಗಿರಬೇಕು. ಯಾರದೋ ಅಕೌಂಟ್‌ಗೆ ಹಾಕಿ ದುಡ್ಡು ಯಾರದೋ ಅಕೌಂಟ್‌ಗೆ ಹೋದರೆ ನಾಳೆ ಆ ಹಣವನ್ನು ವಾಪಸ್ಸು ತೆಗೆದುಕೊಳ್ಳುವುದಕ್ಕೂ ಆಗುವುದಿಲ್ಲ, ದುಡ್ಡೆಲ್ಲಾ ಪೋಲಾಗುತ್ತದೆ. ಯಾರೋ ನನಗೆ ಒಬ್ಬರು ಕೇಳಿದರು, ಆಯಿತು ನೀವು ಟೆಸ್ಟ್ ಮಾಡುವುದಕ್ಕೆ ಎಂದು ಹೇಳುತ್ತಿದ್ದೀರಿ ಆದರೆ ಒಂದು ಲಕ್ಷ ರೂಪಾಯಿ ವ್ಯರ್ಥವಾಯಿತಲ್ಲ ಎಂದು ಕೇಳಿದರು. ಅದಕ್ಕೆ ನಾನು ಇದು ಒಂದು ಪ್ರಶ್ನೆಯೇ ಎಂದು ಕೇಳಿದೆ. ಒಂದು ಲಕ್ಷ ಅಕೌಂಟ್‌ಗಳಿಗೆ ಒಂದೊಂದು ರೂಪಾಯಿಯನ್ನು ಹಾಕಿದ್ದು ವ್ಯರ್ಥವಾಗಿದ್ದರೆ ಅದನ್ನು ಬಿಟ್ಟು ಬಿಡಿ. ಆದರೆ ಸುಮಾರು 500 ತಪ್ಪು ಅಕೌಂಟ್‌ಗೆ ನಾವು ಹಾಕಿದ ಹಣ ಹೋಗಿದ್ದರೆ ಹತ್ತಾರು ಲಕ್ಷ ರೂಪಾಯಿಗಳು ಹೋಗುತ್ತಿತ್ತಲ್ಲ ಅದು ಪರವಾಗಿಲ್ಲವೆ? ನಾವು ಟೆಸ್ಟ್ ಮಾಡದೆ ತಪ್ಪು ಅಕೌಂಟ್‌ಗಳಿಗೆ ನೂರಾರು ರೂಪಾಯಿಗಳನ್ನು ಹಾಕಿದರೆ ಆಗ ಲಕ್ಷಾಂತರ ರೂಪಾಯಿ ವ್ಯರ್ಥವಾಗುತ್ತಿರಲಿಲ್ಲವೆ? ಈಗ ನಾವು ಒಂದು ಲಕ್ಷ ರೈತರ ಅಕೌಂಟ್‌ಗಳಿಗೆ ಒಂದೊಂದು ರೂಪಾಯಿ ಹಾಕಿದಂತಹ ಹಣದಲ್ಲಿ ಒಂದು ಪೈಸೆ ಸಹ ವ್ಯರ್ಥವಾಗಿಲ್ಲ. ಏಕೆಂದರೆ, ಆ ಹಣವೆಲ್ಲಾ ರೈತರ ಅಕೌಂಟ್‌ಗಳಿಗೆ ಹೋಗಿದೆ. ಯಾರ ಅಕೌಂಟ್‌ಗಳಿಗೆ ಸರಿಯಾಗಿ ಹೋಗಿದೆ ಅವರ ಅಕೌಂಟ್‌ಗಳಿಗೆ 72 ಕೋಟಿ ರೂಪಾಯಿಗಳನ್ನು ಹಾಕಿದ್ದೇವೆ. ಇನ್ನು ಅದರಲ್ಲಿ 72 ಸಾವಿರ ಅಕೌಂಟ್‌ಗಳು reject ಆಗಿದೆ. ಹಾಗಾದರೆ ಏಕೆ ಹಾಕಿದ್ದೀರಿ ಎಂದು ಕೇಳಬಹುದು. ಈ 72 ಸಾವಿರ ಅಕೌಂಟ್‌ಗಳು validate ಆಗಿಲ್ಲ. ಅವರದು ಈಗ I.F.S.C. Code ಎಂದು ಇದೆ. I.F.S.C. Code ನಲ್ಲಿ reject ಆಗಿದೆ. ಅಂದರೆ ಆ 72 ಸಾವಿರ ಅಕೌಂಟ್‌ಗಳಲ್ಲಿ ನ್ಯೂನತೆ ಇದೆ ಎಂದು ಆಯಿತು. ಅದನ್ನು ಸರಿಪಡಿಸಿ ಅವರ ಅಕೌಂಟ್‌ಗಳಿಗೂ ಸಹ ಹಾಕುತ್ತೇವೆ.

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಅಕೌಂಟ್‌ನಲ್ಲಿರುವಂತಹ ನ್ಯೂನತೆಯನ್ನು ಸರಿಪಡಿಸುವುದಕ್ಕೋಸ್ಕರ ರೈತರ ಅಕೌಂಟ್‌ಗೆ 1 ರೂಪಾಯಿ ಹಾಕಿ ಟೆಸ್ಟ್ ಮಾಡಿದ್ದು. ಇದನ್ನು ಅರ್ಥ ಮಾಡಿಕೊಳ್ಳದೆಯೇ ನೀವಾಗಲಿ, ನಾವಾಗಲಿ ಟೀಕೆ ಮಾಡುವುದು ಸರಿಯಲ್ಲ.

**ಶ್ರೀ ಬಿ.ಜೆ.ಪುಟ್ಟಸ್ವಾಮಿ:–** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಮೊದಲೇ ಕ್ಲಾರಿಫಿಕೇಶನ್ ಕೊಟ್ಟಿದ್ದರೆ ಈ ರೀತಿ ಗೊಂದಲವೇ ಆಗುತ್ತಿರಲಿಲ್ಲ.

(ಗೊಂದಲ)

**ಶ್ರೀ ಕೃಷ್ಣ ಬೈರೇಗೌಡ:– ಮಾನ್ಯ ಸಭಾಪತಿಯವರೆ,** ಬೆಳಿಗ್ಗೆ ಮಾನ್ಯ ರಮೇಶ್ ಬಾಬು ಅವರು ಕೇಳಿದರು. ಅವರು ಕೇಳಿದಾಗ ನಾವು ಉತ್ತರ ಕೊಡುತ್ತೇವೆಂದು ಹೇಳಿದ್ದೆವು. ಮಾನ್ಯ ಸಭಾಪತಿಯವರೆ, ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳು.

**ಉಪ ಸಭಾಪತಿಯವರು:–** ಮಾನ್ಯ ಸಚಿವರೆ, ಮಾನ್ಯ ಸದಸ್ಯರು ಈ ವಿಷಯವನ್ನು ಕೇಳದೆ ಇದ್ದಿದ್ದರೆ ಈ ವಿಷಯ ಇಡೀ ನಾಡಿನ ಜನತೆಗೆ ಗೊತ್ತಾಗುತ್ತಿರಲಿಲ್ಲ. ಈಗ ಈ ಸದನದ ಮೂಲಕ ಇಡೀ ನಾಡಿನ ಜನತೆಗೆ ಮುಟ್ಟಿಸಿದ್ದೀರಿ.

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, ಮಾನ್ಯ ಕೆ.ಟಿ.ಶ್ರೀಕಂಠೇಗೌಡರು ಬಹಳ ಚನ್ನಾಗಿ ಮಾತನಾಡಿದ್ದಾರೆ.

**ಉಪ ಸಭಾಪತಿಯವರು:–** ಮಾನ್ಯ ಉಗ್ರಪ್ಪನವರೆ, ದಯವಿಟ್ಟು ಕುಳಿತುಕೊಳ್ಳಿ

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, ನನಗೆ ಒಂದು ನಿಮಿಷ ಮಾತನಾಡಲು ಅವಕಾಶ ಕೊಡಿ.

**ಉಪ ಸಭಾಪತಿಯವರು:–** ಮಾನ್ಯ ಉಗ್ರಪ್ಪನವರೆ, ಈಗ ನೀವು ಮಾತನಾಡಬೇಡಿ. ನಿಮಗೂ ಸಹ ಮಾತನಾಡುವುದಕ್ಕೆ ಅವಕಾಶ ಕೊಡುತ್ತೇನೆ ಆಗ ಮಾತನಾಡಿ.

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, ನಾನು ಆನಂತರ ಮಾತನಾಡುತ್ತೇನೆ. ಆದರೆ ಮಾನ್ಯ ಶ್ರೀಕಂಠೇಗೌಡರು ಜೆ.ಡಿ.ಎಸ್. ನ Deputy Leader ಆಗಿದ್ದಾರೆ. ಆದುದರಿಂದ ಒಂದು ಕ್ಲ್ಯಾರಿಫಿಕೇಶನ್ ಕೇಳಬಯಸುತ್ತೇನೆ. ಏಕೆಂದರೆ ಇದು ರಾಜ್ಯದ ಜನತೆಗೆ ಹೋಗುವಂಥ ದೃಷ್ಟಿಯಿಂದ ನಾನು ಕೇಳಬಯಸುತ್ತೇನೆ. ಆದುದರಿಂದ ನನಗೆ ಒಂದು ನಿಮಿಷ ಮಾತನಾಡಲು ಅವಕಾಶ ಕೊಡಬೇಕೆಂದು ಕೋರುತ್ತೇನೆ.

ಈಗ ಕೇಂದ್ರ ಸರ್ಕಾರ ಹಣ ಕೊಡುವುದಿಲ್ಲವೆಂದು ಹೇಳುತ್ತಿದ್ದಾರೆ. ಏಕೆಂದರೆ ಅವರ ಪಕ್ಷದ ನಾಯಕರು ಪ್ರಧಾನ ಮಂತ್ರಿಗಳಾಗಿದ್ದಂಥವರು. ನಮ್ಮ ಮುಂದೆ State Disaster Response Force (SDRF) ಇದೆ. ಆನಂತರ National Disaster Response Force (NDRF) ಸಹ ಇದೆ. ಈ NDRF ನಲ್ಲಿ ಇರುವಂಥದ್ದು 100% Union Government's fund. ಈ SDRF ನಲ್ಲಿ ಇರುವಂಥದ್ದು ಶೇಕಡ

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

25ರಷ್ಟು ರಾಜ್ಯದ್ದು, ಶೇಕಡ 75ರಷ್ಟು ಕೇಂದ್ರ ಸರ್ಕಾರದ ಪಾಲಿದೆ. ಇಲ್ಲಿ ನಾನು ಕೇಳುವಂತಹ ವಿಷಯವೇನೆಂದರೆ, ಮಾನ್ಯ ಶ್ರೀಕಂಠೇಗೌಡರು ಜೆ.ಡಿ.ಎಸ್. ಪಕ್ಷದ Deputy Leader ಆಗಿರುವುದರಿಂದ ಕೇಂದ್ರ ಸರ್ಕಾರ ರೈತರ ಸಹಾಯಕ್ಕೆ ಬರಬೇಕೆ ಬೇಡವೆ? ಏಕೆಂದರೆ ಅವರು ಕೇವಲ ರಾಜ್ಯ ಸರ್ಕಾರಗಳೇ ರೈತರ ಸಹಾಯಕ್ಕೆ ಬರಬೇಕು ಎನ್ನುವಂತಹ ಪಾಯಿಂಟ್‌ನ್ನು as a Deputy Leader, clarify ಮಾಡಬೇಕು. ಏಕೆಂದರೆ, ನನ್ನ ಮುಂದೆ NDRF and SDRF Rules ಗಳನ್ನು ಇಟ್ಟುಕೊಂಡಿದ್ದೇನೆ. ಇದರಲ್ಲಿ ಕೇಂದ್ರದ ಜವಾಬ್ದಾರಿ ಏನಿದೆ? ಈಗ Union Finance Minister ಏನು ಹೇಳುತ್ತಿದ್ದಾರೆ ಎಂಬ ವಿಷಯವನ್ನು ಆಮೇಲೆ ಹೇಳುತ್ತೇನೆ. ಏಕೆಂದರೆ, ನಿಮ್ಮ ನಾಯಕರು ಸಹ ಪ್ರಧಾನ ಮಂತ್ರಿಗಳಾಗಿದ್ದರು. ಅವರು ಸಹ ಪ್ರಧಾನ ಮಂತ್ರಿಯಾಗಿದ್ದಂತಹ ಸಂದರ್ಭದಲ್ಲಿ ರೈತರ ಪರವಾಗಿ ತೀರ್ಮಾನಗಳನ್ನು ತೆಗೆದುಕೊಂಡಿದ್ದಾರೆ. ಮಾನ್ಯ ಮನ್‌ಮೋಹನ್ ಸಿಂಗ್ ಅವರು ಸುಮಾರು 73 ಸಾವಿರ ಕೋಟಿ ರೂಪಾಯಿಗಳಷ್ಟು ರೈತರ ಸಾಲ ಮನ್ನಾ ಮಾಡಿದ್ದಾರೆ. ಈ ಹಂತದಲ್ಲಿ ಕೇಂದ್ರ ಸರ್ಕಾರದ ನಿಲುವು ರೈತರ ಪರವಾಗಿದೆಯೇ ಅಥವಾ ರೈತರ ವಿರುದ್ಧವಾಗಿದೆಯೇ ಎಂಬುದರ ಬಗ್ಗೆ ದಯಮಾಡಿ ನಿಮ್ಮ ಪಕ್ಷದ ನಿಲುವು ಏನು ಎಂಬುದನ್ನು ಈ ಸದನದ ಮೂಲಕ ರಾಜ್ಯದ ಜನತೆಗೆ ತಿಳಿಸಬೇಕೆಂದು ತಮ್ಮ ಮೂಲಕ ಕೇಳಬಯಸುತ್ತೇನೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೆ, ನಾನು ಬರಗಾಲದ ಬವಣೆಯ ಬಗ್ಗೆ ಚರ್ಚೆ ಮಾಡುತ್ತಾ, ಬರಗಾಲದ ಬವಣೆಯನ್ನು ನೀಗಿಸುವ ದಿಶೆಯಲ್ಲಿ ಯಾರ್ಯಾರು ಏನೇನು ಕೆಲಸ ಮಾಡಬೇಕೆಂದು ಹೇಳುತ್ತಿದ್ದೇನೆ. ಏಕೆಂದರೆ, ಹಳ್ಳಿಯ ಜನರನ್ನು ವಾಪಸ್ಸು ಹಳ್ಳಿಗೆ ಬರುವಂತೆ ಮಾಡಬೇಕಲ್ಲವೆ? ಹಳ್ಳಿಯ ಬದುಕನ್ನು ಕಟ್ಟಿ ಕೊಡಬೇಕಲ್ಲವೆ? ಅದರ ಬಗ್ಗೆ ಏನು ಮಾಡಬೇಕೆಂದು ಕೇಳುತ್ತಿದ್ದೇನೆ. ಮತ್ತೊಂದು ವಿಷಯವೇನೆಂದರೆ, ರೈತ ಬದುಕಬೇಕಲ್ಲವೆ? ರೈತ ಆತ್ಮಹತ್ಯೆ ಮಾಡಿಕೊಳ್ಳುವುದನ್ನು ನಿಲ್ಲಿಸಬೇಕಲ್ಲವೆ? ಅದನ್ನು ನಿಲ್ಲಿಸುವ ಸಂಬಂಧ ರೈತರ ಸಾಲ ಮನ್ನಾ ಮಾಡುವುದಕ್ಕೆ Sri Arun Jaitley, Union Finance Minister ಅವರು ಆಗುವುದಿಲ್ಲವೆಂದು ಹೇಳಿದರು. ನೀವೇನು ಹೇಳುತ್ತೀರಿ? ನಿಮ್ಮ ಮಾನ್ಯ ಮುಖ್ಯ ಮಂತ್ರಿಗಳು ಏನು ಹೇಳುತ್ತಿದ್ದರು? ನಾನು ಎಲ್ಲಿಂದ ಉದಾಹರಣೆ ಕೊಟ್ಟಿದ್ದೇನೆ?

**Sri K.B.SHANAPPA**:- The Parliament of India is there and let the Members of the Parliament discuss this issue over there. ನಾವು ಇಲ್ಲಿ ಚರ್ಚೆ ಮಾಡುತ್ತಿರುವಂಥದ್ದು ಸರ್ಕಾರ ಎಲ್ಲಿ ಎಡವಿದೆ ಎಂಬುದರ ಬಗ್ಗೆ. ಆದರೆ ನೀವು ಕೇಂದ್ರ ಸರ್ಕಾರದಿಂದ ನಮಗೆ ಅಷ್ಟು ಹಣ ಬರಬೇಕಾಗಿತ್ತು, ಇಷ್ಟು ಬರಬೇಕಾಗಿತ್ತು ಎಂದು ಮಾತನಾಡುವ ಬದಲು ನಮ್ಮ ರಾಜ್ಯದ ಬಗ್ಗೆ ಮಾತನಾಡಿ.

(ಗೊಂದಲ)

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೆ,

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

*"When calamities of severe nature occur, the Central Government is responsible for providing aid and assistance to the affected State, including deploying at the State's request, of Armed forces etc."*

ಎಂದು ಹೇಳಿದ್ದಾರೆ. ಈ ಮಾತನ್ನು ನಾನು ಹೇಳುತ್ತಿಲ್ಲ. ಇದು NDRF ನ Rules. Primary responsibility lies on the Union Government. ಹಾಗಾಗಿ ನಾನು ಜೆ.ಡಿ.ಎಸ್.ನ Deputy Leader ಆಗಿರುವಂಥವರಿಗೆ ಕೇಳಬಯಸುತ್ತೇನೆ.

(ಗೊಂದಲ)

**ಶ್ರೀ ಕೆ.ಬಿ.ಶಾಣಪ್ಪ:-** ನಾವು ಇಲ್ಲಿ ಈಗ ರೈತರಿಗೆ ಯಾವ ರೀತಿ ಸಹಾಯ ಮಾಡುತ್ತೀರಿ ಎಂಬುದರ ಬಗ್ಗೆ ಚರ್ಚೆ ಮಾಡುತ್ತಿರುವುದು. ಹಾಗಾಗಿ ಸರ್ಕಾರ ರೈತರಿಗೆ ಯಾವ ರೀತಿ ಸಹಾಯ ಮಾಡುತ್ತದೆ ಎಂಬುದನ್ನು ತಿಳಿಸಬೇಕು. They always say about Central Government.

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಶಾಣಪ್ಪನವರೆ, ನಾನು ಕೇವಲ ಭಾಷಣ ಮಾಡುವುದಕ್ಕೆ ಹೋಗುತ್ತಿಲ್ಲ. ಈ ದೇಶದ ಕಾನೂನು ನಮ್ಮೆಲ್ಲರಿಗೂ ಸಹ binding ಆಗಿದೆ.

(ಗೊಂದಲ)

**ಉಪ ಸಭಾಪತಿಯವರು:-** ಮಾನ್ಯ ಉಗ್ರಪ್ಪನವರೆ, ದಯವಿಟ್ಟು ಕುಳಿತುಕೊಳ್ಳಿ. ಮಾನ್ಯ ಶ್ರೀಕಂಟೇಗೌಡರೆ ಕುಳಿತುಕೊಳ್ಳಿ.

(ಗೊಂದಲ)

**ಶ್ರೀ ಕೆ.ಬಿ.ಶಾಣಪ್ಪ:-** ರಾಜ್ಯದ ರೈತರಿಗಾಗಿ ಈ ಸರ್ಕಾರ ಏನು ಮಾಡುತ್ತಿದೆ ಎಂಬುದನ್ನು ನಾವು ನಿಮ್ಮನ್ನು ಕೇಳುತ್ತಿದ್ದೇವೆ. Let them do it. Why are they saying about Union Government?

(ಗೊಂದಲ)

**ಉಪ ಸಭಾಪತಿಯವರು:-** ಮಾನ್ಯ ಶಾಣಪ್ಪನವರೆ, ನಿಮಗೂ ಸಹ ಮಾತನಾಡುವುದಕ್ಕೆ ಅವಕಾಶ ಕೊಡುತ್ತೇನೆ. ಆಗ ಮಾತನಾಡಿ. ಈಗ ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೆ, ಮಾನ್ಯ ಉಗ್ರಪ್ಪನವರು ನಾನು ಕೇಂದ್ರದಲ್ಲಿ ಯಜಮಾನಿಕೆ ತರುತ್ತಿದ್ದೇನೆ ಎಂಬ ಅರ್ಥದಲ್ಲಿ ಕೇಳುತ್ತಿದ್ದಾರೆ. ನನಗೆ NDRF, SDRF, ಯಾವ ಯೋಜನೆಯು ಗೊತ್ತಿಲ್ಲ. ಹಳ್ಳಿಯ ರೈತನಿಗೆ ನಿಮ್ಮ ಕೇಂದ್ರದ ಅಥವಾ ರಾಜ್ಯದ ಯಾವ ಯೋಜನೆಗಳು ಗೊತ್ತಿಲ್ಲ.

" ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

(ಮುಂದು)

(689)13-06-2017 4-10 ಕೆಜಿ-ಎಸ್‌ಪಿ (ಕೆಎಸ್)

**(ಉಪ ಸಭಾಪತಿಯವರ ಉಪಸ್ಥಿತಿ)**

**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಮುಂದು....):-** ನಮ್ಮ ರಾಜ್ಯದ ರೈತರಿಗೆ ಈ ರಾಜ್ಯದ ಮತ್ತು ಕೇಂದ್ರದ ಯಾವುದೇ ಯೋಜನೆಗಳು ಸಹ ಗೊತ್ತಿಲ್ಲ. ಅರಳಿಕಟ್ಟೆ ಹುಂಡಿಯ ಜನ ಇಡಿಯಾಗಿ ಊರು ಬಿಟ್ಟಿದ್ದಾರೆ. ಕಳೆದ ಮೂರು ತಿಂಗಳಿನಲ್ಲಿ ರೈತರು ಆತ್ಮಹತ್ಮೆ ಮಾಡಿಕೊಂಡಿದ್ದಾರೆ. ಈ ಆತ್ಮಹತ್ಯೆಗಳನ್ನು ಉಳಿಸುವ ದಿಶೆಯಲ್ಲಿ ಸರ್ಕಾರ ಸಾಲ ಮನ್ನಾ ಮಾಡಬೇಕೆಂದು ಆಗ್ರಹಿಸಿದ್ದೇನೆ. ಏಕೆಂದರೆ, ಮಾನ್ಯ ಕೇಂದ್ರ ಹಣಕಾಸು ಸಚಿವರಾದ ಶ್ರೀ ಅರುಣ್ ಜೇಟ್ಲಿ ಯವರು ಸಾಲ ಮನ್ನಾ ಮಾಡುವುದಕ್ಕೆ ಆಗುವುದಿಲ್ಲವೆಂದು ಹೇಳಿದ್ದಾರೆ. ಅವರು ಆ ರೀತಿ ಹೇಳಿದ ಮೇಲೆ, ಅವರ ಹತ್ತಿರ ನಮ್ಮ ಕೆಲಸ ಏನಿದೆ? ಸಾಲ ಮನ್ನಾ ಮಾಡಲು ಆಗುವುದಿಲ್ಲ ಎಂದರೆ, ರೈತರು ಆತ್ಮಹತ್ಯೆ ಮಾಡಿಕೊಳ್ಳುವುದನ್ನು ನಿಲ್ಲಿಸುವುದಿಲ್ಲ. ಈಗ ಸರ್ಕಾರ ಇದಕ್ಕೆ ಏನು ಮಾಡುತ್ತದೆ ಅದನ್ನು ಹೇಳಲಿ?

**ಉಪ ಸಭಾಪತಿಯವರು:-** ಮಾನ್ಯ ಸದಸ್ಯರಾದ ಶ್ರೀ ಎಂ.ಕೆ.ಪ್ರಾಣೇಶ್ ರವರೆ ಮಾತನಾಡಿ.

**ಶ್ರೀ ಎಂ.ಕೆ.ಪ್ರಾಣೇಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ನನಗೆ ಬರಗಾಲದ ಪರಿಸ್ಥಿತಿಯ ಮೇಲೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ಜೂನ್ ತಿಂಗಳು ಆದರೂ ಸಹ, ಇನ್ನೂ ಈ ಬರಗಾಲ ಉಲ್ಬಣ ಆಗುತ್ತಿರುವುದು ನಮ್ಮ ದುರದೃಷ್ಟವೆಂದು ನಾನು ಭಾವಿಸಿದ್ದೇನೆ. ಈ ಬಗ್ಗೆ ನಾವು ಈಗಾಗಲೇ ಸಾಕಷ್ಟು ಚರ್ಚೆಗಳನ್ನು ಮಾಡುತ್ತಿದ್ದೇವೆ. ನಾನು ವಿಧಾನ ಪರಿಷತ್ತಿನ ಸದಸ್ಯನಾಗಿ ಆಯ್ಕೆಯಾಗಿ ಒಂದು ವರ್ಷ ಆಗಿದೆ. ಈ ಸದನದಲ್ಲಿ ಬಹಳಷ್ಟು ಹಿರಿಯ ಸದಸ್ಯರು ಇದ್ದಾರೆ. ನಮ್ಮ ಜವಾಬ್ದಾರಿಗಳನ್ನು ಬಿಟ್ಟು ಕೇವಲ ಆಡಳಿತ ಪಕ್ಷ ಮತ್ತು ವಿರೋಧ ಪಕ್ಷಗಳ ಒಂದು ಚರ್ಚೆ ಆಗಬೇಕು ಎನ್ನುವಂತಹ ದೃಷ್ಟಿಯಲ್ಲಿ ಮಾತನಾಡುತ್ತಿರುವುದನ್ನು ನೋಡಿದರೆ, ಇದೊಂದು ದೊಡ್ಡ ದುರಂತವೆಂದು ನಾನು ಭಾವಿಸಿದ್ದೇನೆ. ಏಕೆಂದರೆ, ಆಡಳಿತ ಪಕ್ಷದವರು ಸಮಸ್ಯೆಗಳನ್ನು ಬಗೆಹರಿಸಬೇಕು. ವಿರೋಧ ಪಕ್ಷದವರು ಆಡಳಿತ ಪಕ್ಷದವರ ಜವಾಬ್ದಾರಿಗಳನ್ನು ನೆನಪು ಮಾಡಿಕೊಡುವಂತಹ ಒಂದು ವ್ಯವಸ್ಥೆ ಇದೆ. ಈ ವ್ಯವಸ್ಥೆಯೊಳಗೆ ನಮ್ಮ ಮೇಲೆ ಅವರು ದೂರುವಂಥದ್ದು, ಅವರ ಮೇಲೆ ನಾವು ದೂರುವಂಥದ್ದು ಅಲ್ಲ. ಇಲ್ಲಿ ರೈತರು ನಿರಂತರವಾಗಿ ಬರಗಾಲದಲ್ಲಿ ಸಾಯುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ನಾನು ಒಬ್ಬ ಕಿರಿಯ ಸದಸ್ಯನಾದರೂ ಸಹ, ಇವತ್ತಿನ ಸಮಸ್ಯೆಗಳನ್ನು ಬಗೆಹರಿಸುವಂತಹ ದಿಕ್ಕಿನಲ್ಲಿ ನಾವು ಯೋಚನೆಯನ್ನು ಮಾಡಬೇಕು. ಏಕೆಂದರೆ, ಮಾನ್ಯ ಸದಸ್ಯರಾದ ಶ್ರೀ ಕೆ.ಟಿ.ಶ್ರೀಕಂಠೇಗೌಡ ರವರು ಸವಿಸ್ತಾರವಾಗಿ ಬರಗಾಲದ ಪರಿಸ್ಥಿತಿಯನ್ನು ಸದನಕ್ಕೆ ತಿಳಿಸುವಂತಹ ವ್ಯವಸ್ಥೆಯನ್ನು ಮಾಡಿದ್ದಾರೆ.

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಮಾನ್ಯ ಸಭಾಪತಿಯವರೆ, ಇಡೀ ರಾಜ್ಯದ ಜನತೆ ಎರಡು ವ್ಯವಸ್ಥೆಗಳನ್ನು ಮಾಡಿದ್ದಾರೆ. ಒಂದು ವಿಧಾನಸಭೆ ಇರಬಹುದು, ಇನ್ನೊಂದು ಲೋಕಸಭೆ ಇರಬಹುದು. ಆದರೆ, ನಾವು ವಿಧಾನಸಭೆಯೊಳಗೆ ಕುಳಿತುಕೊಂಡು ಲೋಕಸಭೆಯನ್ನು ದೂರುವುದಕ್ಕೆ ವ್ಯವಸ್ಥೆಯನ್ನು ಮಾಡಿಕೊಳ್ಳುವುದಕ್ಕೆ ಅಲ್ಲ. ನಮ್ಮ ಶಕ್ತಿಗೆ ಅನುಸಾರವಾಗಿ ನಾವು ವಿಧಾನಸಭೆ ಮತ್ತು ವಿಧಾನಪರಿಷತ್ತಿನ ಒಳಗೆ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ಚಿಂತನೆಗಳನ್ನು ಮಾಡಬೇಕು. ನಾವು ಸರ್ಕಾರಕ್ಕೆ ಒತ್ತಾಯವನ್ನು ತರುತ್ತೇವೆ. ಅದಕ್ಕೆ ಸರ್ಕಾರ ಅಲ್ಲಿ ನಿಮ್ಮ ಅಜ್ಜ ಇದ್ದಾರೆ, ಅಲ್ಲಿ ನಿಮ್ಮ ಅಪ್ಪ ಇದ್ಧಾರೆ, ಅಲ್ಲಿ ನಿಮ್ಮ ಮುತ್ತಜ್ಜ ಇದ್ದಾರೆ, ಅವರ ಹತ್ತಿರ ಹೋಗಿ ಬಗೆಹರಿಸಿ ಕೊಳ್ಳಬೇಕಿತ್ತು ಎಂದು ಹೇಳುವುದು ಎಷ್ಟು ಸಮಂಜಸ? ಆದರೆ, ಇಲ್ಲಿ ನನ್ನ ಪ್ರಶ್ನೆ ಇಷ್ಟೇ. ನಮ್ಮನ್ನು ಜನರು ಆರಿಸಿ ಕಳುಹಿಸಿದ್ದಾರೆ. ನಾವು ಒಂದು ಜವಾಬ್ದಾರಿಯುತವಾದ ಸ್ಥಾನದಲ್ಲಿ ಕುಳಿತಿದ್ದೇವೆ. ಇಂತಹ ಪರಿಸ್ಥಿತಿಗಳಲ್ಲಿ ನಮ್ಮ ಕೈಯಲ್ಲಿ ಆದಂತಹ ಪರಿಹಾರದ ಕೆಲಸಗಳನ್ನು ಮಾಡಬೇಕಾಗಿದೆ. ಏಕೆಂದರೆ, ಇವತ್ತು ಭೀಕರವಾದಂತಹ ಬರಗಾಲ ಇದೆ. ಈ ಬರಗಾಲವನ್ನು ಶಾಶ್ವತವಾಗಿ ನಿವಾರಿಸಲಿಕ್ಕೆ ಆಗುವುದಿಲ್ಲ. ಅದು ನಮಗೆ ಗೊತ್ತಿದೆ. ಪ್ರಕೃತಿಯ ವಿರುದ್ಧ ಯಾರು ಹೋಗುವುದಕ್ಕೆ ಆಗುವುದಿಲ್ಲ. ಇವತ್ತು ಇಷ್ಟು ದೊಡ್ಡ ಸರ್ಕಾರವಿದೆ. ನಾವು ವಿರೋಧ ಪಕ್ಷದಲ್ಲಿ ಕುಳಿತುಕೊಂಡು ನೀವು ಅದನ್ನು ಮಾಡಬೇಕು, ನೀವು ಇದನ್ನು ಮಾಡಬೇಕು, ನೀವು ಪ್ರಕೃತಿಯ ವಿರುದ್ಧವಾಗಿ ಹೋಗಬೇಕು, ನೀವು ಅದನ್ನು ಜಯಿಸಬೇಕು, ಇದನ್ನು ಜಯಿಸಬೇಕು ಎಂದು ಹೇಳುವುದಕ್ಕೆ ಸಾಧ್ಯವಿಲ್ಲ. ಆದರೆ, ತಾತ್ಕಾಲಿಕವಾಗಿ ಈ ಬರ ಬಂದಂತಹ ಸಂದರ್ಭದಲ್ಲಿ ಪರಿಹಾರವನ್ನು ಮಾಡಲಿಕ್ಕೆ ಏನು ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂಬುದರ ಬಗ್ಗೆ ಆಲೋಚನೆ ಮಾಡಬೇಕಾಗುತ್ತದೆ. ಏಕೆಂದರೆ, ಇವತ್ತು ಎಲ್ಲಾ ಕಡೆ ಬರಗಾಲ ಇದೆ. ಯಾವ ಕಡೆ ಹೋದರೂ ಸಹ, ಬರಗಾಲವಿದೆ. ಈಗ ಮಾನ್ಯ ಸದಸ್ಯರಾದ ಶ್ರೀ ಕೆ.ಟಿ.ಶ್ರೀಕಂಠೇಗೌಡರವರು ಗುಳೆ ಹೋಗುವಂತಹ ಪರಿಸ್ಥಿತಿಗಳು ಬಂದಿದೆ ಎಂದು ಪ್ರಸ್ತಾಪ ಮಾಡಿದ್ದಾರೆ. ಈ ಹಿಂದೆ ಬಯಲು ಪ್ರದೇಶಗಳಲ್ಲಿ ಗುಳೆ ಹೋಗುವಂತಹ ವ್ಯವಸ್ಥೆ ಇತ್ತು. ಆ ರೀತಿ ಗುಳೆ ಹೋಗುವಂತಹವರು ಫಲವತ್ತಾದ ಮಲೆನಾಡು ಭಾಗಗಳಿಗೆ ಹೋಗಿ, ಅಲ್ಲಿ ಕೆಲಸವನ್ನು ಮಾಡುತ್ತಿದ್ದರು. ಅಲ್ಲಿ ಯಾವಾಗಲೂ ಸಮೃದ್ಧಿಯಾಗಿ ನೀರು ಇರುತ್ತಿತ್ತು. ಅಲ್ಲಿ ಒಳ್ಳೆಯ ಪರಿಸರದೊಳಗೆ ಬದುಕುವಂತಹ ವ್ಯವಸ್ಥೆಗಳು ಇತ್ತು. ಹೀಗಾಗಿ, ಮಲೆನಾಡಿಗೆ ಗುಳೆ ಹೋಗುವಂತಹ ಪರಿಸ್ಥಿತಿಗಳು ಇದ್ದವು. ಇವತ್ತು ಅಲ್ಲಿಯೂ ಸಹ ದೊಡ್ಡ ದುರಂತವಾಗಿದೆ. ಇವತ್ತು ಮಲೆನಾಡು ಭಾಗದಲ್ಲಿಯೂ ಸಹ, ಕುಡಿಯುವುದಕ್ಕೆ ನೀರು ಇಲ್ಲದಂತಹ ಪರಿಸ್ಥಿತಿಗಳು ನಿರ್ಮಾಣವಾಗಿದೆ. ನಾವು ಇದನ್ನು ಯಾವ ರೀತಿ ಪರಿಹಾರ ಮಾಡಬೇಕು? ಈ ಹಿಂದೆ ಬಯಲು ಸೀಮೆಯಲ್ಲಿ 100 ರಿಂದ 150 ಅಡಿಗಳಷ್ಟು bore well ಕೊರೆಸಿದರೆ ನೀರು ಸಿಗುತ್ತಿತ್ತು. ಆದರೆ, ಇವತ್ತು ಬಯಲು ಸೀಮೆಗಳಲ್ಲಿ ಒಂದು ಸಾವಿರ, ಒಂದೂವರೆ ಸಾವಿರ ಅಡಿಗಳಷ್ಟು bore well ಕೊರೆಸಿದರೂ ಸಹ, ನೀರು ಸಿಗದಂತಹ ಪರಿಸ್ಥಿತಿ ಬಂದಿದೆ. ಏಕೆಂದರೆ, ಪಕ್ಕ-ಪಕ್ಕದಲ್ಲಿಯೇ bore well ಗಳನ್ನು ಕೊರೆಸುವಂಥದ್ದು ಇರುವುದರಿಂದ ನೀರಿನ ಅಳ, water table level ತುಂಬ ಕೆಳಗೆ

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಹೋಗಿರುವುದನ್ನು ನಾವು ಕಾಣುತ್ತಿದ್ದೇವೆ. ಇವತ್ತು ಇಂತಹ ಪರಿಸ್ಥಿತಿಗಳು ಮಲೆನಾಡಿಗೂ ಸಹ ಹತ್ತಿರ ಹತ್ತಿರ ಬರುತ್ತಿದೆ. ಈಗ 100 ಅಡಿ ಅಥವಾ 150 ಅಡಿ ತೆಗೆದರೆ ನೀರು ಖಂಡಿತವಾಗಿ ಸಿಗುತ್ತಿದೆ. ಆದರೆ, ಇದು ಎಷ್ಟು ದಿವಸಗಳ ಕಾಲ ಇರುತ್ತದೆ? ಅದನ್ನು ನಾವು ಯೋಚನೆ ಮಾಡಬೇಕಲ್ಲವೇ? ಹಾಗಾಗಿ, ಆ ಪರಿಸ್ಥಿತಿಗಳು ಇಲ್ಲಿಗೂ ಸಹ ಬರುತ್ತಿದೆ. ಈ ದಿಕ್ಕಿನಲ್ಲಿ ಸರ್ಕಾರ ಏನ್ನನ್ನು ಯೋಚನೆ ಮಾಡುತ್ತಿದೆ?

ಮಾನ್ಯ ಸಭಾಪತಿಯವರೆ, ನಾನು ಹೆಚ್ಚಿಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ಏಕೆಂದರೆ, ಈ ಸದನದಲ್ಲಿ ನನಗಿಂತ ಸಾಕಷ್ಟು ಅನುಭವಿ ಹಿರಿಯ ಸದಸ್ಯರು ಇದ್ದಾರೆ. ಇಲ್ಲಿ ಸಾಕಷ್ಟು ಬರಗಾಲವನ್ನು ಕಂಡವರು ಇದ್ದಾರೆ. ಈ ಒಂದು ಸದನದ ಒಳಗಡೆ ಅದಕ್ಕೆ ಪರಿಹಾರವನ್ನು ಕಂಡಂತಹವರು, ಕಂಡುಕೊಳ್ಳುವಂತಹ ಪ್ರಯತ್ನವನ್ನು ಮಾಡಿದಂತಹ ಹಿರಿಯ ಸದಸ್ಯರು ಸದನದಲ್ಲಿ ಇದ್ದಾರೆ. ನಮ್ಮ ಜಿಲ್ಲಾ ಉಸ್ತುವಾರಿ ಮಂತ್ರಿಗಳು ಸಹ ಸದನದಲ್ಲಿ ಇದ್ದಾರೆ. ನಮಗೆ ಅವರು ಉಸ್ತುವಾರಿ ಮಂತ್ರಿಗಳಾಗಿ ಮುಂದುವರಿಯಬೇಕು ಎಂಬ ಭಾರಿ ಆಸೆ-ಅಭಿಲಾಶೆ ಇದೆ. ಈಗಾಗಲೇ ಅವರು ಕಾಂಗ್ರೆಸ್‌ನ ನೂತನ ಸಾರಥಿಯಾಗಿ ಮತ್ತೆ ಅಧಿಕಾರವನ್ನು ಸ್ವೀಕಾರ ಮಾಡಿದ್ದಾರೆ. ಅವರಿಗೆ ನಮ್ಮ ಜಿಲ್ಲೆಯ ಪರವಾಗಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಅವರು ನಮ್ಮ ಜಿಲ್ಲೆಗೆ ಉಸ್ತುವಾರಿ ಸಚಿವರಾಗಿ ಇದ್ದಂತಹ ಸಂದರ್ಭದಲ್ಲಿ ನಮ್ಮ ಜಿಲ್ಲೆಯಲ್ಲಿ ಸಾಕಷ್ಟು ಬರ ಪ್ರವಾಸವನ್ನು ಮಾಡಿದ್ದಾರೆ. ಸನ್ಮಾನ್ಯ ಕಂದಾಯ ಮಂತ್ರಿಯವರು ಸಹ ಬಂದಿದ್ದರು. ನಮಗೆ ಅವರ ಬಗ್ಗೆ ವಿಶ್ವಾಸ ಮತ್ತು ಗೌರವ ಇದೆ. ಆದರೆ, ಪಕ್ಷ ಎಂದು ಬಂದಾಗ, ಅವರು ಬಂದರೂ ಸಹ, ಅವರ ವಿರುದ್ಧ ಕೆಲಸವನ್ನು ಬಿ.ಜೆ.ಪಿ ಯವರು ಮಾಡುತ್ತೇವೆ. ಅದು ಇರಲಿ. ಇದು ಅದಲ್ಲ. ಏಕೆಂದರೆ, ವೈಯಕ್ತಿಕ ವಿಶ್ವಾಸದಡಿಯಲ್ಲಿ ಅವರು ಜಿಲ್ಲಾ ಉಸ್ತುವಾರಿ ಸಚಿವರಾಗಿ ಜವಾಬ್ದಾರಿಯುತವಾಗಿ ಕೆಲಸವನ್ನು ಮಾಡುತ್ತಿದ್ದರು. ಅದಕ್ಕೆ ಈ ಸಂದರ್ಭದಲ್ಲಿ ಅದನ್ನು ನೆನಪು ಮಾಡುವಂತಹ ಮಾತನ್ನು ಆಡಿದ್ದೇನೆ. ಅವರು ಇದ್ದಂತಹ ಸಂದರ್ಭದಲ್ಲಿ ಸಾಕಷ್ಟು ಪ್ರವಾಸಗಳು ಆಯಿತು. ಆದರೆ, ಅದಕ್ಕೆ ಪರಿಹಾರಗಳನ್ನು ಕಂಡುಕೊಳ್ಳುವ ನಿಟ್ಟಿನಲ್ಲಿ ಸರ್ಕಾರ ವಿಫಲತೆಯನ್ನು ಕಂಡಿದೆ. ಏಕೆಂದರೆ, ಅವರು ಎಲ್ಲಾ ಸಂದರ್ಭಗಳಲ್ಲಿಯೂ ಇದಕ್ಕೆ ಪರಿಹಾರಗಳನ್ನು ಕಂಡುಕೊಳ್ಳುತ್ತೇವೆಂದು ಹಾಗೂ ಜನರಿಗೆ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡುತ್ತೇವೆ ಎನ್ನುವ ಮಾತನ್ನು ಹೇಳುತ್ತಿದ್ದರು. ಆದರೆ, ಇವತ್ತು ಸಹ ಜಾನುವಾರುಗಳಿಗೆ ಕುಡಿಯುವ ನೀರಿಗೆ ಮತ್ತು ಮೇವಿಗೆ ಸಾಕಷ್ಟು ಸಮಸ್ಯೆಗಳು ಇದೆ. ಅದಕ್ಕೂ ಸಹ ಪರಿಹಾರಗಳನ್ನು ಕಂಡುಕೊಂಡು ಜಾನುವಾರುಗಳಿಗೆ ಮೇವನ್ನು ಕೊಡುತ್ತೇವೆ ಎನ್ನುವಂತಹ ಮಾತನ್ನು ಸಹ ಹೇಳಿದ್ದರು. ಆದರೆ, ಇವತ್ತಿನವರೆಗೂ ಆ ಕೆಲಸ ಕಾರ್ಯಗಳು ಆಗಲಿಲ್ಲ. ಹಾಗಾಗಿ, ಮುಂದಿನ ದಿವಸಗಳಲ್ಲಿ ನಾವು ಈ ಬರ ಪರಿಹಾರವನ್ನು ನಿಭಾಯಿಸುವುದಕ್ಕೆ ಏನ್ನನ್ನು ಮಾಡಬೇಕು? ಈಗ ಜೂನ್ ತಿಂಗಳು, ಮಲೆನಾಡು ಪ್ರದೇಶದಲ್ಲಿ ಮಳೆ ಪ್ರಾರಂಭವಾಗಿದೆ. ಮಲೆನಾಡು ಪ್ರದೇಶದಲ್ಲಿ ಮಳೆ ಪ್ರಾರಂಭವಾಗಿದೆ ಎಂದ ತಕ್ಷಣ ಕುಡಿಯುವ ನೀರಿನ ಸಮಸ್ಯೆ ಬಗೆ ಹರಿಯುವುದಿಲ್ಲ. ಏಕೆಂದರೆ, ನಮ್ಮಲ್ಲಿ ಬಾವಿಗಳಲ್ಲಿ ಮತ್ತು bore well ಗಳಲ್ಲಿ ನೀರು ಬರಬೇಕು. ಬಾವಿಗಳಲ್ಲಿ ಮತ್ತು bore well ಗಳಲ್ಲಿ

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ನೀರು ಬರಬೇಕು ಎಂದರೆ, ಕೆರೆಗಳು ತುಂಬಬೇಕು. ಅದಕ್ಕೆ ಜುಲೈ ಮತ್ತು ಆಗಸ್ಟ್ ತಿಂಗಳು ಬರಬೇಕು. ನಾವು ಜುಲೈ ತಿಂಗಳನ್ನು ಆಷಾಡಮಾಸವೆಂದು ಹೇಳುತ್ತೇವೆ. ಏಕೆಂದರೆ, ಆಷಾಡಮಾಸದಲ್ಲಿ ಬರುವಂತಹ ಗಾಳಿ ಮತ್ತು ಮಳೆ, ಆ ಗಾಳಿಯಡಿಯಲ್ಲಿ ಜಲ ಏಳುವಂತಹ ಕೆಲಸಗಳು ಆಗುತ್ತವೆ. ಆಗ ಕೆರೆಗಳು ಮತ್ತು ಬಾವಿಗಳು ತುಂಬುವಂತಹ ಕೆಲಸಗಳು ಆಗುತ್ತವೆ. ಆದರೆ, ದೂರದಲ್ಲಿರುವಂತಹ ಜನರಿಗೆ ಮಲೆನಾಡಿನಲ್ಲಿ ಸಾಕಷ್ಟು ಮಳೆ ಆಗಿದೆ. ಇನ್ನೇನು ಅಲ್ಲಿ ಕುಡಿಯುವ ನೀರಿನ ಸಮಸ್ಯೆ ಬಗೆಹರಿದಿದೆ ಎನ್ನುವಂತಹ ಭಾವನೆಗಳು ಬರುತ್ತದೆ. ಆದರೆ, ವಾಸ್ತವಿಕವಾಗಿ ಆ ಪರಿಸ್ಥಿತಿಗಳು ಅಲ್ಲಿ ಇಲ್ಲ. ಅಲ್ಲಿ ಪರಿಸ್ಥಿತಿ ಇರುವಂತಹದ್ದು, ಜುಲೈ ತಿಂಗಳವರೆಗೆ ಈ ರೀತಿಯ ಮಳೆ ಮುಂದುವರಿಯುತ್ತದೆ. ಜುಲೈ ತಿಂಗಳ ನಂತರ ನಮ್ಮ ಸಮಸ್ಯೆಗಳು ದೇವರು ಕಣ್ಣು ಬಿಟ್ಟರೆ, ಪ್ರಕೃತಿ ನಮ್ಮ ಪರವಾಗಿ ಇದ್ದರೆ, ಖಂಡಿತವಾಗಿ ನಮ್ಮ ಸಮಸ್ಯೆಗಳು ಬಗೆಹರಿಯುತ್ತವೆ ಎನ್ನುವಂತಹ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ.

ಮಾನ್ಯ ಸಭಾಪತಿಯವರೆ, ಇವತ್ತು ನಮ್ಮ ರೈತರ ಸಮಸ್ಯೆಯ ಬಗ್ಗೆ ಈಗಾಗಲೇ ಸಾಕಷ್ಟು ಚರ್ಚೆಗಳನ್ನು ಮಾಡಿದ್ದೇವೆ. ಆದರೆ, ಸರ್ಕಾರ ರೈತರ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ಏನು ಮಾಡಿದೆ? ಸರ್ಕಾರ ಹೇಳುವಂತಹ ರೀತಿಯಲ್ಲಿ ನಡೆದುಕೊಳ್ಳಬೇಕು. Budget ನಲ್ಲಿ ಹಣ ಇಡುವಂತಹ ವ್ಯವಸ್ಥೆಗಳನ್ನು ಮಾಡಿಕೊಂಡಿದೆ. ಆದರೆ, ಇವೆಲ್ಲವೂ ಕಾರ್ಯಗತವಾಗಿ ಯಶಸ್ವಿಯಾದರೆ ಮಾತ್ರ ಈ ಸಮಸ್ಯೆ ಬಗೆಹರಿಯುತ್ತದೆ. ಸರ್ಕಾರ society ಗಳಲ್ಲಿ ಮೂರು ಲಕ್ಷ ರೂಪಾಯಿಗಳನ್ನು ಬಡ್ಡಿ ರಹಿತ ಸಾಲ ಕೊಡುವಂತಹ ವ್ಯವಸ್ಥೆ ಮಾಡಿದೆ. ಆದರೆ, ಆ society ಗಳಿಗೆ ಬಡ್ಡಿಯನ್ನು ತುಂಬುವಂತಹ ಕೆಲಸವನ್ನು ಸರ್ಕಾರ ಮಾಡುತ್ತಿಲ್ಲ. 2014-2015 ಮತ್ತು 2015-2016 ನೇ ಸಾಲಿನಿಂದ society ಗಳಿಗೆ ಸರ್ಕಾರ ಹಣವನ್ನು ತುಂಬುವಂತಹ ಕೆಲಸವನ್ನು ಮಾಡುತ್ತಿಲ್ಲ. ರೈತರಿಗೆ ಸಾಲ ಕೊಡುವುದಕ್ಕೆ society ಗಳು ಹಿಂದೆ-ಮುಂದೆ ನೋಡುವಂತಹ ಪರಿಸ್ಥಿತಿ ಬಂದಿದೆ. ಮತ್ತೆ ಏಕೆ ಸರ್ಕಾರ ರೈತರ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ಎಲ್ಲಾ ರೀತಿಯ ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ ಎನ್ನುವಂತಹ ಮಾತನ್ನು ಹೇಳಿದೆ? ಕೇಂದ್ರ ಸರ್ಕಾರ 3% ನಲ್ಲಿ ಮೂರು ಲಕ್ಷ ರೂಪಾಯಿಗಳನ್ನು ಕೊಡುತ್ತಿದೆ. ಅದಕ್ಕೆ subsidy ಹಣವನ್ನು ಸಹ ಕೊಡುತ್ತಿದೆ. 2014-2015 ಮತ್ತು 2015-2016 ನೇ ಸಾಲಿನ ಹಿಂದೆ society ಗಳಿಗೆ ಸರ್ಕಾರ ಹಣ ತುಂಬುವಂತಹ ಕೆಲಸ ಮಾಡಿದೆ. ಆದರೆ, ಅದನ್ನು ಈಗ ಏಕೆ ಮಾಡುತ್ತಿಲ್ಲ? ಆ ಹಣವನ್ನು ಬೇರೆ ಬೇರೆ ಕಾರ್ಯಕ್ರಮಗಳಿಗೆ ಉಪಯೋಗಿಸುವಂತಹ ವ್ಯವಸ್ಥೆಯನ್ನು ಸರ್ಕಾರ ಮಾಡುತ್ತಿದೆ. ಆದರೆ, ಸರ್ಕಾರ ಕೈ ತೋರಿಸುವುದು ಕೇಂದ್ರ ಸರ್ಕಾರದ ಕಡೆಗೆ. ಈ ಸರ್ಕಾರ, ನಮ್ಮ ಕೇಂದ್ರ ಸರ್ಕಾರವೆಂದು ಹೇಳುತ್ತದೆ. ಹಾಗಾದರೆ, 3% ನಲ್ಲಿ ಕೊಡುತ್ತಿರುವವರು ಯಾರು? ಅದು ಕೇಂದ್ರ ಸರ್ಕಾರ. ಆ ಹಣವನ್ನು ಸೊಸೈಟಿಗಳಿಗೆ ತುಂಬಬೇಕು. ಆ 3% ನಲ್ಲಿ ಸರ್ಕಾರ ಕೊಡುತ್ತಿದೆ ಅದನ್ನು ಸೊಸೈಟಿಗಳಿಗೆ ತುಂಬಬೇಕು ಎನ್ನುವಂತಹ ಮಾತನ್ನು ಹೇಳುತ್ತೇನೆ. ಆದರೆ, ಸರ್ಕಾರ ಏಕೆ ತುಂಬುತ್ತಿಲ್ಲ? ಇದಕ್ಕೆ

**" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "**

ಸರ್ಕಾರ ಉತ್ತರ ಕೊಡಬೇಕು? ಸರ್ಕಾರವನ್ನು ದೂರುವಂತಹ ವಿಚಾರವಲ್ಲ ಇದು. ವಾಸ್ತವಿಕವಾಗಿ ಇರುವಂತಹ ಪರಿಸ್ಥಿತಿಗಳ ಬಗ್ಗೆ ಯೋಚನೆಯನ್ನು ಮಾಡಬೇಕು? ಸನ್ಮಾನ್ಯ ಕೃಷಿ ಸಚಿವರು ಇದುವರೆಗೂ ಸದನದಲ್ಲಿ ಇದ್ದರು. ಈಗ ಅವರು ಸದನದಲ್ಲಿ ಇಲ್ಲ. ಸನ್ಮಾನ್ಯ ಕೃಷಿ ಸಚಿವರು ಹೋದ ವರ್ಷ ಇದೇ ಸಮಯಕ್ಕೆ ನಮ್ಮ ಭಾಗಕ್ಕೆ ಬಂದಿದ್ದರು. ಸನ್ಮಾನ್ಯ ಕೃಷಿ ಸಚಿವರೇ ನಾಟಿ ಮಾಡಿದರು. ಮಳೆಗಾಲದಲ್ಲಿ ದೊಡ್ಡದಾಗಿ ನಾಟಿ ಆಯಿತು. ಅದು ಪತ್ರಿಕೆಗಳಲ್ಲಿ ಸಹ ದೊಡ್ಡದಾಗಿ ಬಂತು. ಸನ್ಮಾನ್ಯ ಕೃಷಿ ಮಂತ್ರಿಯವರು ನಾಟಿ ಮಾಡಿ ಹೋದ ನಂತರ ಅದಕ್ಕೆ ನೀರು ಇಲ್ಲ. ಅದರಲ್ಲಿ ಬೆಳೆ ಸಹ ಬರಲಿಲ್ಲ. 20 ರಿಂದ 25 ಎಕರೆ ಜಮೀನುಳ್ಳ ಒಬ್ಬ ದೊಡ್ಡ ರೈತ ಆ ಬಗ್ಗೆ ಒಂದು ದೊಡ್ಡ ಭಾಷಣವನ್ನು ಮಾಡಿದ. ನಾನು ಮಾನ್ಯ ಕೃಷಿ ಮಂತ್ರಿಯವರನ್ನು ಕೇಳಬೇಕೆಂದು ಇದ್ದೆ. ಆದರೆ, ಅದಕ್ಕೆ ತೊಂದರೆ ಆದಂತಹ ಸಂದರ್ಭದಲ್ಲಿ ಯಾರಿಂದಲೂ ಆ ರೈತನಿಗೆ ಸ್ಪಂದಿಸುವಂತಹ ವ್ಯವಸ್ಥೆ ಆಗಲಿಲ್ಲ. ಸರ್ಕಾರದ ಜವಾಬ್ದಾರಿಗಳನ್ನು ನೆನಪು ಮಾಡಿಕೊಳ್ಳುವುದಕ್ಕೆ ಪ್ರಯತ್ನ ಮಾಡಿದ್ದೇನೆಯೇ ಹೊರತು ಬೇರೆ ಏನು ಅಲ್ಲ. ಹಾಗಾಗಿ, ಎಲ್ಲರೂ ಸಹ ನಮ್ಮ ಜವಾಬ್ದಾರಿಗಳನ್ನು ಅರಿಯುವಂತಹ ವ್ಯವಸ್ಥೆಗಳು ಆಗಬೇಕು. ಸರ್ಕಾರ ಹೆಚ್ಚಿನ ಜವಾಬ್ದಾರಿಗಳನ್ನು ಪರಿಹಾರದ ದೃಷ್ಟಿಯೊಳಗೆ ನೋಡಬೇಕಾಗುತ್ತದೆ. ಸರ್ಕಾರಕ್ಕೆ ವಿರೋಧ ಪಕ್ಷದವರು ಮಾಹಿತಿಗಳನ್ನು ಕೊಡುವಂತಹ ವಿಚಾರಗಳನ್ನು ಮಾಡಬೇಕಾಗುತ್ತದೆ. ಆ ಜವಾಬ್ದಾರಿಗಳನ್ನು ಸರ್ಕಾರ ಸ್ವೀಕಾರ ಮಾಡುವಂತಹ ಮನಸ್ಥಿತಿಯಲ್ಲಿ ಇರಬೇಕಾಗುತ್ತದೆ. ಕೇವಲ ವಿರೋಧ ಪಕ್ಷದವರು ಕೇಳಿದರು, ಅದಕ್ಕೆ ಸರ್ಕಾರ ವಿರುದ್ಧವಾಗಿ ಮಾತನಾಡಬೇಕೆಂಬ ಉದ್ದೇಶದಿಂದ ಮಾತನಾಡಬಾರದು ಎಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ.

(ಮುಂದು .....)

(690)13-06-2017 4-20 ಸಿಎಸ್-ಕೆಎಸ್(ಎಸ್‌ಪಿ)

**ಶ್ರೀ ಎಂ.ಕೆ.ಪ್ರಾಣೇಶ್ (ಮುಂದು):-** ಹಾಗಾಗಿ ಇವತ್ತು ಬರದ ಬಗ್ಗೆ ಮಾತನಾಡಬೇಕೆಂದರೆ ಬರ ನನ್ನ ಮನೆಗೆ ಬಂದರೆ ನಿಮ್ಮ ಮನೆಗೆ ಬರದೇ ಇರಲ್ಲ, ನಿಮ್ಮ ಮನೆಗೆ ಬಂದರೆ ನನ್ನ ಮನೆಗೆ ಬರದೇ ಇರುವುದಿಲ್ಲ.

**ಉಪಸಭಾಪತಿಯವರು:-** ಪ್ರಾಣೇಶ್‌ರವರೆ, ವಿಷಯಕ್ಕೆ ಬನ್ನಿ.

**ಶ್ರೀ ಎಂ.ಕೆ. ಪ್ರಾಣೇಶ್:-** ಮಾನ್ಯ ಸಭಾಪತಿಗಳೇ, ಇನ್ನು ಒಂದೆರಡು ನಿಮಿಷಗಳಲ್ಲಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ. ಸರ್ಕಾರಕ್ಕೆ ರಾಜ್ಯದಲ್ಲಿರುವ ಬರದ ಬಗ್ಗೆ ನೆನಪು ಮಾಡಿದ್ದೇನೆ. ಬರ ಪರಿಹಾರಕ್ಕಾಗಿ ರಾಜ್ಯ ಸರ್ಕಾರ ಯಾವ ರೀತಿಯಲ್ಲಿ ಜವಾಬ್ದಾರಿಯುತವಾಗಿ ಕೆಲಸ ಮಾಡಬೇಕೆನ್ನುವುದನ್ನು ಹೇಳುತ್ತಿದ್ದೇನೆ. ಇನ್ನೂ ವಿಚಾರ ಏನಿದೆ ಎನ್ನುವುದು ನನಗೆ ಗೊತ್ತಿಲ್ಲ. ವಿಚಾರ ಇಡೀ ದೇಶಕ್ಕೆ ಮತ್ತು ಜನರಿಗೆ ಗೊತ್ತಿರುವಂತಹದ್ದು, ಇದರಲ್ಲಿ ಏನೂ ವಿಚಾರವಿಲ್ಲ. ಪರಿಸ್ಥಿತಿಯನ್ನು ನಿಭಾಯಿಸುವಂತಹ ಕೆಲಸವನ್ನು ಸರ್ಕಾರ ಮಾಡಬೇಕೆನ್ನುವುದೇ ಇಲ್ಲಿರುವ ವಿಚಾರ.

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ನಿರಂತರವಾಗಿರುವ ರೈತರ ಆತ್ಮಹತ್ಯೆಯನ್ನು ತಡೆಯುವಂತಹ ಪ್ರಯತ್ನ ಆಗಬೇಕು. ಬರವನ್ನು ಶಾಶ್ವತವಾಗಿ ಪರಿಹಾರ ಮಾಡುವುದಕ್ಕೆ ಆಗುವುದಿಲ್ಲ, ಆದರೂ ಕೂಡ ಈಗ ಬರ ಇರುವ ಪ್ರದೇಶಗಳಲ್ಲಿ ತಾತ್ಕಾಲಿಕವಾಗಿ ಕೂಡಲೇ ಪರಿಹಾರವನ್ನು ಮಾಡುವುದು, ಹಣದ ಆಲೋಚನೆ ಮಾಡುವ ಅಗತ್ಯವಿಲ್ಲ, ಖಜಾನೆಯಲ್ಲಿ ಸಾಕಷ್ಟು ಹಣವಿದೆ ಎನ್ನುವ ಮಾತನ್ನು ಸರ್ಕಾರ ಹೇಳುತ್ತಿದೆ. ಆದರೂ ಸಹ ಪರಿಹಾರ ನೀಡುವುದಕ್ಕೆ ಸರ್ಕಾರ ಹಿಂದು–ಮುಂದು ಏಕೆ ನೋಡುತ್ತಿದೆ? ಇದನ್ನೆಲ್ಲ ನಿಭಾಯಿಸಬೇಕಾದ್ದು ಸರ್ಕಾರದ ಜವಾಬ್ದಾರಿಯಲ್ಲವೇ? ಇಡೀ ರಾಜ್ಯದ ಜನರು ಮತ ನೀಡಿ ಈ ಸರ್ಕಾರವನ್ನು ಆಡಳಿತಕ್ಕೆ ತಂದಿದ್ದಾರೆ. ಇಂತಹ ಸಮಸ್ಯೆಗಳು ಬಂದಾಗ ಇದಕ್ಕೆ ಸೂಕ್ತ ಪರಿಹಾರಗಳನ್ನು ನೀಡಬೇಕು. ಜವಾಬ್ದಾರಿಯುತವಾಗಿ ಕೆಲಸವನ್ನು ಮಾಡಬೇಕು. ಅದನ್ನು ಕೇಂದ್ರದ ಕಡೆ ಕೈ ತೋರಿಸುವ ಕೆಲಸ ಮಾಡಬಾರದು.

ಮಾನ್ಯ ಸಭಾಪತಿಯವರೆ, ಕೊನೆಯದಾಗಿ ಒಂದು ಮಾತನ್ನು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ಈ ಸರ್ಕಾರ ಕೇಂದ್ರಸರ್ಕಾರದ ಕಡೆ ಕೈ ತೋರಿಸದೇ ರೈತರ ಸಾಲವನ್ನು ಮನ್ನಾ ಮಾಡಬೇಕು. ಏಕೆಂದರೆ ರಾಜ್ಯದ ಆಡಳಿತ ನಡೆಸುತ್ತಿರುವವರ ಜವಾಬ್ದಾರಿ ಅದು. ರಾಜ್ಯದ ಆಡಳಿತದಲ್ಲಿ ಮುಖ್ಯಮಂತ್ರಿ ಮತ್ತು ಮಂತ್ರಿಗಳಾಗಿರುವವರು ಕೇಂದ್ರದ ಜೊತೆಗೆ ಈ ಬಗ್ಗೆ ಹೋರಾಟ ಮಾಡುವುದು ಅವರ ಜವಾಬ್ದಾರಿ. ಆದರೆ ಅದನ್ನೇ ಮುಂದಿಟ್ಟುಕೊಂಡು ಕೇಂದ್ರಸರ್ಕಾರದ ಮೇಲೆ ಗೂಬೆ ಕೂರಿಸತಕ್ಕ ಕೆಲಸ ಆಗಬಾರದು. ದಯಮಾಡಿ ಈ ಸರ್ಕಾರ ರೈತರ ಸಾಲವನ್ನು ಮನ್ನಾ ಮಾಡಬೇಕು. ಹಾಗೆಯೇ ಈ ಬರಗಾಲದ ಸಂದರ್ಭದಲ್ಲಿ ರೈತರ ಆತ್ಮಹತ್ಯೆಯನ್ನು ನಿಲ್ಲಿಸುವ ಪ್ರಯತ್ನವನ್ನು ಮಾಡಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀಮತಿ ಎಸ್.ವೀಣಾ ಅಚ್ಚಯ್ಯ(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಗಳೇ, ಅವಕಾಶಕ್ಕಾಗಿ ಧನ್ಯವಾದಗಳು. ನನ್ನೆಲ್ಲ ಸಹದ್ಯೋಗಿಗಳು ಬರದ ವಿಚಾರವಾಗಿ ಮಾತನಾಡಿದರು. ಕೊಡಗು ಜಿಲ್ಲೆಗೆ ಸಂಬಂಧಪಟ್ಟ ಹಾಗೆ ಎರಡು ತಾಲ್ಲೂಕುಗಳನ್ನು ಬರಪೀಡಿತ ಎಂದು ಘೋಷಣೆಯನ್ನು ಮಾಡಿದೆ. ಆದರೆ ಈಗ ಕೊಡಗಿನಲ್ಲಿ ಚೆನ್ನಾಗಿ ಮಳೆ ಆಗುತ್ತಿದೆ. ಸರ್ಕಾರ ಕೂಡ ಬರ ಪರಿಹಾರಕ್ಕಾಗಿ ಅನೇಕ ಯೋಜನೆಗಳನ್ನು ಹಮ್ಮಿಕೊಂಡಿದೆ. ಕೊಡಗಿನ ವಿಚಾರವಾಗಿ ನಾನು ಒಂದೆರಡು ವಿಚಾರಗಳನ್ನು ಹೇಳಬಯಸುತ್ತೇನೆ. ಸುಮಾರು ಕೊಡಗಿನ ಕೃಷಿ ಭೂಮಿಯಲ್ಲಿ ಅಂದರೆ wet land ನಲ್ಲಿ ಭತ್ತವನ್ನು ನೆಡದೆ ಇರುವ ಒಂದು ಪರಿಸ್ಥಿತಿ ಇದೆ. ಆದರೆ ಭತ್ತವನ್ನು ಬೆಳೆಯಲಿಕ್ಕೆ ಜಾಗ ಬೇಕಾದಷ್ಟು ಇದ್ದರೂ ಕೂಡ ರೈತರು ಭತ್ತವನ್ನು ಬೆಳೆಯಲಿಕ್ಕೆ ಹಿಂದೇಟನ್ನು ಹಾಕುತ್ತಿದ್ದಾರೆ. ಏಕೆಂದರೆ ಭತ್ತವನ್ನು ನೆಡುವ ಕೂಲಿ ಕೂಡ ನಮಗೆ ಸಿಗುವುದಿಲ್ಲ ಎನ್ನುವ ವಿಚಾರ ಇಟ್ಟುಕೊಂಡಿದ್ದಾರೆ. ಬಹುಶಃ ಕೊಡಗಿನಲ್ಲಿ ಎಲ್ಲಾ ಭತ್ತದ ಗದ್ದೆಗಳನ್ನು ನೆಟ್ಟಿದ್ದೇ ಆದಲ್ಲಿ ಅಲ್ಲಿನ ಅಂತರ್ಜಲ ಕೂಡ ಹೆಚ್ಚಾಗುತ್ತದೆ. ಅದರಿಂದ ರಾಜ್ಯಕ್ಕೂ ಕೂಡ ಅನುಕೂಲ ಆಗುವ ಸಂದರ್ಭ ಇದೆ. ನಾನು ಕಳೆದ ಬಾರಿ ಭತ್ತ ಬೆಳೆಯುವ ರೈತರಿಗೆ ಪ್ರೋತ್ಸಾಹ ಧನವನ್ನು

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ನೀಡಬೇಕೆಂದು ಕೃಷಿ ಸಚಿವರಿಗೆ ಆಗ್ರಹಿಸಿದ್ದೆನು. ಬಹುಶಃ 1 ಎಕರೆಗೆ 5-10 ಸಾವಿರ ರೂಪಾಯಿಗಳ ಬೆಂಬಲ ಬೆಲೆ ಕೊಟ್ಟರೆ, ಕೊಡಗು ಜಿಲ್ಲೆಯಲ್ಲಿರುವ ಎಲ್ಲಾ ರೈತರು ಕೂಡ ತಮ್ಮ ಗದ್ದೆಯಲ್ಲಿ ಭತ್ತವನ್ನು ಬೆಳೆಯುತ್ತಾರೆ. ಕೊಡಗು ಜಿಲ್ಲೆಯಲ್ಲಿ ಸುಮಾರು 5-6 ತಿಂಗಳುಗಳವರೆಗೆ ಭತ್ತದ ಗದ್ದೆಯಲ್ಲಿ ನೀರು ನಿಲ್ಲುವಂತಹ ಒಂದು ವ್ಯವಸ್ಥೆ ಇದೆ. 6 ತಿಂಗಳ ಕಾಲ ಭತ್ತದ ಗದ್ದೆಯಲ್ಲಿ ನೀರು ನಿಂತರೆ ಅಂತರ್ಜಲ ಮಟ್ಟವೂ ಹೆಚ್ಚುತ್ತದೆ. ಹಾಗಾಗಿ ನಾನು ಸರ್ಕಾರವನ್ನು ಒತ್ತಾಯಿಸುತ್ತೇನೆ, ಗದ್ದೆ ನೆಡುವಂತಹ ರೈತರಿಗೆ 1 ಎಕರೆಗೆ ಇಷ್ಟು ಎನ್ನುವ ಹಾಗೆ ಪ್ರೋತ್ಸಾಹಧನವನ್ನು ನೀಡಬೇಕು. ಇದರಿಂದ ಅಂತರ್ಜಲ ಮಟ್ಟವನ್ನು ವಿಸ್ತರಿಸಲು ಕೂಡ ಅನುಕೂಲ ಆಗುತ್ತದೆ. ಹಾಗೆಯೇ ಈ ಸಂದರ್ಭದಲ್ಲಿ ಸರ್ಕಾರಕ್ಕೆ ಒಂದು ಮನವಿಯನ್ನು ಕೂಡ ಮಾಡಬಯಸುತ್ತೇನೆ. ಕಾರಣಾಂತರಗಳಿಂದ ಅನೇಕ ಸಂದರ್ಭಗಳಲ್ಲಿ ಕೊಡಗು ಜಿಲ್ಲೆಯಲ್ಲಿ ಮರಗಳ ಹರಣ ಆಗುತ್ತಿದೆ. Bonafide use ಗಾಗಿ ಮಾತ್ರ ಮರಗಳನ್ನು ಕಡಿಯುವಂತಹ ವ್ಯವಸ್ಥೆ ಆಗಬೇಕು. ಹಾಗೆಯೇ timber mafia ವನ್ನು ಸಹ ಕೊಡಗಿನಲ್ಲಿ ನಿಲ್ಲಿಸಬೇಕು, ಅದಾದರೆ ಮಾತ್ರ ಕೊಡಗಿನಲ್ಲಿ ನೀರು ಸಮೃದ್ಧವಾಗಿದ್ದು ರಾಜ್ಯಕ್ಕೂ ಕೂಡ ಉತ್ತಮ ಫಲಿತಾಂಶ ಕೊಡುವ ವ್ಯವಸ್ಥೆ ಆಗುತ್ತದೆ ಎನ್ನುವ ಮಾತನ್ನು ಹೇಳಿ ಇವತ್ತು ಸರ್ಕಾರ ಬರ ಪರಿಹಾರಕ್ಕಾಗಿ ಏನೆಲ್ಲಾ ಯೋಜನೆಗಳನ್ನು ಹಾಕಿಕೊಂಡಿದೆ, ಅದನ್ನು ಆದಷ್ಟು ಜಾಗ್ರತೆ ಜಾರಿಗೆ ತರಲಿ, ರಾಜ್ಯದಲ್ಲಿ ಮಳೆ ಬೆಳೆ ಚೆನ್ನಾಗಿ ಆಗಲಿ ಎಂದು ಹಾರೈಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಗಳೇ, ಹಿಂದಿ ಭಾಷೆಯಲ್ಲಿ "ಉಪಕಾರ್" ಎನ್ನುವ ಚಲನಚಿತ್ರ ಒಂದು ಬಂದಿತ್ತು. ಅದರಲ್ಲಿ ನಟ ಪ್ರಾಣ್ ಒಂದು dialogue ಅನ್ನು ಹೇಳುತ್ತಾನೆ, ಅದೇನೆಂದರೆ "ಹಮಾರೆ ದೇಶ್ ಮೆ ರೇಷನ್ ಪರ್ ಬಹುತ್ ಭಾಷಣ್ ಹೊ ಸಕತಾ ಹೈ, ಲೇಖಿನ್ ಭಾಷಣ್ ಪರ್ ರೇಷನ್ ನಹಿ ಮಿಲ್ ಸಕತಾ ಹೈ," ಆ ಕಾಲದಲ್ಲಿ ration system ನಲ್ಲಿ ಆಹಾರಧಾನ್ಯಗಳನ್ನು ವಿತರಿಸಲಾಗುತ್ತಿತ್ತು. ಆಗ ಆ ಚಿತ್ರದಲ್ಲಿ ಆತ ಆಹಾರ ಧಾನ್ಯ ಹಂಚಿಕೆ ಬಗ್ಗೆ ಮಾತನಾಡುವ ಸಂದರ್ಭದಲ್ಲಿ ಈ ಡೈಲಾಗ್ ಹೇಳಿದ್ದನು. ಅಂದರೆ ಇವತ್ತು ನಾವು ಎಷ್ಟೇ ಮಾತನಾಡಿದರೂ ಕೂಡ ಆ ಬರಗಾಲವನ್ನು ನೀಗುವುದಕ್ಕೆ ಸಾಧ್ಯವಿದೆಯೇ? ಬರಗಾಲವನ್ನು ನೀಗುವುದಕ್ಕೆ ಬರಿ ಭಾಷಣದಿಂದ ಮಾತ್ರ ಸಾಧ್ಯವಿಲ್ಲ, ಅದಕ್ಕೆ ಸೂಕ್ತ ಬೆಂಬಲ, ಸೂಚನೆ, ದಾರಿ ನೀಡಬೇಕಾಗಿ ಬರುತ್ತದೆ. 1919ರಲ್ಲಿ ಬಹಳ ದೊಡ್ಡ ಬರಗಾಲ ಬಂದಿತ್ತು ಆಗ ನಾವೆಲ್ಲ ಗೆಡ್ಡೆಗೆಣಸು ತಿನ್ನುತ್ತಿದ್ದೆವು ಎಂದು ನಮ್ಮ ಅಪ್ಪ ಮತ್ತು ತಾತಂದಿರು ಹೇಳುತ್ತಿದ್ದರು. 1896ರಲ್ಲಿ ಬರಗಾಲ ಬಂತು ಎಂದು ನಮ್ಮ ತಂದೆಯವರು ತಮ್ಮ ಊರನ್ನು ಬಿಟ್ಟು ಬೆಂಗಳೂರಿಗೆ ಬಂದರು. ಬರಗಾಲ ಎನ್ನುವುದು ಇರುತ್ತದೆ, ಏಕೆಂದರೆ ನಮ್ಮ ಭೂಮಿ ವೈಜ್ಞಾನಿಕವಾಗಿ ಸುತ್ತುತ್ತಾ ಇರುತ್ತದೆ. ಇದರಿಂದ ನಾಲ್ಕು ಋತುಗಳು ಬರುತ್ತವೆ. ಆದರೆ ಇವತ್ತು ಭೂಮಿಯ centre of gravity ಬದಲಾವಣೆ ಆಗುತ್ತಿದೆ; ಏಕೆ? ಭೂಮಿಯಿಂದ ಬೇಕಾದಷ್ಟು diesel, petrol,

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

marble, coal ಮತ್ತು granite ಗಳನ್ನು ತೆಗೆಯುತ್ತೇವೆ. ಇದರ ಜೊತೆಗೆ high-rise buildings ಗಳನ್ನು ಕಟ್ಟುತ್ತಿದ್ದೇವೆ. ಭೂಮಿಯ ಮೇಲಿನ ವಾತಾವರಣ ಬದಲಾವಣೆ ಆಗುತ್ತಾ ಆಗುತ್ತಾ centre of gravity of the earth ಬದಲಾವಣೆ ಆಗುತ್ತದೆ. ಆದರೆ ನಮ್ಮ ಅದೃಷ್ಟಕ್ಕೆ ಒಂದು ಭಾಗ ಭೂಮಿ, ಮೂರು ಭಾಗ ನೀರು ಇರುವುದರಿಂದ ಆ ನೀರು self-adjust ಮಾಡಿಕೊಂಡು centre of gravity ಬದಲಾವಣೆ ಆಗುತ್ತಾ ಇಲ್ಲ. ಆ ಬದಲಾವಣೆ ಆಗಿದ್ದರೆ ಬಹಳ ಅನಾಹುತಗಳು ಆಗುತ್ತಿತ್ತು. I am telling about the scientific reaction. ವರ್ಷಕ್ಕೆ 365 ದಿನಗಳು ಇದ್ದು, ನಾಲ್ಕು ಋತುಗಳಿವೆ, ಭೂಮಿ ತಿರುಗುವಾಗ ಒಂದೊಂದು ಸೆಕೆಂಡ್ ಬದಲಾವಣೆ ಆದರೂ ಸಹ ಕಾಲ ಬದಲಾವಣೆಗೊಂಡು ಭೂಮಿ ತಿರುಗುವಿಕೆಯಲ್ಲಿ ಬೇಕಾದಷ್ಟು ಬದಲಾವಣೆಗಳಾಗಿವೆ. ಆದ್ದರಿಂದ ಇವತ್ತು ಬರಗಾಲವನ್ನು ನಿರ್ವಹಣೆ ಮಾಡಿಲ್ಲ ಎನ್ನುವುದರ ಬಗ್ಗೆ ಮಾತನಾಡಬೇಕೇ ವಿನಃ ಬರಗಾಲ ಬಂದಿದೆ ಬಂದಿದೆ ಎಂದು ಮಾತನಾಡಬಾರದು. 1983ರಲ್ಲಿ ಶ್ರೀಮಾನ್ ರಾಮಕೃಷ್ಣ ಹೆಗ್ಗಡೆಯವರು ಮುಖ್ಯಮಂತ್ರಿಗಳಾಗಿದ್ದಾಗ ಬೆಂಗಳೂರಿಗೆ ನೀರನ್ನು ಕೊಡುತ್ತಿದ್ದ ಹೆಸರುಘಟ್ಟ ಕೆರೆ ಇವತ್ತು ನೆಲಕಚ್ಚಿದೆ. ಅದರಿಂದ ಬೋರ್‌ವೆಲ್ ಹಾಕಿ ಬೆಂಗಳೂರಿಗೆ ನೀರನ್ನು ತರಲಾಗುತ್ತಿತ್ತು. ನಾನು ಕಾಲೇಜು ವಿದ್ಯಾರ್ಥಿಯಾಗಿದ್ದಾಗ ಹೆಸರುಘಟ್ಟ ಕೆರೆಯಲ್ಲಿ ಬೋಟ್‌ನಲ್ಲಿ ಬಾವುಟ ಹಾಕಿಕೊಂಡು surfing ಮಾಡುತ್ತಿದ್ದೆನು, ಆ ಕೆರೆ ಬತ್ತಿದೆ ಎನ್ನುವುದನ್ನು ಯಾರು ನಂಬುವುದಕ್ಕೆ ಆಗುವುದಿಲ್ಲ. ಆದರೂ ಕೂಡ 4 ವರ್ಷಗಳ ಕೆಳಗೆ 8 ಅಡಿ ನೀರು ಬಂದಿತ್ತು. ಇವತ್ತಿಗೂ ಅಲ್ಲಿ ಎರಡೂವರೆ ಅಡಿ ಮೂರು ಅಡಿ ನೀರು ಇದೆ.

(ಮುಂದು)

(691) 4.30 13-06-2017 ಎಂವಿ:ಜಿಆರ್ **(ಉಪಸಭಾಪತಿಯವರ ಉಪಸ್ಥಿತಿ)**

**ಶ್ರೀ ರಾಮಚಂದ್ರಗೌಡ (ಮುಂದು...):-**

1937ರಲ್ಲಿ ತಿಪ್ಪಗೊಂಡನಹಳ್ಳಿ ಕೆರೆಯಿಂದ ಬೆಂಗಳೂರಿಗೆ ಕುಡಿಯುವ ನೀರನ್ನು ಒದಗಿಸಲಾಗುತ್ತಿತ್ತು. ಅದು 1937ರಲ್ಲಿ ಆಗಿರುವುದು, ಅಲ್ಲಿಂದ ಬೆಂಗಳೂರಿಗೆ ನೀರು ತರಬೇಕೆಂದು ಯೋಜನೆ ಮಾಡಲಾಗಿತ್ತು. ಇವತ್ತಿನ ದಿವಸ ತಿಪ್ಪಗೊಂಡನಹಳ್ಳಿ ಕೆರೆಗೆ ಮಳೆ ಬಂದರೂ ನೀರಿಲ್ಲ, ಅಲ್ಲಿ ಬರೀ ಕಸ ಇದೆ. ಈ ಸ್ಥಿತಿ ಬರುವುದಕ್ಕೆ ನಾವೆಲ್ಲರೂ ಕಾರಣ, ನಾನು ಈ ಸರ್ಕಾರ ಮತ್ತು ಆ ಸರ್ಕಾರವೆಂದು ಹೇಳುವುದಕ್ಕೆ ಹೋಗುವುದಿಲ್ಲ. There is no proper planning. ಆ ದಿವಸಗಳಲ್ಲಿ ನಾವುಗಳೆಲ್ಲರೂ ಮಕ್ಕಳಾಗಿದ್ದಾಗ ಮನೆಗೆ ಒಂದು ಗಿಡವಿರುತ್ತಿತ್ತು, ಮನೆಗೆ ಒಂದು ಬಾವಿ ಇರುತ್ತಿತ್ತು. ಶೇಷಾದ್ರಿಪುರದ ನಮ್ಮ ಮನೆಯಲ್ಲಿ ಹದಿನೈದು ಅಡಿಗೆ ನೀರು ಬರುತ್ತಿತ್ತು. ನಮ್ಮ ಎದುರುಗಡೆ ಮನೆಯ ಅಯ್ಯನವರು ಬಾವಿ ಇಟ್ಟುಕೊಂಡಿದ್ದರು, ಅವರು ಬಾವಿಯ ನೀರಿನಲ್ಲೇ ಅಡುಗೆ ಮಾಡುತ್ತಿದ್ದರು. ಆ ಬಾವಿಗೆ ಏನಾದರೂ ಬಿದ್ದರೆ, ಇವರು ಶೂದ್ರರು ಎಂದು ಆ ಬಾವಿಗೆ ಬೇರೆಯವರನ್ನು ಇಳಿಸುತ್ತಿರಲಿಲ್ಲ. ನಾನು ಹೇಳುತ್ತಿರುವುದು

ತಿದ್ದುಪಡಿಯಾಗದ ಪ್ರತಿ-ನ್ಯಾಯಾಲಯ

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಆಗಿನ ಪರಿಸ್ಥಿತಿ ಹೇಗಿತ್ತೆಂದು. ಹೀಗೆ ಇದ್ದಂತಹ ಬೆಂಗಳೂರು, ಇವತ್ತಿನ ದಿವಸ ಏನಾಗಿದೆ ಎಂದರೆ, ಇದು ಬೆಂಗಳೂರಿನವರದ್ದೇ ಅಲ್ಲ... ಅದಕ್ಕೆ ಏನೋ ಮಾಡಿದ್ದಾರೆ ಬಿಡಿ.

**ಉಪಸಭಾಪತಿಯವರು:-** ಮಾನ್ಯ ಸದಸ್ಯರಾದಂತಹ ಶ್ರೀ ರಾಮಚಂದ್ರಗೌಡರು ನನ್ನ ಕಡೆ ನೋಡಿ ಮಾತನಾಡಿ, ಮಾನ್ಯ ಸದಸ್ಯರಾದಂತಹ ಶ್ರೀ ವಿ.ಎಸ್.ಉಗ್ರಪ್ಪನವರ ಕಡೆ ನೋಡಿ ಮಾತನಾಡುವುದು ಬೇಡ.

**ಶ್ರೀ ರಾಮಚಂದ್ರಗೌಡ:-** ಮಾನ್ಯ ಸಭಾಪತಿಯವರೆ, ನಾನು ನಿಮ್ಮನ್ನೇ ನೋಡಿಕೊಂಡು ಮಾತನಾಡುತ್ತೇನೆ.

**ಶ್ರೀ ಐವನ್ ಡಿ'ಸೋಜಾ (ಸರ್ಕಾರಿ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ಇನ್ನೂ ಪ್ರಾರಂಭ ಮಾಡಿಲ್ಲ, ಅವರು ಆ ಕಡೆ ಇದ್ದಾರೆ ತಿರುಗಿ ಬರಬೇಕಷ್ಟೆ.

**ಶ್ರೀ ರಾಮಚಂದ್ರಗೌಡ:-** ಮಾನ್ಯ ಸಭಾಪತಿಯವರೆ, ಇವತ್ತಿನ ದಿವಸ ನಾವು ಮಾಡಬೇಕಾಗಿರುವುದು ಮಳೆ ನೀರಿನ ಸಂಗ್ರಹವನಲ್ಲ. ಮಳೆ ನೀರಿಗೆ ಇಂಗು ಗುಂಡಿಗಳನ್ನು ಮಾಡಬೇಕು. ನಾವು ಮಳೆ ನೀರನ್ನು ಸಂಗ್ರಹ ಮಾಡಿ ಅದನ್ನು ಬಳಸುತ್ತೇವೆ ಎಂದರೆ ಅದರಿಂದ ಏನೂ ಕೆಲಸವಾಗುವುದಿಲ್ಲ. ಮಳೆ ನೀರನ್ನು ಇಂಗು ಗುಂಡಿಗಳನ್ನಾಗಿ ಮಾಡಬೇಕು. ಇವತ್ತಿನ ದಿವಸ ಕಲ್ಲಿನ ಕಟ್ಟಡಗಳನ್ನು ಕಟ್ಟುವುದು ಬೇಕಾಗಿಲ್ಲ, ಈಗ ಸಿಮೆಂಟ್ ರಿಂಗ್‌ಗಳು ಬಂದಿವೆ. ಒಂದೊಂದು ಎಕರೆಗೂ ಕೂಡ ನೀರು ಯಾವ ಮೂಲೆಗೆ ಹರಿದು ಬರುತ್ತದೆಯೋ, ಆ ಮೂಲೆಗೆ ಹತ್ತು ಅಡಿ ಗುಂಡಿ ಮಾಡಿ ಸಿಮೆಂಟ್ ರಿಂಗ್ ಮಾಡಿಬಿಟ್ಟರೆ, ಮಳೆ ಬಂದ ನೀರೆಲ್ಲಾ ಅಲ್ಲಿ ನಿಲ್ಲುತ್ತದೆ. ಭೂಮಿ ಒಳಗೆ ನೀರನ್ನು ಮೇಲೆ ಬರುವಂತಹ ವ್ಯವಸ್ಥೆ ಮಾಡದೇ ಹೋದರೆ, ನೀವು ಏನು ಮಾಡಿದರೂ ಆಗುವುದಿಲ್ಲ. ನೀವು Rain Water Harvesting ಎನ್ನುತ್ತೀರಲ್ಲ. Rain Water Harvesting ಮಾಡಿ ಅದು ನಮ್ಮ ಕೆರೆಗೆ ನೀರು ಹೋಗಬೇಕು, ಗುಂಡಿಗೆ ನೀರು ಹೋಗಬೇಕು, ಕಟ್ಟೆಗೆ ನೀರು ಹೋಗಬೇಕು ಮತ್ತು ಹೊಳೆಗೆ ನೀರು ಹೋಗಬೇಕು. ನಾನು 1992ರಲ್ಲಿ ಮನೆ ಕಟ್ಟಿದ್ದೇನೆ, ಇವತ್ತಿನ ದಿವಸ ನಮ್ಮ ಮನೆಯಲ್ಲಿ ನಾನು ಇಂಗು ಗುಂಡಿಗಳನ್ನು ಮಾಡಿದ್ದೇನೆ. ನಾನು ಆ ನೀರನ್ನು ಉಪಯೋಗಿಸುವುದಿಲ್ಲ, ಬಾವಿ ತೆಗೆದು, ಬರುವಂತಹ ಮಳೆಯ ನೀರೆಲ್ಲಾ ಬಾವಿಗೆ ಹೋಗುತ್ತದೆ. ಹಾಗಾಗಿ ಅದರ ಪಕ್ಕದಲ್ಲಿರುವಂತಹ ಬೋರ್‌ವೆಲ್‌ಗಳಲ್ಲಿ ಯಾವಾಗಲೂ ನೀರು ಬರುತ್ತದೆ. ಏಕೆಂದರೆ ಬಂದಂತಹ ಮಳೆಯ ನೀರನ್ನು ನಾನು ಹೊರಗಡೆ ಬಿಡುವುದಿಲ್ಲ. 50:80 ನಿವೇಶನದ ಭಾಗದಲ್ಲಿ ಎಷ್ಟು ಮಳೆ ನೀರು ಬರುತ್ತದೆಯೋ ಪೂರ್ತಿ ಮಳೆ ನೀರನ್ನು ನಾನು ಇಂಗು ಗುಂಡಿಗೆ ಬಿಡುತ್ತೇನೆ, ಬೀದಿಗೆ ಬಿಡುವುದಿಲ್ಲ. ಈ ತರಹ ಇಂಗು ಗುಂಡಿಗಳನ್ನು ಮಾಡಬೇಕಾಗಿದೆ. ಅದಕ್ಕೆ ಹಣ ಜಾಸ್ತಿ ಖರ್ಚಾಗುವುದಿಲ್ಲ. ನೀವು ಬೇರೆ-ಬೇರೆ ಏನೋ ಯೋಜನೆಗಳನ್ನು ಮಾಡುತ್ತೀರಲ್ಲ, ಅದು ಏನೇನೋ ಆಗಿಬಿಡುತ್ತದೆ. ಹಳ್ಳಿಗಳಲ್ಲೂ ಕೂಡ, ಎಲ್ಲಾ ಹೊಲಗಳಲ್ಲಿ ಇಂಗು ಗುಂಡಿಗಳನ್ನು ಮಾಡಿದರೆ ಸರಿ ಹೋಗುತ್ತದೆ. ಇವತ್ತಿನ ದಿವಸ ಸುಮಾರು 300 ಜನ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಹೇಳಿದರು. ಬೇಕಾದಷ್ಟು ದನಗಳು ಮತ್ತು ಕುರಿಗಳು ಸತ್ತಿವೆ, ಎಲ್ಲವೂ ಸತ್ತಿವೆ. ಆದರೆ,

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಸರ್ಕಾರ ಎಷ್ಟು ಮಾಡುವುದಕ್ಕೆ ಆಗುತ್ತದೆ. ಅದು ನಮಗೂ ಗೊತ್ತು ಮತ್ತು ನಿಮಗೂ ಗೊತ್ತು, ಎಷ್ಟು ಮಾಡುವುದಕ್ಕೆ ಆಗುತ್ತದೆ, ಅದು ದೋಷವಲ್ಲ. ನಾಳೆ ಮಳೆ ಬಂದರೆ ಏನು ಎಚ್ಚರಿಕೆ ಆಗಿರಬೇಕು, ಮಳೆ ಬರದೇ ಇದ್ದರೆ ಏನು ಎಚ್ಚರಿಕೆ ಆಗಿರಬೇಕು ಎನ್ನುವುದರ ಬಗ್ಗೆ ನಾವುಗಳು ತಯಾರಾಗಬೇಕು. ಹೀಗೆ ಸರ್ಕಾರ ಸಿದ್ಧತೆಗಳನ್ನು ಮಾಡಿಕೊಳ್ಳುವುದರಲ್ಲಿ ಲೋಪದೋಷವಾಗಿದೆ ಎಂದು ನಾನು ಭಾವಿಸುತ್ತೇನೆ. ಈ ಬರಗಾಲ ಬಂದಾಗ, ಒಂದು ಗಾದೆ ಮಾತು ಇದೆ. 'ಯುದ್ಧ ಪ್ರಾರಂಭವಾದಾಗ ಅವನು ಕತ್ತಿ ಹಿಡಿಯುವುದಕ್ಕೆ ಹೋದನಂತೆ', 'ಒಲೆಯಲ್ಲಿ ಬೆಂಕಿ ಹತ್ತಿಕೊಂಡ ಮೇಲೆ ಬಾವಿ ತೋಡುವುದಕ್ಕೆ ಹೋದನಂತೆ' ಆ ತರಹ ಆಗಬಾರದು, 'ಯುದ್ಧ ಕಾಲದಲ್ಲಿ ಶಸ್ತ್ರಾಭ್ಯಾಸ' ಹೀಗೆ ಆಗಬಾರದು. ಸರ್ಕಾರ ಜೋಪಾನವಾಗಿ ನಾಳೆ ಏನಾಗಬಹುದು, ಅದಕ್ಕೆ ನಮ್ಮ ತಯಾರಿ ಏನು ಬೇಕು, ಅಷ್ಟು ಸಿದ್ಧತೆಗಳನ್ನು ಮಾಡಿಕೊಳ್ಳಬೇಕು. ಅದಕ್ಕೆ ನಮ್ಮ ಸಹಕಾರ ಬೇಕಾಗುತ್ತದೆ. ಆಡಳಿತ ಪಕ್ಷ ಮತ್ತು ವಿರೋಧ ಪಕ್ಷ ಇಬ್ಬರು ಸೇರಿ ಜನತೆಯನ್ನು ರಕ್ಷಣೆ ಮಾಡಬೇಕು. ನೀವು ಒಬ್ಬರೇ ರಕ್ಷಣೆ ಮಾಡುತ್ತೇನೆಂದರೆ ಅದು ಆಗುವುದಿಲ್ಲ. ಒಂದು ಗಾಡಿಯ ಎರಡು ಚಕ್ರಗಳು, ಒಂದು ಚಕ್ರ ಚಿಕ್ಕದಾಗಿ ಬಿಟ್ಟರೆ, ಗಾಡಿ ಅಲ್ಲೇ ತಿರುಗುತ್ತಿರುತ್ತದೆ. ಎರಡೂ ಸಮನಾಂತರವಾಗಿ ಹೋಗಬೇಕು. ಆದುದರಿಂದ ನಮ್ಮ ಕಂದಾಯ ಮಂತ್ರಿಗಳು ಬಹಳ ಮುತುವರ್ಜಿಯಾಗಿ ಕೆಲಸ ಮಾಡುತ್ತಾರೆ. ಆದರೆ ಅವರು ಮಧ್ಯದಲ್ಲಿ ಬಂದಿದ್ದಾರೆ, ಅವರು ಮೊದಲಿನಿಂದ ಸರ್ಕಾರದಲ್ಲಿ ಇರಲಿಲ್ಲ. ಹಾಗಾಗಿ ಎಷ್ಟರಮಟ್ಟಿಗೆ ಅವರಿಗೆ ಸಹಕಾರ ಸಿಗುತ್ತದೋ ಗೊತ್ತಿಲ್ಲ. ಮಾತನಾಡುವುದಕ್ಕೆ ಅನೇಕ preparations ಇದೆ, ಮಾತನಾಡುವುದಕ್ಕೆ ಅದು ಬೇಕಾಗಿಲ್ಲ ಎಂದು ಹೇಳಿ ಜನರಲ್ ಆಗಿ ಮಾತನಾಡಿ ನನ್ನ ಮಾತನ್ನು ಮುಗಿಸುತ್ತೇನೆ. ಶುಭವಾಗಲಿ.

**ಉಪಸಭಾಪತಿಯವರು:–** ಧನ್ಯವಾದಗಳು. ಮಾನ್ಯ ಸದಸ್ಯರಾದಂತಹ ಶ್ರೀ ಕಾಂತರಾಜುರವರು ಮಾತನಾಡುವುದು.

**ಶ್ರೀ ಕಾಂತರಾಜು (ಬಿಇಎಂಎಲ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಹೋದ ಅಧಿವೇಶನಲ್ಲೂ ಈ ವಿಷಯದ ಚರ್ಚೆಗೆ ಅವಕಾಶ ನೀಡಿದ್ದೀರಿ ಮತ್ತು ಈ ಸಲದ ಅಧಿವೇಶನದಲ್ಲೂ ಇದಕ್ಕೆ ಅವಕಾಶ ಕೊಟ್ಟಿದ್ದೀರಿ. ಆದರೆ, ಸರ್ಕಾರ ಏನು ಕ್ರಮ ಕೈಗೊಂಡಿದೆ ಎಂಬುದನ್ನು ಮಾತ್ರ ಅವರು ಸ್ಪಷ್ಟವಾಗಿ ಹೇಳುವುದಿಲ್ಲ. ನಾವು ಇಂಥಿಂಥ ಸಾಧನೆ ಮಾಡಿದ್ದೇವೆ, ಹೀಗೀಗೆ ಮಾಡಿದ್ದೇವೆಂದು ಮೇಲ್ನೋಟಕ್ಕೆ ಇದನ್ನು ತಿಳಿ ಮಾಡುವಂತಹ ಕೆಲಸ ಮಾಡುತ್ತಾರೆ. ನಾನು ಸರ್ಕಾರಕ್ಕೆ ಒತ್ತಾಯ ಮಾಡುವುದೇನೆಂದರೆ, ಈಗ ಬರಗಾಲ ಮುಗಿದು ಹೋಗಿದೆ. ಇನ್ನೇನೂ ಮಳೆಗಾಲ ಶುರುವಾಗುತ್ತಿದೆ, ಸರ್ಕಾರ ಈ ಮಳೆಗಾಲಕ್ಕೆ ರೈತರಿಗೆ ಏನು ಸಿದ್ಧತೆ ಮಾಡಬೇಕು. ಅವರಿಗೆ ನಾವು ಏನೇನೂ ಅನುಕೂಲಗಳನ್ನು ಮಾಡಿಕೊಡಬೇಕು ಎನ್ನುವ ಬಗ್ಗೆ ಗಮನ ಹರಿಸಬೇಕು. ದಯಮಾಡಿ ಅವರಿಗೆ ಬೇಕಾದಂತಹ ಕ್ರಿಮಿನಾಶಕಗಳನ್ನು ಸಬ್ಸಿಡಿ ದರದಲ್ಲಿ ನೀಡಿ. ನೀವು ಮೂರು ಲಕ್ಷ ರೂಪಾಯಿಗಳವರೆಗೆ ಬಡ್ಡಿ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ, ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ರಹಿತ ಸಾಲ ಕೊಡುತ್ತೇವೆಂದು ಘೋಷಣೆ ಮಾಡಿದ್ದೀರಿ. ಇವತ್ತಿನ ದಿವಸ ಒಂದು ಲಕ್ಷ ಎಂಭತ್ತಾರು ಸಾವಿರ ಕೋಟಿ ಬಜೆಟ್ ಮಾಡಿದ್ದೇವೆ, ಇಷ್ಟು ಮಾಡಿದ್ದೇವೆಂದು ನೀವುಗಳೆಲ್ಲರೂ ಹೇಳಿದ್ದೀರಿ. ದಯಮಾಡಿ ನಾನು ನಿಮ್ಮಲ್ಲಿ ಹೇಳುವುದೇನೆಂದರೆ ಏನು ಮೂರು ಲಕ್ಷ ಮಾಡಿದ್ದೀರೋ ಅದನ್ನು ಜಾಸ್ತಿ ಮಾಡಿ, ಖಂಡಿತವಾಗಿಯೂ ಆ ಮೂರು ಲಕ್ಷ ರೂಪಾಯಿಗಳು ಸಾಕಾಗುವುದಿಲ್ಲ. ಏನು ನೀವು ರೈತರಿಗೆ ಬಡ್ಡಿರಹಿತ ಸಾಲ ಕೊಡಬೇಕೆಂದು ಮಾಡಿದ್ದೀರೋ, ದಯಮಾಡಿ ಅದನ್ನು ಹತ್ತು ಲಕ್ಷದವರೆವಿಗೂ ಮಾಡಿಕೊಡಿ. ಈಗ ಐದು, ಆರು ಮತ್ತು ಏಳು ಎಕರೆ ಎಂದು ಇರುತ್ತದೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ನಮ್ಮಲ್ಲಿ ಒಂದು ದೊಡ್ಡ ಚಳುವಳಿ ನಡೆಯುತ್ತಿದೆ. ನಮ್ಮಲ್ಲಿ ಈ ಹಿಂದಿನ ಸಾಲ ಇದೆಯಲ್ಲಾ, ಅದನ್ನು ಬಿಟ್ಟು ಹೊಸ ಸಾಲ ಕೊಡಿ ಎಂದು ರೈತರು ಚಳುವಳಿ ಶುರು ಮಾಡಿದ್ದಾರೆ. ಏಕೆಂದರೆ ಈ ಸಲ ಬೇಸಾಯ ಮಾಡಬೇಕಲ್ಲ ಅದಕ್ಕೆ.

**ಶ್ರೀ ಕಾಂತರಾಜು (ಬಿಎಂಎಲ್):-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರಾದಂತಹ ಶ್ರೀ ಕೆ.ಟಿ.ಶ್ರೀಕಂಠೇಗೌಡರು ಹೇಳಿದ ಹಾಗೆ ಅವರು ಹಿಂದಿನ ಸಾಲವನ್ನೇ ಕಟ್ಟಿಲ್ಲ. ಹೊಸ ಸಾಲ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಕಾರಣ ಅವರ ಪಹಣಿಯಲ್ಲಿ ಆಗಲೇ ಸಾಲದ ನಮೂದು ಆಗಿರುತ್ತದೆ. ಹಾಗಾದರೆ ಹೊಸ ಸಾಲವನ್ನು ಹೇಗೆ ಕೊಡುತ್ತಾರೆ ಅವರು ಮೂರು ಲಕ್ಷವನ್ನು ಸಹ ಕೊಡುವುದಿಲ್ಲ. ಈಗ ಅಧಿಕಾರಿಗಳು ಏನು ಹೇಳುತ್ತಾರೆಂದರೆ ನಿಮ್ಮ ಪಹಣಿಯಲ್ಲಿ ಯಾವುದೇ ತರಹದ ಸಾಲ ನಮೂದು ಆಗಿಲ್ಲವೆಂದರೆ ಅದರ ಮೇಲೆ ಸಾಲ ಕೊಡುತ್ತೇವೆಯೇ ಹೊರತು, ಯಾವುದೇ ಕಾರಣಕ್ಕೂ ಹೊಸದಾಗಿ ಆ ಮೂರು ಲಕ್ಷ ರೂಪಾಯಿ ಸಾಲವನ್ನು ಸಹ ಕೊಡುವುದಿಲ್ಲ. ಆದುದರಿಂದ ದಯವಿಟ್ಟು ನೀವು ಈ ಹಿಂದಿನ ಸಾಲ ಮತ್ತು ಎಲ್ಲಾ ಬಡ್ಡಿಯನ್ನು ಮನ್ನಾ ಮಾಡಿ. ನೀವು ಸಾಲ ಮನ್ನಾ ಮಾಡುವುದನ್ನು ಸಹ ಮಾಡಲಿಲ್ಲ. ಸರ್ಕಾರ at least ಶೇಕಡ 50ರಷ್ಟೋ ಅಥವಾ ಶೇಕಡ 30ರಷ್ಟೋ ಸಾಲವನ್ನು ಮನ್ನಾ ಮಾಡುತ್ತದೆಂದು ನಾವು ಭಾರಿ ನಿರೀಕ್ಷೆಯಲ್ಲಿದ್ದೆವು. ನೀವು ಅದನ್ನು ಸಹ ಮಾಡಲಿಲ್ಲ. ದಯಮಾಡಿ ಈಗ ನೀವು ಮೂರು ಲಕ್ಷ ರೂಪಾಯಿಗಳ ಸಾಲವನ್ನು ಕೊಡಬೇಕೆಂದು ಏನು ಮಾಡಿದ್ದೀರಿ, ಈಗ ಐದು ಎಕರೆ ಮತ್ತು ಆರು ಎಕರೆ ಇರುವಂತಹ ರೈತರು ಇರುತ್ತಾರೆ, ಇದರಿಂದ ಅವರಿಗೆ ಅನುಕೂಲವಾಗುತ್ತದೆ. ಈಗ ಅವರು ಅಡಿಕೆ ಗಿಡ ಹಾಕಿಕೊಂಡಿರುತ್ತಾರೆ, ತೆಂಗಿನ ಗಿಡ ಹಾಕಿಕೊಂಡಿರುತ್ತಾರೆ ಅವರಿಗೆಲ್ಲಾ ಸ್ವಲ್ಪ ಅನುಕೂಲವಾಗುತ್ತದೆ, ಏಕೆಂದರೆ ಈಗ ಮಳೆ ಬರುತ್ತಿರುವುದರಿಂದ ಮರಗಳಲ್ಲಿ ಸ್ವಲ್ಪ ಚೇತರಿಕೆ ಶುರುವಾಗಿದೆ. ಇನ್ನೂ ಎಲ್ಲಾ ಕಡೆಯೂ ತುಂಬಾ ವ್ಯಾಪ್ತಿಯಾಗಿ ಬಂದಿಲ್ಲ. ಬರುವ ಕಡೆ ಸ್ವಲ್ಪ ಅನುಕೂಲವಾಗಬೇಕು. ಏಕೆಂದರೆ ರೈತರು ಗಿಡಕ್ಕೆ ಮಣ್ಣು ಹೊಡೆಸುವಂತಹ ಕೆಲಸ ಮಾಡಬೇಕು, ಅವರಿಗೆ ಬೇರೆ-ಬೇರೆ ಕೆಲಸಗಳಿರುತ್ತವೆ. ದಯಮಾಡಿ ಈ ಸಮಯದಲ್ಲಿ ತಾವು ಬಡ್ಡಿರಹಿತ ಸಾಲವನ್ನು ಹೆಚ್ಚಿಗೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಕ್ರಿಮಿನಾಶಕ ಔಷಧಿಗಳಿಗೆ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಏನು ಸಬ್ಸಿಡಿ ಮಾಡಿದ್ದೀರಿ, ಸ್ವಲ್ಪ requirements ಜಾಸ್ತಿ ಇರುವ ಕಡೆ ಅಂದರೆ at least commercial crops ಗೆ, ಈಗ ಏನು ತೆಂಗಿನ ಮರ ಇರಬಹುದು, ಅಡಿಕೆ ಗಿಡ ಇರಬಹುದು, ಮಾವಿನ ಗಿಡಗಳು ಇರಬಹುದು ಮತ್ತು ದಾಳಿಂಬೆ ಇರಬಹುದು ಈ commercial crops ಬೆಳೆಯುವಂಥವರು, ಈಗ ಕಾಫಿ ತೋಟದವರು ಇರಬಹುದು, ಅವರಿಗೆ ಇನ್ನೂ ಸಬ್ಸಿಡಿ ಜಾಸ್ತಿ ಮಾಡಿ. ಇದರಿಂದ ಅವರಿಗೆ ಸ್ವಲ್ಪ ಜಾಸ್ತಿ ಅನುಕೂಲವಾಗುತ್ತದೆ. ಕಳೆದ ಎರಡು ವರ್ಷದಿಂದ ಅವರು ಬೆಳೆ ಬೆಳೆದಿಲ್ಲ ಮತ್ತು ಅವರಿಗೆ ಅನುಕೂಲವಾಗಿಲ್ಲ. ಈ ಬರಗಾಲ ಯಾವ ತರಹ ಇದೆ ಎಂದರೆ, ನಾನು ತಮಗೆ ಒಂದು ಉದಾಹರಣೆ ಹೇಳುತ್ತೇನೆ. ತುಮಕೂರು ಜಿಲ್ಲೆಯ ಗುಬ್ಬಿಯಲ್ಲಿ ಒಂದು ಘಟನೆ ನಡೆಯಿತು. ಈಗ ಏನಾಗಿದೆ ಎಂದರೆ ಒಬ್ಬ ರೈತ ಬಂದು ನಮ್ಮ ಹತ್ತಿರ ಹೇಳುತ್ತಾನೆ, ನಾನು ನನ್ನ ಮಕ್ಕಳನ್ನು ಕಾನ್ವೆಂಟ್ ಸ್ಕೂಲ್‌ನಲ್ಲಿ ಓದಿಸುತ್ತಿದ್ದೆ. ನನಗೆ ಆರು ಎಕರೆ ಅಡಿಕೆ ತೋಟವಿತ್ತು, ಅಡಿಕೆ ತೋಟವೆಲ್ಲಾ ಒಣಗಿ ಹೋಯಿತು, ಇವತ್ತಿನ ದಿವಸ ನನ್ನ ಮಕ್ಕಳನ್ನು ಸರ್ಕಾರಿ ಶಾಲೆಗೆ ಹಾಕಬೇಕು, ಬೇರೆ ಕಡೆ ನಮ್ಮ ಊರಿಗೆ ಯಾವುದೂ ಹತ್ತಿರವಿಲ್ಲ. ನಮ್ಮ ಹುಡುಗರು ಎಸ್.ಎಸ್.ಎಲ್.ಸಿ. ಓದುತ್ತಿದ್ದಾರೆ. ಬೇರೆ ಕಡೆ ಹಾಕಬೇಕೆಂಬ ಒಂದು ಮನೋಭಾವದ ಅಳುವನ್ನು ತೋರಿಸಿಕೊಳ್ಳುತ್ತಾನೆ. ಎರಡು ವರ್ಷದಿಂದ ಭೀಕರವಾದ ಬರಗಾಲದಿಂದ ರೈತರು ಅವರ life style ಅನ್ನು change ಮಾಡಿಕೊಂಡು ಬಿಟ್ಟಿದ್ದಾರೆ. ಆರು ಎಕರೆ, ಏಳು ಎಕರೆ, ನಾಲ್ಕು ಎಕರೆ, ಮೂರು ಎಕರೆ ಇದ್ದಂತಹವರು ಏನು ಅಡಿಕೆ ತೋಟ ಮತ್ತು ತೆಂಗಿನ ತೋಟವಿತ್ತೋ ಅವರು ಸಹ ಒಂದು ಗಾಡಿಯ ಸಾಲವನ್ನು ತೆಗೆದುಕೊಂಡಿರುತ್ತಾರೆ, ಮಗ ಅಥವಾ ಮಗಳ ಮದುವೆ ಮಾಡುವುದಕ್ಕೋ ಏನೋ ಒಂದಕ್ಕೆ ಸಾಲ ಮಾಡಿರುತ್ತಾರೆ. ಅವರದೇ ಆದಂತಹ life style ನಲ್ಲಿ commitment ಗಳಲ್ಲಿ ಬೇರೆ ಬೇರೆಯದರಲ್ಲಿ ಸಿಕ್ಕಿಹಾಕಿಕೊಂಡಿರುತ್ತಾರೆ. ದಯಮಾಡಿ ನೀವು ಅವರಿಗೆಲ್ಲರಿಗೂ ಅನುಕೂಲವಾಗುವ ತರಹ ಹತ್ತು ಲಕ್ಷ ರೂಪಾಯಿಗಳ ಬಡ್ಡಿರಹಿತ ಸಾಲವನ್ನು ಕೊಡುವಂತಹ ಕೆಲಸ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಈಗ ಮುಂಗಾರು ಚುರುಕಾಗಿದೆ, ಅದು ಒಂದು ಮಟ್ಟಕ್ಕೆ ಬಂದಿದೆ ಮತ್ತು ಎಷ್ಟು ಚುರುಕಾಗಿದೆಯೋ ಗೊತ್ತಿಲ್ಲ.

**(ಮುಂದು...)**

**(692)13-06-2017 4-40 ಎಲ್‌ಎಲ್-ಜಿಆರ್**

**ಉಪ ಸಭಾಪತಿಯವರ ಉಪಸ್ಥಿತಿ**

**ಶ್ರೀ ಕಾಂತರಾಜು(ಬಿಎಂಎಲ್)(ಮುಂದುವರೆದಿದೆ...):-**

ಇವತ್ತಿನ ದಿವಸ ಟ್ರಾಕ್ಟರ್ ಸೌಕರ್ಯಗಳ ವಿಷಯಕ್ಕೆ ಹೋದರೆ, ಶ್ರೀ ಧಮಸ್ಥಳ ಸಂಘದವರು ಏನು ಮಾಡುತ್ತಿದ್ದಾರೆಂದರೆ, ಅವರು ಆಧುನಿಕ ಕೃಷಿ ಯಂತ್ರೋಪಕರಣಗಳನ್ನು ಬಾಡಿಗೆ ರೂಪದಲ್ಲಿ ನೀಡುತ್ತಿದ್ದಾರೆ. ರೈತರು ನಮ್ಮ ಗ್ರಾಮ ಪಂಚಾಯತಿಗಳಿಂದ ಧರ್ಮಸ್ಥಳ ಸಂಘದವರಿಗೆ ಕೃಷಿ ಯಂತ್ರೋಪಕರಣಗಳ ಉಪಯೋಗಕ್ಕಾಗಿ ಅರ್ಜಿ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಹಾಕಿದರೆ ಅವರಿಗೆ ಬಾಡಿಗೆ ಆಧಾರದ ಮೇರೆಗೆ ಕೃಷಿ ಯಂತ್ರಗಳನ್ನು ನೀಡುತ್ತಾರೆ. ಅದೇ ರೀತಿಯಲ್ಲಿ ಸರ್ಕಾರವು ಸಹ ಕೈಜೋಡಿಸಿ, ಟ್ರಾಕ್ಟರ್‌ಗೆ ಉಳುಮೆ ಯಂತ್ರಗಳನ್ನು ಅಳವಡಿಸುವಂತಹ ತಂತ್ರಗಳು ಇನ್ನು ಮುಂತಾದ ತಂತ್ರಗಳ ಬಳಕೆಗೆ ಸಬ್ಸಿಡಿ ಕೊಡಬೇಕು. ಧರ್ಮಸ್ಥಳ ಸಂಘದವರು ಸಹ ಯಂತ್ರೋಪಕರಣಗಳ ಬಾಡಿಗೆಯಲ್ಲಿ ಸಬ್ಸಿಡಿ ಕೊಡುತ್ತಿದ್ದಾರೆ. ಅದರ ಜೊತೆಗೆ ಸರ್ಕಾರ ಸಹ ಒಂದು ಹೆಜ್ಜೆ ಮುಂದೆ ಹೋಗಿ ಇನ್ನು ಸ್ವಲ್ಪ ಹೆಚ್ಚು ಸಬ್ಸಿಡಿಯಲ್ಲಿ ಯಂತ್ರೋಪಕರಣಗಳನ್ನು ಕೊಡುವಂತಹ ಕೆಲಸ ಮಾಡಿದರೆ ರೈತರಿಗೆ ಬೆನ್ನುಲುಬಾಗಿ ನಿಲ್ಲುವಂತಹ ಕೆಲಸವಾಗುತ್ತದೆ. ನಾನು ಇನ್ನು ಹೆಚ್ಚಿಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ಹಿಂದೆ ಮಳೆಗಾಲದಲ್ಲಿ ಸಮೃದ್ಧಿಯಾಗಿ ಮಳೆಯಾಗುತ್ತಿದ್ದರಿಂದ ಮುಂಚೆ ಹುಲ್ಲು ಚೆನ್ನಾಗಿ ಬೆಳೆಯುತ್ತಿತ್ತು, ಅದರಿಂದಾಗಿ ಮಣ್ಣು ಜಾಸ್ತಿ ಕೊಚ್ಚಿಕೊಂಡು ಹೋಗುತ್ತಿರಲಿಲ್ಲ. ಆದರೆ, ಈಗ ಏನಾಗಿದೆಯೆಂದರೆ, ತೀವ್ರ ಬರಗಾಲದಿಂದಾಗಿ ಹುಲ್ಲು ಒಣಗಿರುವುದರಿಂದ ಸ್ವಲ್ಪ ಮಳೆಯಾದರೂ ಸಹ ಹೆಚ್ಚು ಮಣ್ಣು ಕೊಚ್ಚಿಕೊಂಡು ಹೋಗಿ ಈ ರೀತಿಯ ಚೆಕ್ ಡ್ಯಾಂಗಳಿಗೆ ಮಣ್ಣು ತುಂಬಿಕೊಳ್ಳುತ್ತಿದೆ. ಆ ಮಣ್ಣನ್ನು ತೆಗೆಸುವಂತಹ ಕೆಲಸ ಮಾಡಿದರೆ, ಅಲ್ಲಿ ನೀರು ನಿಲ್ಲುವಂತಹ ಕೆಲಸವಾಗುತ್ತದೆ. ಈ ಬಗ್ಗೆ ಸರ್ಕಾರ ಹೆಚ್ಚಿನ ಗಮನ ಕೊಡಬೇಕು. 10-15 ವರ್ಷಗಳ ಹಿಂದೆ ಕಟ್ಟಿರುವಂತಹ ಚೆಕ್ ಡ್ಯಾಂಗಳು ಇವತ್ತಿನ ದಿವಸ ಮಣ್ಣು ತುಂಬಿಕೊಂಡು ಒಂದು ಹಂತಕ್ಕೆ ಸಮವಾಗಿವೆ. ಆದಕಾರಣ, ದಯವಿಟ್ಟು ಜಿಲ್ಲಾ ಪರಿಷತ್ತು ವತಿಯಿಂದ ಅಥವಾ ಸರ್ಕಾರ ವಿಶೇಷ ಗಮನ ತೆಗೆದುಕೊಂಡು ಈ ರೀತಿಯ ಚೆಕ್ ಡ್ಯಾಂಗಳಲ್ಲಿ ತುಂಬಿಕೊಂಡಿರುವ ಮಣ್ಣನ್ನು ತೆಗೆಸಬೇಕಾಗುತ್ತದೆ. ಇಂದು ನಗರೀಕರಣ ಜಾಸ್ತಿಯಾಗುತ್ತಿದೆ. ತುಮಕೂರು ಜಿಲ್ಲೆಯಲ್ಲಿಯೂ ಸಹ ಅನೇಕ ಕೈಗಾರಿಕಾ ಪ್ರದೇಶಗಳು ನಿರ್ಮಾಣವಾಗಿವೆ. ಈ ಕೈಗಾರಿಕೆಯವರು ಯಾವುದೇ ಮಳೆ ಕೊಯ್ಲು ಅಥವಾ ಇಂಗು ಗುಂಡಿಗಳನ್ನು ಕೈಗಾರಿಕಾ ಪ್ರದೇಶಗಳಲ್ಲಿಯೇ ಮಾಡಿರುವುದಿಲ್ಲ. ಇದನ್ನು ಸರ್ಕಾರದವರು ಕಡ್ಡಾಯ ಮಾಡಬೇಕು. ಸರ್ಕಾರ ಕೇವಲ ಬೆಂಗಳೂರಿಗೆ ಮಾತ್ರ ಇದನ್ನು ಕಡ್ಡಾಯ ಮಾಡಿದೆ. ಅದೇ ರೀತಿ ತುಮಕೂರಿನ ನಗರಸಭೆಗಳಿರಬಹುದು ಮತ್ತು ಮಹಾನಗರ ಪಾಲಿಕೆ ವ್ಯಾಪ್ತಿಗೂ ಸಹ ಇದನ್ನು ಕಡ್ಡಾಯ ಮಾಡಬೇಕು. ಇಲ್ಲವಾದರೆ ನೀರಿನ ಅಭಾವ ಆಗುತ್ತದೆಯೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನೊಂದು ವಿಚಾರವೆಂದರೆ, ಈ ಬಾರಿ ಕಾವೇರಿ ನೀರು ಬಿಡುವಂತಹ ವಿಚಾರದಲ್ಲಿ ಸರ್ಕಾರ ಇವತ್ತಿನ ದಿವಸ ಕಾನೂನು ರೀತ್ಯಾ ಎಚ್ಚರಿಕೆ ವಹಿಸಬೇಕಾಗುತ್ತದೆ. ಕಳೆದ ಬಾರಿ ಕೆ.ಆರ್.ಎಸ್. ಜಲಾಶಯದಿಂದ ತಮಿಳುನಾಡು ರಾಜ್ಯಕ್ಕೆ ನೀರು ಬಿಟ್ಟಿದ್ದೇವೆಂದು ನಮ್ಮ ರಾಜ್ಯದ ರೈತರು ಬೆಳೆದಂತಹ ಒಂದನೇ ಬೆಳೆಗೂ ಸಹ ನೀರು ಬಿಡಲಾಗಲಿಲ್ಲ. ಕಾವೇರಿ ಕೊಳ್ಳದ ಜಲಾಶಯಗಳಿರಬಹುದು ಅಥವಾ ಹೇಮಾವತಿ ಜಲಾಶಯದಿಂದಲೂ ಕೆ.ಆರ್.ಎಸ್.,ಗೆ ನೀರನ್ನು draw ಮಾಡಿ ತಮಿಳುನಾಡು ರಾಜ್ಯಕ್ಕೆ ಬಿಟ್ಟರು. ಆದುದರಿಂದ, ಈ ವಿಚಾರದಲ್ಲಿ ಮುಂಜಾಗ್ರತೆಯಾಗಿ ಎಚ್ಚರಿಕೆ ವಹಿಸಬೇಕೆಂದು ನಾನು ಸರ್ಕಾರಕ್ಕೆ ಮನವಿ ಮಾಡುತ್ತೇನೆ. ಈ ವಿಚಾರದಲ್ಲಿ ಕಾನೂನು ಪ್ರಕಾರವಾಗಿ ಹೋರಾಟ ಮಾಡಬೇಕು. ನಂತರ, ಈ ಸದನದಲ್ಲಿ ಅನೇಕ ಶಾಸಕರಿದ್ದಾರೆ. ಬಿ.ಜೆ.ಪಿ. ಪಕ್ಷದಲ್ಲಿಯೂ ಸಹ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಹೆಚ್ಚಿನ ಸಂಸದರು ಚುನಾಯಿತರಾಗಿ ಹೋಗಿದ್ದಾರೆ. ಆಡಳಿತ ಪಕ್ಷದ ಸಂಸದರೂ ಇದ್ದಾರೆ. ನಮ್ಮ ಪಕ್ಷದ ಮುಖಂಡರಾದ ಶ್ರೀ ಹೆಚ್.ಡಿ. ದೇವೇಗೌಡರ ಬಳಿ ಕೂಡ ನಾವು ಮನವಿ ಮಾಡಿದ್ದೇವೆ. ಅವರೂ ಸಹ ಈ ವಿಚಾರದಲ್ಲಿ ಆಸಕ್ತರಿದ್ದಾರೆ. ಬರ ಪರಿಹಾರದ ಬಗ್ಗೆ ರಚಿತವಾದಂತಹ ರಾಜ್ಯ ಸರ್ಕಾರದ ನಿಯೋಗ ಕೇಂದ್ರ ಸರ್ಕಾರದ ಬಳಿ ಹೋಗಿ ಎಷ್ಟು ದಿನವಾಗಿದೆ? ಬರ ಪರಿಹಾರ ಕೇಳುವುದಕ್ಕೆ ಹೋದಂತಹ ನಿಯೋಗ ಕೇಂದ್ರ ಸರ್ಕಾರದ ಬಳಿ ಹೋಗಿ 4-5 ತಿಂಗಳು ಆಯಿತು. ಪುನಃ ಮತ್ತೊಂದು ಅಹವಾಲನ್ನು ಏತಕ್ಕೆ ಕೇಂದ್ರ ಸರ್ಕಾರಕ್ಕೆ ಕಳುಹಿಸಲ್ಲಿಲ್ಲ? ಆದರೆ, ತಮಿಳುನಾಡು ರಾಜ್ಯದ ವಿಚಾರವನ್ನು ತೆಗೆದುಕೊಳ್ಳಲಿ. ಅಲ್ಲಿನ ಸಂಸದರು ಕಾವೇರಿ ವಿಚಾರದಲ್ಲಿ ಯಾವ ರೀತಿ ಹೋರಾಟ ಮಾಡಿದರು. ಅದೇ ರೀತಿ ನಮ್ಮ ರಾಜ್ಯದಲ್ಲಿನ ಸಂಸದರು ಏತಕ್ಕೆ ಮಾಡುವುದಿಲ್ಲ? ನಮ್ಮ ಶಾಸಕರು, ನಮ್ಮ ಸಚಿವರು ದಯಮಾಡಿ ಕೈಜೋಡಿಸಿ, ಕೇಂದ್ರದ ಗಮನವನ್ನು ಈ ಕಡೆಗೆ ಸೆಳೆದು ನಮ್ಮ ಅನಾನುಕೂಲ ಏನಿದೆ ಅದನ್ನು ಹೋಗಲಾಡಿಸಿಕೊಳ್ಳುವಂತಹ ಕೆಲಸ ಮಾಡಬೇಕು.

ಇವತ್ತಿನ ದಿವಸ ಈ ಸದನದಲ್ಲಿ ಕಾರ್ಮಿಕ ಸಚಿವರಿದ್ದಾರೆ. ಅವರಲ್ಲಿ ನಾನು ಮನವಿ ಮಾಡಿಕೊಳ್ಳುವುದೇನೆಂದರೆ, ನಮ್ಮ ಕರ್ನಾಟಕದಲ್ಲಿ ಶೇಕಡ 62 ಕ್ಕಿಂತಲೂ ಹೆಚ್ಚು ಯುವಕರಿದ್ದಾರೆ. ಅವರಿಗೆ ಕಂಪನಿಗಳಲ್ಲಿ ಕೆಲಸ ಕೊಡಿಸುವಂತಹ ಕಾರ್ಯ ಮಾಡಬೇಕು. ಏಕೆಂದರೆ, ಇಲ್ಲಿ ವ್ಯವಸಾಯ ಮಾಡುವುದಕ್ಕೂ ಸಹ ಅನಾನುಕೂಲವಿದೆ. ಇವತ್ತಿನ ದಿವಸ ಬೇರೆ ಕಡೆ ಅಂದರೆ, ಉತ್ತರಪ್ರದೇಶ ಇರಬಹುದು, ಉತ್ತರ ಕರ್ನಾಟಕ ಅಥವಾ ಉತ್ತರ ಭಾರತದಿಂದ ಬಂದು ಇಲ್ಲಿ ಕೆಲಸ ಮಾಡುವಂತಹ ಜನ ಜಾಸ್ತಿಯಾಗಿದ್ದಾರೆ. ನಮ್ಮ ರಾಜ್ಯದಲ್ಲಿರುವ ಅನೇಕ ಯುವಕರು ವಿದ್ಯಾವಂತರಿದ್ದಾರೆ. ಐ.ಟಿ.ಐ., ಡಿಪ್ಲೋಮಾ ಅಥವಾ ಇಂಜಿನಿಯರಿಂಗ್ ವಿದ್ಯಾಭ್ಯಾಸ ಮಾಡಿರುವಂತಹ ಯುವಕರು ಸಹ ಅನೇಕರಿದ್ದಾರೆ. ಸರ್ಕಾರದವರು ಗ್ಲೋಬಲ್ ಲೆವೆಲ್ ಇನ್ವೆಸ್ಟರ್ಸ್‌ನ್ನು ಕರೆಸುತ್ತೇವೆಂದು ಏನು ಹೇಳುತ್ತಾರೆ, ಅದರ ಬದಲಾಗಿ ದಯಮಾಡಿ ನಮ್ಮ ರಾಜ್ಯದಲ್ಲಿರುವ ಕಂಪನಿಗಳ ವಿಶ್ವಾಸವನ್ನು ಪಡೆದು ಒಂದು ಮೇಳವನ್ನು ಏರ್ಪಾಡು ಮಾಡಿ, ಅದಕ್ಕೆ ಎಲ್ಲಾ ಕಂಪನಿಗಳವರನ್ನು ಕರೆಯಿಸಿ ಸ್ಥಳೀಯವಾಗಿರುವಂತಹ skilled labourersಗೆ ಹೆಚ್ಚು ಕೆಲಸ ಕೊಡುವಂತಹ ಕಾರ್ಯವನ್ನು ಸರ್ಕಾರ ಮಾಡಬೇಕು.

ಇನ್ನೊಂದು ವಿಚಾರವೆಂದರೆ, ಈ ಬಾರಿ ಕಾವೇರಿ ಬೇಸಿನ್‌ನ ವ್ಯಾಪ್ತಿಯಲ್ಲಿ ಬರುವ ಪ್ರದೇಶಗಳಲ್ಲಿ ಕುಡಿಯುವ ನೀರಿಗೆ ಬಹಳ ಸಮಸ್ಯೆಯಿದೆ. ಅಲ್ಲಿ ದೊಡ್ಡ ದೊಡ್ಡ ಗ್ರಾಮ ಪಂಚಾಯತಿಯಿದೆ. ಈ ಕೆರೆ ಮುಖಾಂತರ ನೀರು ತೆಗೆದುಕೊಂಡು ಗ್ರಾಮ ಪಂಚಾಯತಿಗೆ ಕೊಡುವಂತಹ ಕೆಲಸ ಇಂದು ಸರ್ಕಾರ ಮಾಡುತ್ತಿದೆ. ಆದರೆ, ಆ ನೀರನ್ನು ಪೈಪ್‌ಲೈನ್ ಮುಖಾಂತರ ತೆಗೆದುಕೊಂಡು ಬಂದರೆ ಇನ್ನು ಸ್ವಲ್ಪ ನೀರು ಉಳಿತಾಯವಾಗುತ್ತದೆಯೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಕೇಂದ್ರದಲ್ಲಿ ಬಿ.ಜೆ.ಪಿ. ಸರ್ಕಾರ ಮತ್ತು ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿದೆ. ಈ ಎರಡು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಸರ್ಕಾರಗಳು ಸೇರಿ ದಯಮಾಡಿ ಕನಿಷ್ಠ ಪಕ್ಷ ಶೇಕಡ 70 ರಿಂದ 80ರಷ್ಟು ರೈತರ ಸಾಲವನ್ನು ಮನ್ನಾ ಮಾಡುವುದಕ್ಕೆ ಹೋರಾಟ ಮಾಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಐವನ್ ಡಿ'ಸೋಜಾ(ಸರ್ಕಾರದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೆ, ಒಂದು ನಿಮಿಷ... ಈಗ ಬಹಳ ಚರ್ಚೆ ನಡೆಯುತ್ತಿರುವ ವಿಚಾರವೇನೆಂದರೆ, ಅದು ಸಾಲ ಮನ್ನಾ ಮಾಡುವ ಬಗ್ಗೆ. ಒಂದು ಕಡೆ ರಾಜ್ಯ ಸರ್ಕಾರದ ಮುಖ್ಯಮಂತ್ರಿಗಳು ಹೇಳಿದರು...

**ಉಪ ಸಭಾಪತಿಯವರು:–** ಮಾನ್ಯ ಡಿ'ಸೋಜಾರವರೆ ಈಗ ಆ ವಿಚಾರ ಬೇಡ.

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೆ, ನಾವು ರೈತರ ಸಾಲ ಮನ್ನಾ ಮಾಡುವುದಕ್ಕೆ ತಯಾರಿದ್ದೇವೆ.

**ಉಪ ಸಭಾಪತಿಯವರು:–** ಮಾನ್ಯ ಡಿ'ಸೋಜಾರವರೆ...

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೆ, ಕೇಂದ್ರ ಸರ್ಕಾರದವರು... ಒಂದು ನಿಮಿಷ... ಕೇಂದ್ರ ಸರ್ಕಾರದವರು ಏನು ಹೇಳಿದ್ದಾರೆಂದರೆ, "ನೀವು ಮಾಡಿ..."

**ಉಪ ಸಭಾಪತಿಯವರು:–** ದಯವಿಟ್ಟು ಈಗ ಆ ವಿಚಾರ ಬೇಡ.

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೆ, ಆದರೆ ಜೆ.ಡಿ.ಎಸ್. ಪಕ್ಷದವರು ಏನು ಮಾಡುತ್ತಾರೆ..?

**ಉಪ ಸಭಾಪತಿಯವರು:–** ದಯವಿಟ್ಟು ಈಗ ಆ ವಿಚಾರ ಬೇಡ. ಪ್ಲೀಸ್, ಪ್ಲೀಸ್.

**(ಗೊಂದಲ)**

**ಶ್ರೀ ಬಸವರಾಜ ಎಸ್. ಹೊರಟ್ಟಿ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಮಾನ್ಯ ಡಿ'ಸೋಜಾರವರು ಏನು ಮಂತ್ರಿಗಳೇ?

**(ಗೊಂದಲ)**

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೆ, ಜೆ.ಡಿ.ಎಸ್. ಪಕ್ಷದವರು ಶ್ರೀ ಹೆಚ್.ಡಿ. ದೇವೇಗೌಡರನ್ನು ಕರೆದುಕೊಂಡು ಕೇಂದ್ರ ಸರ್ಕಾರದ ಬಳಿ ಹೋಗಬಹುದಲ್ಲವೇ? ಅವರು ಈ ಕೆಲಸವನ್ನು ಮಾಡಬಹುದಲ್ಲವೇ?

**ಉಪ ಸಭಾಪತಿಯವರು:–** ಮಾನ್ಯ ಡಿ'ಸೋಜಾರವರೆ...

**(ಗೊಂದಲ)**

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೆ, ಇದರಿಂದ ಮಾನ್ಯ ಡಿ'ಸೋಜಾರಿಗೆ ಏನು ತೊಂದರೆ? ಮಾನ್ಯ ಸದಸ್ಯರು ತಮ್ಮ ವಿಚಾರವನ್ನು ಹೇಳಿದ್ದಾರೆ.

**ಉಪ ಸಭಾಪತಿಯವರು:–** ಮಾನ್ಯ ಹೊರಟ್ಟಿಯವರೆ...

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಬಸವರಾಜ ಹೊರಟ್ಟಿ:-** ಮಾನ್ಯ ಸಭಾಪತಿಯವರೆ, ಒಂದು ನಿಮಿಷ... ಮಾನ್ಯ ಸದಸ್ಯರು ತಮ್ಮ ವಿಚಾರಗಳನ್ನು ಹೇಳಿದ್ದಾರೆ. ಅದಕ್ಕೆ ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆ, ಅದನ್ನು ತೆಗೆದುಕೊಳ್ಳಲಿ. ಆದರೆ, ಮಾನ್ಯ ಡಿ'ಸೋಜಾರವರು ಏತಕ್ಕೆ ಹಾಗೆ ಹೇಳುತ್ತಾರೆ? ಅವರು ತಮ್ಮ ಕರ್ತವ್ಯವನ್ನು ಮಾಡಿದ್ದಾರೆ. ಮಾನ್ಯ ಡಿ'ಸೋಜಾರವರು ಏನು ಮಂತ್ರಿಗಳೇ?

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೆ, ನಾನು ಚರ್ಚೆಗಾಗಿ ಹೇಳಿದೆನಷ್ಟೇ.

**ಶ್ರೀ ಬಸವರಾಜ ಹೊರಟ್ಟಿ:-** ಮಾನ್ಯ ಸಭಾಪತಿಯವರೆ, ಮಾನ್ಯ ಡಿ'ಸೋಜಾರವರು ಈ ರೀತಿ ಮಾತನಾಡುವುದು ಬೇಡ. ಅವರು ಸರ್ಕಾರದ ಮುಖ್ಯ ಸಚೇತಕರಾಗಿದ್ದಾರೆ. ಅವರು ಸುಮ್ಮನೆ ಕುಳಿತುಕೊಳ್ಳಲಿ.

**ಉಪ ಸಭಾಪತಿಯವರು:-** ಈಗ ಮಾನ್ಯ ಎಸ್.ರವಿಯವರು ಮಾತನಾಡಲಿ.

**ಶ್ರೀ ಎಸ್.ರವಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಅವಕಾಶಕ್ಕಾಗಿ ತಮಗೆ ಅಭಿನಂದನೆಗಳನ್ನು ಸಲ್ಲಿಸುತ್ತಾ, ಈಗಾಗಲೇ ಬರದ ಮೇಲೆ ಅನೇಕ ಗೌರವಾನ್ವಿತ ಸದಸ್ಯರುಗಳು ಚರ್ಚೆ ಮಾಡಿದ್ದಾರೆ ಮತ್ತು ಹಲವಾರು ವಿಚಾರಗಳ ಬಗ್ಗೆ ಗಮನ ಹರಿಸಿದ್ದಾರೆ. ನಮ್ಮ ಕಡೆ ವಯಸ್ಸಾಗಿರತಕ್ಕಂತಹ ಹಿರಿಯರು, "30-40 ವರ್ಷಗಳಲ್ಲಿ ಈ ರೀತಿಯ ಬರಗಾಲವನ್ನು ಎದುರಿಸಿರಲಿಲ್ಲ, ಈ ರೀತಿಯ ಬರವನ್ನು ನಾವು ನೋಡಿಯೇ ಇರಲಿಲ್ಲ"ವೆಂದು ಹೇಳುತ್ತಾರೆ. ನಮ್ಮಲ್ಲಿ ರಾಗಿ ಬೆಳೆಗೆ ಗಂಡು ಬೆಳೆಯೆಂದು ಕರೆಯುತ್ತಾರೆ. ಮದ್ರಾಸ್ ಕಡೆಯಿಂದ ಅಕ್ಟೋಬರ್-ನವೆಂಬರ್‌ನಲ್ಲಿ ಬರುವಂತಹ ಸೈಕ್ಲೋನ್‌ನಿಂದ ಆರನಿ-ತೂರನಿ ಆದರೂ ಕೂಡ ರಾಗಿ ಬೆಳೆ ಆಗುತ್ತಿತ್ತು. ಕಡೆಗೆ ಏನೋ ಸ್ವಲ್ಪ ಊಟಕ್ಕೆ, ಒಂದಿಷ್ಟು ದನಗಳಿಗೆ ಮೇವಿಗೆ ರಾಗಿ ಹುಲ್ಲು ಆಗುತ್ತಿತ್ತು. ಆದರೆ, ಈ ಬಾರಿ ಒಕ್ಕಣೆ ಆಗದಿರುವುದು, ಕಣವನ್ನೇ ಮಾಡದಿರುವುದು ಪ್ರಥಮವಾಗಿದೆ. ರಾಗಿ ಬೆಳೆಗೆ ಹೆಚ್ಚು ಮಳೆ ಬೇಕಾಗಿಲ್ಲ. ರಾಗಿ ಬೆಳೆಗೆ ದೊಡ್ಡ ದೊಡ್ಡ ಮಳೆ ಬೇಕು, ಅದನ್ನು ನಿಗದಿತವಾಗಿ ಮಾಡಬೇಕೆಂದು ಇಲ್ಲ. ರಾಗಿ ಬೆಳೆಗೆ ಒಂದು ವಾರ, ಹದಿನೈದು ದಿನ, ಇಪ್ಪತ್ತು ದಿನ, ಕಡೆಯ ಪಕ್ಷ ಒಂದು ತಿಂಗಳು ಬಿಟ್ಟು ಮಳೆಯಾದರೂ ಸಾಕು. ರಾಗಿ ಬೆಳೆಗೆ ಮೂರು ಹದ ಅಥವಾ ನಾಲ್ಕು ಹದ ಮಳೆಯಾದರೆ ಸಾಕು. ಪ್ರಥಮ ಬಾರಿಗೆ ರಾಗಿ ಬೆಳೆಯಲ್ಲಿ ಒಂದೇ ಒಂದು ಹಿಡಿ ರಾಗಿ ತರದೇ ಇರತಕ್ಕಂತಹದ್ದು, ಇದೇ ಬಾರಿಯೇ ನಮ್ಮ ಅನುಭವಕ್ಕೆ ಬಂದಿದ್ದು. ಇದರ ಬಗ್ಗೆ ನಮ್ಮ ಹಿರಿಯರು ಹೇಳುತ್ತಾರೆ, "ಈ ರೀತಿಯ ಮಳೆ ಸಂಪೂರ್ಣವಾಗಿ ಕೈಕೊಟ್ಟಿದ್ದಂತಹ ತೀವ್ರತರವಾದಂತಹ ಬರವನ್ನೇ ನಾವು ನೋಡಿರಲಿಲ್ಲ, ಕೊನೆಯ ಪಕ್ಷ ನವೆಂಬರ್-ಡಿಸೆಂಬರ್ ತಿಂಗಳಿನಲ್ಲಿ ಸೈಕ್ಲೋನ್ ಮಳೆಯನ್ನು ಸಹ ನೋಡದೇ ಇರತಕ್ಕಂತಹ ಬರಗಾಲ ಬಂದಿದೆಯೆಂದು ನಮ್ಮಲ್ಲಿ ಮಾತನಾಡುತ್ತಾರೆ." ಯಾವ ಸರ್ಕಾರವಾಗಲಿ, ಬರಗಾಲ ಬರಬೇಕೆಂದು ನಿರೀಕ್ಷೆ ಮಾಡುವುದಿಲ್ಲ. ನೈಸರ್ಗಿಕವಾಗಿ ಮಳೆ ಕೊರತೆಯಾದಂತಹ ಹಿನ್ನೆಲೆಯಲ್ಲಿ ಬರಗಾಲ ಬಂತು. ಈ ಬರಗಾಲ ಬಂದಂತಹ ಸಂದರ್ಭದಲ್ಲಿ ಸರ್ಕಾರ ಬಹಳ ಸಮರ್ಥವಾಗಿ ಈ ಬಾರಿ ಬರವನ್ನು ಎದುರಿಸಲಿಕ್ಕೆ ಏನೆಲ್ಲಾ ಮುಂಜಾಗ್ರತಾ ಕ್ರಮಗಳನ್ನು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ತೆಗೆದುಕೊಳ್ಳಬೇಕು ಮತ್ತು ಏನೆಲ್ಲಾ ಕ್ರಮಗಳನ್ನು ತೆಗೆದುಕೊಳ್ಳಬೇಕು ಆ ಎಲ್ಲಾ ಕ್ರಮಗಳನ್ನು ತೆಗೆದುಕೊಂಡಿದೆ. ಸಚಿವರ ಉಪ ಸಮಿತಿ ಕೂಡ ರಚನೆಯಾಯಿತು. ನಮ್ಮ ಬಳಿ ಕೂಡ ಶ್ರೀ ಟಿ.ಬಿ. ಜಯಚಂದ್ರರವರ ನೇತೃತ್ವದಲ್ಲಿ ಸಚಿವರ ಒಂದು ದೊಡ್ಡ ದಂಡೇ ಬಂತು. ಜಿಲ್ಲಾಡಳಿತ ಎಲ್ಲಾ ಅಧಿಕಾರಿಗಳನ್ನು ಕರೆದು ಸಾಕಷ್ಟು ಸ್ಪಷ್ಟವಾದಂತಹ ನಿರ್ದರ್ಶನಗಳನ್ನು ಕೊಟ್ಟರು. ನಮ್ಮ ಹಿರಿಯ ಮಂತ್ರಿಗಳಾಗಿರತಕ್ಕಂತಹ ಶ್ರೀ ಕಾಗೋಡು ತಿಮ್ಮಪ್ಪನವರು ಕೂಡ ಒಂದಲ್ಲ, ಎರಡು ಬಾರಿ ನಮ್ಮ ಜಿಲ್ಲಾಡಳಿತಕ್ಕೆ ಬಂದು, ಬರದ ನಿರ್ವಹಣೆಯಲ್ಲಿ ಬರತಕ್ಕಂತಹ ಅಡ್ಡಿ ಆತಂಕಗಳನ್ನು, ನಿರ್ವಹಣೆ ಮಾಡುವುದಕ್ಕೆ, ಕೊಳವೆಬಾವಿಗಳಿಂದ ಹಿಡಿದು ದನಗಳಿಗೆ ನೀಡಲಾಗುವ ಮೇವಿನ ಬಗ್ಗೆ ಏನೆಲ್ಲಾ ಸ್ಪಷ್ಟ ಸೂಚನೆಗಳನ್ನು ಕೊಡಬೇಕೋ ಅವುಗಳನ್ನು ಸ್ಥಳದಲ್ಲಿಯೇ ಕೊಟ್ಟರು. ಏಕೆಂದರೆ, ನಮಗೆ ಮೇವು ಪೂರೈಸುತ್ತಿದ್ದ ಜಿಲ್ಲೆಯೆಂದರೆ ಮಂಡ್ಯ ಜಿಲ್ಲೆ. ಅಲ್ಲಿ ಶಾಶ್ವತವಾಗಿ ಮೇವು ಸಿಗುತ್ತಿತ್ತು. ಆದರೆ, ಈ ಬಾರಿ ಅಲ್ಲಿಯೂ ಕೂಡ ಮೇವಿನ ಕೊರತೆಯಿದ್ದು, ಹೊರ ರಾಜ್ಯಗಳಿಂದ ಮೇವು ತರಬೇಕಾದಂತಹ ಅನಿವಾರ್ಯ ಪರಿಸ್ಥಿತಿ ನಿರ್ಮಾಣವಾಯಿತು. ಅದಕ್ಕೆ ಇದ್ದಂತಹ ಅಡ್ಡಿ ಆತಂಕಗಳನ್ನು ನಿವಾರಣೆ ಮಾಡಿಕೊಟ್ಟರು. ನಮ್ಮಲ್ಲಿಯೂ ಕೂಡ ಏಳೆಂಟು ಕಡೆ ಗೋಶಾಲೆಗಳನ್ನು ಮಾಡಿ, ಅವುಗಳನ್ನು ಯಶಸ್ವಿಯಾಗಿ ನಡೆಸಲಾಯಿತು. ಒಂದೊಂದು ಗೋಶಾಲೆಯಲ್ಲಿ ಎರಡರಿಂದ ಮೂರು ಸಾವಿರ ದನಗಳಿಗೆ ಮೇವು ಸರಬರಾಜು ಮಾಡಲಾಯಿತು. ಅನೇಕ ರೈತರುಗಳು ಒಟ್ಟಾಗಿ ಸೇರಿ, ರಾಗಿ, ಭತ್ತವನ್ನು ಹಂಚಿಕೊಂಡು ಮಧ್ಯಾಹ್ನ ಮತ್ತು ರಾತ್ರಿ ಹೊತ್ತು ಊಟ ಮಾಡಿಕೊಂಡು ಗೋವುಗಳನ್ನು ಕಾಪಾಡಿದರು. ಈ ಪದ್ಧತಿ ನಮ್ಮಲ್ಲಿ ಇವತ್ತೂ ಕೂಡ ನಡೆಯುತ್ತಿರತಕ್ಕಂಥದ್ದಕ್ಕೆ ನಿದರ್ಶನ.

ಅದೇ ರೀತಿಯಾಗಿ ನಮ್ಮ ಕೃಷಿ ಮಂತ್ರಿಗಳಾಗಿರತಕ್ಕಂತಹ ಶ್ರೀ ಕೃಷ್ಣ ಬೈರೇಗೌಡರವರು ಕೂಡ ಸಾಕಷ್ಟು ಬಾರಿ ಬರ ಪ್ರವಾಸ ಮಾಡಿದರು. ಅಂದರೆ, ಸರ್ಕಾರದಿಂದ ಏನೆಲ್ಲಾ ಕ್ರಮ ಆಗಬೇಕಿತ್ತು, ಅದೆಲ್ಲಾ ಆಯಿತು. ನಾನು ಬೆಂಗಳೂರು ಗ್ರಾಮಾಂತರ ಮತ್ತು ರಾಮನಗರ ಈ ಎರಡು ಜಿಲ್ಲೆಗಳನ್ನು ಪ್ರತಿನಿಧಿಸುತ್ತೇನೆ. ರಾಮನಗರ ಜಿಲ್ಲೆಯಲ್ಲಿ 69,500 ಜನ ರೈತರಿಗೆ ಸುಮಾರು 45 ಕೋಟಿ ರೂಪಾಯಿಗಳನ್ನು ಆ ರೈತರ ಬ್ಯಾಂಕ್ ಖಾತೆಗೆ ನೇರವಾಗಿ ಹಣ ಪಾವತಿಯಾಯಿತು. ಇನ್ನು ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ 37,000 ಜನ ರೈತರಿಗೆ 16.7 ಕೋಟಿ ರೂಪಾಯಿಗಳನ್ನು ರೈತರ ಬ್ಯಾಂಕ್ ಖಾತೆಗೆ ಬರದ ಪರಿಹಾರ ಹಣ ಪಾವತಿಯಾಯಿತು. ಅಂದರೆ, ಒಂದು ಬ್ಯಾಂಕ್ ಖಾತೆಗೆ ಬಂದಂತಹ ಹಣ ಒಂದು ಗುಂಟೆ ರಾಗಿ ಬೆಳೆಗೆ 68 ರೂಪಾಯಿ, ಹೆಕ್ಟೇರ್‌ಗೆ 6,800 ರೂಪಾಯಿಗಳು. ಅದು ತೋಟಗಾರಿಕೆ ಬೆಳೆಯಾಗಿದ್ದರೆ 18 ಸಾವಿರ ರೂಪಾಯಿ. ಅಂದರೆ, ಈ ಮೊತ್ತ ಇದೆಯಲ್ಲವೇ? ಅದು ಸರ್ಕಾರ ಪ್ರಾಮಾಣಿಕವಾಗಿ ಒಂದು ಪ್ರಯತ್ನ ಮಾಡಿದೆಯೆಂಬುದಕ್ಕೆ ಉದಾಹರಣೆ. ಸಂಕಷ್ಟದಲ್ಲಿರತಕ್ಕಂತಹ ರೈತರಿಗೆ ಒಂದಿಷ್ಟು ಹಣದ ಸಹಾಯ ಮಾಡಬೇಕೆಂಬ ದೃಷ್ಟಿಯನ್ನಿಟ್ಟುಕೊಂಡು ಹಣವನ್ನು ಪಾವತಿ ಮಾಡಿತು. ಆದರೆ, ನಾನು ಮಂತ್ರಿಗಳಲ್ಲಿ ಕೇಳುವುದೇನೆಂದರೆ, ಈ ಹಣದ ಪ್ರಮಾಣ ಒಂದು ಹೆಕ್ಟೇರ್‌ಗೆ 6,800 ರೂಪಾಯಿ ಹಣ ಎಂದರೆ, ಎಲ್ಲಿ ಸಾಕಾಗುತ್ತದೆ?

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಅದು ಯಾವ ರೀತಿ ಇದೆಯೆಂದರೆ, "ರಾವಣನ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆಯಿದ್ದಂತೆ". 6,800 ರೂಪಾಯಿ ಅದು ನಗಣ್ಯವಾಗುತ್ತದೆ. ಆ ಹಣದ ಪ್ರಮಾಣವನ್ನು ಹೆಚ್ಚಿಸಬೇಕಾಗುತ್ತದೆ. ಅದರಿಂದಾಗಿ, ರೈತನಿಗೆ ಯಾವುದೇ ರೀತಿಯಾದಂತಹ ನೆರವನ್ನು ನೀಡುವುದರಲ್ಲಿ ಕೂಡ ವಿಫಲವಾಗುತ್ತಿದೆ ಎನ್ನುವ ಭಾವನೆ ರೈತನಲ್ಲಿ ಮೂಡುತ್ತದೆ. ಅದರಲ್ಲೂ ವಿಶೇಷವಾಗಿ ಈ ಬರದ ಹಿನ್ನೆಲೆಯಲ್ಲಿ ಅತೀ ಹೆಚ್ಚು ಹೊಡೆತ ತಿಂದಂತಹವರೆಂದರೆ... ಗುಂಡ್ಲುಪೇಟೆ ಮತ್ತು ನಂಜನಗೂಡು ಕ್ಷೇತ್ರದ ಉಪ ಚುನಾವಣೆ ಸಂದರ್ಭದಲ್ಲಿ, ನಾವೆಲ್ಲಾ ಶಾಸಕರುಗಳು ರಾಜಕೀಯ ಪ್ರಚ್ಛಾರಕ್ಕಾಗಿ ಈ ಕ್ಷೇತ್ರಗಳಲ್ಲಿ ಪ್ರವಾಸ ಮಾಡಿದ್ದೇವೆ.

(ಮುಂದುವರೆದಿದೆ...)

(693)13-06-2017 4-50 ಎಲ್‌ಎಂ-ಎಂಡಿ

**ಶ್ರೀ ಎಸ್.ರವಿ(ಮುಂದು)**:- ಗುಂಡ್ಲುಪೇಟೆ, ನಂಜನಗೂಡು ಕಡೆಗೆ ಸಂಚಾರ ಮಾಡುವಂತಹ ಸಂದರ್ಭದಲ್ಲಿ ತೆಂಗಿನ ಮರದ ಸುಳಿಗಳು ಸೋತು ಹೋಗಿ ಮುರಿದು ಬಿದ್ದಿರುವುದನ್ನು ನಾವು ನೋಡಿದ್ದೇವೆ. ನಮ್ಮ ಬೆಂಗಳೂರು ಗ್ರಾಮಂತರ ಜಿಲ್ಲೆ ಮತ್ತು ರಾಮನಗರ ಜಿಲ್ಲೆಯ ಅರ್ಕಾವತಿ ನದಿಯ ದಡದಲ್ಲಿರುವ ತೆಂಗಿನ ಮರಗಳು ಸಂಪೂರ್ಣವಾಗಿ ನಾಶವಾಗಿವೆ. ತೆಂಗಿನ ಮರದ ಸುಳಿ ಮುರಿದು ಹೋದಮೇಲೆ ಮುಗಿಯಿತು ಅದು ಮತ್ತೆ ಚಿಗುರುವುದು, ಒಡೆಯುವುದು ಏನು ಆಗುವುದಿಲ್ಲ. ಒಂದು ತೆಂಗಿನ ಸಸಿಯನ್ನು ಬೆಳೆಸಬೇಕು ಎಂದರೆ 7ರಿಂದ 8 ವರ್ಷಗಳು ಬೇಕಾಗುತ್ತದೆ. ತೆಂಗಿನ ಮರ ಫಸಲು ನೀಡಬೇಕು ಎಂದರೆ, ಮೊದಲು ಆ ಸಸಿಯನ್ನು ಗುಂಡಿಯಲ್ಲಿ ನೆಟ್ಟು ನೀರು ಹಾಕಿ ಪೋಷಣೆ ಮಾಡಬೇಕು. ಅದರ ಫಸಲು ಪಡೆಯಬೇಕು ಎಂದರೆ 7 ರಿಂದ 8 ವರ್ಷಗಳವರೆಗೆ ಅದನ್ನು ಪೋಷಣೆ ಮಾಡಲೇಬೇಕು. ಈ ವರ್ಷದ ಬರಗಾಲದ ಹೊಡೆತ ಬಿದ್ದಿರುವುದು ತೆಂಗಿನ ಬೆಳೆಗಾರನಿಗೆ ಮತ್ತು ಅಡಿಕೆ ಬೆಳೆಗಾರನಿಗೆ. ನಮ್ಮ ಕಡೆಯಲ್ಲಿ, ಸ್ವಲ್ಪ ವೀಳ್ಯೆದೆಲೆ ವ್ಯವಸಾಯ ಮಾಡುತ್ತಿದ್ದರು, ಅದು ಕೂಡಾ ಸಂಪೂರ್ಣವಾಗಿ ನಿರ್ನಾಮವಾಗಿ ಹೋಯಿತು. ಸ್ವಲ್ಪ ಮಾವು ಬೆಳೆ ಇತ್ತು ಅದು ಕೂಡಾ ಈ ವರ್ಷ ಚೇತರಿಸಿಕೊಳ್ಳದಂತಹ ಮಟ್ಟಿಗೆ ಬಂದಿದೆ. ಈ ವರ್ಷದ ಬರಗಾಲದಿಂದ ಅತಿ ಹೆಚ್ಚು ಹಾನಿಗೆ ಒಳಗಾದವರು ತೋಟಗಾರಿಕಾ ಬೆಳೆಗಳನ್ನು ನೆಚ್ಚಿಕೊಂಡವರು. ಅವರಿಗೆ ಮುಂದೆ ಬೇರೆ ದಾರಿಯೇ ಕಾಣುತ್ತಿಲ್ಲ. ಏಕೆಂದರೆ ಇನ್ನೊಂದು ಬೆಳೆಯನ್ನು ನಾಳೆ ಬೆಳೆಯಬಹುದು ಅನ್ನುವ ಹಾಗೆ ಇಲ್ಲ. ನಾಳೆನೆ ತೆಂಗಿನ ಸಸಿ ನೆಟ್ಟು ಬೆಳೆಸಿಬಿಡಬಹುದು ಎಂದು ಹೇಳುವ ಹಾಗೆ ಇಲ್ಲ. ಭ್ರಮನಿರಸನವಾಗಿದೆ. ಆ ರೈತನ ಬದುಕೇ ಸಂಕಷ್ಟಕ್ಕೆ ಒಳಗಾಗುವಂತಹ ಸಂದರ್ಭ ನಮ್ಮಲ್ಲಿ ನಿರ್ಮಾಣವಾಗಿದೆ. ಕುಡಿಯುವ ನೀರಿಗಾಗಿ ಬೋರವೆಲ್ ಹಾಕುವ ವಿಚಾರದಲ್ಲಿ ಮಾನ್ಯ ಸಚಿವರಾದ ಕಾಗೋಡ್ ತಿಮ್ಮಪ್ಪನವರು ಬಂದು ಹಣದ ಕೊರತೆ ಇಲ್ಲ ನೀವು ಎಷ್ಟು ಬೋರವೆಲ್ ಆದರೂ ಕೊರೆಯಿರಿ, re-drilling ಮಾಡಿ, ನಿಮ್ಮಲ್ಲಿ ನೀರು

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಸಿಗದಿದ್ದರೆ ಟ್ಯಾಂಕರ್ ಮುಖಾಂತರ ನೀರು ಹೊಡೆಯಿರಿ, ಇಲ್ಲದಿದ್ದರೆ ಖಾಸಗಿಯಾಗಿ ರೈತರ ಹತ್ತಿರ ನೀರು ಇದ್ದರೆ ಅವರಿಗೆ ಹಣ ಕೊಟ್ಟು ನೀರು ಖರೀದಿ ಮಾಡಿ ಕೊಡಿ, ವಿದ್ಯುತ್ ಸಂಪರ್ಕ ಕೊಡಿ, ಇದಕ್ಕಾಗಿ ಯಾವುದೇ ಟೆಂಡರನ್ನು ಕರೆಯುವ ಅವಶ್ಯಕತೆ ಇಲ್ಲ, ನೀವು ಮಾಡಿ ಎಂದು ಸ್ಪಷ್ಟವಾಗಿ ನಿರ್ದೇಶನ ಕೊಟ್ಟಿದ್ದಾರೆ. ನಮ್ಮ ಬೆಂಗಳೂರು ಗ್ರಾಮಾಂತರ ಮತ್ತು ರಾಮನಗರ ಜಿಲ್ಲೆಗಳಲ್ಲಿ ಖಾಸಗಿಯಾಗಿ ಮತ್ತು ಸರ್ಕಾರ ಕೊರೆದಿರುವ ಬೋರ್‌ವೆಲ್‌ಗಳು ಒಂದರಿಂದ ಒಂದೂವರೆ ಸಾವಿರ ಅಡಿಗೆ ಹೋಯಿತು. 1200 ಅಡಿಗೆ ನೀರು ಬಿತ್ತು, ಆಗ ಹೇಗೋ ನೀರು ಬಿತ್ತು ನಮ್ಮ ಕುಡಿಯುವ ನೀರಿನ ಸಮಸ್ಯೆ ಪರಿಹಾರವಾಯಿತು, ಅಲ್ಲದೆ ಅಷ್ಟೊಂದು ಆಳದಿಂದ ಬಿದ್ದ ನೀರು ಜಾಸ್ತಿ ದಿನ ಇರುತ್ತದೆ ಇದು ವಿಫಲವಾಗುವುದಿಲ್ಲ ಎನ್ನುವುದು ನಮ್ಮ ಭಾವನೆ. 50 Length pipe 15 ರಿಂದ 20 ಸ್ಟೇಜ್ ಮೋಟರ್, 15 ಎಚ್‌ಪಿ ಮೇಲೆ ಮೋಟರ್ ತಂದು ಅದಕ್ಕೆ ಕೇಬಲ್ ಹಾಕಿ ತಯಾರು ಮಾಡಿ ಮೋಟಾರ್ ಆನ್ ಮಾಡಿದರೆ ಅದು 15 ದಿನಕ್ಕೆ ನೀರು ಇಲ್ಲದೆ ವಿಫಲವಾಗಿ ಹೋಯಿತು. 1200-1500 ಅಡಿ ಆಳದಿಂದ ಬಿದ್ದ ನೀರು ಕೂಡಾ ಶಾಶ್ವತವಾಗಿ ಉಳಿಯುತ್ತಿಲ್ಲ. 10-15 ದಿನ ಮಾತ್ರ ನೀರು ಬರುತ್ತದೆ ನಂತರ ನೀರೆ ಬರುವುದಿಲ್ಲ. ನಮ್ಮಲ್ಲಿ ಹೆಚ್ಚಾಗಿ ರೈತರು ಬೆಳೆಯುವುದು ತೆಂಗಿನ ಮರಗಳನ್ನು ಮತ್ತು ರೇಷ್ಮೆ ಕಡ್ಡಿ ಮಾಡುವುದು. ರೇಷ್ಮೆ ಮೊಟ್ಟೆ ತಂದಿರುವವರು ಅದನ್ನೇ ನೆಚ್ಚಿಕೊಂಡಿರುತ್ತಾರೆ. ಈ ರೀತಿ ತೋಟಗಾರಿಕೆ ಬೆಳೆಯನ್ನು ನೆಚ್ಚಿಕೊಂಡ ರೈತ ಎರಡು ಬೋರವೆಲ್ ಹಾಕಿಸಿ ಎರಡೂ ವಿಫಲವಾದಾಗ ಅಲ್ಲಿಗೆ ಆತನ ಜೀವನವೇ ಮುಗಿಯಿತು. ಮುಂದೆ ಆ ರೈತ ಬೆಂಗಳೂರಿನ ಯಾವುದಾದರೂ ಅಪಾರ್ಟ್‌ಮೆಂಟ್‌ನಲ್ಲಿ, ಯಾವುದೋ ದೊಡ್ಡ ಮನೆಯಲ್ಲಿ ಅಥವಾ ಹೋಟೆಲ್‌ಗಳಲ್ಲಿ ಸೆಕ್ಯೂರಿಟಿ ಗಾರ್ಡ್ ಆಗಿ ಕೆಲಸ ಮಾಡುತ್ತಿರುತ್ತಾನೆ. ನಾವು ಅವನನ್ನು ನೋಡಿ ಏಕೋ ನೀನು ಇಲ್ಲಿ ಇದ್ದಿಯಾ ಎಂದು ಕೇಳಿದರೆ, ಎರಡು ಬೋರ್‌ವೆಲ್‌ಗಳು ವಿಫಲವಾದವು ಎಂದು ಹೇಳುತ್ತಾನೆ. ಆ ರೈತ ಹಿಂದೆ ಅವನ ಮನೆಯಲ್ಲಿ ಮದುವೆಯಾಗುವ ಸಂದರ್ಭದಲ್ಲಿ ಕಾರ್ಡ್‌ನಲ್ಲಿ ನಮ್ಮ ಹೆಸರನ್ನು ಹಾಕಿ ನಮ್ಮನ್ನು ಮದುವೆಗೆ ಕರೆದಿರುತ್ತಾನೆ, ದೊಡ್ಡದಾಗಿ ಮದುವೆ ಮಾಡಿರುತ್ತಾನೆ, ನಾವು ಮದುವೆಗೆ ಹೋಗಿ ಬಂದಿರುತ್ತೇವೆ. 7-8 ಮರಿಗಳನ್ನು ಕೊಯ್ದು ಮರುಳಿ ಊಟ ಮಾಡಿಸಿರುತ್ತಾನೆ. ಊರಿಗೆ ಗೌಡ ಅನ್ನಿಸಿಕೊಂಡಿರುತ್ತಾನೆ. ಎರಡು ಬೋರವೆಲ್ ಹಾಕಿಸಿದ್ದರೆ ಸಾಕು ಅವನ ಗೌಡಿಕೆ ಹೋಗಿಬಿಡುತ್ತದೆ. ಎರಡು ಬೋರವೆಲ್ ಹಾಕಿಸಿದರೆ 7 ರಿಂದ 10 ಲಕ್ಷ ರೂ.ಗಳ ಖರ್ಚು ಆಗುತ್ತದೆ. ಎರಡು ಬೋರವೆಲ್‌ಗಳು ವಿಫಲವಾಗುತ್ತವೆ. ಅವನು ಬಡ್ಡಿ ಕೊಟ್ಟು ಸಾಲ ತಂದಿರುತ್ತಾನೆ. ಸಾಲಗಾರನ ಕಾಟ ತಾಳದೆ ಹೆಂಡತಿ ಕರೆದುಕೊಂಡು ಊರು ಬಿಟ್ಟು ಬನಶಂಕರಿ ಕಡೆಗೆ ಅಥವಾ ಬೆಂಗಳೂರು ದಕ್ಷಿಣದ ಕಡೆಯಲ್ಲಿ, ಕೆಲವರು ಮಾರತ್‌ಹಳ್ಳಿಯಲ್ಲಿ ಬಂದು ದುಡಿಯಲು ಪ್ರಾರಂಭ ಮಾಡುತ್ತಾರೆ. ಅವನ ಹೆಂಡತಿ 3000 ರೂ.ಗಳಿಗೆ ಮೂರು ಮನೆಗೆಲಸಕ್ಕೆ ಹೋಗಬೇಕು, ಗಂಡ skilled labour ಏನು ಅಲ್ಲ ಅವನು technician, electrician or plumber ಅಲ್ಲ. ಅವನಿಗೆ carpentry work ಬರುವುದಿಲ್ಲ. ಅವನು ಅನಿವಾರ್ಯವಾಗಿ ಬೀದಿಯಲ್ಲಿ

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಬಾಳೆಹಣ್ಣು ಮಾರಬೇಕು, ತರಕಾರಿ ಮಾರಬೇಕು. ಇಲ್ಲದಿದ್ದರೆ Security Guard ಅಥವಾ ಬಾರ್ ಇಲ್ಲಾ ಹೊಟೇಲ್‌ಗಳಲ್ಲಿ ಕ್ಲೀನರ್ ಆಗಬೇಕು. ನಾವು ಅಲ್ಲಿಗೆ ಹೋದಾಗ ನಮಗೆ ನಮಸ್ಕಾರ ಹೊಡೆಯುತ್ತಾನೆ. ಎರಡು-ಮೂರು ವರ್ಷಗಳ ಹಿಂದೆ ಅವನ ಮನೆಗೆ ಹೋಗಿರುತ್ತೇವೆ, ಮದುವೆಗೆ ಹೋಗಿರುತ್ತೇವೆ, ಅವನ ಮನೆಯ ಕಾರ್ಯಕ್ರಮಕ್ಕೆ ಹೋಗಿರುತ್ತೇವೆ. ಏಕೋ ನೀನು ಇಲ್ಲಿ ಎಂದಾಗ, 'ಎರಡು ಬೋರ್ ವಿಫಲವಾಯಿತು ಅಣ್ಣಾ' ಎಂದು ಹೇಳುತ್ತಾನೆ. ಅವನು ಆ ರೀತಿ ಹೇಳಿದ ತಕ್ಷಣ ಇವನಿಗೆ 10 ಲಕ್ಷ ರೂ.ಗಳ ಸಾಲವಾಗಿದೆ, ಸಾಲಗಾರರು ಊರಿನಲ್ಲಿ ಕಾಟ ಕೊಡುತ್ತಿದ್ದಾರೆ. ಅದಕ್ಕಾಗಿ ಇವನು ಊರು ಬಿಟ್ಟು ಬಂದಿದ್ದಾನೆ ಎಂದು ತಕ್ಷಣ ನಮಗೆ ಅರ್ಥವಾಗಬೇಕು. ಊರಿನಲ್ಲಿ ಅವನಿಗೆ 5 ರಿಂದ 6 ಎಕರೆ ಜಮೀನು ಇರುತ್ತದೆ. ಬೆಂಗಳೂರು ಸುತ್ತ-ಮುತ್ತ ಇರುವ ಬೆಂಗಳೂರು ಗ್ರಾಮಾಂತರ ಮತ್ತು ರಾಮನಗರ ಜಿಲ್ಲೆಯ ಸುತ್ತ-ಮುತ್ತ ಇರುವ ಜಮೀನಿಗೆ ಇವತ್ತು ಎಕರೆಗೆ 30 ರಿಂದ 50 ಲಕ್ಷ ರೂ.ಗಳ ಬೆಲೆ ಇದೆ. ಜಮೀನು ಬೆಲೆ ಏನು ಕಡಿಮೆ ಇಲ್ಲ. ಬೆಂಗಳೂರಿನಲ್ಲಿ supplier ಕೆಲಸ ಮಾಡಿಕೊಂಡಿರುವವನ ಜಮೀನು ಮಾರಿಕೊಟ್ಟರೆ 3 ರಿಂದ 4 ಕೋಟಿ ರೂ.ಗಳಷ್ಟು ಹಣ ಬರುತ್ತದೆ. ಇವತ್ತು ಅವನು ಜಮೀನಿನಲ್ಲಿ ವ್ಯವಸಾಯ ಮಾಡುವಂತಹ ಪರಿಸ್ಥಿತಿಯೇ ಇಲ್ಲ. ತೆಂಗಿನ ಮರ ಬೆಳೆದಿರುತ್ತಾನೆ, ಬೆಳೆ ಎಲ್ಲಾ ನಾಶವಾಗಿ ಬದುಕಲು ದಾರಿ ಕಾಣದೆ ಬೆಂಗಳೂರಿಗೆ ಬಂದು ಬದುಕಲು ಹೋರಾಟ ಮಾಡುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಮಾನ್ಯ ಶ್ರೀಕಂಠೇಗೌಡರು ಮಾತನಾಡುತ್ತಾ ಹೇಳಿದರು.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ರವಿಯವರು ಹೇಳಿರುವ ಮಾತಿಗೆ ಒಂದು ಮಾತನ್ನು ಹೇಳುತ್ತೇನೆ. ರೈತ ಹೇಳುತ್ತಾನೆ, "ಬರ ಎನ್ನುವುದು ಒಂದೇ ಸಾರಿ ಜೀವ ತೆಗೆಯುವ ರಸ್ತೆ ಅಪಘಾತವಲ್ಲ ಸ್ವಾಮಿ, ನಿಧಾನವಾಗಿ ಊರನ್ನೇ, ಇಡೀ ಊರಿನ ಜನರನ್ನೇ ಸಾಯಿಸುವಂತಹ ವಿಷ", ಎಂದು

**ಶ್ರೀ ಎಸ್.ರವಿ:-** ಮಾನ್ಯ ಸಭಾಪತಿಗಳೆ, ಅನ್ನ ಭಾಗ್ಯದ ಬಗ್ಗೆ ಟೀಕೆ-ಟಿಪ್ಪಣಿ ಮಾಡುತ್ತಾರೆ. ಉಚಿತವಾಗಿ ಅಕ್ಕಿಯನ್ನು ಕೊಟ್ಟು ಜನರನ್ನು ಸೋಂಬೇರಿಗಳನ್ನಾಗಿ ಮಾಡಿದರು, ಈ ಕಾರ್ಯಕ್ರಮ ಬೇಕಾಗಿತ್ತಾ ಎಂದು ಹೇಳುತ್ತಿದ್ದಾರೆ. ಸರ್ಕಾರ ಏನಾದರೂ 7ಕೆ.ಜಿ. ಅಕ್ಕಿಯನ್ನು ಉಚಿತವಾಗಿ ಕೊಡದೆ ಹೋಗಿದ್ದರೆ ನಮ್ಮಲ್ಲಿ ಜನರಿಗೆ ಊಟ ಮಾಡಲು ಗತಿ ಇರುತ್ತಿರಲಿಲ್ಲ. ಇವತ್ತು ಒಂದು ಹೊತ್ತಿನ ಊಟಕ್ಕೆ ಗತಿ ಇಲ್ಲ ಎನ್ನುವ ಪರಿಸ್ಥಿತಿ ಇಲ್ಲ. ಆ 7 ಕೆ.ಜಿ ಉಚಿತವಾಗಿ ಕೊಡುವ ಅಕ್ಕಿಯಿಂದ ಇವತ್ತು ಜನರು ಗೌರವಯುತವಾಗಿ ಒಂದು ಹೊತ್ತು ಊಟ ಮಾಡುವಂತೆ ಆಗಿದೆ. ಇದು ಸಾಧ್ಯವಾಗಿರುವುದು ಅನ್ನಭಾಗ್ಯ ಕಾರ್ಯಕ್ರಮದಿಂದ. "ಯುದ್ಧಕಾಲೇ ಶಸ್ತ್ರಾಭ್ಯಾಸ" ಅನ್ನುವ ಹಾಗೆ ಆಗಿದೆ. ಈಗ ಬರ ಬಂದಿದೆ, ಇದಕ್ಕೆ ಏನು ಮಾಡಬೇಕು? ಬರ ಇವತ್ತು ಬಂದು ನಾಳೆ ನಿಂತು ಹೋಗಿಬಿಡುವಂತಹದಲ್ಲ. ಮುಂದೆಯು ಕೂಡಾ ಬರ ಬಂದೇ ಬರುತ್ತದೆ. ಹಿಂದೆ ಕರ್ನಾಟಕ ರಾಜ್ಯದಲ್ಲಿ ಮಾನ್ಯ ನಜೀರ ಸಾಹೇಬರು ಬೋರವೆಲ್ ಕೊರೆಯಲು ಪ್ರಾರಂಭ ಮಾಡಿದಾಗ ಬಯಲುಸೀಮೆ ಮತ್ತು ನಮ್ಮ ಕಡೆ 150-200 ಅಡಿಗೆ ನೀರು ಸಿಗುತ್ತಿತ್ತು. ಆದರೆ ಇವತ್ತು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಒಂದರಿಂದ ಒಂದೂವರೆ ಸಾವಿರ ಅಡಿ ಕೊರೆದರು ನೀರು ಸಿಗುತ್ತಿಲ್ಲ. ಕೇವಲ 20 ವರ್ಷಗಳ ಅಂತರದಲ್ಲಿ ಅಂತರ್ಜಲ ಮಟ್ಟ ಸಾವಿರ ಅಡಿ ಕುಸಿದಿದೆ. ನಾವೆಲ್ಲರೂ ಬಾವಿಯಲ್ಲಿಯೇ ಈಜು ಕಲಿತಿರುವುದು. ಭೂಮಿಯನ್ನು 50 ರಿಂದ 75 ಅಡಿ ಬಾವಿ ಕೊರೆದರೆ ನೀರು ಬರುತ್ತಿತ್ತು. ಒಬ್ಬ ರೈತನ ಮನೆಯಲ್ಲಿ ಐದಾಳು, ಹತ್ತಾಳು ಉದ್ದ ಕಲ್ಲು ಕಟ್ಟಿರುವ ಬಾವಿ ಇದೆ ಎಂದರೆ ಅವನು ಊರಿಗೆ ದೊಡ್ಡ ಯಜಮಾನ, ಅವನಿಗೆ ತುಂಬಾ ಗೌರವ. ಅವನ ಮನೆಗೆ ಹೆಣ್ಣು ಕೊಡಲು ಮುಂದೆ ಬರುತ್ತಿದ್ದರು. ಆದರೆ ಇವತ್ತು ನಮ್ಮ ಊರಿನಲ್ಲಿ 10 ಎಕರೆ ಜಮೀನು ಇರಲಿ ಅವನಿಗೆ ಹೆಣ್ಣು ಕೊಡುವವರು ಇಲ್ಲ. ನಮ್ಮಲ್ಲಿ ಮದುವೆಯಾಗದೆ ಎಷ್ಟು ಗಂಡು ಹುಡುಗರು ಕಾದು ನಿಂತಿದ್ದಾರೆ. ಇದು ಸಹಜ. ಊರಿನಲ್ಲಿ 8 ರಿಂದ 10 ಎಕರೆ ಜಮೀನು ಇರುತ್ತದೆ. ಅವನು ಆ ಜಮೀನನ್ನು ಮಾರಿದರೆ ಮಾತ್ರ ಕೋಟ್ಯಾಧೀಶ್ವರ ಅವನೇನು ಬಡವನಲ್ಲ. ಜಮೀನು ಮಾರುತ್ತೇನೆ ಎಂದರೆ, ಬೆಂಗಳೂರಿನಿಂದ Real Estate Agency ಯವರು ಬಂದು ಜಮೀನು ತೆಗೆದುಕೊಳ್ಳುತ್ತಾರೆ. ಅವನು ಆ ಜಮೀನನ್ನು ಮಾರಿದರೆ ಮುಗಿಯಿತು ಒಂದು ವಾಚ್, ಬ್ರೇಸ್‌ಲೆಟ್, ಒಂದು ಲಾರಿ, ಒಂದು ಮನೆ, ಒಂದು ಕಾರು ಮಾಡಿಕೊಂಡು ಮೂರು ವರ್ಷ ಕಳೆದರೆ ಸಾಕು ಎಲ್ಲಾ ಹಣ ಖಾಲಿಯಾಗಿ ಮತ್ತೆ ಯಾರಿಗೆ ಜಮೀನು ಮಾರಿರುತ್ತಾನೆ ಅವನ ಹತ್ತಿರ ಹೋಗಿ ಜಮೀನಿನಲ್ಲಿ ಗಂಡ-ಹೆಂಡತಿ ಹಾಲು ಕರೆದುಕೊಂಡು, ಅವರ ತೋಟವನ್ನು ನೋಡಿಕೊಂಡು ಸಂಬಳಕ್ಕಾಗಿ ದುಡಿಯುತ್ತಾರೆ. ಇದಕ್ಕೆ ಏನು ಪರಿಹಾರ. ಇವತ್ತು ನಮ್ಮದಲ್ಲದ ತಪ್ಪಿಗೆ ಶಿಕ್ಷೆಯನ್ನು ಅನುಭವಿಸಬೇಕಾಗಿದೆ. ವಿಶೇಷವಾಗಿ ನಾನು ಪ್ರತಿನಿಧಿಸುವಂತಹ ರಾಮನಗರ ಜಿಲ್ಲೆ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿಯ ಜನರು ನಾವು ಮಾಡದೆ ಇರುವ ತಪ್ಪಿಗೆ ಶಿಕ್ಷೆಯನ್ನು ಅನುಭವಿಸುತ್ತಿದ್ದೇವೆ. ತಿಪ್ಪಗೊಂಡನಹಳ್ಳಿ ನದಿ ಬಗ್ಗೆ ಮಾತನಾಡಿದರು. ನಮ್ಮಲ್ಲಿ ತಿಪ್ಪಗೊಂಡನಹಳ್ಳಿ, ಮಂಚನಬೆಲೆ, ಅರ್ಕಾವತಿ ಜಲಾಶಯಗಳು ಇವೆ. ನಮ್ಮ ಭಾಗದ ಮೇಲೆಯೇ ಈ ಪೈಪ್‌ಗಳು ಹಾದು ಹೋಗುತ್ತವೆ. ತೊರೆಕಾಡನಹಳ್ಳಿಯಿಂದ ಬೆಂಗಳೂರಿಗೆ ನೀರು ಸರಬರಾಜು ಆಗುತ್ತದೆ. ಬೆಂಗಳೂರಿನವರು ಇವತ್ತು ಕಾವೇರಿ ನೀರು ಕುಡಿಯುತ್ತಿದ್ದಾರೆ, ಈ ನೀರು ನಮ್ಮ ಭಾಗದಿಂದ ಆರು ಪೈಪ್‌ಲೈನ್ ಮುಖಾಂತರ ಬರುತ್ತದೆ. ನಮ್ಮ ಭೂ ಭಾಗವನ್ನು ಹಂಚಿಕೊಂಡು, ಸೀಳಿಕೊಂಡು ಬರುತ್ತದೆ. ಅಲ್ಲಿಂದ ಬರುವಾಗ ಪರಿಶುದ್ಧವಾದ ನೀರು ಬರುತ್ತದೆ. ಈ ಕಡೆಗೆ ಬಂದಾಗ ಅದನ್ನು ಮುಟ್ಟಲು ಆಗುವುದಿಲ್ಲ. ಮುಟ್ಟಿದರೆ ಕೆರೆತ ಹುಟ್ಟಿ ಬಿಡುತ್ತದೆ. ಆ ಮಟ್ಟಕ್ಕೆ ನೀರು ಕಲುಂಷಿತವಾಗಿರುತ್ತದೆ. ಇದಕ್ಕೆ ನಮ್ಮದೇನು ತಕರಾರು ಇಲ್ಲ. ನೀರನ್ನು ಪೂರ್ತಿ filter ಮಾಡಿ ಕೊಡಿ ಎಂದು ನಾವೇನು ಸರ್ಕಾರವನ್ನು ಕೇಳುತ್ತಿಲ್ಲ. ವೃಷಭಾವತಿಯ ನೀರು ಕೆಂಗೇರಿ ಹತ್ತಿರ ಹೋಗುವಾಗ ಆ ನೀರು ಎಷ್ಟು ಕಲುಷಿತವಾಗಿದೆ ಎನ್ನುವುದು ಅಲ್ಲಿ ಸಂಚಾರ ಮಾಡುವವರಿಗೆ ಅದರಿಂದ ಬರುವ ವಾಸನೆಯಿಂದ ಗೊತ್ತಾಗುತ್ತದೆ. ಕಣ್ಣಿನಿಂದ ನೋಡಿದರೆ ನೀರು ಹರಿಯುತ್ತಿದೆ ಎನ್ನಿಸುತ್ತದೆ. ಆದರೆ ಅದರ ವಾಸನೆ ಬಡಿದಾಗಲೇ ಗೊತ್ತಾಗುತ್ತದೆ ಆ ನೀರು ಎಷ್ಟು ಕಲುಷಿತವಾಗಿದೆ ಎಂದು. ಆ ನೀರು ಅಂತರ್ಜಲಕ್ಕೆ ಇಳಿದು ಕುಡಿಯಲು ಆಗುವುದಿಲ್ಲ. TDS (Total Dissolved Solids) 1200 ರಿಂದ 1500 ಅಡಿ ಇದೆ. ಇದರಲ್ಲಿ Nitrate,

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

Potassium ನಿಂದ ಹಿಡಿದು ಏನೇನು ಕರಗಬಾರದು ಅದೆಲ್ಲವು ಕರಗಿದೆ. ಅದನ್ನು ವ್ಯವಸಾಯಕ್ಕಾದರೂ ಉಪಯೋಗಿಸಿಕೊಳ್ಳೋಣ ಎಂದರೆ, ನೀರು ಪಂಪ್ ಮಾಡಲು ನೀರಿನಲ್ಲಿ ಇಳಿದರೆ ಕಾಲು ಇಡಲು ಆಗುವುದೇ ಇಲ್ಲ. ಅಷ್ಟು ಕಲುಷಿತವಾಗಿದೆ. ಅದನ್ನು filter ಮಾಡುವುದು ಸರ್ಕಾರದ ಕರ್ತವ್ಯ. ಇದನ್ನು 2-3 stage filter ಮಾಡುವುದು ಬೇಡ. ಸ್ವಲ್ಪ ಮೆದುವು ಮಾಡಿದರೆ ಸಾಕು. 6 ಟಿಎಂಸಿ ನೀರು, 400 ಎಂಎಲ್‌ಡಿ ನೀರು ನಮ್ಮ ಭಾಗದಿಂದಲೇ ಹರಿದು ಹೋಗುತ್ತದೆ. 400 ಎಂಎಲ್‌ಡಿ ನೀರು ಕೊಟ್ಟರೆ ನಮ್ಮ ಒಂದು ಜಿಲ್ಲೆಯೇ ಬದುಕಿಕೊಳ್ಳುತ್ತದೆ.

**(ಮುಂದು)**

(694)13–06–2017 5–00 ವೈಎಲ್–ಎಂಡಿ

**(ಉಪ ಸಭಾಪತಿಯವರ ಉಪಸ್ಥಿತಿ)**

**ಶ್ರೀ ಎಸ್.ರವಿ (ಮುಂದು):–**

ಕಲುಷಿತವಾಗಿರತಕ್ಕಂಥ ನೀರನ್ನು ಸೋಸಿದರೆ ಸಾಕು. ಕಲುಷಿತವಾಗಿರುವ ನೀರು ಇವತ್ತು ನೇರವಾಗಿ ತಮಿಳುನಾಡಿಗೆ ಹೋಗುತ್ತಿದೆ. ನೇರವಾಗಿ ತಮಿಳುನಾಡಿಗೆ ಹೋದಂತಹ ನೀರು filter ಆಗದೇ ಇರುವುದಕ್ಕೆ ಕಾರಣವೇನೆಂದರೆ, ಹೊಳೆಯಲ್ಲಿ ಮರಳು ಸಹ ಇಲ್ಲ. ಒಂದು ಪಕ್ಷ ಮರಳು ಇದ್ದಿದರೆ ಭೂಮಿಯೊಳಗೆ ನೀರು ಇಳಿದು, ನೀರು ಮುಂದಕ್ಕಾದರೂ ಹೋಗುತ್ತಿತ್ತು. ಅಕ್ರಮ ಮರಳು ಗಣಿಗಾರಿಕೆಯಿಂದ ಮರಳನ್ನು ಸಂಪೂರ್ಣವಾಗಿ ಎತ್ತಿರುವ ಹಿನ್ನೆಲೆಯಲ್ಲಿ ಇವತ್ತು ಕಲುಷಿತವಾದ ನೀರು ಸರಾಗವಾಗಿ ಹೋಗುತ್ತಿದೆ. ಇವತ್ತು ನಾವು ನೊರೆಯಾಗಿರತಕ್ಕಂಥ ನೀರನ್ನು ಫೋಟೋಗಳಲ್ಲಿಯೂ ನೋಡುತ್ತಿದ್ದೇವೆ. ಇವತ್ತು ಬೆಳ್ಳಂದೂರು ಕೆರೆ ಅಂತರರಾಷ್ಟ್ರೀಯ ಮಟ್ಟದಲ್ಲಿಯೂ ಕೂಡ ಸುದ್ದಿಯಾಗಿದೆ. ಇನ್ನಿತರ ಕೆರೆಗಳು ಕಲುಷಿತಗೊಂಡಿರತಕ್ಕಂಥ ಪ್ರಮಾಣದ ಬಗ್ಗೆ ಇವತ್ತು National Channel ಗಳಲ್ಲಿ ಯಾವ ಮಟ್ಟದಲ್ಲಿ ನೀರು ಕಲುಷಿತಗೊಂಡಿದೆ ಎಂಬುದನ್ನು ನೋಡುತ್ತಿದ್ದೇವೆ. ಸರ್ಕಾರ ಇದರ ಬಗ್ಗೆ ದಯಮಾಡಿ ಗಮನ ಹರಿಸಿದರೆ ಸಾಕು. ನಮಗೆ ಶೌಚಾಲಯದ ಮಟ್ಟದ ವ್ಯವಸ್ಥೆಯ ನೀರಾದರೂ ಪರವಾಗಿಲ್ಲ. ನಾವೇನು ಶೌಚಾಲಯದ ನೀರೆಂದು ಬೇಜಾರು ಮಾಡಿಕೊಳ್ಳುವುದಿಲ್ಲ. KC (Koramangala-Challaghatta) Valley project ಹೆಸರಿನಲ್ಲಿ ಚಿಕ್ಕಬಳ್ಳಾಪುರ ಕೋಲಾರಕ್ಕೆ ಒಂದಿಷ್ಟು ನೀರು ಹೋಗುತ್ತಿರತಕ್ಕಂಥ ಹಿನ್ನೆಲೆಯಲ್ಲಿ ಆ ಭಾಗದಲ್ಲಿ ಹೊಸಕೋಟೆ ಸಹ ಬರುತ್ತದೆ. ಹೊಸಕೋಟೆ, ದೇವನಹಳ್ಳಿ ಭಾಗಗಳಲ್ಲಿಯೂ ಕೂಡ ಕೆರೆ ತುಂಬಿಸತಕ್ಕಂಥ ಕೆಲಸವನ್ನು ಆ ಭಾಗಗಳಲ್ಲಿ ಪ್ರಾರಂಭದಲ್ಲಿಯೂ ಮಾಡಬೇಕಾಗುತ್ತದೆ. ಆನೇಕಲ್ ಸೇರಿದ ಹಾಗೆ ಈ ನೀರನ್ನು ಸ್ವಲ್ಪ ಮೆದು ಮಾಡಿದರೆ ಸಾಕು. ಮೆದು ಮಾಡಿದರೆ ವ್ಯವಸಾಯಕ್ಕೆ ಉಪಯೋಗಿಸಿಕೊಂಡು, ರೈತರು ಬದುಕನ್ನು ಕಟ್ಟಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಇದರ ಜೊತೆಗೆ ಎತ್ತಿನಹೊಳೆ ಇನ್ನಿತರ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಯಾವ್ಯಾವ ಯೋಜನೆಗಳಿವೆ ಬಯಲು ಸೀಮೆಗೆ ನೀರನ್ನು ಕೊಡಬೇಕೆಂದು ಶಾಶ್ವತವಾದಂತಹ ನೀರಾವರಿಯನ್ನು ಕಲ್ಪಿಸಬೇಕೆನ್ನುವ ದೃಷ್ಟಿಯಿಂದ ಕೈಗೊಳ್ಳತಕ್ಕಂಥ ಯೋಜನೆಗಳನ್ನು ನಿಗದಿತ ಸಮಯದೊಳಗೆ ಏನಾದರೂ ಮಾಡಲಿಲ್ಲವೆಂದರೆ ನಮ್ಮ ಜನರು ಬದುಕುವುದಕ್ಕೆ ಸಾಧ್ಯವಿಲ್ಲ. ಯೋಜನೆಗಳು ವಿಳಂಬವಾದಷ್ಟು ನಮ್ಮ ಜನ ಭ್ರಮನಿರಸನಗೊಳ್ಳುತ್ತಾರೆ. ಜೊತೆಗೆ ಜನರ ಜೀವನ ಬಹಳ ದುಸ್ತರವಾಗುತ್ತದೆ. ನಮ್ಮ ಭಾಗಗಳಲ್ಲಿ ಜೀವನ ಮಾಡುವುದಕ್ಕೆ ಬಹಳ ದುಸ್ತರವಾಗಿರತಕ್ಕಂಥ ಸಂದರ್ಭ ಜನರಿಗೆ ಬರುತ್ತದೆ. ಕುಡಿಯುವುದಕ್ಕೆ ನೀರನ್ನು ಕಲ್ಪಿಸಿದರೆ ಹೇಗ್ಗೋ ಜೀವನ ಮಾಡಿಕೊಳ್ಳುತ್ತಾರೆ. ಆದ್ದರಿಂದ ಆ ಯೋಜನೆಗಳನ್ನು ನಿಗದಿತ ಅವಧಿಯೊಳಗೆ ದಯಮಾಡಿ ಮಾಡಬೇಕು. ಜೊತೆಗೆ ಬಿದ್ದಂತಹ ಒಂದೊಂದು ಮಳೆ ಹನಿಯನ್ನು ಕೂಡ ಭೂಮಿಯೊಳಗೆ ಇಂಗಿಸತಕ್ಕಂಥದ್ದೇ ಪರಿಹಾರವೆಂದು ಮಾನ್ಯ ಸಚಿವರಾದ ಕೃಷ್ಣಬೈರೇಗೌಡರು ಮಾತನಾಡುತ್ತಾ ಹೇಳಿದ್ದರು. ನಮ್ಮ ರಾಷ್ಟ್ರಕ್ಕಿಂತ ಬ್ರೆಜಿಲ್ ರಾಷ್ಟ್ರವನ್ನು ಉದಾಹರಣೆಯಾಗಿ ತೆಗೆದುಕೊಂಡು ಮಾನ್ಯ ಕೆ.ಟಿ.ಶ್ರೀಕಂಠೇಗೌಡರು ಹೇಳಿದರು. ಬೆಂಗಳೂರಿನ ಬಯಲು ಸೀಮೆಯಲ್ಲಿ ಏನಿದ್ದೇವೆ. ಬೆಂಗಳೂರಿನ ಸುತ್ತಮುತ್ತ ಇರತಕ್ಕಂಥ ಜಿಲ್ಲೆಗಳಾದ ತುಮಕೂರು, ಚಿತ್ರದುರ್ಗ, ಬೆಂಗಳೂರು ಗ್ರಾಮಾಂತರ, ರಾಮನಗರ, ಕೋಲಾರ, ಚಿಕ್ಕಬಳ್ಳಾಪುರ ಇವೆಲ್ಲಾ ಜಿಲ್ಲೆಗಳೇನಿವೆ, ಈ ಜಿಲ್ಲೆಗಳ ಪರಿಸ್ಥಿತಿಯನ್ನು ನೆನಪಿಸಿಕೊಂಡರೆ ಇಸ್ರೇಲ್‌ಗಿಂತ ನಾವೇನು ಕಡಿಮೆ ಇಲ್ಲ. ಇಸ್ರೇಲ್‌ನಲ್ಲಿ ಮಳೆಯೇ ಇಲ್ಲದಂತಹ ಪರಿಸ್ಥಿತಿ ಇದೆ. ಇಸ್ರೇಲ್‌ನಲ್ಲಿ ಬೀಳುವಂತಹ ಮಳೆಯ ಪ್ರಮಾಣ ಹಾಗೂ ನಮ್ಮ ರಾಷ್ಟ್ರದಲ್ಲಿ ಬೀಳುವಂತಹ ಮಳೆಯ ಪ್ರಮಾಣವನ್ನು ನೋಡಿದಾಗ ಹೆಚ್ಚು ಕಡಿಮೆ ಎರಡಕ್ಕೂ ಸಮನಾಂತರವಾಗಿರತಕ್ಕಂಥದ್ದು ಇರಬಹುದೇನೋ, ನಾನು ನಿಖರವಾದಂತಹ ಅಂಕಿ ಅಂಶದಿಂದ ಹೇಳುವುದಕ್ಕಾಗುವುದಿಲ್ಲ. ಆದರೆ, ಇವತ್ತು ಹನಿ ನೀರಾವರಿ ಪದ್ಧತಿಯನ್ನು ಪ್ರಪಂಚಕ್ಕೆ ಅಳವಡಿಸತಕ್ಕಂಥವರು ಇಸ್ರೇಲಿಗರು. ಆದ್ದರಿಂದ, ನಾವು ಈ ಹನಿ ನೀರಾವರಿ ಪದ್ಧತಿಯನ್ನು ಅಳವಡಿಸತಕ್ಕಂಥದ್ದು, ಹನಿ ನೀರಾವರಿಯನ್ನು ಹೆಚ್ಚು ಪ್ರಚಲಿತ ಮಾಡತಕ್ಕಂಥದ್ದು, ನೀರಿನ ಬಳಕೆಯನ್ನು ಸಂಪೂರ್ಣವಾಗಿ ಹನಿ ನೀರಾವರಿ ಮುಖೇನ ಮಾಡತಕ್ಕಂಥ ಯೋಜನೆಗಳನ್ನು ರೈತರಿಗೆ ಕಲಿಸಬೇಕಾಗುತ್ತದೆ. ಎಲ್ಲಿಯೋ ಒಂದು ಕಡೆ ನಮ್ಮ ಜನ ಇನ್ನೂ ಹನಿ ನೀರಾವರಿ ಪದ್ಧತಿಗೆ ಸಂಪೂರ್ಣವಾಗಿ ಬಂದಿಲ್ಲ. ಅಂತಹ ಜನರಿಗೆ ಹನಿ ನೀರಾವರಿಯನ್ನು ಕಡ್ಡಾಯ ಮಾಡಬೇಕು. ಶಾಶ್ವತವಾಗಿ ಮುಂದಿನ ದಿನಗಳಲ್ಲಿ ಹನಿ ನೀರಾವರಿ ಪದ್ಧತಿಯ ಕಡೆಗೆ ಬರಲೇಬೇಕಾದಂತಹ ಅನಿವಾರ್ಯ ಪರಿಸ್ಥಿತಿ ಇದೆ ಎಂದು ತಿಳಿಸಿ ತಿಳುವಳಿಕೆಯನ್ನು ಕೊಡುವುದರ ಜೊತೆಗೆ check dam ಗಳ ನಿರ್ಮಾಣ ಆಗಬೇಕು. ಅಂದರೆ ಮಳೆ ಬೀಳುವಾಗ ಪ್ರತಿ ಹನಿಯನ್ನು ಕೂಡಾ ಭೂಮಿಯಲ್ಲಿ ಇಂಗಿಸದೇ ಹೋದರೆ, ನಾವು ಎಲ್ಲಿಂದಲೋ ನೀರು ತರುವುದಕ್ಕೆ ಸಾಧ್ಯವಿಲ್ಲ. ನೀರನ್ನು ಗಾಳಿ ಅಥವಾ ಇನ್ನಾವುದರಲ್ಲಿಯಾದರೂ ಉತ್ಪತ್ತಿ ಮಾಡತಕ್ಕಂಥದೇನು ಮಾಡುವುದಕ್ಕಾಗುವುದಿಲ್ಲ. ನೆರೆ ರಾಜ್ಯವಾದ ತಮಿಳುನಾಡಿಗೂ ಕರ್ನಾಟಕಕ್ಕೂ ಕಾವೇರಿ ನೀರಿನ ವಿಚಾರದಲ್ಲಿ ಜಗಳವಾಗುತ್ತಿರುವುದನ್ನು ನಾವು ಈಗಾಗಲೇ ನೋಡುತ್ತಿದ್ದೇವೆ. ಹಾಗೆಯೇ ನೆರೆ ರಾಜ್ಯವಾದ ಆಂಧ್ರ ಪ್ರದೇಶಕ್ಕೂ ಕರ್ನಾಟಕಕ್ಕೂ ನೀರಿನ ವಿಚಾರದಲ್ಲಿ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಹಲವಾರು ವಿವಾದಗಳಿವೆ. ಮಹದಾಯಿ ವಿಚಾರದಲ್ಲಿ ಮಹಾರಾಷ್ಟ್ರ ಹಾಗೂ ಗೋವಾ ರಾಜ್ಯಗಳೊಂದಿಗೆ ವಿವಾದವಿದೆ. ಗೋವಾ ರಾಜ್ಯ ಸಮುದ್ರಕ್ಕೆ ಹರಿಯುವ ನದಿಯ ನೀರು ಕಡಿಮೆಯಾಗುತ್ತದೆ; ಅದಕ್ಕಾಗಿ ಮಹದಾಯಿ ನೀರನ್ನು ಕೊಡುವುದಕ್ಕಾಗುವುದಿಲ್ಲ. ಸದರಿ ಕಾರಣವನ್ನಿಟ್ಟುಕೊಂಡು ಕುಡಿಯುವುದಕ್ಕೆ ನೀರನ್ನು ಬಳಕೆ ಮಾಡುವುದಕ್ಕೆ ನಮಗೆ ಅವಕಾಶ ಕೊಡುತ್ತಿಲ್ಲ. ನಮ್ಮದೇ ಎತ್ತಿನಹೊಳೆಯಿಂದ ನೀರನ್ನು ತರುವುದಕ್ಕೆ ಕರಾವಳಿ ಭಾಗದ ಜನರು ವಿರೋಧ ಮಾಡತಕ್ಕಂಥ ಸಂದರ್ಭ ಇರುವುದರಿಂದ ಬಹಳ ಅತ್ಯಮೂಲ್ಯವಾದಂತಹ ನೀರನ್ನು ಇಂಗಿಸದೇ ಹೋದ್ಧರೆ ಬಹಳ ಕಷ್ಟವಾಗುತ್ತದೆ. ಇವತ್ತು ಇಡೀ ರಾಜ್ಯದಲ್ಲಿ 2016-17ನೇ ಸಾಲಿನಲ್ಲಿ ರಾಮನಗರ ಜಿಲ್ಲೆಯೊಂದರಲ್ಲಿಯೇ 1018 check dam ಗಳು ನಿರ್ಮಾಣ ಮಾಡಲಾಗಿದೆ. ಒಂದೇ ವರ್ಷದಲ್ಲಿ ನಮ್ಮ ಜನಪ್ರತಿನಿಧಿಗಳು, ಪಂಚಾಯಿತಿಯ ಸದಸ್ಯರುಗಳು, ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ ಸದಸ್ಯರು, ಶಾಸಕರು, ಸಂಸದರು ಮತ್ತು ಅಧಿಕಾರಿಗಳೆಲ್ಲರ ಸಹಯೋಗದಿಂದ ಶರವೇಗದಲ್ಲಿ ಮಾಡಲಾಗಿದೆ. 5 ಲಕ್ಷದಿಂದ 10 ಲಕ್ಷ, 15 ಲಕ್ಷ, 30 ಲಕ್ಷ ರೂಪಾಯಿ ಖರ್ಚು ಮಾಡಿ ಸಣ್ಣ ಸಣ್ಣ check dam ಗಳನ್ನು ಮಾಡಲಾಗಿದೆ. ಅದರಲ್ಲಿ 5 ರಿಂದ 10 ಲಕ್ಷ ರೂಪಾಯಿಗಳೊಳಗೆ ಆಗುವಂತಹ check dam ಗಳಿಗೆ ಹೆಚ್ಚು ಒತ್ತು ಕೊಟ್ಟಿರತಕ್ಕಂಥದ್ದು, ಶೇಕಡಾ 75 ಕ್ಕೂ ಹೆಚ್ಚು check dam ಗಳು 5 ಲಕ್ಷದಿಂದ 6 ಲಕ್ಷ ಅಥವಾ 10 ಲಕ್ಷ ರೂಪಾಯಿಗಳಲ್ಲಿ ನಿರ್ಮಾಣವಾಗಿದೆ. ಸಾಲು ಚೆಕ್ ಡ್ಯಾಮ್‌ಗಳೇನಿವೆ ಒಂದೊಂದೇ ಹಳ್ಳಕ್ಕೆ 7, 8, 10 ಸರಣಿ check dam ಗಳನ್ನು ನಿರ್ಮಾಣ ಮಾಡಿರತಕ್ಕಂಥದ್ದು ಇದೆ. ಬಹುದೊಡ್ಡ ತಾಂತ್ರಿಕತೆ, ಯೋಜನೆ ಅಥವಾ ಹಣವನ್ನು ಈ check dam ಗಳಿಗೆ ವಿನಿಯೋಗ ಮಾಡಿಲ್ಲ. ಬಹಳ ಕಡಿಮೆ ಮೊತ್ತದಲ್ಲಿ ಮಾಡಿದ್ದೇವೆ. ಈ ಅನುದಾನವನ್ನು ಕೂಡ ನಾವು ರಾಜ್ಯ ಸರ್ಕಾರದ ವಿಶೇಷ ಅನುದಾನದಿಂದ ಅಥವಾ ಕೇಂದ್ರ ಸರ್ಕಾರದ ವಿಶೇಷ ಅನುದಾನವನ್ನು ನಂಬಿ ಮಾಡಿಲ್ಲ. ನರೇಗಾ ಯೋಜನೆಯಡಿಯಲ್ಲಿ ನಮ್ಮಲ್ಲಿ ನಿರ್ಮಾಣ ಮಾಡಿರತಕ್ಕಂಥ 1018 ಚೆಕ್ ಡ್ಯಾಮ್‌ಗಳಿಗೆ 15-20 ದಿನಗಳ ಕಾಲ ಬಹುತೇಕ ಮಳೆ ಬಿತ್ತು; ಪರವಾಗಿಲ್ಲ 4-5 ದಿನಗಳ ಕಾಲ ಉತ್ತಮವಾಗಿ ಮಳೆಯಾಗಿತ್ತು. ಉತ್ತಮವಾದ ಮಳೆಯಾಗಿದ್ದರಿಂದ ಸಾರ್ಥಕವೆನಿಸುತ್ತದೆ. ನಮ್ಮ ಜನಪ್ರತಿನಿಧಿಗಳು ಅಥವಾ ಸ್ಥಳೀಯ ನಾಗರೀಕರು ನರೇಗಾ ಯೋಜನೆಯಡಿಯಲ್ಲಿ ಯಾರು check dam ಗಳನ್ನು ನಿರ್ಮಾಣ ಮಾಡಿದ್ದಾರೋ ಅದರಿಂದ ಇವತ್ತು ಸಾರ್ಥಕವೆನಿಸುತ್ತದೆ. ಇವತ್ತು ಮಳೆಯ ನೀರು ಸಾಕಷ್ಟು check dam ಗಳಲ್ಲಿ ನಿಂತಿದೆ. ಶೇಕಡಾ 75 ರಷ್ಟು check dam ಗಳೇನಿವೆ ಅದು ದೊಡ್ಡ ಕೆರೆಗಳ ನಿರ್ಮಾಣವೇನಲ್ಲ. ಒಂದಷ್ಟು ಗಾತ್ರದ ಹಳ್ಳಗಳಲ್ಲಿ ಮಳೆಯ ನೀರು ನಿಂತಿರುವುದನ್ನು ಕಾಣುತ್ತೇವೆ. ನಮ್ಮ ಜಿಲ್ಲೆಯಲ್ಲಿ ಎಲ್ಲಿ ನೀರು ಬಿದ್ದರೂ ಅಂತಿಮವಾಗಿ ಅರ್ಕಾವತಿಗೆ ಸೇರಿ ತಮಿಳುನಾಡಿಗೆ ಹೋಗುತ್ತದೆ. ಆದರೆ, ಈ ರೀತಿ ಹೋಗತಕ್ಕಂಥ ನೀರು ಭೂಮಿಯಲ್ಲಿ ಇಂಗಿರುವುದನ್ನು ನೋಡಿದರೆ ಸಾರ್ಥಕವೆನಿಸುತ್ತದೆ. ಮಳೆ ನಿರಂತರವಾಗಿ ಬರಬಹುದು ಎಂದು

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಮುಂದಿನ ದಿನಗಳಲ್ಲಿ ಭವಿಷ್ಯವನ್ನು ಕಾಣಬಹುದೇನೋ, ನಮ್ಮ ಬೋರ್‌ವೆಲ್‌ಗಳು ಅಥವಾ ಕೆರೆ, ಕಟ್ಟೆ, ಕುಂಟೆಗಳಲ್ಲಿ ನೀರು ಹರಿಯಬಹುದೇನೋ, ಅಭಿವೃದ್ಧಿಯಾಗಬಹುದೆಂಬ ಒಂದು ಆಶಾದಾಯಕವಾದಂತಹ ಒಂದು ಜೀವನವನ್ನು ಕಟ್ಟಿಕೊಳ್ಳುವುದಕ್ಕೆ ಇವತ್ತು check dam ಗಳು ತುಂಬಿರತಕ್ಕಂಥದ್ದಾಗಿದೆ. ಆದ್ದರಿಂದ ಈ check dam ಗಳನ್ನು ನಿರ್ಮಾಣ ಮಾಡತಕ್ಕಂಥದ್ದು ಅಗತ್ಯವಿದೆ, ಕೃಷಿ ಇಲಾಖೆಯವರು ಕೂಡಾ ಕೃಷಿಹೊಂಡ ಇನ್ನಿತರ ಹಲವಾರು ಕಾರ್ಯಕ್ರಮಗಳನ್ನು ಮಾಡುತ್ತಿರುವುದಕ್ಕೆ ಅತಿ ಹೆಚ್ಚು ಒತ್ತನ್ನು ನೀಡಬೇಕಾದಂತಹ ಸಂದರ್ಭ ಇದೆ. ಅದರಲ್ಲಿ ಸಣ್ಣ ಪುಟ್ಟ ಅಡ್ಡಿ ಆತಂಕಗಳನ್ನು ಎದುರಿಸುತ್ತಾರೆ. ನರೇಗಾದಲ್ಲಿ ಕೆಲಸ ಮಾಡುವುದಕ್ಕೆ ಹೋದರೆ ಅಧಿಕಾರಿಗಳು Ombudsman ಗೆ ಬರೆದು ಬಿಡುತ್ತಾರೆ. ಆಧಾರ್ ಕಾರ್ಡ್ ಲಿಂಕ್ ಆಗಿದೆ. ಅವರ ಹೆಸರಿಗೆ ದುಡ್ಡು ಹೋಗಿದೆ ಎಂದು ನಮ್ಮ ಅಧಿಕಾರಿಗಳು ಮೊದಲನೆಯದಾಗಿ ಇದನ್ನು ಮಾಡುವುದಕ್ಕೆ ಬಿಡುವುದಿಲ್ಲ. ಆದ್ದರಿಂದ ಸರ್ಕಾರ ಇದನ್ನು ಮಾಡುವುದಕ್ಕೆ ಏನು ಸಮಸ್ಯೆಯಿಲ್ಲ ಎನ್ನತಕ್ಕಂಥದ್ದನ್ನು ಜನಸಾಮಾನ್ಯರಿಗೆ ಹೆಚ್ಚು ತಿಳುವಳಿಕೆಯನ್ನು ಕೊಡಬೇಕು. ಅದಕ್ಕೇನು ಸರ್ಕಾರ ವಿಶೇಷವಾದ ಅನುದಾನವನ್ನು ತರಬೇಕಾದಂತಹ ಅವಶ್ಯಕತೆ ಇಲ್ಲ. ನರೇಗಾ ಯೋಜನೆಯನ್ನು ಸದ್ಬಳಕೆ ಮಾಡಿಕೊಂಡರೆ ಸಾಕು. ಮುಂದಿನ ದಿನಗಳನ್ನು ಸದ್ಬಳಕೆ ಮಾಡಿಕೊಂಡರೆ ಸಾಕು ಈ check dam ಗಳನ್ನು ನಿರ್ಮಾಣ ಮಾಡುವುದಕ್ಕೆ ಸಾಕಷ್ಟು ಸಾಧ್ಯವಾಗುತ್ತದೆ. ಅದು ಮುಂದಿನ ದಿನಗಳಲ್ಲಿ ಬರದಂತಹ ಪರಿಸ್ಥಿತಿಗಳು ಬಂದಾಗ ಅದನ್ನು ಎದುರಿಸುವುದಕ್ಕೆ ನಮಗೆ ಸಾಕಷ್ಟು ಸಹಾಯ ಸಿಗುತ್ತದೆಂದು ನಾನು ಹೇಳುತ್ತೇನೆ. ಕಂದಾಯ ಸಚಿವರು ಬಹಳ ಉತ್ತಮವಾಗಿ ಈ ಕಾರ್ಯವನ್ನು ನಿರ್ವಹಣೆ ಮಾಡಿದ್ದಾರೆ. ಬರಗಾಲ ಬಂದಂತಹ ಸಂದರ್ಭದಲ್ಲಿ ಕಂದಾಯ ಸಚಿವರಿಗೆ ಇಷ್ಟು ವಯಸ್ಸಾದರೂ ಕೂಡ, ಅವರು ಓಡಾಡುವಂತಹ ವೇಗ ನೋಡಿ ನಮಗೆ ಸ್ಫೂರ್ತಿ ಬಂದಿದೆ. ಆದರೆ, ಈಗ ಕುಂಟೆಗೆ 68 ರೂಪಾಯಿಯನ್ನು ಕೊಡುತ್ತಿದ್ದಾರೆ. ಅದು ಯಾವುದಕ್ಕೂ ಸಾಲದು. ಅದರ ಬಗ್ಗೆ ದಯಮಾಡಿ ಮಾನ್ಯ ಕಂದಾಯ ಸಚಿವರು ಗಟ್ಟಿ ಧ್ವನಿಯಲ್ಲಿ ಮಾತನಾಡಿ ಹಣವನ್ನು ಹೆಚ್ಚಿಸಬೇಕು ಮತ್ತು ರಾಮನಗರ ಜಿಲ್ಲೆಯಲ್ಲಿ ಒಂಭತ್ತು ಸಾವಿರ ಜನಕ್ಕೆ ಹಣ ಬರಬೇಕಾಗಿದೆ. ಕೈ ಬಿಟ್ಟು ಹೋಗಿದೆ ಎಂದು ಈಗಾಗಲೇ ಪಟ್ಟಿಯನ್ನು ಕೊಟ್ಟಿದ್ದಾರೆ. ಒಂಭತ್ತು ಸಾವಿರ ಜನರಿಗೆ ಮತ್ತಷ್ಟು ಹಣವನ್ನು ಪಾವತಿ ಮಾಡಬೇಕು. ವಿಶೇಷವಾಗಿ ತೋಟಗಾರಿಕೆ ಬೆಳೆ ಏನಾಗಿದೆಯೆಂದರೆ, ನಾನು ಮೊದಲೇ ಹೇಳಿದ ಹಾಗೆ ವಿಶೇಷವಾಗಿ ತೆಂಗು, ಮಾವು, ಅಡಿಕೆ ಈ ಬೆಳೆಗಳು ಇವತ್ತು ಸಂಪೂರ್ಣವಾಗಿ ನೆಲ ಕಚ್ಚಿದೆ. ತೆಂಗು, ಮಾವು, ಅಡಿಕೆಗಳಿಗೆ ಏನಾದರೂ ಪುನಶ್ಚೇತನ ಮಾಡಲಿಕ್ಕೆ, ಜೊತೆಗೆ ಆ ರೈತನಿಗೆ ಈ ಬೆಳೆಯಿಂದ ಆಗಿರತಕ್ಕಂಥ ನಷ್ಟಕ್ಕೆ... ಏಕೆಂದರೆ, ತೆಂಗನ್ನು ಬೆಳೆಯತಕ್ಕಂಥ ಜಾಗಕ್ಕೆ ನಮ್ಮ ಮಾನ್ಯ ಟಿ.ಬಿ.ಜಯಚಂದ್ರರವರ ಅಧ್ಯಕ್ಷತೆಯ ಸಚಿವ ಸಂಪುಟದ ಉಪ ಸಮಿತಿ ಬಂದಿತ್ತು. ನಾವು ಮಾನ್ಯ ಸಚಿವರನ್ನು ಕರೆದುಕೊಂಡು ಹೋಗಿ ತೋರಿಸಿದೆವು. ಕರೆದುಕೊಂಡು ಹೋಗಿ ತೋರಿಸಿದಂತಹ ಸಂದರ್ಭದಲ್ಲಿ ಮಳೆಯ ಅಭಾವದಿಂದ ಹುಳುಗಳು ಸಂಪೂರ್ಣ ಗರಿಯನ್ನು ಮೇಯ್ದಿತ್ತು. ಇಡೀ ತೆಂಗಿನ ಮರ ನೋಡಿದರೆ ಸಂಪೂರ್ಣವಾಗಿ

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಬೋಡಾಗಿತ್ತು. ಹಸಿರು ಎಂಬ ಅಂಶವು ಎಲ್ಲಿಯೂ ಇಲ್ಲ. ಇದಕ್ಕೇನಾದರೂ ಔಷಧಿಯನ್ನು ಸಿಂಪಡಿಸಿ ಎಂದರೆ, ಔಷಧಿಯನ್ನು ಸಿಂಪಡಿಸುವುದಕ್ಕೆ ಸಾಧ್ಯವೇ ಇಲ್ಲವೆಂದು ಹೇಳುತ್ತಾರೆ. ಏಕೆಂದರೆ ಇದಕ್ಕೆ ಸಾಕಷ್ಟು ಧಾರಾಕಾರವಾದ ಮಳೆಯಾಗಬೇಕು. ಮಳೆಯಾದಂತಹ ಸಂದರ್ಭದಲ್ಲಿ ನೀರಿನ ತೇವದ ಅಂಶಕ್ಕೆ ಹುಳು ಇಟ್ಟಿರತಕ್ಕಂಥ ಮೊಟ್ಟೆ ಸಾಯುತ್ತದೆ. ನೀರಿಗೂ ಆ ಮೊಟ್ಟೆಗೂ ಅನುಸರಣೆಯಾಗದೇ ಇರುವಾಗ ಮಾತ್ರ ಈ ರೋಗ ನಿಯಂತ್ರಣಕ್ಕೆ ಬರಲಿಕ್ಕೆ ಸಾಧ್ಯವಾಗುತ್ತದೆಂದು ಹೇಳಿದರು. ಸಂಪೂರ್ಣವಾಗಿ ಈ ಬೆಳೆ ನಮಗೆ ವಿಫಲವಾಗಿರುತ್ತದೆ. ಎಲ್ಲೋ ಒಂದು ಕಡೆ ಅದು ಮುಂದಿನ ದಿನಗಳಲ್ಲಿ ಮಳೆಯಾದರೆ ಪುನಶ್ಚೇತನಗೊಳ್ಳತಕ್ಕಂಥ ಸಾಧ್ಯತೆ ಇದೆ. ಇದಕ್ಕೆ ಸಂಬಂಧಿಸಿದಂತೆ ಸರ್ಕಾರ ರೈತರ ನೆರವಿಗೆ ಆದಷ್ಟು ಬೇಗ ಬರಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇಷ್ಟು ಕಾರ್ಯಕ್ರಮಗಳನ್ನು ಮಾಡಿಕೊಡುತ್ತಾರೆ. ಉತ್ತಮವಾದಂತಹ ಕೆಲಸ ಸರ್ಕಾರ ನಿರ್ವಹಣೆ ಮಾಡಿರುವುದರಿಂದ ಬರಗಾಲದ ಪರಿಸ್ಥಿತಿಯಿಂದ ರೈತರು ಮಾಡಿರತಕ್ಕಂಥ ಸಾಲವನ್ನು ಮನ್ನಾ ಮಾಡುವ ಬಗ್ಗೆ ಮಾತನಾಡದೇ ಹೋದರೆ ನಾನೊಬ್ಬ ಡಿ.ಸಿ.ಸಿ. ಬ್ಯಾಂಕಿನ ಅಧ್ಯಕ್ಷನಾಗಿ ಏತಕ್ಕೆ ಮಾತನಾಡಲಿಲ್ಲ ಎನ್ನುವ ಪರಿಸ್ಥಿತಿ ಬರುತ್ತದೆ. ಸಾಲ ಮನ್ನಾದ ಬಗ್ಗೆ ಎಲ್ಲರೂ ಮಾತನಾಡುತ್ತಾರೆ. ನಾವು ಮುಖ್ಯಮಂತ್ರಿಗಳ ಹತ್ತಿರ ಸಾಕಷ್ಟು ಸಲ ಇದರ ಬಗ್ಗೆ ಪ್ರಸ್ತಾಪ ಮಾಡಿದ್ದೇವೆ. ಈಗಾಗಲೇ ಶೂನ್ಯ ಬಡ್ಡಿ ದರದಲ್ಲಿ ರೈತರಿಗೆ 3.00 ಲಕ್ಷದವರೆಗೂ ಸಾಲವನ್ನು ವಿತರಣೆ ಮಾಡುತ್ತಿದ್ದಾರೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಅದರ ಬಗ್ಗೆ ಮಾತನಾಡಬೇಡಿ. ರೈತರಿಗೆ ಪರಿಹಾರ ಸೂಚಿಸತಕ್ಕಂಥ ವಿಚಾರದಲ್ಲಿ ಸರ್ಕಾರ ಏನು ಮಾಡಿದೆ.

**ಶ್ರೀ ಎಸ್.ರವಿ:-** ಮಾನ್ಯ ಸಭಾಪತಿಯವರೆ, ರೈತರಿಗೆ ಪರಿಹಾರ ಕೊಡಿಸತಕ್ಕಂಥ ವಿಚಾರದಲ್ಲಿ, ನಾನು ಸಹ ಒಬ್ಬ ರೈತರ ಪ್ರತಿನಿಧಿಯಾಗಿ ಅದರ ಬಗ್ಗೆ ನಮ್ಮ ಅಗ್ರಹ ಇದ್ದೇ ಇದೆ. ಆದರೆ ವಾಸ್ತವಾಂಶವನ್ನು ಮಾತನಾಡಬೇಕಲ್ಲವೇ? ವಾಸ್ತವಾಂಶ ಏನಾಗಿದೆ ಎನ್ನತಕ್ಕಂಥದ್ದನ್ನು ಮಾತನಾಡಬೇಕಲ್ಲವೇ? ರಾಜ್ಯ ಸರ್ಕಾರ ನೀಡಿರತಕ್ಕಂಥ ಒಟ್ಟು ಕೃಷಿ ಸಾಲದಲ್ಲಿ ಶೇಕಡಾವಾರು ನಮ್ಮದು ಇರತಕ್ಕಂಥದ್ದು 21%. 21,000/- ರೂಪಾಯಿಗಳೆಂದರೆ ಹನ್ನೊಂದು ಸಾವಿರ ಕೋಟಿ ರೂಪಾಯಿಗಳು ಡಿ.ಸಿ.ಸಿ. ಬ್ಯಾಂಕಿನ ಮುಖೇನ, ಸಹಕಾರ ಕ್ಷೇತ್ರದ ಮುಖೇನ ರೈತರಿಗೆ ನೀಡಿದ್ದೇವೆ.

(ಮುಂದು) . . .

(695)13-06-2017 5-10 ಬಿಎಸ್‌ಡಿ-ಎಕೆ

ಶ್ರೀ ಎಸ್. ರವಿ (ಮುಂದು)

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಇನ್ನು commercial bank, nationalized bank ಗಳ ಮುಖಾಂತರ ಉಳಿದ ಅಂದರೆ ರೂ.45 ಸಾವಿರ ಕೋಟಿಗಳಲ್ಲಿ ರೂ.11 ಸಾವಿರ ಕೋಟಿಗಳನ್ನು ಹೊರತುಪಡಿಸಿ, ಉಳಿದ ರೂ.33ರಿಂದ 35 ಸಾವಿರ ಕೋಟಿ ಅಂದರೂ ಹತ್ತಿರ ರೂ.40 ಸಾವಿರ ಕೋಟಿಗಳ ನೀಡಿದ್ದಾರೆ. ಸಾಲ ಮನ್ನಾ ಮಾಡಲು ನಾನು ರೆಡಿ ಇದ್ದೇನೆ. ಆದರೆ ಅದನ್ನು ಮಾಡಿಬಿಡಿ, ಉಳಿದಿದ್ದನ್ನು ನೋಡಿಕೊಳ್ಳೋಣ ಎಂದು ಹೇಳುವುದು ಉತ್ತರ ಅಲ್ಲ. ಒಂದು ಕಣ್ಣಿಗೆ ಬೆಣ್ಣೆ ಮತ್ತೊಂದು ಕಣ್ಣಿಗೆ ಸುಣ್ಣ ಎಂದರೆ ಆಗುತ್ತದೆ. ರೈತರ ವಿಷಯದಲ್ಲಿ ಸಾಲ ಮನ್ನಾ ಮಾಡಿದರೆ ಎಲ್ಲರಿಗೂ ಸಾಲ ಮನ್ನಾ ಮಾಡಬೇಕು. ಹಾಗಾದರೆ nationalized bank ಗಳಲ್ಲಿ ಸಾಲ ತೆಗೆದುಕೊಳ್ಳುವುದು ಅಪರಾಧವೇ? Commercial bank ಗಳಲ್ಲಿ ರೈತರು ಸಾಲ ತೆಗೆದುಕೊಳ್ಳುವುದು ಅಪರಾಧವೇ? ಎಲ್ಲರೂ society, VSSN ಮುಖಾಂತರವೇ ಸಾಲ ತೆಗೆದುಕೊಳ್ಳಬೇಕೆ? ಅಲ್ಲಿ ಕೊಟ್ಟಿರುವುದರಿಂದ ತೆಗೆದುಕೊಂಡಿದ್ದಾರೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಅವರು ಹೇಳುವುದನ್ನು ನಾನು ಒಪ್ಪಿಕೊಳ್ಳುತ್ತಿದ್ದೇನೆ. Overall ರೂ.52,500 ಕೋಟಿಗಳ ಸಾಲ ಇದ್ದು, ರೂ.12,500 ಕೋಟಿ ರಾಜ್ಯದ ಪಾಲು ಬರುತ್ತದೆ. ರೂ.40,000 ಕೋಟಿ ಕೇಂದ್ರ ಸರ್ಕಾರ ಕೊಡಬೇಕು. ಅವರು ಕೊಟ್ಟರೆ ನಾವು ಕೊಡುತ್ತೇವೆ ಎಂದು ಇವರು ಹೇಳುವುದು, ಇವರು ಕೊಟ್ಟರೆ ಅವರು ಕೊಡುತ್ತಾರೆ ಎಂದು ಹೇಳುವ ಬದಲು ನಮ್ಮ ರಾಜ್ಯ ಸರ್ಕಾರದ ಕಡೆಯಿಂದ ಏನಾಗುತ್ತದೋ ಅದನ್ನು ಕೊಡಲಿ. ನಂತರ ಅವರನ್ನು ಪರೀಕ್ಷೆ ಮಾಡೋಣ. ಆಗ ಅವರ ಬಣ್ಣವೂ ಬಯಲಾಗಲಿ. ಕೇಂದ್ರ ಸರ್ಕಾರದವರು ಎಷ್ಟೆಲ್ಲಾ ಮಾತನಾಡಿದರೂ ಇವರು ಕೊಡುವುದನ್ನು ಕೊಟ್ಟುಬಿಡಲಿ. ರೂ.12,500 ಕೋಟಿ ಕೊಡಲಿ, ಕೇಂದ್ರ ಸರ್ಕಾರ ಕೊಡದಿದ್ದರೆ ಅವರ ಹಣೆಬರಹ ಬೇರೆ ಇರುತ್ತದೆ. ಇವರು ರೈತರಿಗೆ ಏನಾದರೂ ಮಾಡಬೇಕೆಂದರೆ ಮಾಡಲಿ. ಮಾನ್ಯ ಸದಸ್ಯರು ಹೇಳುವುದೆಲ್ಲವನ್ನು ಒಪ್ಪಿಕೊಳ್ಳುತ್ತೇನೆ. ಅವರು DCC Bank ನ Chairman ಆಗಿದ್ದಾರೆ. ಅವರಿಗೆ ಕಷ್ಟವೆಲ್ಲವೂ ಗೊತ್ತು ಎಂಬುದನ್ನು ಒಪ್ಪುತ್ತೇನೆ. ಆದರೆ ಪರಿಸ್ಥಿತಿ ಈ ರೀತಿ ಬಂದಿದೆಯಲ್ಲ. ಇಂತಹ ಪರಿಸ್ಥಿತಿಯಲ್ಲಿ ರಾಜ್ಯ ಸರ್ಕಾರ ಒಂದು ನಿಲುವು ತೆಗೆದುಕೊಂಡರೆ ಕೇಂದ್ರ ಸರ್ಕಾರಕ್ಕೆ ನಾಚಿಕೆ ಏನಾದರೂ ಬಂದು ಅವರು ಕೊಡುವುದಾದರೆ ಕೊಡಲಿ. ಆದ್ದರಿಂದ ಇವರು ಮಾಡಿಬಿಡಲಿ. ಅವರು ಕೊಟ್ಟರೆ ನಾವು ಕೊಡುತ್ತೇವೆ ಎಂದರೆ ಜನ ಏನನ್ನುತ್ತಾರೆ? ಆದ್ದರಿಂದ ರಾಜ್ಯ ಸರ್ಕಾರ ಕೊಡುವುದನ್ನು ಕೊಟ್ಟುಬಿಟ್ಟರೆ ಒಳ್ಳೆಯದು.

**ಶ್ರೀ ಎಸ್. ರವಿ:-** ಮಾನ್ಯ ಹಿರಿಯ ಸದಸ್ಯರಾದ ಶ್ರೀಮಾನ್ ಹೊರಟ್ಟಿಯವರ ಸಲಹೆ ಸೂಕ್ತವಾಗಿದ್ದು, ಅದರ ಬಗ್ಗೆ ಮಾತನಾಡಿದ್ದೇನೆ. ಆದರೆ ಒಬ್ಬರಿಗೆ ಕೊಟ್ಟು ಒಬ್ಬರಿಗೆ ಕೊಡದೇ ಇರುವುದು ಸರಿಯಲ್ಲ. ನಾವು ಕೊಡುವುದು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಕೊಟ್ಟು ಬಿಡಿ ಎನ್ನುವುದಾದರೆ ಉಳಿದ ರೈತರು ಸುಮ್ಮನಿರುತ್ತಾರೆಯೇ? Nationalized bank, commercial bank ನಿಂದ ತೆಗೆದುಕೊಂಡಿರುವವರು ಸುಮ್ಮನಿರುತ್ತಾರೆಯೇ?

**ಶ್ರೀ ವಿ.ಎಸ್. ಉಗ್ರಪ್ಪ:–** ಮಾನ್ಯ ಸಭಾಪತಿಯವರೇ,

**ಉಪ ಸಭಾಪತಿಯವರು:–** ಮಾನ್ಯ ಉಗ್ರಪ್ಪನವರೇ, ದಯವಿಟ್ಟು ಕುಳಿತುಕೊಳ್ಳಿ, ಬೇಡ.

**ಶ್ರೀ ಕೆ.ಟಿ. ಶ್ರೀಕಂಠೇಗೌಡ:–** ಎಲ್ಲರೂ ಶಿಫಾರಸ್ಸು ಮಾಡಿ ಅವರನ್ನು ಮಂತ್ರಿ ಮಾಡಿಸೋಣ. ಆಗ ಮುಂದಿನ ಸಾಲಿಗೆ ಬಂದು ಉತ್ತರ ಕೊಡುತ್ತಾರೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ರೈತರ ಸಮಸ್ಯೆ ಇದೆ, ಅವರು ಏಳುವುದು ಹಾಗೆ ಆದರೂ ಬೇರೆ ಏನೋ ಹೇಳುತ್ತಾರೆ, ಹೇಳಲಿ ಬಿಡಿ.

**ಶ್ರೀ ವಿ.ಎಸ್. ಉಗ್ರಪ್ಪ (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೆ, ಮಾನ್ಯ ಹೊರಟ್ಟಿಯವರು ರಾಜ್ಯ ಸರ್ಕಾರ ಜವಾಬ್ದಾರಿಯನ್ನು ಪೂರೈಸಲಿ ಎಂದು ಹೇಳಿರುವುದು ನಿಜ. ಕೇಂದ್ರ ಸರ್ಕಾರದ ಮಾನ್ಯ ಜೇಟ್ಲಿಯವರು ಈಗಾಗಲೇ ಯಾವುದೇ ಕಾರಣಕ್ಕೂ ಸಾಲ ಮನ್ನಾ ಮಾಡುವುದಿಲ್ಲ ಎಂದು ಸ್ಪಷ್ಟವಾಗಿ ಹೇಳಿದ್ದಾರೆ. Reserve Bank of India ನ ಗೌರ್ನರ್‌ರವರು ಸಹ ಸಾಲ ಮನ್ನಾಗಳನ್ನು ತರಲೇಬೇಡಿ ಎಂದು ಹೇಳಿದ್ದಾರೆ. ನಾವು ಎಲ್ಲಿದ್ದೇವೆ ಎಂದು ನನಗೆ ಈಗಲೂ ಅರ್ಥವಾಗುತ್ತಿಲ್ಲ. ನಾನು ಇದನ್ನು ಏಕೆ ಹೇಳುತ್ತಿದ್ದೇನೆಂದರೆ, ನಾವು ಮನಸೋ ಇಚ್ಛೆ ಹೇಳಿಕೆಗಳನ್ನು ಕೊಡುವುದು ಸರಿಯೋ ಅಥವಾ ನಮ್ಮ ದೇಶದ ಪಾರ್ಲಿಮೆಂಟ್ ಅಥವಾ ನಮ್ಮ ರಾಜ್ಯದ legislature ರೂಪಿಸಿರುವ ನಿಯಮಾವಳಿಗಳಡಿಯಲ್ಲಿ ತೀರ್ಮಾನವಾಗಬೇಕೋ? ನನಗೆ ಅನಿಸಿದಂತೆ ಈ ರೀತಿಯ ಪರಿಸ್ಥಿತಿಗಳನ್ನು ರಾಷ್ಟ್ರೀಯ ಆಪತ್ತು ಅಥವಾ ರಾಷ್ಟ್ರೀಯ calamity ಗಳೆಂದು consider ಮಾಡಿ ನಮ್ಮ ದೇಶದ economy ಯನ್ನು ರೈತರು ಮತ್ತು ಗ್ರಾಮೀಣ ಜನತೆಯ ದೃಷ್ಟಿಯಿಂದ ಹೇಗೆ ಮಾಡಬೇಕೆಂದು ಚಿಂತನೆ ಮಾಡದಿದ್ದರೆ ಹೇಗೆ? State Government ನ limited resources ನಲ್ಲಿ, ಇವತ್ತು ರೈತರು ಕಷ್ಟದಲ್ಲಿರುವುದು ನಿಜ, ಅದಕ್ಕೆ ಯಾವುದು ಮಾಡಬೇಕು ಮತ್ತು ಯಾವುದನ್ನು ಮಾಡಬಾರದು ಎನ್ನುವುದು ಬೇರೆ ವಿಚಾರ. ಆದರೆ ಶಾಶ್ವತ ಪರಿಹಾರ ರೂಪಿಸಲು ನಮ್ಮಂತಹ ವಿಧಾನ ಪರಿಷತ್ತು ಅಥವಾ ವಿಧಾನ ಸಭೆಗಳು ಹೆಚ್ಚಿನ ಬೆಳಕನ್ನು ಚೆಲ್ಲುವ national policy evolve ಮಾಡುವ ದಿಕ್ಕಿನಲ್ಲಿ ಪ್ರಯತ್ನ ಸಾಗಬೇಕಾಗುತ್ತದೆ. ಆಗ ಮಾತ್ರ ಶಾಶ್ವತ ಪರಿಹಾರ ಕಾಣಲು ಸಾಧ್ಯವಾಗುತ್ತದೆಂದು ಹೇಳಿ, ಆ ದಿಕ್ಕಿನಲ್ಲಿ ಗೆಳೆಯರಾದ ಮಾನ್ಯ ಹೊರಟ್ಟಿಯವರು, ಮಾನ್ಯ ಶ್ರೀಕಂಠೇಗೌಡರು ಅಥವಾ ಮಾನ್ಯ ರವಿಯವರು ಹೆಚ್ಚು ಬೆಳಕನ್ನು ಚೆಲ್ಲಲ್ಲಿ ಎಂದು ಹೇಳುವುದಕ್ಕೆ ಬಯಸುತ್ತೇನೆ.

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಎಸ್. ರವಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಯವರು ಇದರ ಬಗ್ಗೆ ಬಜೆಟ್‌ನಲ್ಲಿ ಪ್ರಾವಿಜನ್ ಮಾಡಿಕೊಂಡಿಲ್ಲ ಎಂದು ಹೇಳಿದ್ದಾರೆ. ಅಷ್ಟು ಹಣವನ್ನು ಭರಿಸಲು ಯಾವ source ಎಂಬ ಬಗ್ಗೆ ಸಲಹೆ ಸೂಚನೆ ಕೊಡಿ, ಸುಮ್ಮನೆ ಸಾಲ ಮನ್ನಾ ಮಾಡಿ ಎಂದು ಹೇಳುವುದಲ್ಲ, ಸಾಲ ಮನ್ನಾ ಮಾಡಬೇಕೆಂದರೆ ಬಜೆಟ್‌ನಲ್ಲ ಪ್ರಾವಿಜನ್ ಮಾಡಿಕೊಂಡಿದ್ದಾಗ ಆಲೋಚನೆ ಮಾಡಬಹುದಾಗಿತ್ತು. ಅಂದರೆ ಸಮಸ್ಯೆ ಬಗ್ಗೆ ಇಬ್ಬರೂ ಸೇರಿ ಏನಾದರೂ ಪರಿಹಾರ ಮಾಡಬಹುದೇ ಹೊರತು, ದಿಢೀರನೇ ರಾಜ್ಯ ಸರ್ಕಾರ ಏಕಾಏಕಿ ಸಾಲ ಮನ್ನಾ ಮಾಡುವುದು ಸೂಕ್ತವಲ್ಲ. ಈ ಸಂದರ್ಭದಲ್ಲಿ ಸರ್ಕಾರವನ್ನು ಅಭಿನಂದಿಸಬಯಸುತ್ತೇನೆ. ನಾನು ಅನೇಕ ಸರ್ಕಾರಗಳು ಮತ್ತು ಬರಗಾಲಗಳನ್ನು ನೋಡಿದ್ದೇನೆ. ಮಾನ್ಯ ಹೆಗಡೆಯವರು, ಮಾನ್ಯ ಎಸ್.ಎಂ. ಕೃಷ್ಣಾರವರು ಸೇರಿದಂತೆ ಹಲವಾರು ಮುಖ್ಯಮಂತ್ರಿಗಳ ಆಳ್ವಿಕೆಯಲ್ಲಿ ಬರವನ್ನು ನೋಡಿದ್ದೇವೆ. ಬರ ಬಂದಾಗ ರಾಜ್ಯದಲ್ಲಿನ ವಿದ್ಯುತ್ ಉತ್ಪಾದನೆ ಮಾಡುವ ಯಾವ ಜಲಾಶಯಗಳಲ್ಲಿಯೂ ನೀರು ಇರುವುದಿಲ್ಲ. ಮಳೆಯಾಗದೇ ಶರಾವತಿಯಾದಿಯಾಗಿ, ಸೂಪ, ಕಾಳಿ ಸೇರಿದಂತೆ ಎಲ್ಲಾ ಜಲಾಶಯಗಳಲ್ಲಿ ನೀರಿಲ್ಲದ ಸಂದರ್ಭದಲ್ಲಿ hydro-electricity ಉತ್ಪಾದನೆಯಾಗಲಿಲ್ಲ. ಆದರೂ ಈ ಸಾರಿ ಯಾರೂ ಶಾಪ ಹಾಕಲಿಲ್ಲ. ಸರ್ಕಾರದ ವಿರುದ್ಧ ಎಲ್ಲಿಯೂ ಚಳುವಳಿಯಾಗಲಿಲ್ಲ. ಪರೀಕ್ಷೆ ಬರೆಯುವ ಮಕ್ಕಳಿಗೆ ತೊಂದರೆಯಾಗಲಿಲ್ಲ. ಅಂದರೆ ವಿದ್ಯುತ್ ಸರಬರಾಜನ್ನು ಸಮರ್ಪಕವಾಗಿ ನಿರ್ವಹಣೆ ಮಾಡಿದರು. ಇಂತಹ ತೀವ್ರತರ ಬರಗಾಲದಲ್ಲಿ ವಿದ್ಯುತ್ ಅನ್ನು ಸಮರ್ಪಕವಾಗಿ ಪೂರೈಸಿರುವ ಹೆಗ್ಗಳಿಕೆ ಸರ್ಕಾರದ ಮೇಲಿದೆ.

ಇನ್ನು ಶೂನ್ಯ ಬಡ್ಡಿ ದರದಲ್ಲಿ ರೈತರಿಗೆ KCC ಅಲ್ಪಾವಧಿ ಸಾಲವನ್ನು ಕೊಡುತ್ತಿದ್ದು, ಅಲ್ಲಿ ಕೊಡುವ 7% ಹಣವನ್ನು ಸರ್ಕಾರ ಡಿಸಿಸಿ ಬ್ಯಾಂಕ್‌ಗಳಿಗೆ ಭರಿಸಿಕೊಡುತ್ತಿದ್ದು, ಉಳಿದ 3% ಹಣವನ್ನು ಸೊಸೈಟಿಗಳಿಗೆ ಭರಿಸಿಕೊಡಬೇಕು. ಈ 3% ಹಣ VSSN ಗಳಿಗೆ ಹೋಗಬೇಕು. ಪ್ರಾಮಾಣಿಕವಾಗಿ ಅವರು ಹಣವನ್ನು ಪಾವತಿ ಮಾಡಿದ ಸಂದರ್ಭದಲ್ಲಿ ಮತ್ತು ಆ ಹಣದಲ್ಲಿ 0.50% ಡಿಸಿಸಿ ಬ್ಯಾಂಕ್‌ಗೆ ಮತ್ತು ಉಳಿದ 2.5% VSSN ಗೆ ಹೋಗಬೇಕು. ಆ VSSN ನಲ್ಲಿ ಸಂಬಳ, ಸಾರಿಗೆ, ವಿದ್ಯುತ್ ಇತ್ಯಾದಿ ಎಲ್ಲಾ ನಿರ್ವಹಣೆಗಳನ್ನು 2.5% ಹಣದಲ್ಲಿಯೇ ಮಾಡಬೇಕು. ಸರ್ಕಾರವು 2 ವರ್ಷಗಳಿಂದ ಅವರಿಗೆ ಹಣ ಪಾವತಿ ಮಾಡಿಲ್ಲ. ಇದರ ಹಿನ್ನೆಲೆಯಲ್ಲಿ ರಾಜ್ಯದ ಉದ್ದಗಲಕ್ಕೂ ಇರುವ VSSN ಗಳು ಬಹಳ ಸಂಕಷ್ಟದಲ್ಲಿವೆ. ದಿಢೀರ್ ಸರ್ಕಾರ ಆ ಹಣವನ್ನು ವ್ಯವಸಾಯ ಸೇವಾ ಸಹಕಾರ ಸಂಘಗಳಿಗೆ ಬಿಡುಗಡೆ ಮಾಡಿ ಪಾವತಿ ಮಾಡಬೇಕೆಂದು ವಿನಂತಿಸುತ್ತಾ, ಸಾಕಷ್ಟು ವಿಚಾರಗಳಿದ್ದರೂ ಕೊಟ್ಟ ಅವಕಾಶವನ್ನು ಬಳಸಿಕೊಂಡು ಮಾತನಾಡಲು ಪ್ರಯತ್ನಿಸಿದ್ದೇನೆ, ಇದರಿಂದ ತಮಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ.

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಅವಕಾಶಕ್ಕಾಗಿ ತಮಗೆ ಧನ್ಯವಾದಗಳನ್ನು ಅರ್ಪಿಸುತ್ತಾ, ಭೀಕರ ಬರಗಾಲದ ಚರ್ಚೆ ನಡೆಯುವ ಸಂದರ್ಭದಲ್ಲಿ ಹೆಚ್ಚು ವಿಷಯಗಳನ್ನು ಪ್ರಸ್ತಾಪ ಮಾಡದೇ ಎಲ್ಲಾ ಮಾನ್ಯ ಸದಸ್ಯರು ಎಲ್ಲಾ ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಇವತ್ತು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಮಾನ್ಯ ಕಂದಾಯ ಸಚಿವರು ಸದನದಲ್ಲಿದ್ದು, ಬಹಳ ಹಿರಿಯರು ಹಾಗೂ ಜನರ ಭಾವನೆಗಳಿಗೆ ಸ್ಪಂದಿಸುವ ಹಿರಿಯ ಸಚಿವರಾಗಿದ್ದಾರೆ. ಅವರ ವಿಚಾರಕ್ಕೆ ಸಂಬಂಧಪಟ್ಟಂತೆ ಬೆಳಗಾವಿ ಮತ್ತು ರಾಜ್ಯದ ಒಂದೆರಡು ವಿಷಯಗಳಿಗೆ ಸಂಬಂಧಪಟ್ಟಂತೆ ಗಮನಕ್ಕೆ ತರಬಯಸುತ್ತೇನೆ.

ವಿಶೇಷವಾಗಿ ಬೆಳಗಾವಿಯನ್ನು ಕರ್ನಾಟಕದ ಪಂಜಾಬ್ ಎಂದು ಕರೆಯಲ್ಪಡುತ್ತಿದ್ದು, ಕೃಷ್ಣಾ, ವೇದ್‌ಗಂಗಾ, ದೂದ್‌ಗಂಗಾ, ಮಲ್ಲಪ್ರಭಾ, ಘಟಪ್ರಭಾ ಹುಟ್ಟಿರುವ ಸಂಪತ್ಭರಿತವಾದ ಬೆಳಗಾವಿ ಜಿಲ್ಲೆ ಸಹಿತ ಬರಗಾಲಕ್ಕೆ ತುತ್ತಾಗಿದೆ. ಕೃಷ್ಣೆಗೆ ಸಹ ಈ ವರ್ಷ ಬರ ಬಂದಿದೆ. ಮಹಾರಾಷ್ಟ್ರ ರಾಜ್ಯದ ಮುಖ್ಯಮಂತ್ರಿಗಳಾದ ದೇವೇಂದ್ರ ಫಡ್ನವೀಸ್ ಅವರನ್ನು ಬೆಳಗಾವಿ ಜಿಲ್ಲೆಯ ಶಾಸಕರ ನಿಯೋಗ ಮಾರ್ಚ್ ಮತ್ತು ಏಪ್ರಿಲ್ ತಿಂಗಳಲ್ಲಿ ಎರಡು ಬಾರಿ ಭೇಟಿಯಾಗಿ ವಿನಂತಿ ಮಾಡಿದ್ದಾರೆ.

(696)13-06-2017 5-20 ಎಸ್‌ಕೆ-ಎಕೆ

**(ಉಪ ಸಭಾಪತಿಯವರ ಉಪಸ್ಥಿತಿ )**

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಮುಂದು):-** ಮಾನ್ಯ ಸಭಾಪತಿಯವರೇ, ಕೇಂದ್ರ ಸಚಿವರಾದ ಮಾನ್ಯ ಅನಂತ್‌ಕುಮಾರ್ ಸಹಿತ ವಿಶೇಷ ಕಾಳಜಿ ಮೂಲಕ ಕರ್ನಾಟಕ ಗಡಿ ಭಾಗದಲ್ಲಿರುವ ಬೆಳಗಾವಿ, ಬಿಜಾಪುರ್ ಮತ್ತು ಬಾಗಲಕೋಟೆ ಜಿಲ್ಲೆಗಳಿಗೆ ನೀರು ಹರಿಸಬೇಕೆಂಬ ಮನವಿಯನ್ನು ಮಾಡಲಾಗಿ, ಏಪ್ರಿಲ್ 10 ಮತ್ತು 12 ರ ನಂತರ 2.65 tmc ನೀರನ್ನು ಕರ್ನಾಟಕ ರಾಜ್ಯಕ್ಕೆ ವರುಣ ಜಲಾಶಯದ ಮೂಲಕ ಹರಿಸಿದರು. ಇದಾದ ನಂತರ ಮೇ ತಿಂಗಳಿನಲ್ಲಿ 2.50 tmc ನೀರನ್ನು ಸಹಿತ ಕರ್ನಾಟಕ ರಾಜ್ಯಕ್ಕೆ ಹರಿಸಿದರು. ನಾನು ಸದನದ ಮುಖಾಂತರ ಮಹಾರಾಷ್ಟ್ರ ರಾಜ್ಯದ ಮುಖ್ಯಮಂತ್ರಿಯಾಗಿರುವ ಸನ್ಮಾನ್ಯ ದೇವೇಂದ್ರ ಫಡ್ನವಿಸ್‌ರವರನ್ನು ಮಾನವೀಯತೆ ಆಧಾರದ ಮೇಲೆ ಕರ್ನಾಟಕ ರಾಜ್ಯದ ಜನರಿಗೆ ನೀರನ್ನು ಕೊಟ್ಟಿರುವಂತಹವರಿಗೆ ಅಭಿನಂದನೆಗಳನ್ನು ಸಹಿತ ಈ ಸಂದರ್ಭದಲ್ಲಿ ಸಲ್ಲಿಸುವುದಕ್ಕೆ ಬಯಸುತ್ತೇನೆ. ಅವರು ಕೊಟ್ಟಂತಹ ನೀರು ಸರಿಯಾಗಿ ಬಳಕೆ ಮಾಡದೇ ನಾವು ಎಲ್ಲೋ ವಿಫಲರಾಗಿದ್ದೇವೆ ಎನ್ನುವ ಮಾತನ್ನು ತಮ್ಮ ಮುಖಾಂತರ ಸಚಿವರಿಗೆ ಹೇಳುವುದಕ್ಕೆ ಬಯಸುತ್ತೇನೆ. ನೀರು ಬಿಜಾಪುರ, ಬಾಗಲಕೋಟೆಗೆ ಮುಟ್ಟಬೇಕೆಂದು ಹೇಳಿ 25 ದಿನಗಳ ಕಾಲ ವಿದ್ಯುತ್ತನ್ನು ತೆಗೆದರು. ಇದರಿಂದಾಗಿ ನದಿಯ ದಂಡೆಯಲ್ಲಿರುವಂತಹ ಜನ-ಜಾನುವಾರುಗಳಿಗೆ ತೊಂದರೆಯಾಯಿತು. ಇದಕ್ಕೆ ಬದಲಾಗಿ ಎಂಟು ದಿವಸ ಅಥವಾ 10 ದಿವಸ ವಿದ್ಯುತ್ತನ್ನು ತೆಗೆಯಬಹುದಾಗಿತ್ತು. ಬರೀ ಒಂದು ಗಂಟೆ ವಿದ್ಯುತ್ತನ್ನು ನೀಡುವುದರ ಮೂಲಕ ಅಲ್ಲಿರುವ ಸಂಪೂರ್ಣ ಬೆಳೆಗಳು ಹಾಳಾಗಿರುವಂತಹ ರೀತಿಯಲ್ಲಿ ಇವತ್ತು ಬೆಳಗಾವಿ ಜಿಲ್ಲೆಯ ರೈತರು ತೊಂದರೆಯನ್ನು ಅನುಭವಿಸಿದರು. ರೈತರು ಹಲವಾರು ಬಾರಿ ರಸ್ತೆ ತಡೆ ಮಾಡಿದರೂ ಮತ್ತು ಜಿಲ್ಲಾಧಿಕಾರಿಗಳಿಗೆ ಮನವಿಯನ್ನು ಮಾಡಿದರೂ ಸಹ ಸರ್ಕಾರ ಸ್ಪಂದಿಸಲಿಲ್ಲ. ನಾನು ತಮ್ಮ ಮುಖಾಂತರ ಮಾನ್ಯ ಸಚಿವರಿಗೆ ವಿನಂತಿ ಮಾಡಲು

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಬಯಸುತ್ತೇನೆ. ಇವತ್ತು ಕರ್ನಾಟಕ ಮತ್ತು ಮಹಾರಾಷ್ಟ್ರದ ನಡುವೆ ಎರಡು ವಿಚಾರವಾಗಿ ಒಪ್ಪಂದವಾಗಬೇಕು. ಪ್ರತಿ ಬಾರಿ ಕರ್ನಾಟಕ ರಾಜ್ಯದಿಂದ ಮಹಾರಾಷ್ಟ್ರ ರಾಜ್ಯಕ್ಕೆ ನಿಯೋಗವನ್ನು ತೆಗೆದುಕೊಂಡು ಹೋಗುವುದು, ನೀರು ಕೊಡಿ ಎಂದು ಅವರ ಮನೆ ಬಾಗಿಲಿಗೆ ಹೋಗುವಂತಹ ಪರಿಸ್ಥಿತಿ ಇದೆ. ಮತ್ತೊಮ್ಮೆ ಅಕ್ಟೋಬರ್ ಮತ್ತು ನವೆಂಬರ್ ತಿಂಗಳುಗಳಾದ ನಂತರ ಈ ಸಭೆಗಳು ಬೇಡ. ತಾವು ಹಿರಿಯರಿದ್ದೀರಿ ಈಗಲೇ ಶಾಶ್ವತವಾದಂತಹ ಒಡಂಬಡಿಕೆ ಕರ್ನಾಟಕ ಮತ್ತು ಮಹಾರಾಷ್ಟ್ರದ ನಡುವೆ ಆಗಬೇಕು. ಅವರು ಅಲಮಟ್ಟಿ ಜಲಾಶಯದಿಂದ ಸೊಲ್ಲಾಪುರಕ್ಕೆ ನೀರನ್ನು ಕೇಳುತ್ತಾರೆ. ತಾವು ಶಾಶ್ವತವಾಗಿರುವಂತಹ ಒಡಂಬಡಿಕೆಯನ್ನು ಮಹಾರಾಷ್ಟ್ರ ರಾಜ್ಯದೊಂದಿಗೆ ಈಗಲೇ ಮಾಡಿಕೊಳ್ಳಬೇಕು ಎನ್ನುವ ಮನವಿಯನ್ನು ಮಾಡುತ್ತೇನೆ. ತಾವು ಕೂಡಲೇ ಸಭೆಯನ್ನು ಕರೆಯಬೇಕು. ಕಳೆದ ಬಾರಿ ಅಧಿವೇಶನದಲ್ಲಿ ನಾನು ನೀರಾವರಿ ಸಚಿವರಿಗೆ ವಿನಂತಿಯನ್ನು ಮಾಡಿದ್ದೆನು. ಈಗಲೇ ತಾವು ಒಂದು ಒಡಂಬಡಿಕೆಯನ್ನು ಮಾಡಿ ಬೆಳಗಾವಿ ಮತ್ತು ಬಾಗಲಕೋಟೆ ಜಿಲ್ಲೆಗಳಿಗೆ ಮಹಾರಾಷ್ಟ್ರ ಸರ್ಕಾರ ನೀರಾವರಿ ಇಲಾಖೆಯ ಮುಖಾಂತರ ನಮಗೆ ನೀರನ್ನು ಕೊಡಬೇಕು. ನಾವು ಮಹಾರಾಷ್ಟ್ರದ ಸೊಲ್ಲಾಪುರ ಮತ್ತು ಜತ್ ಭಾಗಗಳಿಗೆ ಉಜಿನಿ ಡ್ಯಾಂ ಮುಖಾಂತರ ನೀರನ್ನು ಕೊಡಬೇಕು. ಭೀಮ ನದಿಗೂ ಸಹ ಒಂದು ಶಾಶ್ವತ ಒಪ್ಪಂದ ಮಾಡಬೇಕು ಎನ್ನುವಂತಹ ವಿಚಾರವಿದೆ. ಈ ವಿಚಾರದಲ್ಲಿ ಒಂದು ಉನ್ನತ ಸಚಿವರ ಸಭೆಯಾಗಬೇಕು. ಮಹಾರಾಷ್ಟ್ರ ರಾಜ್ಯದ ನೀರಾವರಿ ಸಚಿವರೊಂದಿಗೆ ಒಂದು ಮಾತುಕತೆ ಮಾಡಿ ಶಾಶ್ವತವಾಗಿರುವಂತಹ ಒಡಂಬಡಿಕೆಯನ್ನು ಮಾಡಬೇಕೆಂದು ಕಳಕಳಿಯಿಂದ ಈ ಸಂದರ್ಭದಲ್ಲಿ ಮನವಿ ಮಾಡುತ್ತೇನೆ. ಮತ್ತೊಮ್ಮೆ ಬರ ಬಂದ ನಂತರ ನಾವು ಅವರ ಹತ್ತಿರ ಹೋಗುವುದು ಬೇಡ. ಇದಕ್ಕೆ ಪರಿಹಾರವನ್ನು ಕಂಡುಕೊಳ್ಳುವ ರೀತಿಯಲ್ಲಿ ಸರ್ಕಾರ ಒಂದು ಹೆಜ್ಜೆಯನ್ನು ಮುಂದಿಡಬೇಕು ಎನ್ನುವ ಮನವಿಯನ್ನು ಮಾಡುತ್ತೇನೆ. ಚಿಕ್ಕೋಡಿ ತಾಲ್ಲೂಕಿನಲ್ಲಿ ಹರಿಯುವಂತಹ 'ದೂದ್‌ಗಂಗಾ ಮತ್ತು ವೇದಗಂಗಾ' – ಇದು ಸಹ ಮಹಾರಾಷ್ಟ್ರದ ಒಡಂಬಡಿಕೆಯಲ್ಲಿರತಕ್ಕಂಥ ಒಂದು ನೀರಾವರಿ ಯೋಜನೆ. ನಾವು ನಮ್ಮ ಸಂಪೂರ್ಣ ಹಣವನ್ನು ಮಹಾರಾಷ್ಟ್ರ ರಾಜ್ಯ ಸರ್ಕಾರಕ್ಕೆ ಪಾವತಿ ಮಾಡಿದ್ದೇವೆ. ಆದರೆ ಪ್ರತಿ ಬಾರಿ ನಿಪ್ಪಾಣಿ ಶಾಸಕರು ಮತ್ತು ಚಿಕ್ಕೋಡಿ ಶಾಸಕರು ಮಹಾರಾಷ್ಟ್ರ ರಾಜ್ಯ ನೀರಾವರಿ ಇಲಾಖೆಯ ಮುಂದೆ ಹೋಗಿ ಕೈಕಟ್ಟಿ ನಿಂತು ನೀರು ಬಿಡಿ ಎಂದು ಹೇಳಿ ವಿನಂತಿಯನ್ನು ಮಾಡಿದಾಗ ಮಾತ್ರ ನಮಗೆ 'ದೂದ್‌ಗಂಗಾ ಮತ್ತು ವೇದಗಂಗಾ'ಕ್ಕೆ ನೀರು ಹರಿದು ಬರುತ್ತದೆ. ಇದಕ್ಕೆ ಶಾಶ್ವತವಾಗಿ ಒಪ್ಪಂದವಾಗಿರುವ ಪ್ರಕಾರ ನೀರು ಬರುವ ನಿಟ್ಟಿನಲ್ಲಿ ಮಹಾರಷ್ಟ್ರ ರಾಜ್ಯ ಸರ್ಕಾರದ ಸಂಬಂಧಪಟ್ಟ ಅಧಿಕಾರಿಗಳಿಗೆ ನಿರ್ದಿಷ್ಟವಾದ ಸೂಚನೆಯನ್ನು ನೀಡುವಂತೆ ನಮ್ಮ ಸರ್ಕಾರವು ಮಹಾರಾಷ್ಟ್ರ ಸರ್ಕಾರವನ್ನು ಆಗ್ರಹಿಸಬೇಕು ಎನ್ನುವ ಮನವಿಯನ್ನು ಮಾಡುತ್ತೇನೆ. ಇದನ್ನು ಸರ್ಕಾರ ಮಾಡಬೇಕು ಎನ್ನುವ ಮನವಿಯನ್ನು ಸಹಿತ ಇವತ್ತು ಈ ಸಂದರ್ಭದಲ್ಲಿ ಮಾಡುತ್ತಾ, ಇವತ್ತು ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಇರಬೇಕಾಗಿತ್ತು. ಅನೇಕ ಸಲ ಬರದ ಬಗ್ಗೆ ಚರ್ಚೆ ಮಾಡುವಂತಹ ಸಂದರ್ಭದಲ್ಲಿ ಕೆಡಿಪಿ ಸಭೆಗಳಲ್ಲಿ ನಾವು ಮಾತನಾಡುತ್ತೇವೆ. ಇವತ್ತು ಚಿಕ್ಕೋಡಿ ತಾಲ್ಲೂಕಿನಲ್ಲಿ ನಾಗರಮ್ಮನ ಹೊಳೆ ಎಂಬ ಒಂದು ಹೋಬಳಿ ಇದೆ.

**ಶ್ರೀ ವಿ.ಎಸ್. ಉಗ್ರಪ್ಪ:-** ಶ್ರೀ ಮಹಂತೇಶ್‌ರವರೇ, ಆ ಒಡಂಬಡಿಕೆ ಯಾವ ಲೈನ್‌ನಲ್ಲಿ ಎನ್ನುವುದನ್ನು ಸ್ವಲ್ಪ explain ಮಾಡಿದರೆ ಸೂಕ್ತವೆನಿಸುತ್ತದೆ.

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ :-** ಅಲ್ಲ ಮಹಾರಾಷ್ಟ್ರದವರು . . .

**ಶ್ರೀ ವಿ.ಎಸ್. ಉಗ್ರಪ್ಪ:-** ಒಂದು ನಿಮಿಷ ನಾನು ಏಕೆ ಹೇಳುತ್ತಿದ್ದೇನೆಂದರೆ,

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ :-** ಹೇಳುತ್ತೇನೆ. I will come back.

**ಶ್ರೀ ವಿ.ಎಸ್. ಉಗ್ರಪ್ಪ:-** ಓಕೆ, ಓಕೆ.

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ :-** ಮಾನ್ಯ ಸಭಾಪತಿಯವರೇ, ಮಹಾರಾಷ್ಟ್ರದ ಬೇಡಿಕೆ ಏನಿದೆ ಎಂದರೆ ಜತ್ ಮತ್ತು ಸಾಂಗ್ಲಿ ಜಿಲ್ಲೆಗಳಲ್ಲಿರುವ ಜನರು ಅವರು ಹೋಗಿ ನೀರನ್ನು ಬೇಡುತ್ತಾರೆ. ನಮಗೆ ನೀವು ಅಲ್ಲಿರುವ ಜನರಿಗೆ ಎರಡು ಟಿಎಮ್‌ಸಿ ನೀರನ್ನು ಇಂಡಿ ಕಾಲುವೆಯ ಮುಖಾಂತರ ಏಪ್ರಿಲ್ ಮತ್ತು ಮೇ ತಿಂಗಳಿನ ಬೇಸಿಗೆ ಕಾಲದಲ್ಲಿ ಕೊಡಿ. ಕರ್ನಾಟಕ ರಾಜ್ಯದ ಬೆಳಗಾವಿ ಮತ್ತು ಬಾಗಲಕೋಟೆ ಜಿಲ್ಲೆಗಳಿಗೆ ನಾವು ನೀರು ಕೊಡುತ್ತೇವೆ ಎನ್ನುವ ಅವರ ಒಂದು ಬೇಡಿಕೆ ಇದೆ. Across the table we can discuss this issue. I don't want to go into the details. ದಯವಿಟ್ಟು, ಸಭೆಗೆ ಕರೆದರೆ ಸಂಪೂರ್ಣವಾಗಿರುವಂತಹ ಮಾಹಿತಿಯನ್ನು ತಮಗೆ ಕೊಡುತ್ತೇವೆ ಎನ್ನುವ ವಿನಂತಿಯನ್ನು ಸಹಿತ ಈ ಸಂದರ್ಭದಲ್ಲಿ ಮಾಡುತ್ತೇನೆ. ವಿಶೇಷವಾಗಿ "ಬಹುಗ್ರಾಮ" ಕುಡಿಯುವ ನೀರಿನ ಯೋಜನೆಯ ಬಗ್ಗೆ ಸತತವಾಗಿ ಇವತ್ತು 5-6 ವರ್ಷಗಳಿಂದ ನಾಗರಮ್ಮನ ಹೊಳೆ ಎನ್ನುವ ಹೋಬಳಿ ಬರಗಾಲಕ್ಕೆ ತುತ್ತಾಗಿದೆ. ಅಲ್ಲಿರುವ ಗ್ರಾಮಗಳಿಗೆ ಕೃಷ್ಣ ಮತ್ತು ಘಟಪ್ರಭ ನದಿಗಳಿಂದ ಕುಡಿಯುವ ನೀರನ್ನು ಒದಗಿಸುವುದಕ್ಕೆ ಶಾಶ್ವತ ಯೋಜನೆ ಮೂರು-ನಾಲ್ಕು ವರ್ಷಗಳ ಹಿಂದೆ ಪ್ರಾರಂಭವಾಗಿದೆ. ಇವತ್ತಿಗೂ ಸಹಿತ ಆ ಯೋಜನೆ ಪೂರ್ಣಗೊಂಡಿಲ್ಲ. ಇವತ್ತಿಗೂ ಸಹಿತ ಪ್ರತಿ ಬಾರಿ ಮಾರ್ಚ್, ಏಪ್ರಿಲ್, ಮೇ, ಜೂನ್ ತಿಂಗಳುಗಳವರೆಗೂ ಟ್ಯಾಂಕರ್ ಮೂಲಕ ಕುಡಿಯುವ ನೀರು ಸರಬರಾಜು ಆಗುತ್ತಿದೆ. ವರ್ಷಕ್ಕೆ ಸುಮಾರು 3-4 ಕೋಟಿ ರೂಪಾಯಿ ನೀರಿನ ಟ್ಯಾಂಕರ್‌ನ ಬಿಲ್ ಆಗುತ್ತದೆ. ನಾವು ಕೆಡಿಪಿ ಸಭೆಗೆ ಬಂದಾಗ ಮುಖ್ಯಮಂತ್ರಿಗಳಿಗೆ ಹೇಳುತ್ತೇವೆ. ಬಹುಗ್ರಾಮಗಳ ಕುಡಿಯುವ ನೀರಿನ ಯೋಜನೆಗಳನ್ನು ಕಾಲಮಿತಿಯಲ್ಲಿ ನೀವು ಪೂರ್ಣಗೊಳಿಸಿರಿ. ಒಂದು ವೇಳೆ ಆ ಯೋಜನೆಯನ್ನು ಪೂರ್ಣಗೊಳಿಸಿದ್ದೇ ಆದರೆ ಆ ಗ್ರಾಮಗಳಿಗೆ ನೀವು ಟ್ಯಾಂಕರ್ ಮುಖಾಂತರ ನೀರು ಒದಗಿಸುವ ಅವಶ್ಯಕತೆಯಿಲ್ಲ. ಇದರ ಬಗ್ಗೆ ಸಭೆಯಲ್ಲಿ ಚರ್ಚೆಯಾಗಿ, ಅದನ್ನು ಮಾಡುತ್ತೇವೆಂದು ಹೇಳುತ್ತಾರೆ. ಇವತ್ತಿಗೂ ಸಹಿತ ಆ ಯೋಜನೆಗಳು ಪೂರ್ಣಗೊಂಡಿಲ್ಲ. 95% of the projects are completed but government is unable

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

to give water from those sources. ಘಟಪ್ರಭಾ ನದಿಯ ಹಿನ್ನೀರಿನಿಂದ ಕೊಡುವುದಕ್ಕೆ ಅವಕಾಶವಿದೆ. ಕೃಷ್ಣ ನದಿಯಿಂದ ಕೊಡುವುದಕ್ಕೆ ಅವಕಾಶವಿದೆ. But officials are not interested to complete the projects. ಇವತ್ತಿಗೂ ಸಹಿತ ಟ್ಯಾಂಕರ್ ಮೂಲಕ ನೀರನ್ನು ಸರಬರಾಜು ಮಾಡುತ್ತಾರೆ. ಇದರ ಹಿನ್ನೆಲೆ ಏನು? ನಾವು ಇದನ್ನು ಸರ್ಕಾರಕ್ಕೆ ಕೇಳಬೇಕಾಗುತ್ತದೆ. ವಿರೋಧ ಪಕ್ಷ ಮತ್ತು ಆಡಳಿತ ಪಕ್ಷಗಳಾಗಿರಬಹುದು. ಹಣ ಮಾತ್ರ ಸಾರ್ವಜನಿಕರದ್ದು ಮತ್ತು ನಮ್ಮೆಲ್ಲರದ್ದೂ ಹೌದು. ಆದರೆ ಆ project ಗಳನ್ನು ಸರಿಯಾದ ಕಾಲಮಿತಿಯಲ್ಲಿ ಪೂರ್ಣಗೊಳಿಸಿದ್ದಾದರೆ, ಸರ್ಕಾರದ ಹಣ ದುರುಪಯೋಗವಾಗುವುದನ್ನು ತಪ್ಪಿಸುವುದಕ್ಕೆ ಅವಕಾಶವಾಗುತ್ತದೆಂಬ ಮಾತನ್ನು ತಮ್ಮ ಮುಖಾಂತರ ಮಾನ್ಯ ಸಚಿವರ ಗಮನಕ್ಕೆ ತರಬಯಸುತ್ತೇನೆ. ಹೀಗೆ ಆ ಒಂದು ಯೋಜನೆಯನ್ನು ಕಾಲಮಿತಿಯಲ್ಲಿ ಪೂರ್ತಿಗೊಳಿಸಿ. ಈಗಲಾದರೂ ಸಂಬಂಧಪಟ್ಟಂತಹ ಅಧಿಕಾರಿಗಳಿಗೆ ತಾವು ಸೂಚನೆಯನ್ನು ಕೊಡಬೇಕೆಂಬ ವಿನಂತಿಯನ್ನು ಈ ಸಂದರ್ಭದಲ್ಲಿ ಮಾಡುತ್ತೇನೆ. ಈಗಾಗಲೇ ಶ್ರೀ ರವಿಯವರು ಮತ್ತು ಇನ್ನುಳಿದ ಸದಸ್ಯರು ಬಹಳಷ್ಟು ವಿಚಾರಗಳನ್ನು ಹೇಳಿದ್ದಾರೆ. 'ಮರಳು ಮಾಫಿಯಾ' ಬಗ್ಗೆ ನಾನು ವಿಚಾರಗಳನ್ನು ಈ ಸಂದರ್ಭದಲ್ಲಿ ಪ್ರಸ್ತಾಪಿಸುವುದಕ್ಕೆ ಹೋಗುವುದಿಲ್ಲ. Drip irrigation ಗೆ ಇವತ್ತು ಕಳೆದ 20 ವರ್ಷಗಳ ಒಟ್ಟು ಮಳೆಗಾಲದ ಪರಿಸ್ಥಿತಿಯನ್ನು ನಾವು ನೋಡಲಾಗಿ, ಮಳೆಗಾಲದಲ್ಲಿ ಪ್ರತಿ ಬಾರಿ ಕೊಡಗಿನಲ್ಲಿ ಮಳೆ ಕಡಿಮೆಯಾದರೆ, ಇನ್ನು ಬರುವಂತಹ ದಿನಮಾನಗಳಲ್ಲಿ ಒಳ್ಳೆಯ ಭವಿಷ್ಯವಿಲ್ಲ ಎನ್ನುವಂತಹದ್ದು ನಮಗೆ ಕಾಡುತ್ತಿದೆ. ಅದಕ್ಕಾಗಿ ಬರುವಂತಹ ದಿನಮಾನಗಳಲ್ಲಿ ಪ್ರತಿ ಹನಿ ನೀರು ಸದ್ಬಳಕೆಯಾಗಬೇಕು. ನಾವು ಹನಿ ನೀರಾವರಿಗೆ ಹೆಚ್ಚು ಒತ್ತನ್ನು ಕೊಡಬೇಕಾಗಿದೆ. Israel ಮಾದರಿ ಅಷ್ಟೇ ಅಲ್ಲ, ಇವತ್ತು drip irrigation ಎನ್ನುವುದು ಒಂದು ಬೆಳೆಗೆ ಅಲ್ಲ. ಮಾನ್ಯ ಎಂ.ಬಿ. ಪಾಟೀಲ್‌ರವರು ಸರ್ಕಾರ ಬಂದಂತಹ ಉತ್ಸಾಹದ ಸಂದರ್ಭದಲ್ಲಿ ಕಬ್ಬು ನೀರಾವರಿಗೂ ಸಹಿತ ಡ್ರಿಪ್‌ನ್ನು ನಾವು ಸರ್ಕಾರದ ಮೂಲಕ ತರುತ್ತೇವೆಂದು ಘೋಷಣೆಯನ್ನು ಸದನದಲ್ಲಿ ಮಾಡಿದ್ದರು. ಅವರಿಗೆ ಹಣಕಾಸಿನ ಕೊರತೆಯಿತ್ತೋ ಅಥವಾ ಏನೋ ನನಗೆ ಗೊತ್ತಿಲ್ಲ. ಅವರು ಆ ಯೋಜನೆಯನ್ನು ಕೈಬಿಟ್ಟರು. ಸಕ್ಕರೆ ಕಾರ್ಖಾನೆಗಳು, ಸರ್ಕಾರ ಮತ್ತು ರೈತರ ನಡುವೆ tripartite agreement ಮಾಡುತ್ತೇವೆ. ಸರ್ಕಾರ ಎಷ್ಟು ಭರಿಸಬೇಕು? ರೈತ ಎಷ್ಟು ಭರಿಸಬೇಕು? ಆಮೇಲೆ ಅಲ್ಲಿ ಏನು ಅನುದಾನ ಕೊಡಬೇಕು ಎನ್ನುವುದನ್ನು ಒಂದು proposal ಮಾಡಿದರು. ಅದನ್ನು ಮಾಡಿದ್ದರೆ ಅತ್ಯಂತ ಉಪಯೋಗವಾಗುತ್ತಿತ್ತು. ಆದರೆ ಆ ಯೋಜನೆ ಕಾರ್ಯಗತಗೊಳ್ಳಲಿಲ್ಲ. ನೀರಿನ ಸದ್ಬಳಕೆ ಮಾಡುವಂತಹ ರೀತಿಯಲ್ಲಿ ಮುಂದಿನ ಹತ್ತು ವರ್ಷಗಳಿಗಾಗುವಂತೆ ಒಂದು ನೀಲಿ ನಕ್ಷೆಯನ್ನು ತಯಾರು ಮಾಡುವುದು ಇವತ್ತಿನ ಅವಶ್ಯಕತೆಯಿದೆ. ಅದಕ್ಕಾಗಿ ಸರ್ಕಾರ ಒಂದು High Power Committee ಮಾಡಿ ಈಗಿನಿಂದಲೇ ಹನಿ ನೀರಾವರಿಗೆ ಹೆಚ್ಚು ಒತ್ತನ್ನು ಕೊಡುವ ರೀತಿಯಲ್ಲಿ ಆ ಒಂದು ಯೋಜನೆಯನ್ನು ಕೈಗೊಳ್ಳಬೇಕೆಂಬ ವಿನಂತಿಯನ್ನು ಈ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಸಂದರ್ಭದಲ್ಲಿ ಮಾಡುತ್ತೇನೆ. ಸಾಲ ಮನ್ನಾದ ಬಗ್ಗೆ ಎಲ್ಲಾ ಸದಸ್ಯರು ಹೇಳಿದ್ದಾರೆ. ಈಗಾಗಲೇ ಮಾನ್ಯ ಎಂ.ಬಿ. ಪಾಟೀಲ್‌ರವರು ಮಹಾಬಲೇಶ್ವರಕ್ಕೆ ಹೋಗಿ ಪೂಜೆಯನ್ನು ಮಾಡಿ ಬಂದಿದ್ದಾರೆ. ಅದು ವಿಶ್ವಾಸವೋ ಅಥವಾ ಅಂಧ ವಿಶ್ವಾಸವೋ ಗೊತ್ತಿಲ್ಲ. ಆದರೆ ದೇವರು ಒಳ್ಳೆಯದನ್ನು ಮಾಡಿದ್ದಾನೆ.

**ಶ್ರೀ ಬಸನಗೌಡ ಆರ್. ಪಾಟೀಲ್ (ಯತ್ನಾಳ್):-** ಅದು ವಿಶ್ವಾಸ . . .

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ :-** ಅಲ್ಲ ನಮಗೆ ವಿಶ್ವಾಸವಿದೆ. ಅವರು ಒಳ್ಳೆಯದನ್ನು ಮಾಡಿದ್ದಾರೆಂದು ನಾನು ಹೇಳುತ್ತೇನೆ.

**ಶ್ರೀ ಐವನ್ ಡಿ'ಸೋಜಾ:-** ನಿಮಗೇ ಅದರ ಬಗ್ಗೆ ಹೆಚ್ಚು ನಂಬಿಕೆ ಇರುವುದು.

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ:-** ನಮಗೆ ವಿಶ್ವಾಸವಿದೆ, ಅವರು ಒಳ್ಳೆಯದನ್ನು ಮಾಡಿದ್ದಾರೆಂಬುದನ್ನು ನಾನು ಹೇಳುತ್ತಿದ್ದೇನೆ. ಆದರೆ ನೀವು ಶಾಸನ ತರುವಂತಹ ವಿಚಾರದಲ್ಲಿ ದಯವಿಟ್ಟು ಇನ್ನೊಮ್ಮೆ ಪರಿಶೀಲಿಸಬೇಕು ಮತ್ತು ಇವತ್ತು ಎಲ್ಲಾ ವಿಚಾರಗಳನ್ನು ಮಾನ್ಯ ಹಿರಿಯ ಸಚಿವರು ಗಮನಿಸಬೇಕು ಎನ್ನುವ ವಿನಂತಿಯನ್ನು ಮಾಡಿ, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಧನ್ಯವಾದಗಳನ್ನು ಹೇಳಿ, ನನ್ನ ಮಾತನ್ನು ಮುಗಿಸುತ್ತೇನೆ.

**ಸಭಾಪತಿಯವರು :-** ಧನ್ಯವಾದಗಳು. ಶ್ರೀ ಬಸವನಗೌಡ ಪಾಟೀಲ್ ಯತ್ನಾಳ್‌ರವರೇ ತಾವು ಮಾತನಾಡಿ.

(697)13-06-2017 5-30 ಹೆಚ್‌ವಿ-ಆರ್‌ಎನ್

(ಉಪ ಸಭಾಪತಿಯವರ ಉಪಸ್ಥಿತಿ)

**ಶ್ರೀ ಬಸನಗೌಡ ಆರ್.ಪಾಟೀಲ್(ಯತ್ನಾಳ್):-** ಸನ್ಮಾನ್ಯ ಸಭಾಪತಿಯವರೇ, ಕಳೆದ 6-7 ವರ್ಷಗಳಿಂದ ನಮ್ಮ ರಾಜ್ಯ ಸತತವಾಗಿ ಭೀಕರ ಬರಗಾಲವನ್ನು ಎದುರಿಸುತ್ತಿದೆ. ನಾನು 1999 ರಿಂದ 2009ರವರೆಗೆ ಲೋಕಸಭೆಯ ಸದಸ್ಯನಾಗಿ ಕೆಲಸ ಮಾಡಿದ್ದೇನೆ. ಲೋಕಸಭೆಯಲ್ಲಿ ಒಂದು ಭಾಗದವರು ದೇಶದಲ್ಲಿನ ಅತಿವೃಷ್ಟಿಯ ಬಗ್ಗೆ ಗಲಾಟೆ ಮಾಡುತ್ತಿದ್ದರೆ ಮತ್ತೊಂದು ಭಾಗದವರು ಬರಗಾಲ ಬಂದಿದೆ ಎಂದು ಗಲಾಟೆ ಮಾಡುತ್ತಿದ್ದರು. ಸ್ವಾತಂತ್ರ್ಯ ಭಾರತದ ನಂತರ, ಅಧಿಕಾರಕ್ಕೆ ಬಂದಂತಹ ಸರ್ಕಾರಗಳು ಈ ದೇಶದ ಮುಂದಿನ ಭವಿಷ್ಯವನ್ನು ದೃಷ್ಟಿಯಲ್ಲಿಟ್ಟುಕೊಂಡು ಅತಿವೃಷ್ಟಿ ಮತ್ತು ಅನಾವೃಷ್ಟಿಯ ಬಗ್ಗೆ ಶಾಶ್ವತವಾಗಿರುವ ಯೋಜನೆಗಳ ಬಗ್ಗೆ ಚಿಂತನೆ ಮಾಡಲಿಲ್ಲವೆನ್ನುವುದು ಬಹಳ ದೊಡ್ಡ ಕೊರಗಾಗಿ ನಮ್ಮನ್ನು ಕಾಡುತ್ತಿದೆ. ಮರಳು ಮಾಫಿಯಾ, ಫಲವತ್ತಾಗಿರುವ ಜಮೀನಿನಲ್ಲಿ ರಿಯಲ್ ಎಸ್ಟೇಟ್ ಮಾಡುವುದರ ಜೊತೆಗೆ ಕೈಗಾರೀಕರಣದ ಹೆಸರಿನಲ್ಲಿ ಫಲವತ್ತಾಗಿರುವ ಭೂಮಿಗಳನ್ನು ಪರಿವರ್ತನೆ ಮಾಡುತ್ತಿದ್ದೇವೆ. ಕಬ್ಬಿಣದ ಅದಿರಿನ ಗಣಿಗಾರಿಕೆಯಿಂದ ಹಾಗೂ ನಿರಂತರವಾಗಿ ಮರಗಳನ್ನು ಕಡಿಯುವುದರ ಮೂಲಕ ಮಾನವ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ, ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ನಿರಂತರವಾಗಿ ನಿಸರ್ಗದ ಮೇಲೆ ಅತ್ಯಾಚಾರ ಮಾಡಿದ ಪರಿಣಾಮವಾಗಿ ಅದರ ದುಷ್ಪರಿಣಾಮಗಳನ್ನು ಈ ದಿನ ಎದುರಿಸುತ್ತಿದ್ದೇವೆ. ವಿರೋಧ ಪಕ್ಷದಲ್ಲಿದ್ದಾಗ ಆಡಳಿತ ಪಕ್ಷದವರನ್ನು ಟೀಕೆ ಮಾಡುತ್ತಿದ್ದವರು, ಅವರು ಆಡಳಿತ ಪಕ್ಷಕ್ಕೆ ಬಂದಂತಹ ಸಂದರ್ಭದಲ್ಲಿ ಪುನಃ ವಿರೋಧ ಪಕ್ಷದವರನ್ನು ಟೀಕೆ ಮಾಡುವುದು ಹೀಗೆ ವ್ಯವಸ್ಥೆ ಪುನರಾವರ್ತನೆಯಾಗುತ್ತಿದೆಯೇ ಹೊರತು ಶಾಶ್ವತವಾಗಿರುವ ಪರಿಹಾರಕ್ಕಾಗಿ ಕಾರ್ಯಗಳನ್ನು ರೂಪಿಸುವಂತಹ ಸಿದ್ಧತೆಗಳನ್ನು ನಾವು ಮಾಡಿಕೊಂಡಿಲ್ಲ.

ಸನ್ಮಾನ್ಯ ಸಭಾಪತಿಯವರೇ, 1964ರಲ್ಲಿ ದಿವಂಗತ ಲಾಲ್ ಬಹದ್ದೂರ್ ಶಾಸ್ತ್ರಿಗಳು ಕೃಷ್ಣ ಮೇಲ್ದಂಡೆ ಯೋಜನೆಗೆ ಶಿಲಾನ್ಯಾಸವನ್ನು ಮಾಡಿದ್ದರು. ಆಗಿನ ಅಂದಾಜು ವೆಚ್ಚದ ಪ್ರಕಾರ ಕೇವಲ ಒಂದು ಸಾವಿರ ಕೋಟಿ ರೂಪಾಯಿಗಳಲ್ಲಿ ಆ ಯೋಜನೆ ಪೂರ್ಣಗೊಳ್ಳಬೇಕಾಗಿತ್ತು. ಆದರೆ, ಯಾವುದೇ ಸರ್ಕಾರಗಳು ಈ ಬಗ್ಗೆ ಗಂಭೀರವಾಗಿ ಚಿಂತನೆ ಮಾಡಲಿಲ್ಲ. ಇದಕ್ಕೆ ಬೇರೆ ಬೇರೆ ರಾಜಕೀಯ ಕಾರಣಗಳು ಇರಬಹುದು. ಉತ್ತರ ಕರ್ನಾಟಕ ಭಾಗದಲ್ಲಿ ದೊಡ್ಡ ನೀರಾವರಿ ಯೋಜನೆಗಳಾದರೆ ಅಲ್ಲಿನ ಜನರು ಶ್ರೀಮಂತರಾಗಬಹುದು ಎನ್ನುವ ಭಾವನೆ ಈ ಭಾಗದವರಿಗೆ ಇರಬಹುದು. ಅದೇ ರೀತಿಯಲ್ಲಿ ಉತ್ತರ ಕರ್ನಾಟಕದ ಬಾಗಲಕೋಟೆಯಿಂದ ಬಂದಂತಹ ಒಬ್ಬ ಮುಖ್ಯಮಂತ್ರಿಗಳು 5 ಕೋಟಿ ರೂಪಾಯಿಗಳನ್ನು ಮಹಾರಾಷ್ಟ್ರ ರಾಜ್ಯಕ್ಕೆ ಕೊಟ್ಟಿದ್ದರೆ, ಅವರು ಶಾಶ್ವತವಾಗಿ ಕುಡಿಯುವ ನೀರನ್ನು ಕೊಡುತ್ತಿದ್ದರು. ಆದರೆ, ಅವರು ಆ ಕೆಲಸವನ್ನು ಮಾಡಲಿಲ್ಲ. ನಾನು ದಕ್ಷಿಣ ಕರ್ನಾಟಕದ ರಾಜಕಾರಣಿಗಳ ಮೇಲೆ ದೋಷಾರೋಪಣೆ ಮಾಡುವುದಕ್ಕೆ ಹೋಗುವುದಿಲ್ಲ. ಅವರು ಆಗ 5 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದರೆ ಕೊಯ್ನಾದಿಂದ ನೀರನ್ನು ತೆಗೆದುಕೊಂಡು ವಿಜಾಪುರ ಜಿಲ್ಲೆಗೆ ನೀರಾವರಿಯನ್ನು ಒದಗಿಸಿಕೊಡಬಹುದಾಗಿತ್ತು. ಸೂಕ್ತ ರಾಜಕೀಯ ನಿರ್ಣಯಗಳನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗದೇ ಇರುವ "ಹಿನ್ನೆಲೆಯಲ್ಲಿ ಮತ್ತು ರಾಜಕೀಯ ವ್ಯವಸ್ಥೆಯಲ್ಲಿ ತುಂಬಿಕೊಂಡಿರುವ ಸ್ವಾರ್ಥದ ಪರಿಣಾಮವಾಗಿ ನಾವು ಇನ್ನೂ ಹಿಂದುಳಿದಿದ್ದೇವೆ. ರಾಜಕಾರಣಿಗಳು ಕೆಟ್ಟ ವಿಚಾರಗಳನ್ನು ಆಲೋಚನೆ ಮಾಡುತ್ತಾರೆ ಎನ್ನುವುದಕ್ಕೆ ನಾನು ಒಂದು ಉದಾಹರಣೆಯನ್ನು ಹೇಳುವುದಕ್ಕೆ ಬಯಸುತ್ತಿದ್ದೇನೆ. ನಾನು ಚಿಕ್ಕವನಾಗಿದ್ದಾಗ ನಮ್ಮ ಭಾಗದ ರಾಜಕಾರಣಿಗಳು, 'ಇಲ್ಲಿ ನೀರಾವರಿ ವ್ಯವಸ್ಥೆ ಆದರೆ, ಜನರು ಅನುಕೂಲವಸ್ಥರಾದರೆ, ಮತದಾರರು ನಮ್ಮ ಕೈಗೆ ಸಿಗುವುದಿಲ್ಲ. ಆದ್ದರಿಂದ ಇವರುಗಳು ಬರಗಾಲದಲ್ಲಿಯೇ ಇರಬೇಕು' ಎಂದು ನಮ್ಮನ್ನು ಆಳುವಂತಹ ನಮ್ಮ ಜನಪ್ರತಿನಿಧಿಗಳೇ ಮಾತನಾಡುತ್ತಿದ್ದರು ಎನ್ನುವುದನ್ನು ನಾನು ಕೇಳಿದ್ದೇನೆ. ಇವತ್ತು ಆ ರಾಜಕಾರಣಿಗಳ ಪರಿಸ್ಥಿತಿ ಏನಾಗಿದೆಯೆಂದರೆ, ಒಂದು ರಾಷ್ಟ್ರೀಯ ಪಕ್ಷದ ಅಭ್ಯರ್ಥಿಯಾಗಿ ಆ ರಾಜಕಾರಣಿಯ ಮಗ ಚುನಾವಣೆಯಲ್ಲಿ ಸ್ಪರ್ಧಿಸಿ ಠೇವಣಿಯನ್ನು ಕಳೆದುಕೊಂಡರು. ಜನರಿಗೆ ಆ ರಾಜಕಾರಣಿಯ ಮನೋಭಾವ ತಿಳಿದ ಮೇಲೆ ಅವರನ್ನು ಯಾವ ರೀತಿ ತಿರಸ್ಕರಿಸಿದರು ಎನ್ನುವುದಕ್ಕೆ ನಾನು ಈ ಉದಾಹರಣೆಯನ್ನು ಹೇಳುತ್ತಿದ್ದೇನೆ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

“ ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

ಸನ್ಮಾನ್ಯ ಸಭಾಪತಿಯವರೇ, ಅನೇಕ ಕಾರಣಗಳ ಹಿನ್ನೆಲೆಯಲ್ಲಿ ನಮ್ಮ ಭಾಗದ ನೀರಾವರಿ ಯೋಜನೆಗಳಾದ ಕೃಷ್ಣಾ ನೀರಾವರಿ ಯೋಜನೆ, ಕೆರೆಗಳ ಹೂಳು ಎತ್ತುವುದು ಮತ್ತು ಶಾಶ್ವತ ನೀರಾವರಿ ಯೋಜನೆಗಳನ್ನು ಮಾಡುತ್ತಿಲ್ಲ. ಇತ್ತೀಚಿನ ದಿನಗಳಲ್ಲಿ ಕೆರೆಗಳನ್ನು ಒತ್ತುವರಿ ಮಾಡಿಕೊಳ್ಳುವಂತಹ ಕೆಲಸವನ್ನು ಮಾಡಲಾಗುತ್ತಿದೆ. ಹಿಂದೆ ಬೆಂಗಳೂರು ನಗರದಲ್ಲಿ ಎಷ್ಟು ರಾಜಕಾಲುವೆಗಳು ಇದ್ದವು ಆ ಪ್ರಮಾಣದ ಕೆರೆಗಳು ಇಂದು ಉಳಿದಿಲ್ಲ. ಈ ರೀತಿಯಾದರೆ ಅಂತರ್ಜಲ ಉಳಿಯುವುದಕ್ಕೆ ಹೇಗೆ ಸಾಧ್ಯವಾಗುತ್ತದೆ? ಭೀಮಾ ನದಿತೀರದಲ್ಲಿ ಮರಳನ್ನು ತೆಗೆಯುತ್ತಿರುವುದರಿಂದ ಮೊದಲು ನೂರು ಅಡಿಗಳಿಗೆ 4–5 ಅಡಿಗಳಷ್ಟು ನೀರು ದೊರೆಯುತ್ತಿತ್ತು. ಈಗ 1000 ಅಡಿಗಳಷ್ಟು ಆಳಕ್ಕೆ ಬೋರ್‌ವೆಲ್‌ಗಳನ್ನು ಕೊರೆಯಬೇಕಾಗಿರುವ ಅವಶ್ಯಕತೆ ಇದೆ. ಹೊಳೆ ಮತ್ತು ನದಿಯ ತೀರಗಳಲ್ಲಿಯೂ ಸಹ ಇಷ್ಟು ಆಳಕ್ಕೆ ಹೋದಾಗ ಮಾತ್ರ ನೀರು ದೊರೆಯುವಂತಹ ಪರಿಸ್ಥಿತಿ ಬಂದರೆ, ಉಳಿದ ಕಡೆಗಳಲ್ಲಿ ಯಾವ ರೀತಿಯ ಪರಿಸ್ಥಿತಿ ಇದೆ ಎನ್ನುವುದನ್ನು ತಾವೇ ಯೋಚನೆ ಮಾಡಬೇಕಾಗಿದೆ. ಬರಗಾಲ ಮತ್ತು ಅತಿವೃಷ್ಟಿ ಎಂದರೆ ರಾಜಕಾರಣಿಗಳಿಗೆ ಮತ್ತು ಅಧಿಕಾರಿಗಳಿಗೆ ಸುಗ್ಗಿ ಬಂದಂತಾಗುತ್ತದೆ. ಹಣ ದೊರೆಯುತ್ತದೆ ಎಂದು ಅವರುಗಳಿಗೆ ಖುಷಿಯಾಗುತ್ತದೆ. ಏಕೆಂದರೆ, 100 ಅಡಿಗಳಷ್ಟು ಬೋರ್‌ವೆಲ್ ಕೊರೆದು 200 ಅಡಿಗಳಷ್ಟು ಕೊರೆದಿದ್ದೇವೆಂದು ಲೆಕ್ಕ ತೋರಿಸುತ್ತಾರೆ. ಮಾರುಕಟ್ಟೆಯಲ್ಲಿ ಒಂದು ಅಡಿಗೆ 35 ರೂಪಾಯಿಗಳಂತೆ ಬೋರ್‌ವೆಲ್ ಕೊರೆಯುತ್ತಿದ್ದರೆ, ಸರ್ಕಾರದಲ್ಲಿ ಒಂದು ಅಡಿಗೆ 110 ರೂಪಾಯಿಗಳಂತೆ ಲೆಕ್ಕ ಹಾಕುತ್ತಾರೆ. ಎಷ್ಟು ಬೋರ್‌ವೆಲ್‌ಗಳನ್ನು ತೆಗೆದಿದ್ದಾರೆ, ಎಷ್ಟು ಅಡಿಗಳಷ್ಟು ಆಳವನ್ನು ಕೊರೆದಿದ್ದಾರೆಂದು ಯಾರು ಹೋಗಿ ಲೆಕ್ಕ ಹಾಕುವುದಿಲ್ಲ. ಇತ್ತೀಚೆಗೆ ಕೊರೆಯಿಸುತ್ತಿರುವ ಬೋರ್‌ವೆಲ್‌ಗಳಲ್ಲಿ ನೀರು ಬರುತ್ತಿಲ್ಲ. ಇದಕ್ಕೆ ಕಾರಣವೇನೆಂದರೆ ಅಂತರ್ಜಲದ ಮಟ್ಟ ಕುಸಿದಿದೆ. ಅಂತರ್ಜಲ ಮಟ್ಟವನ್ನು ಕಾಪಾಡಿಕೊಳ್ಳುವುದಕ್ಕೆ ಯಾವ ಶಾಶ್ವತವಾದ ಯೋಜನೆಗಳನ್ನು ಮಾಡಬೇಕಾಗಿತ್ತು ಆ ಯೋಜನೆಗಳನ್ನು ಮಾಡದೇ ಇರುವುದರಿಂದ ನಮ್ಮ ರಾಜ್ಯದಲ್ಲಿ ಬಹಳ ದುರಂತದ ಪರಿಸ್ಥಿತಿಯನ್ನು ಎದುರಿಸುತ್ತಿದ್ದೇವೆ. ಮಾನ್ಯ ಕಂದಾಯ ಸಚಿವರಲ್ಲಿ ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ, ಬರಗಾಲದ ಪರಿಸ್ಥಿತಿಯಲ್ಲಿ ಯಾವ ಕ್ರಮಗಳನ್ನು ತೆಗೆದುಕೊಳ್ಳಬೇಕು ಆ ಕ್ರಮಗಳನ್ನು ತೆಗೆದುಕೊಳ್ಳುವುದರ ಜೊತೆಗೆ ಶಾಶ್ವತವಾದ ನೀರಿನ ಯೋಜನೆಗಳಿಗೆ ಸರ್ಕಾರ ಪ್ರಾಮಾಣಿಕವಾದ ಕ್ರಮವನ್ನು ತೆಗೆದುಕೊಳ್ಳದೇ ಹೋದರೆ ಬಹಳ ತೊಂದರೆಯಾಗುತ್ತದೆ. ಕೆಲವರು ‘ ಒಂದಲ್ಲ ಒಂದು ದಿನ ಈ ದೇಶದಲ್ಲಿ ನೀರಾವರಿಗಾಗಿ ಕಟ್ಟಿದಂತಹ ಡ್ಯಾಂಗಳನ್ನು ಕುಡಿಯುವ ನೀರಿಗಾಗಿ ಬಳಸುವಂತಹ ಸ್ಥಿತಿಗೆ ಬಂದು ನಿಲ್ಲುತ್ತೇವೆ’ ಎಂದು ಹೇಳುತ್ತಾರೆ. ಮುಂದೊಂದು ದಿನ ಕುಡಿಯುವುದಕ್ಕೆ ನೀರು ಸಿಕ್ಕರೆ ಸಾಕು ಎನ್ನುವ ಪರಿಸ್ಥಿತಿ ಬರುತ್ತದೆ.

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಸನ್ಮಾನ್ಯ ಸಭಾಪತಿಯವರೇ, ಪ್ರತಿಯೊಂದು ನೀರಾವರಿ ಯೋಜನೆಗಳು ಅಂತರರಾಜ್ಯ ಸಮಸ್ಯೆಗಳನ್ನು ಎದುರಿಸುತ್ತಿವೆ. ಆಂಧ್ರಪ್ರದೇಶ, ತಮಿಳುನಾಡು, ಗೋವಾ ಮತ್ತು ಮಹಾರಾಷ್ಟ್ರ ರಾಜ್ಯಗಳು ನಮ್ಮ ಪಾಲಿನ ನೀರನ್ನು ನಾವು ಉಪಯೋಗಿಸಿಕೊಳ್ಳುವುದಕ್ಕೆ ತಕರಾರು ಮಾಡುತ್ತಿವೆ. ಗೋವಾ ರಾಜ್ಯದ ಒಬ್ಬ ಜವಾಬ್ದಾರಿಯುತ ಸಚಿವರು, 'ಹೊಳೆಯ ನೀರು ಸಮುದ್ರಕ್ಕೆ ಬರದಿದ್ದರೆ ಅಲ್ಲಿ ಸಿಗುವಂತಹ ಮೀನುಗಳ ರುಚಿ ಬರೀ ಉಪ್ಪಾಗುತ್ತದೆ ಅದಕ್ಕಾಗಿ ನಾವು ಕರ್ನಾಟಕ್ಕೆ ನೀರು ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ನಾವು ಯಾವುದೇ ಕಾರಣಕ್ಕೂ ಕಳಸಾ-ಬಂಡೂರಿ ಮತ್ತು ಮಹದಾಯಿ ಯೋಜನೆಗಳಿಗೆ ಅವಕಾಶ ನೀಡುವುದಿಲ್ಲ' ಎಂದು ಹೇಳುತ್ತಿದ್ದಾರೆ. ಮೇಕೆದಾಟು ಮತ್ತು ಎತ್ತಿಹೊಳೆ ಯೋಜನೆಗಳು ಸಮಸ್ಯೆಯ ಸುಳಿಯಲ್ಲಿ ಸಿಕ್ಕಿಕೊಂಡಿವೆ. ಅಂತರ್ಜಲದ ಮಟ್ಟ ಕುಸಿದಿರುವ ಪರಿಣಾಮವಾಗಿ ಬರಗಾಲದ ಪರಿಸ್ಥಿತಿಯಲ್ಲಿ ನೀರಿಗೆ ಬಹಳಷ್ಟು ತೊಂದರೆಯಾಗುತ್ತಿದೆ. ನಮ್ಮಲ್ಲಿ ನೀರಿನ ನಿರ್ವಹಣೆಯನ್ನು ಸರಿಯಾದ ರೀತಿಯಲ್ಲಿ ಮಾಡುತ್ತಿಲ್ಲ. ನಮ್ಮ ಭಾಗದಲ್ಲಿ ಕಬ್ಬು ಬೆಳೆಯನ್ನು 'ಅಲಸಿಗಳ ಬೆಳೆ' ಎಂದು ಕರೆಯುತ್ತಾರೆ. ಅಲಸಿ ರೈತರು ಯಾರಿದ್ದಾರೆ ಅವರು ಕಬ್ಬು ಮತ್ತು ಭತ್ತವನ್ನು ಹಾಕಿ, ರಾಸಾಯನಿಕ ಗೊಬ್ಬರವನ್ನು ಸುರಿದು ಬಿಡುತ್ತಾರೆ. ನೀರನ್ನು ಹರಿಸಲು ಮೋಟಾರ್ ತಾನೇ ತಾನಾಗಿ ಚಲಾವಣೆಯಾಗುವಂತಹ ವ್ಯವಸ್ಥೆಯನ್ನು ಮಾಡಿಕೊಂಡಿದ್ದಾರೆ. ಈಗ ಯಾರೂ ರಾತ್ರಿ ವೇಳೆಯಲ್ಲಿ ಹೊಳೆ ದಂಡೆಗೆ ಹೋಗಿ ಹೊಲ-ಗದ್ದೆಗಳಿಗೆ ನೀರನ್ನು ಹರಿಸುವುದಿಲ್ಲ. ಮಲಗಿರುವ ಕಡೆಯಲ್ಲಿಯೇ ಮೊಬೈಲ್‌ನಲ್ಲಿ ಒಂದು ಬಟನ್ ಒತ್ತಿ ಮೋಟಾರ್ ಆನ್ ಮಾಡಿ, ಅಲಾರಾಂ ಕೊಟ್ಟು ಮಲಗಿಕೊಂಡು ಬಿಡುತ್ತಾರೆ. ಹೀಗೆ ನಿರಂತರವಾಗಿ ನೀರು ಹರಿಯುತ್ತಿರುತ್ತದೆ. ಇದರಿಂದಾಗಿ ಭೂಮಿ ಸವಕಳು ಆಗುತ್ತಿದೆ. ನಮ್ಮ ಭಾಗದಲ್ಲಿ ತಾನೇ ತಾನಾಗಿ ಹರಿದುಕೊಂಡು ಹೋಗುವಂತೆ ಕಾಲುವೆಗೆ ಚೀಲುಗಟ್ಟಲೆ ರಾಸಾಯನಿಕವನ್ನು ಸುರಿದು ಬಿಡುತ್ತಾರೆ. ಇಷ್ಟೊಂದು ಸೋಮಾರಿತನ ರೈತರಲ್ಲಿ ಬಂದಿದೆ.

ಸನ್ಮಾನ್ಯ ಸಭಾಪತಿಯವರೇ, ರೈತರ ಸಾಲ ಮನ್ನಾ ಮಾಡುವುದು ತಾತ್ಕಾಲಿಕವಾದ ಪರಿಹಾರವಾಗಿದೆ. ಚುನಾವಣೆ ಬಂದಾಗ ಸರ್ಕಾರದ ಜನಪ್ರಿಯತೆಯನ್ನು ಹೆಚ್ಚು ಮಾಡಿಕೊಳ್ಳುವುದಕ್ಕೆ ಸಾಲ ಮನ್ನಾ ಮತ್ತು ಅವೈಜ್ಞಾನಿಕವಾಗಿ ಹೊಸದಾಗಿ 4-5 ತಾಲ್ಲೂಕುಗಳನ್ನು ರಚನೆ ಮಾಡಲಾಗುತ್ತದೆ ಎಂದು ಘೋಷಣೆ ಮಾಡುತ್ತಾರೆ. ಆ ಸರ್ಕಾರ ಸಾಲ ಮನ್ನಾ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಆದರೆ, ಮುಂದೆ ಅಧಿಕಾರಕ್ಕೆ ಬರುವಂತಹ ಸರ್ಕಾರ ಆ ಜವಾಬ್ದಾರಿಯನ್ನು ಹೊರಬೇಕಾಗುತ್ತದೆ. ಮಾನ್ಯ ಜಗದೀಶ್ ಶೆಟ್ಟರ್‌ರವರು ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿ ಸಾಲ ಮನ್ನಾ ಎಂದು ಆಯವ್ಯಯದಲ್ಲಿ ಘೋಷಣೆ ಮಾಡಿದ್ದರು. ಮಾನ್ಯ ಸಿದ್ದರಾಮಯ್ಯನವರು ಅಧಿಕಾರಕ್ಕೆ ಬಂದಾಗ, 'ಮಾನ್ಯ ಜಗದೀಶ್ ಶೆಟ್ಟರ್‌ರವರು ಬರೀ ಸಾಲ ಮನ್ನಾ ಎಂದು ಘೋಷಣೆ ಮಾಡಿ ಹೋದರು, ನಾನು ಸಿದ್ದರಾಮಯ್ಯ ರೈತರ ಸಾಲ ಮನ್ನಾ ಮಾಡಿರುವೆ' ಎಂದು ಹೇಳಿಕೊಂಡರು. ಈಗ ಇವರು ಒಂದೆರಡು ತಿಂಗಳು ಬಿಟ್ಟು ರೈತರ ಸಾಲ ಮನ್ನಾ ಎಂದು ಘೋಷಣೆ ಮಾಡುತ್ತಾರೆ. ಮುಂದೆ ಅಧಿಕಾರಕ್ಕೆ ಬರುವಂತಹ ಸರ್ಕಾರ ಅದನ್ನು ಸರಿತೂಗಿಸಬೇಕಾಗುತ್ತದೆ.

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

(698)13-06-2017 5-40 ಟಿಸಿಹೆಚ್-ಆರ್ಎನ್

(ಉಪ ಸಭಾಪತಿಯವರ ಉಪಸ್ಥಿತಿ)

**ಶ್ರೀ ಬಸವನಗೌಡ ಆರ್.ಪಾಟೀಲ್ (ಯತ್ನಾಳ್) (ಮುಂದು):-**

ಕೊನೆಗೆ ಎಲ್ಲರೂ ಸೇರಿ ಕೇಂದ್ರ ಸರ್ಕಾರದ ಹತ್ತಿರ ಹೋಗುತ್ತಾರೆ. ಸಾಲದ ಬಗ್ಗೆ ಕೇಂದ್ರದವರು ನೇರವಾಗಿ ಹೇಳಿದ್ದಾರೆ, ಮಧ್ಯಪ್ರದೇಶದಲ್ಲಿ ಸಾಲ ಮನ್ನಾ ಮಾಡಿದರು. ಅಲ್ಲಿ ಕೇಂದ್ರ ಸರ್ಕಾರದವರು ಸಹಾಯ ಮಾಡಲಿಲ್ಲ. ಉತ್ತರ ಪ್ರದೇಶದಲ್ಲಿ ರೈತರ ಸಾಲ ಮನ್ನಾ ಮಾಡಿದರು. ಅಲ್ಲಿಯೂ ಸಹ ಕೇಂದ್ರ ಸರ್ಕಾರದವರು ಸಹಾಯ ಮಾಡಲಿಲ್ಲ. ಮಹಾರಾಷ್ಟ್ರದಲ್ಲಿ ಸುಮಾರು 35 ಸಾವಿರ ಕೋಟಿ ರೂಪಾಯಿಗಳಷ್ಟು ರೈತರ ಸಾಲ ಮನ್ನಾ ಮಾಡಿದರು. ಅಲ್ಲಿ ಕೇಂದ್ರ ಸರ್ಕಾರ ಸಹಾಯ ಮಾಡಲಿಲ್ಲ. ನಾವು ಒಬ್ಬರಿಗೊಬ್ಬರ ಮೇಲೆ ಹಾಕುವುದನ್ನು ಬಿಟ್ಟರೆ, ಪ್ರಾಮಾಣಿಕವಾಗಿ ರೈತರ ಬಗ್ಗೆ ಇವತ್ತಿನ ದಿವಸ ಚಿಂತನೆಯನ್ನು ಯಾರೂ ಮಾಡುತ್ತಿಲ್ಲ. ಎಲ್ಲೆಲ್ಲಿ ಓಟು ಬ್ಯಾಂಕ್ ಇವೆ ಆ ಓಟು ಬ್ಯಾಂಕ್‌ಗಳನ್ನು ಗಟ್ಟಿ ಮಾಡಿಕೊಳ್ಳುವುದಕ್ಕೆ ಸರ್ಕಾರ ಭಾಗ್ಯ ಯೋಜನೆಗಳನ್ನು ಜಾರಿಗೆ ತರುತ್ತಿದೆಯೋ ಹೊರತು, ರೈತರ ಪಾಲಿಗೆ ದೌರ್ಭಾಗ್ಯ ಆಗುತ್ತಿದೆಯೋ ಹೊರತು, ಅವರಿಗೆ ಯಾವುದೇ ಭಾಗ್ಯ ಯೋಜನೆಗಳು ಸಿಗುತ್ತಿಲ್ಲ. ಇದು ಬಹಳ ನೋವಿನ ಸಂಗತಿಯಾಗಿದೆ. ಇವತ್ತಿನ ದಿವಸ ಸರ್ಕಾರಿ ನೌಕರರಿಗೆ 7ನೇ ಮತ್ತು 8ನೇ ವೇತನ ಆಯೋಗ ಜಾರಿಗೆ ತರುತ್ತಿದ್ದೀರಿ. ನಮ್ಮ ಶಿಕ್ಷಕರ ಮತಕ್ಷೇತ್ರದವರು, ಶಿಕ್ಷಕರ ಟಿ.ಎ, ಡಿ.ಎ ಬಗ್ಗೆಯೇ ದೊಡ್ಡ ಚರ್ಚೆ ಆಗುತ್ತದೆ. ನಮ್ಮ ಮಾನ್ಯ ಬಸವರಾಜ ಹೊರಟ್ಟಿ ಸಾಹೇಬರಿಗೆ ಯಾವಾಗಲೂ ಅವರದ್ದೇ ಚಿಂತೆ. ಅವರಿಗೇನು ರೈತರು ಬಗ್ಗೆ ಏನು ಅವಶ್ಯಕತೆ ಇಲ್ಲ. ಅವರಿಗೆ ಶಿಕ್ಷಕರ ಓಟು ಮಾತ್ರ ಗಟ್ಟಿಯಾಗಬೇಕು. ನಮ್ಮ ಶಿಕ್ಷಕರ ವೃಂದದಿಂದ ಓಟು ನಡೆದಾಗ, ಅವರೆಲ್ಲಾ ಬಂದು ಮೇಲೆ ಕುಳಿತುಕೊಳ್ಳುತ್ತಾರೆ. ಇಲ್ಲಿ ವೀರಾವೇಶದಿಂದ ನಮ್ಮ ಶಿಕ್ಷಕರ ಕ್ಷೇತ್ರ ಮತ್ತು ಪದವೀಧರ ಕ್ಷೇತ್ರದವರು ಮಾತನಾಡುತ್ತಾರೆ. ಹೊರಗಡೆ ಹೋದಾಗ, ತಾವು ಸದನದಲ್ಲಿ ಭಾರಿ ಮಾತನಾಡಿದಿರಿ ಸರ್ ಎಂದು ಅವರು ಹೇಳುತ್ತಾರೆ. ಇವರು ಇಷ್ಟು ಪಡೆದುಕೊಂಡು ಮತ್ತೆ ಆರು ವರ್ಷಗಳಿಗೆ ಆಯ್ಕೆಯಾಗಿ ಬರುತ್ತಾರೆ. ನಮ್ಮ ಸ್ಥಳೀಯ ಸಂಸ್ಥೆಗಳ ಬಗ್ಗೆ ಮತ್ತು ನೀರಾವರಿ ಬಗ್ಗೆ ಚರ್ಚೆಯೇ ಆಗುವುದಿಲ್ಲ. ಏತಕ್ಕೆ ಚರ್ಚೆ ಮಾಡುವುದಿಲ್ಲವೆಂದರೆ, ಮಾನ್ಯ ಸಭಾಪತಿಯವರು ಮತ್ತು ಮಾನ್ಯ ಉಪ ಸಭಾಪತಿಯವರು ನೀವು ಇಬ್ಬರೂ ಪದವೀಧರ ಕ್ಷೇತ್ರ ಹಾಗೂ ಶಿಕ್ಷಕರ ಕ್ಷೇತ್ರದಿಂದ ಆಯ್ಕೆಯಾಗಿ ಬಂದಿರುತ್ತೀರಿ. ಅದಕ್ಕೇನೆ ಈಗ ನಮ್ಮ ಮನಸ್ಸಿನಲ್ಲಿ ಬಂದಿದೆ, ಸ್ಥಳೀಯ ಸಂಸ್ಥೆಯವರು ಮತ್ತು ವಿಧಾನಸಭೆಯಿಂದ ಆಯ್ಕೆಯಾಗಿ ಬಂದವರು ಒಮ್ಮೆ ಪೀಠದಲ್ಲಿ ಕುಳಿತುಕೊಳ್ಳಲಿ ಎಂದು ನಮ್ಮ ಮನಸ್ಸು ಹೇಳುತ್ತಿದೆ. ಮಾನ್ಯ ಸಭಾಪತಿಯವರೆ, ಇಲ್ಲಿ ಏನಾಗುತ್ತಿದೆ ಎಂದರೆ, ನಮ್ಮ ಆಸೆ ಈಡೇರುತ್ತದೆಯೋ ಇಲ್ಲವೋ ಆ ಭಗವಂತನಿಗೆ ಗೊತ್ತು. ಆದರೆ ನಾವು ಪ್ರಾಮಾಣಿಕವಾಗಿ ರೈತರ ಬಗ್ಗೆ ಮತ್ತು ರೈತರ ವ್ಯವಸ್ಥೆ ಬಗ್ಗೆ ಚರ್ಚೆ ಮಾಡಬೇಕು. ಇವತ್ತಿನ ದಿವಸ ಮಾನ್ಯ

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಶ್ರೀಕಂಠೇಗೌಡರು ನದಿಗಳ ಜೋಡಣೆ ಆಗಬೇಕೆಂದು ಹೇಳಿದರು. ನಾನು ಕೇಂದ್ರದಲ್ಲಿ ಸಚಿವನಾಗಿದ್ದಾಗ, ಸನ್ಮಾನ್ಯ ಅಟಲ್ ಬಿಹಾರಿ ವಾಜಪೇಯಿಯವರು ಈ ದೇಶದ ಪ್ರಧಾನ ಮಂತ್ರಿಗಳಾಗಿದ್ದಾಗ, ನದಿ ಜೋಡಣೆಯ ಬಗ್ಗೆ ಒಂದು ದೊಡ್ಡ ಚಿಂತನೆಯನ್ನು ಮಾಡಿದ್ದರು. ಇವತ್ತಿನ ದಿವಸ ಶ್ರೀ ಸುರೇಶ್ ಪ್ರಭುರವರು ರೈಲ್ವೆ ಸಚಿವರಾಗಿದ್ದಾರೆ. ಅವರ ಅಧ್ಯಕ್ಷತೆಯಲ್ಲಿ ರಿವರ್ ಲಿಂಕಿಂಗ್ ಟಾಸ್ಕ್‌ಫೋರ್ಸ್ ಅನ್ನು ಸುಮಾರು ಐದು ಲಕ್ಷ ಐವತ್ತು ಸಾವಿರ ಕೋಟಿ ರೂಪಾಯಿಯಲ್ಲಿ ಮಾಡಿದ್ದರು. ಇಡೀ ದೇಶದ ಗಂಗಾ ಮತ್ತು ಬ್ರಹ್ಮಪುತ್ರ ನದಿಯನ್ನು ಸುಮಾರು 32 ಕಡೆ ನದಿ ಜೋಡಣೆ ಮಾಡಿದರೆ, ಬಹುತೇಕವಾಗಿ ಶಾಶ್ವತವಾದಂತಹ ಅತಿವೃಷ್ಟಿ ಮತ್ತು ಬರಗಾಲ ಇವೆರಡನ್ನೂ ತಡೆಯುವುದಕ್ಕೆ ಸಾಧ್ಯವಿತ್ತು. ಆದರೆ, ಏಕೋ ಏನೋ ನನಗೇನು ಅರ್ಥವಾಗುತ್ತಿಲ್ಲ. ಸನ್ಮಾನ್ಯ ನರೇಂದ್ರ ಮೋದಿಯವರು ಮತ್ತಿತರೆ ಯಾರೂ ಈ ನದಿ ಜೋಡಣೆ ಬಗ್ಗೆ ಮಾತನಾಡುತ್ತಲೇ ಇಲ್ಲ. ಮಾನ್ಯ ಪ್ರಧಾನ ಮಂತ್ರಿಗಳು ಸಹ ಇದರ ಬಗ್ಗೆ ಮಾತನಾಡುತ್ತಿಲ್ಲ. ಆದರೆ ಮಾನ್ಯ ಪ್ರಧಾನ ಮಂತ್ರಿಗಳು ಈ ದೇಶದಲ್ಲಿ ಸಾಕಷ್ಟು ಅಭಿವೃದ್ಧಿಯ ಸಲುವಾಗಿ ಚಿಂತನೆ ಮಾಡುತ್ತಿದ್ದಾರೆ. ಇವತ್ತಿನ ದಿವಸ ಗುಜರಾತ್‌ನಲ್ಲಿ ಅವರು ಮುಖ್ಯಮಂತ್ರಿ ಆಗಿದ್ದಾಗ ನರ್ಮದಾ ನದಿಯನ್ನು ಜೋಡಣೆ ಮಾಡಿದ್ದಾರೆ. ನಾವು ಮೊನ್ನೆ ಗುಜರಾತ್‌ಗೆ ಹೋದಾಗ, ಎರಡು ನದಿಗಳ ಜೋಡಣೆ ಮಾಡಿರುವುದನ್ನು ಗಮನಿಸಿದ್ದೇವೆ. ಈ ಹಿಂದೆ ಎರಡೂ ನದಿಗಳು ಬತ್ತಿ ಹೋಗಿತ್ತು, ಈಗ ಅಹಮದಾಬಾದ್‌ನಲ್ಲಿರುವ ನದಿಗೆ ಸಹಿತ 12 ತಿಂಗಳು ನೀರು ಹರಿಯುತ್ತಿದೆ. ಇವತ್ತಿನ ದಿವಸ ನಾವು ಇಡೀ ದೇಶದಲ್ಲಿ ಈ ರೀತಿಯಾದ ನದಿ ಜೋಡಣೆ ಮಾಡುವ ಬಗ್ಗೆ ಕೇಂದ್ರ ಸರ್ಕಾರ ಚಿಂತನೆ ಮಾಡಬೇಕು. ಏಕೆಂದರೆ, ಶಾಶ್ವತವಾಗಿ ನಾವು ಯೋಜನೆಯನ್ನು ಮಾಡಬೇಕು. ನಾವು ಲೋಕ ಸಭಾ ಸದಸ್ಯರು ಆಗಿದ್ದಾಗ ಹೇಳುತ್ತಿದ್ದರು. ಇವತ್ತಿನ ದಿವಸ ಬಿಹಾರ ಮತ್ತು ಉತ್ತರ ಪ್ರದೇಶ ಇರಬಹುದು ಅಲ್ಲಿ ಅತಿವೃಷ್ಟಿ ಆದಾಗ, ಅಲ್ಲಿ ಏನು ನೀರು ಮಹಾಪೂರ ಬಂದಾಗ, ಆ ಗೇಟ್‌ನ್ನು ತೆಗೆದು ಬಿಟ್ಟರೆ, ಬರಗಾಲ ಪ್ರದೇಶಕ್ಕೆ ನೀರು ಕೊಡುವಂತಹ ಒಂದು ದೊಡ್ಡ ಯೋಜನೆ ಆಗುತ್ತಿತ್ತು. ಆದುದರಿಂದ ಇವತ್ತಿನ ದಿವಸ ನದಿ ಜೋಡಣೆ ಆಗಬೇಕಾಗಿದೆ. ಈ ಎಲ್ಲಾ ಯೋಜನೆಗಳು ಶಾಶ್ವತವಾದಂಥವು. ನಾವು ಇವತ್ತಿನ ದಿವಸ ಏನು ಮಾಡುತ್ತಿದ್ದೇವೆಂದರೆ, ತಾತ್ಪೂರ್ತಿಕವಾದಂತಹ ಯೋಜನೆಗಳ ಬಗ್ಗೆ ಅಂದರೆ, ಬೋರ್‌ವೆಲ್‌ಗಳನ್ನು ಹಾಕಿಸುವುದು ಮಾಡುತ್ತಿದ್ದೇವೆ. ನಮ್ಮ ನೀರಿನ ಬಿಲ್ಲನ್ನು ಸರ್ಕಾರ ಕೊಟ್ಟಿಲ್ಲ. ಇವತ್ತು ಇಷ್ಟು ಕೊಳವೆ ಬಾವಿಗಳನ್ನು ಸರ್ಕಾರ ತೆಗೆಯಬೇಕಾಗಿತ್ತು. ಆದರೆ ಸರ್ಕಾರ ತೆಗೆದಿಲ್ಲವೆಂದು ಹೇಳುತ್ತಿದ್ದೇವೆ. ಆಡಳಿತ ಪಕ್ಷವನ್ನು ವಿರೋಧ ಪಕ್ಷಗಳು ಮತ್ತು ನಾವು ಟೀಕೆ ಮಾಡುತ್ತಿದ್ದೇವೆ. ಇವತ್ತಿನ ದಿವಸ ಇದರಿಂದ ಪ್ರಾಮಾಣಿಕವಾಗಿ ಈ ದೇಶದಲ್ಲಿ ಶಾಶ್ವತವಾದಂತಹ ಬರಗಾಲ ಹೋಗುವುದಕ್ಕೆ ಸಾಧ್ಯವಿಲ್ಲ. ಅದಕ್ಕೆ ಮಾನ್ಯ ಸಭಾಪತಿಯವರೆ...

**ಕವಟಗಿಮಟ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ತಾವು ದಯವಿಟ್ಟು ಕ್ಷಮಿಸಬೇಕು. ಸದನದಲ್ಲಿ ಮಾನ್ಯ ಕಂದಾಯ ಸಚಿವರು ಇದ್ದಾರೆ. ಕಳೆದ ತಿಂಗಳು ಬೆಳಗಾವಿ ಜಿಲ್ಲೆಯ

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಸವದತ್ತಿ ತಾಲ್ಲೂಕಿನ ಹಂಚಿನಾಳ ಗ್ರಾಮದಲ್ಲಿ, ಮಳೆ ಗಾಳಿಯಿಂದ ಸುಮಾರು 80 ಕೃಷಿ ಕಾರ್ಮಿಕರ ಕುಟುಂಬಗಳು ಮನೆಯನ್ನು ಕಳೆದುಕೊಂಡಿದ್ದಾರೆ. ಅಲ್ಲಿರತಕ್ಕಂತಹವರು ತಮ್ಮ ಇಡೀ ಆಸ್ತಿಯನ್ನು ಕಳೆದುಕೊಂಡಿದ್ದಾರೆ. ಅವರ ಮನೆಯಲ್ಲಿರುವಂತಹ ಎಲ್ಲಾ ವಸ್ತುಗಳು ಸಂಪೂರ್ಣವಾಗಿ ಸುಟ್ಟು ಅವರು ಬೀದಿಗೆ ಬಂದಿದ್ದಾರೆ. ಇವತ್ತು ಸದನದಲ್ಲಿ ಇದನ್ನು ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಿದ್ದೇನೆ. ಅವರಿಗೆ ಪರಿಹಾರವನ್ನು ಕೊಡುವಂಥದ್ದರಲ್ಲಿ ಜಿಲ್ಲಾ ಉಸ್ತುವಾರಿ ಸಚಿವರು ಭೇಟಿಯಾಗಿ ಬಂದಿದ್ದಾರೆ. ಹಾಗೂ ಶ್ರೀ ಎಚ್.ಕೆ.ಪಾಟೀಲ್‌ರವರು ಭೇಟಿ ಕೊಟ್ಟಿದ್ದಾರೆ. ಪ್ರತಿ ಕುಟುಂಬಕ್ಕೆ ಸುಮಾರು 99 ಸಾವಿರ ರೂಪಾಯಿಗಳ ಪರಿಹಾರ ಕೊಡುತ್ತೇವೆಂದು ವಾಗ್ದಾನ ಮಾಡಿದರೂ ಸಹ, ಇವತ್ತಿಗೂ ಸಹ ಪರಿಹಾರವನ್ನು ಅವರ ಕುಟುಂಬಗಳಿಗೆ ತಲುಪಿಸಿಲ್ಲ. ತಾವು ಕಂದಾಯ ಸಚಿವರು ಇದ್ದೀರಿ. ಇಲ್ಲಿ ಸದನ ನಡೆಯುತ್ತಿದೆ. ಬೆಳಗಾವಿ ಜಿಲ್ಲೆಯ ಸವದತ್ತಿ ತಾಲ್ಲೂಕಿನ ಹಂಚಿನಾಳ ಗ್ರಾಮದಲ್ಲಿ ಸುಮಾರು 80 ಕೃಷಿ ಕಾರ್ಮಿಕರ ಕುಟುಂಬಗಳು ಇವೆ. ಅಲ್ಲಿ ಯಾರು ಮಳೆಗಾಳಿಗೆ, ಬೆಂಕಿಗೆ ಸಿಕ್ಕಿ ತಮ್ಮ ಸಂಪೂರ್ಣ ಮನೆ-ಮಠ ಮತ್ತು ಅಲ್ಲಿ ಇರತಕ್ಕಂತಹ ತಮ್ಮ ಕೃಷಿ ಉಪಕರಣಗಳನ್ನು ಕಳೆದುಕೊಂಡಿದ್ದಾರೆ. ಅವರು ಅತ್ಯಂತ ಸಾಮಾನ್ಯ ಕೃಷಿ ಕುಂಟುಂಬಗಳಾಗಿವೆ. ಅವರು ತಮ್ಮ ಕುಟುಂಬವನ್ನು ಕಳೆದುಕೊಂಡು ಬೀದಿಪಾಲಾಗಿದ್ದಾರೆ. ಅವರಿಗೆ ಸೂಕ್ತ ಪರಿಹಾರವನ್ನು ಕೊಡಬೇಕು ಮತ್ತು ಅವರಿಗೆ ವಸತಿಯನ್ನು ಸಹ ಕೊಡಬೇಕು ಎನ್ನುವಂತಹ ಮನವಿಯನ್ನು ತಮ್ಮ ಮುಖಾಂತರ ಮಾನ್ಯ ಕಂದಾಯ ಸಚಿವರಿಗೆ ಮನವಿ ಮಾಡುವುದಕ್ಕೆ ಬಯಸುತ್ತಿದ್ದೇನೆ.

**ಶ್ರೀ ಬಸವನಗೌಡ ಆರ್.ಪಾಟೀಲ್ (ಯತ್ನಾಳ್):-** ಮಾನ್ಯ ಸಭಾಪತಿಯವರೆ, ಇವತ್ತಿನ ದಿವಸ ಕರ್ನಾಟಕ ಭೀಕರವಾದಂತಹ ಬರಗಾಲವನ್ನು ಎದುರಿಸುತ್ತಿದ್ದು, ಅದರ ಜೊತೆಗೆ ಇವತ್ತಿನ ದಿವಸ ರೈತರು ಬೆಳೆದಂತಹ ಬೆಳೆಗಳಿಗೆ ಯೋಗ್ಯವಾದಂತಹ ಬೆಲೆ ಸಿಗುತ್ತಿಲ್ಲ. ಅದಕ್ಕೆ ಇವತ್ತಿನ ದಿವಸ ರೈತರ ಆತ್ಮಹತ್ಯೆ ಆಗುತ್ತಿದೆ. ರೈತ ತೊಗರಿ ಬೆಳೆಯನ್ನು ಬೆಳೆಯುತ್ತಿದ್ದಾನೆ. ಇವತ್ತಿನ ದಿವಸ ಸರ್ಕಾರವೇ ಸುಮಾರು 13 ಲಕ್ಷ ಕ್ವಿಂಟಾಲ್ ತೊಗರಿಯನ್ನು ಖರೀದಿ ಮಾಡಿದೆ. ರೈತರು ಬೆಳೆದ ತೊಗರಿಗೆ ಕ್ವಿಂಟಾಲ್‌ಗೆ ರೂ. 5,500/- ಎಂದು ಬೆಲೆಯನ್ನು ನಿಗದಿ ಮಾಡಿದ್ದರು. ಇಲ್ಲಿಯವರೆಗೂ ರಾಜ್ಯ ಸರ್ಕಾರದ ಹಣ ರೈತರ ಖಾತೆಗೆ ಬಂದಿರುವುದಿಲ್ಲ. ಹಿಂದಿನ ವರ್ಷ ಸುಮಾರು ರೂ. 15000-19000/- ದವರೆಗೂ ತೊಗರಿಗೆ ಬೆಲೆ ಇತ್ತು. ಈ ವರ್ಷ ಇಂತಹ ಬರಗಾಲದಲ್ಲಿಯೂ ಸಹ ತೊಗರಿ ಬೆಳೆದಂತಹ ರೈತರು, ರಾಜ್ಯ ಸರ್ಕಾರದ ಪಾಲು ಇರುವ ಸುಮಾರು 5,500/- ರೂಪಾಯಿಗಳು ರೈತರ ಖಾತೆಗೆ ಜಮಾ ಆಗಿಲ್ಲ. ಈ ರೀತಿ ನಮ್ಮ ರೈತರು ಬೆಳೆದಂತಹ ಬೆಳೆಗಳಿಗೆ ಸೂಕ್ತ ಬೆಲೆ ಸಿಗದೇ ಇದ್ದಾಗ . . .

**ಶ್ರೀ ಕೃಷ್ಣಭೈರೇಗೌಡ (ಕೃಷಿ ಸಚಿವರು):-** ಮಾನ್ಯ ಸಭಾಪತಿಯವರೆ, 13 ಲಕ್ಷ ಟನ್ ಖರೀದಿಸಲಾಗಿದೆ ಎಂದು ಹೇಳುತ್ತಿದ್ದೀರಿ. ಆದರೆ, ಒಟ್ಟು 34 ಲಕ್ಷ ಕಿಂಟಾಲ್ ತೊಗರಿಯನ್ನು ಸರ್ಕಾರ ಖರೀದಿಸಿದೆ. ಈ ಹಿಂದೆ ಗರಿಷ್ಠ ನಮ್ಮ ರಾಜ್ಯದಲ್ಲಿ ಎರಡೂವರೆ ಲಕ್ಷ ಕ್ವಿಂಟಾಲ್ ತೊಗರಿ ಖರೀದಿ ಮಾಡಿರುತ್ತಾರೆ. ಹಿಂದಿನ ವರ್ಷ ಹಾಗೂ ಯಾವುದೇ

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ವರ್ಷವನ್ನು ತೆಗೆದುಕೊಂಡರೂ ಗರಿಷ್ಠ ನಮ್ಮ ರಾಜ್ಯದಲ್ಲಿ ತೊಗರಿ ಖರೀದಿಯಾಗಿದ್ದು ಎರಡೂವರೆ ಲಕ್ಷ ಕ್ವಿಂಟಾಲ್. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೊದಲನೆಯ ವರ್ಷದಲ್ಲಿ ಅಂದರೆ 2013-14ರಲ್ಲಿ ಇದನ್ನೇ ಮಾಡಲಾಗಿದೆ. ಈ ವರ್ಷ ಹಿಂದಿನ ಗರಿಷ್ಠ ಪ್ರಮಾಣಕ್ಕಿಂತ ಸುಮಾರು 14-15 ಪಟ್ಟು ಅಂದರೆ, 34 ಲಕ್ಷ ಕ್ವಿಂಟಾಲ್ ತೊಗರಿ ಖರೀದಿಯಾಗಿದೆ. ನಮ್ಮ ರಾಜ್ಯದ ಪಕ್ಕದಲ್ಲಿರುವ ಮಹಾರಾಷ್ಟ್ರ, ಆಂಧ್ರ ಪ್ರದೇಶ ಮತ್ತು ತೆಲಂಗಾಣ ಇವರೆಲ್ಲರೂ ಖರೀದಿ ಮಾಡಿದರು. ಎಲ್ಲೂ ಸಹ ರೈತರಿಗೆ ಪ್ರೋತ್ಸಾಹಧನ ಕೊಟ್ಟಿಲ್ಲ. ಅವರೆಲ್ಲಾ ಕ್ವಿಂಟಾಲ್‌ಗೆ 5050/- ರೂಪಾಯಿಗಳಂತೆ ಖರೀದಿ ಮಾಡಿದರು. ಕರ್ನಾಟಕದಲ್ಲಿ ಮಾತ್ರ ನಾವು 450/- ರೂಪಾಯಿಗಳ ಪ್ರೋತ್ಸಾಹಧನವನ್ನು ಕೊಟ್ಟು, 5500/- ರೂಪಾಯಿಗಳಿಗೆ ಖರೀದಿ ಮಾಡಿದ್ದೇವೆ. ಬೇರೆ ಯಾವ ರಾಜ್ಯದಲ್ಲೂ ಪ್ರೋತ್ಸಾಹಧನ ಕೊಟ್ಟಿಲ್ಲ.

**ಶ್ರೀ ಬಸವನಗೌಡ ಆರ್.ಪಾಟೀಲ್ (ಯತ್ನಾಳ್):-** ಮಾನ್ಯ ಸಭಾಪತಿಯವರೆ, ಆ ಪ್ರೋತ್ಸಾಹ ಧನ ರೈತರ ಖಾತೆಗೆ ಜಮಾ ಆಗಿರುವುದಿಲ್ಲ.

**ಶ್ರೀ ಕೃಷ್ಣಭೈರೇಗೌಡ (ಕೃಷಿ ಸಚಿವರು):-** ಮಾನ್ಯ ಸಭಾಪತಿಯವರೆ, ನಾನು ಹೇಳುತ್ತಿದ್ದೇನೆ. ಅದರ ಬಗ್ಗೆಯೂ ಸಹ ಬರುತ್ತಿದ್ದೇನೆ. ಬೇರೆ ಯಾವ ರಾಜ್ಯದಲ್ಲಿಯೂ ಸಹ ಪ್ರೋತ್ಸಾಹಧನವನ್ನು ಕೊಟ್ಟಿಲ್ಲ. ಒಟ್ಟು 34 ಲಕ್ಷ ಕ್ವಿಂಟಾಲ್ ತೊಗರಿ ಖರೀದಿಯಾಗಿದೆ. ಅದರ ಮೌಲ್ಯ 1900 ಕೋಟಿ ರೂಪಾಯಿಗಳು. ಅದರಲ್ಲಿ ಹೆಚ್ಚು ಕಡಿಮೆ 1700 ಕೋಟಿ ರೂಪಾಯಿಗಳು ರೈತರಿಗೆ ಪಾವತಿಯಾಗಿದೆ. 100-150 ಕೋಟಿ ರೂಪಾಯಿಗಳು ರೈತರಿಗೆ ಕೊಡಲು ಬಾಕಿ ಇರಬಹುದು. ಕೆಲವು ದಿನಗಳ ಅಂತರ ಅಷ್ಟೇ. ಅದೂ ಸಹ ರೈತರ ಖಾತೆಗೆ ಜಮಾ ಆಗುತ್ತದೆ. ಒಟ್ಟು 1900 ಕೋಟಿ ರೂಪಾಯಿಗಳಲ್ಲಿ ಬಹುತೇಕ 100-150 ಕೋಟಿ ರೂಪಾಯಿಗಳನ್ನು ಬಿಟ್ಟರೆ ಉಳಿದೆಲ್ಲಾ ಜಮಾ ಆಗಿದೆ. ಬಾಕಿ ಇರುವುದು ಕೆಲವೇ ದಿನದಲ್ಲಿ ರೈತರ ಖಾತೆಗೆ ಜಮಾ ಮಾಡುತ್ತೇವೆ.

**ಶ್ರೀ ಬಸವನಗೌಡ ಆರ್.ಪಾಟೀಲ್ (ಯತ್ನಾಳ್):-** ಮಾನ್ಯ ಸಭಾಪತಿಯವರೆ, ಮಾನ್ಯ ಕೃಷಿ ಸಚಿವರು ಹೇಳಿದಂತೆ, ಈ ಬಾರಿ ತೊಗರಿ ಖರೀದಿಯಲ್ಲಿ ಸಾಕಷ್ಟು ಗಣನೀಯವಾಗಿ ರೈತರಿಗೆ ಒಂದು ರೀತಿ ಅನುಕೂಲವಾಗಿದೆ. ನಾನು ರೈತರಿಗೆ ಅನುಕೂಲವಾಗಿಲ್ಲವೆಂದು ಹೇಳುವುದಿಲ್ಲ. ಏಕೆಂದರೆ ಅಂಕಿ-ಸಂಖ್ಯೆ ತಪ್ಪು ಇರಬಹುದು. ಇವತ್ತಿನ ದಿವಸ ನೀವು 34 ಲಕ್ಷ ಕ್ವಿಂಟಾಲ್ ತೊಗರಿಯನ್ನು ಖರೀದಿ ಮಾಡಿದ್ದೀರಿ. ನಾನು ಸಚಿವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ವಿಶೇಷವಾಗಿ ಇದನ್ನು ಪ್ರಸ್ತಾಪ ಮಾಡಿದ್ದು ಏಕೆಂದರೆ, ತೊಗರಿ ಕೇಂದ್ರಗಳು ಪ್ರಾರಂಭ ಆಗದೇ ಇರುವಾಗ, ನಾನು ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡಿದ್ದೆನು. ಮತ್ತೆ ನಮ್ಮ ತೋಟಗಾರಿಕೆ ಮತ್ತು ಕೃಷಿ ಉತ್ಪನ್ನ ಸಚಿವರು, ತಕ್ಷಣ ಕೇಂದ್ರಗಳನ್ನು ತೆರೆದು ಮತ್ತೆ ತೊಗರಿಯನ್ನು ಖರೀದಿ ಮಾಡುವಂಥದ್ದನ್ನು ಮಾಡಿದರು. ಆದರೆ ಏನಾಗಿದೆ ಎಂದರೆ, ಮಾನ್ಯ ಸಭಾಪತಿಯವರೆ, ಇವತ್ತಿನ ದಿವಸ ರೈತರಿಗೆ ಯೋಗ್ಯವಾದಂತಹ ಬೆಂಬಲ ಬೆಲೆ ಸಿಗಬೇಕು.

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

(699)13-06-2017 5-50 ಪಿಕೆ:ವಿಕೆ

**ಶ್ರೀ ಬಸನಗೌಡ ಆರ್.ಪಾಟೀಲ (ಯತ್ನಾಳ)** (ಮುಂದು):

ಉದಾಹರಣೆಗೆ ದ್ರಾಕ್ಷಿ ಬೆಳೆ ಬಗ್ಗೆ ಹೇಳುತ್ತೇನೆ. ಈ ಸಲ ದ್ರಾಕ್ಷಿ ಬೆಲೆ ಕ್ವಿಂಟಾಲ್‌ಗೆ ರೂ. 60-70ಕ್ಕೆ ಬಂದಿದೆ. ಈ ಬೆಲೆ ರೂ.130-140ಕ್ಕೆ ಏರಿದರೆ ಮಾತ್ರ ರೈತರು ಖರ್ಚು ಮಾಡಿರುವಂತಹ ಹಣ ವಾಪಸ್ಸು ಬರುವುದಕ್ಕೆ ಸಹಕಾರಿ ಆಗುತ್ತದೆ. ರೈತರು ಬೆಳೆದಂತಹ ಬೆಳೆಗೆ ಸೂಕ್ತವಾದ ಬೆಲೆ ಕೊಡದೇ ಇದ್ದರೆ, ಸಹಕಾರ ನೀಡದೇ ಇದ್ದರೆ ಬಹುಶಃ ರೈತರು ಸಾಲದಲ್ಲೇ ಕೊಳೆಯುತ್ತಾರೆ ಎಂದು ಹೇಳಬೇಕಾಗುತ್ತದೆ. ಭವಿಷ್ಯದ ಶಾಶ್ವತ ಯೋಜನೆಗಳ ಬಗ್ಗೆ ಸರ್ಕಾರ ಚಿಂತನೆ ಮಾಡಬೇಕು. ಕೇವಲ ಬರಗಾಲ ಬಂದಾಗ ಮಾತ್ರ ಸದನದಲ್ಲಿ ಅದನ್ನು ಚರ್ಚೆ ಮಾಡುವುದಕ್ಕಿಂತ, ಮಾನ್ಯ ಸದಸ್ಯರಾದ ರವಿಯವರು ಹೇಳಿದಂತೆ, ಅಂತರ್ಜಲ ಹೆಚ್ಚು ಮಾಡುವ ಯೋಜನೆಗಳನ್ನು ಹಾಕಿಕೊಳ್ಳಬೇಕು. Check dam, Nala bunds ಮಾಡಿ, ನೀರಾವರಿ ಯೋಜನೆಗಳನ್ನು ಮುಕ್ತಾಯಗೊಳಿಸುವ ನಿಟ್ಟಿನಲ್ಲಿ ಹೆಚ್ಚಿನ ಗಮನಕೊಡಬೇಕು. ನೀರಿನ management ಏನಿದೆ, ಆ ಕುರಿತು ರೈತರಲ್ಲಿ ಜಾಗರೂಕತೆ ಮೂಡಿಸಬೇಕು, ಹನಿ ನೀರಾವರಿಗೆ ಒತ್ತನ್ನು ನೀಡುವ ಕೆಲಸ ಮಾಡಬೇಕು. ಮಾನ್ಯ ಕೃಷಿ ಸಚಿವರು ಬೆಳಿಗ್ಗೆ, ಹನಿ ನೀರಾವರಿಗೆ ಸರ್ಕಾರ ಎಷ್ಟು ಹಣ ತೆಗೆದಿಟ್ಟಿದೆ ಎನ್ನುವುದರ ಬಗ್ಗೆ ಹೇಳಿದರು. ಮರಳು ಮಾಫಿಯವನ್ನೂ ಸಹ ಸರಿಯಾಗಿ ನಿರ್ವಹಣೆ ಮಾಡದೇ ಇದ್ದುದರಿಂದ ಮತ್ತು ಅಂತರ್ಜಲ ಕುಸಿದಿದ್ದರಿಂದ ಈ ಒಂದು ಅಂಶ ಕೂಡ ಬರಗಾಲಕ್ಕೆ ಕಾರಣವಾಗಿದೆ. ಮೊನ್ನೆ ನಾನು ಮರಗಳನ್ನು ಕಡಿಯುತ್ತಿರುವುದರ ಬಗ್ಗೆ ಹೇಳಿದೆ. ಬಿಜಾಪುರ ಜಿಲ್ಲೆಯಲ್ಲಿ ಕೇವಲ ಶೇಕಡ 3ರಷ್ಟು ಮಾತ್ರ reserve forest ಇದೆ. ಅಂದರೆ, ಇವತ್ತು ಮರಗಳ ಕಡಿಯುವಿಕೆಯ ಮೇಲೆ ಯಾವುದೇ ನಿಯಂತ್ರಣ ಇಲ್ಲದಾಗಿದೆ. ಮರಗಳಿಂದ ಎಷ್ಟು ಲಾಭವಾಗುತ್ತದೆ ಎನ್ನುವುದರ ಬಗ್ಗೆ ರೈತರಿಗೆ ಮಾಹಿತಿ ಕೊಡಬೇಕು. ನಾನು ವಿಶೇಷವಾಗಿ ಕೃಷಿ ಸಚಿವರಲ್ಲಿ ಒಂದು ವಿನಂತಿ ಮಾಡಿಕೊಳ್ಳುತ್ತೇನೆ. ನಾವೇನು ಬಳ್ಳಾರಿ ಜಾಲಿ ಮರ ಎಂದು ಕರೆಯುತ್ತೇವೆಯೋ ಇದರ ಬಗ್ಗೆ ಒಂದು ಸಂಶೋಧನೆ ಆಗಬೇಕು. ಇದು ವಾತಾವರಣದಲ್ಲಿರುವ ಶೇಕಡ 40 ರಷ್ಟು ತೇವಾಂಶವನ್ನು ಹೀರುತ್ತದೆ ಎನ್ನುವ ಅಭಿಪ್ರಾಯ ಇದೆ. ಇದರಿಂದ ಬಿಸಿಲು ಬಹಳ ಜಾಸ್ತಿಯಾಗಿ, ಇದೂ ಕೂಡ ಬರಗಾಲಕ್ಕೆ ಕಾರಣ ಎನ್ನುವುದನ್ನು ಕೆಲವು ವಿಜ್ಞಾನಿಗಳು ಹೇಳುತ್ತಿದ್ದಾರೆ. ಇದರಲ್ಲಿ ಎಷ್ಟರಮಟ್ಟಿಗೆ ಸತ್ಯವಿದೆ ಎಂದು ತಿಳಿದುಕೊಳ್ಳಲು ಒಂದು ತಜ್ಞರ ಸಮಿತಿ ಮಾಡಬೇಕು. ಇದರ ಬಗ್ಗೆ ಪೂರ್ತಿ ಅಧ್ಯಯನ ಮಾಡಬೇಕು. ಈ ಹಿನ್ನೆಲೆ ಕೂಡ ಬರಗಾಲಕ್ಕೆ ಕಾರಣವಾಗುತ್ತಿದ್ದರೆ ಸಂಪೂರ್ಣವಾಗಿ ಈ ಬಳ್ಳಾರಿ ಜಾಲಿ ಮರಗಳನ್ನು ನಾಶ ಮಾಡುವ ವ್ಯವಸ್ಥೆ ಮಾಡಬೇಕು. ನೀಲಗಿರಿ ಮರಗಳಿಂದಲೂ ಅಂತರ್ಜಲ ಕಡಿಮೆ ಆಗುತ್ತದೆ ಎಂದು ಹೇಳುತ್ತಾರೆ. ಆದ್ದರಿಂದ ಸರ್ಕಾರ ಯುದ್ಧೋಪಾದಿಯಲ್ಲಿ ಇಂತಹ ಗಿಡ-ಮರಗಳನ್ನು ನಿರ್ಮೂಲನೆ ಮಾಡುವ ಕೆಲಸ ಮಾಡಬೇಕು. ನಿಸರ್ಗ ವಿರೋಧಿ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "**

ಗಿಡ-ಮರಗಳನ್ನು ನಾಶ ಮಾಡಬೇಕು. ನಿಸರ್ಗಕ್ಕೆ ಪೂರಕವಾದ ಮರ-ಗಿಡಗಳೇನಿವೆಯೋ ಅಂಥದ್ದನ್ನು ಹೆಚ್ಚು ಹೆಚ್ಚು ಬೆಳೆಸಲು ರೈತರಲ್ಲಿ ಜಾಗೃತಿ ಮೂಡಿಸಿ ಬೆಳೆಸುವಂತಹ ಕಾರ್ಯಕ್ರಮಗಳನ್ನು ಹಾಕಿಕೊಳ್ಳುವುದರ ಮೂಲಕ ಶಾಶ್ವತ ಬರಗಾಲ ರಾಜ್ಯದಿಂದ ಹೊರಹೊಗುವಂತಹ ಕೆಲಸ ಮಾಡಬೇಕಿದೆ. ಮಾನ್ಯ ಸಭಾಪತಿಗಳೆ, ಸಿರಿಧಾನ್ಯ ಎಂದು, ನವಣೆ ಇತ್ಯಾದಿ ಏಳು ಧಾನ್ಯಗಳಿಗೆ ಸಂಬಂಧಪಟ್ಟಂತೆ ನಾವು ಇವತ್ತು ಅವುಗಳ ರಕ್ಷಣೆ ಮಾಡುವ ದಿಸೆಯಲ್ಲಿ ಹೋಗುತ್ತಿದ್ದೇವೆ. ಪರ್ಜನ್ಯ ಹೋಮ ಮಾಡಿದುದರ ಬಗ್ಗೆ ಬಿಜೆಪಿಯವರು ಮಾತನಾಡಿದರೆ ದೇಶದ ಗತಿ ಏನು? ಅವರ್ರೇ ಪರ್ಜನ್ಯ ಹೋಮದ ಬಗ್ಗೆ ವಿರೋಧ ಮಾಡುತ್ತಿರುವುದು ಆತಂಕಕಾರಿ ವಿಷಯವಾಗಿದೆ. ಅಂಥವರು ಇದಕ್ಕೆ ಬೆಂಬಲಿಸಬೇಕು. ವಿಧಾನಸಭೆಯ ವಿರೋಧ ಪಕ್ಷದ ನಾಯಕರು ಮಾತನಾಡುವುದು ಅವರ ಪಕ್ಷದ ಮುಖವಾಣಿ ಆಗಿರುತ್ತದೆ. ಮಾನ್ಯ ಸಭಾಪತಿಗಳೆ, ನಾನು ರೂ. 600 ರಂತೆ ತಾಮ್ರದ ಲೋಟಗಳನ್ನು ಖರೀದಿ ಮಾಡಿದೆ. ತಾಮ್ರದ ಲೋಟದಲ್ಲಿ ನೀರು ಕುಡಿದರೆ ಸಾಕಷ್ಟು ಪ್ರಯೋಜನ ಇದೆ ಎನ್ನುವ ವಿಚಾರಗಳು ಬರುತ್ತಿವೆ. ರಾತ್ರಿ ಹೊತ್ತು ತಾಮ್ರದ ಲೋಟದಲ್ಲಿ ನೀರಿಟ್ಟು ಅದನ್ನು ಬೆಳಿಗ್ಗೆ ಕುಡಿಯುವುದರಿಂದ ಕ್ಯಾನ್ಸರ್ ಬರುವುದಿಲ್ಲ ಎಂದು ಹೇಳುತ್ತಾರೆ. ಇದನ್ನು ಹಿಂದೆಯೇ ನಮ್ಮ ಹಿರಿಯರು ತೋರಿಸಿಕೊಟ್ಟಿದ್ದರು.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ನಮ್ಮ ಕಡೆ ನೂರು ಗ್ರಾಮ್ ಕೆರೆಗೋಡು ತಿಂದರೆ ನೂರು ವರ್ಷ ಆಯುಸ್ಸು ಎಂದು ತಮಾಷೆಗೆ ಹೇಳುತ್ತಾರೆ.

**ಶ್ರೀ ಬಸನಗೌಡ ಆರ್.ಪಾಟೀಲ(ಯತ್ನಾಳ):-** ಹೌದು ಅಂಥದ್ದನ್ನು ತಿನ್ನಬೇಕು. ಅದು ಬಿಟ್ಟು ಮಟನ್ ಸಾರು ಮತ್ತು ನಾಟಿ ಕೋಳಿ ತಿಂದರೆ ಹೇಗೇ? (ಸದನದಲ್ಲಿ ನಗು) ಮಾನ್ಯ ಸಭಾಪತಿಗಳೆ, ನಮ್ಮ ಭಾರತೀಯ ವ್ಯವಸ್ಥೆಯಲ್ಲಿ ಕೆಲವೊಂದರ ಬಗ್ಗೆ ವೈಜ್ಞಾನಿಕ ಆಧಾರವನ್ನಿಟ್ಟುಕೊಂಡು ಮಾಡಿದ್ದಾರೆ. ತಾಮ್ರದ ಚೆರಿಗೆಯಲ್ಲಿ ರಾತ್ರಿ ನೀರು ಇಟ್ಟು ಬೆಳಿಗ್ಗೆ ಅದನ್ನು ಕುಡಿದರೆ ವಾತ, ಪಿತ್ತ, ಕಫ ಇತ್ಯಾದಿಗಳು ಸರಿಹೋಗುತ್ತದೆ ಎಂದು ಹಿಂದೆ ಹೇಳುತ್ತಿದ್ದರು. ನಂತರ ಸ್ಟೀಲ್ ಬಂತು. ಆನಂತರ ರಿಯಲ್ ಎಸ್ಟೇಟ್ ಮಾಡುವವರಂತೂ ಅವರ ಮನೆಗೆ ಹೋದವರಿಗೆ ಬೆಳ್ಳಿ ತಟ್ಟೆಯಲ್ಲಿ ಆಹಾರ ಕೊಡುವುದು ಬಂತು. ಕೊನೆಗೆ ಈಗ ಮತ್ತೆ ತಾಮ್ರದ ಲೋಟವನ್ನು ಬಳಸುವುದರ ಕಡೆ ಬಂದಿದ್ದೇವೆ. ಗೋವಿನ ವಂಶ ನಿರ್ಮೂಲನೆಯಾದರೆ, ಗೋ ರಕ್ಷಣೆ ಮಾಡದೇ ಹೋದರೆ ಸಾವಯವ ಕೃಷಿ ಈ ದೇಶದಲ್ಲಿ ಬರುವುದಕ್ಕೆ ಸಾಧ್ಯವಿಲ್ಲ. ಒಂದು ದೇಶೀಯ ಆಕಳು ಸುಮಾರು 10 ಎಕರೆಗೆ ಬೇಕಾದ ಗೊಬ್ಬರವನ್ನು ತಯಾರು ಮಾಡುವ ಶಕ್ತಿ ಹೊಂದಿರುತ್ತದೆ. ಗೋಮೂತ್ರದಿಂದ ಏನು ಪಂಚಗವ್ಯ ಮಾಡುತ್ತೇವೆಯೋ ಅದನ್ನು ಭೂಮಿಗೆ ಹಾಕುವುದರಿಂದ ಭೂಮಿಯ ಫಲವತ್ತತೆ ಹೆಚ್ಚಾಗುತ್ತದೆ. ಇದು ವೈಜ್ಞಾನಿಕವಾಗಿ ಕೂಡ ದೃಢಪಟ್ಟಿದೆ. ಎಲ್ಲಿ ದೇಶೀಯ ಗೋವುಗಳು ಇರುತ್ತವೆಯೋ ಆ ವಾತಾವರಣದಲ್ಲಿ ಮಲಗಿಕೊಂಡರೆ, ಅದರ ವಾಸನೆ ತೆಗೆದುಕೊಂಡರೆ ಟಿಬಿ ವಾಸಿಯಾಗುತ್ತದೆ ಎಂದು ಹೇಳುತ್ತಾರೆ. ಈ ರೀತಿ ವೈಜ್ಞಾನಿಕವಾದ ಅನೇಕ ಅಂಶಗಳನ್ನು ನಾವು ಒಪ್ಪಿಕೊಳ್ಳಬೇಕಾಗುತ್ತದೆ. ಆ ದಿಕ್ಕಿನಲ್ಲಿ

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ನಮ್ಮ ಕೃಷಿ ಸಚಿವರು ಹೋಗುತ್ತಿದ್ದಾರೆ. ಅವರು ಇನ್ನೂ ಮುಂದೆ ಹೋಗಲಿ. ಇದೇರೀತಿ, ನಮ್ಮ ನಂಬಿಕೆಗಳೇನಿವೆ, . . . .ನಮ್ಮ ನೀರಾವರಿ ಸಚಿವರು ಪರ್ಜನ್ಯ ಹೋಮ ಮಾಡಿದ್ದರಿಂದ ಕರ್ನಾಟಕದಲ್ಲಿ ಮಳೆ ಬಂತು ಎಂಬುದಾಗಿ ನಾವು ಮಾತನಾಡುತ್ತಿದ್ದೇವೆ. . .

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ನಮ್ಮ ಯತ್ನಾಳ್‌ರವರು ಕೃಷಿ ಸಚಿವರನ್ನು ಸಗಣಿ ನೆಲದ ಮೇಲೆ ಮಲಗಿಸಬೇಕು ಎಂದು ತೀರ್ಮಾನ ಮಾಡಿದ್ದಾರೆ. ಮುಂಚೆ ನಮ್ಮನ್ನು, ಸಗಣಿ ಗಂಜಲ ಹಾಕಿ ಸಾರಿಸಿದ ಜಾಗದ ಮೇಲೆ ಛಾಪೆ ಹಾಕಿ ಮಲಗಿಸುತ್ತಿದ್ದರು. ಮನೆ ಮುಂದೆ ಸಗಣಿ ಮತ್ತು ಗಂಜಲ ಸಾರಿಸಿ ಅದರ ಮೇಲೆ ರಂಗೋಲಿ ಹಾಕುತ್ತಿದ್ದರು. ಇದು antibiotic ಎನ್ನುವ ಭಾವನೆ ಇತ್ತು.

**ಶ್ರೀ ಬಸನಗೌಡ ಆರ್.ಪಾಟೀಲ(ಯತ್ನಾಳ):-** ಅದು antibiotic ನ ಕೆಲಸ ಮಾಡುತ್ತದೆ ಎನ್ನುವ ಉದ್ದೇಶದಿಂದ ಸೆಗಣಿ-ಗಂಜಲದಿಂದ ಜಾಗವನ್ನು ಸಾರಿಸುತ್ತಿದ್ದರು. ಇದರಿಂದ ಸೊಳ್ಳೆ ಬರುವುದಿಲ್ಲ. ಮಾನ್ಯ ಸಭಾಪತಿಗಳೆ, ನಮಗೆಲ್ಲ ಗೊತ್ತಿರುವ ಹಾಗೆ ಮಧ್ಯಪ್ರದೇಶದ ಭೋಪಾಲ್‌ನಲ್ಲಿ ಒಂದು ದೊಡ್ಡ ಅನಾಹುತ ಆಯಿತು. ಅಲ್ಲಿ ಒಂದು ಸಂಶೋಧನೆ ಮಾಡಿದರು. ಯಾರ್‍ಯಾರ ಮನೆಯಲ್ಲಿ ಆಕಳ ಸಗಣಿಯಿಂದ ಸಾರಿಸಿದ್ದರೋ ಆ ಮನೆಯಲ್ಲಿರುವ ಜನರಿಗೆ ಆ ಅನಾಹುತದ ದುಷ್ಪರಿಣಾಮ ಆಗಲಿಲ್ಲ ಎಂದು ಸರ್ಕಾರವೇ ಅಧಿಕೃತವಾಗಿ ವರದಿ ಮಾಡಿತ್ತು. ನಾವು ಎಲ್ಲವನ್ನೂ ಮೂಢನಂಬಿಕೆ ಎಂದು, ಹಿಂದಿನವರು ಮಾಡಿದ್ದೆಲ್ಲ ತಪ್ಪು ಎಂದು ಭಾವಿಸುವುದು ಬೇಡ. ಅದರ ಜೊತೆಯಲ್ಲೇ ನಾವು ಹೋಗಬೇಕು. ಒಳ್ಳೆಯದು ಅದರಲ್ಲಿ ಅಡಗಿರುತ್ತದೆ, ಒಳ್ಳೆಯದಕ್ಕೆ ನಾವೇಕೆ ವಿರೋಧ ಮಾಡಬೇಕು? ನಮ್ಮ ನೀರಾವರಿ ಸಚಿವರು ಪರ್ಜನ್ಯ ಹೋಮ ಮಾಡಿದರು, ಕಾವೇರಿ ಪೂಜೆ ಮಾಡಿದರು. ಅದರಿಂದ ಆಗಲೇ ಮಳೆ ಪ್ರಾರಂಭವಾಯಿತು. ಸುಮಾರು ಒಂದೂವರೆ ತಾಸು ಮಳೆಯಲ್ಲಿಯೇ ನಿಂತು, ತೋಯಿಸಿಕೊಂಡು, ಕೊಡೆಯನ್ನೂ ಕೂಡ ಹಿಡಿಯದೇ ನಿಂತು ತಮ್ಮ ಭಕ್ತಿ ಪ್ರದರ್ಶನ ಮಾಡಿದ್ದರಿಂದ ಕರ್ನಾಟಕದಲ್ಲಿ ಮಳೆಯಾಯಿತು ಎಂದು ಹೇಳುತ್ತಿದ್ದಾರೆ. ಇಂತಹ ವಿಷಯಗಳನ್ನು ಇಟ್ಟುಕೊಂಡು ಕೆಲವರು 50 ವರ್ಷಗಳಿಂದ ಟೀಕೆ ಮಾಡಿಕೊಂಡೇ ಬಂದರು. ಯಾರು ಟೀಕೆ ಮಾಡುತ್ತಾರೋ ಅವರು ಆಡಳಿತಕ್ಕೆ ಬಂದರೆ ಅದು ಉಲ್ಟಾ ಆಗುತ್ತದೆ. ಇಂತಹ ವಾದಗಳು ಸಮರ್ಥನೀಯವಾದುದಲ್ಲ. ನಾವು ಸದನಕ್ಕೆ ಬಂದರೆ ಪಕ್ಷಭೇದ ಮರೆತು, ಜಾತಿ-ಮತ ಭೇದ ಬಿಟ್ಟು ರಾಜ್ಯದ ಹಿತ ಇಟ್ಟುಕೊಂಡು ಮಾತನಾಡಬೇಕು. ಪರ್ಜನ್ಯ ಹೋಮ ಮಾಡಿದ್ದಕ್ಕೆ ಟೀಕೆ ಮಾಡಿದರು. ಏಕೆ ಆ ರೀತಿ ಮಾಡಿದರೋ ಗೊತ್ತಿಲ್ಲ. ಮತ್ತೆ ಅವರೇ, ಮಾನ್ಯ ಎಂ.ಬಿ.ಪಾಟೀಲ್ ಅವರನ್ನು ಹೋಮ-ಯಜ್ಞ ಮಾಡುವವರ ರಾಯಭಾರಿಯನ್ನಾಗಿ ಮಾಡಬೇಕು ಎಂದು ಹೇಳಿದರು.

(700)13-06-2017 6-00 ಎಂಎಂ-ವಿಕೆ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

(ಉಪ ಸಭಾಪತಿಯವರ ಉಪಸ್ಥಿತಿ)

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಪರ್ಜನ್ಯ ಹೋಮವನ್ನು ಮಾಡಿದ್ದು ರಾಜ್ಯದ ಹಿತದೃಷ್ಟಿಯಿಂದ, ಅದನ್ನು ವೈಯಕ್ತಿಕವಾಗಿ ನಾನು ಸ್ವಾಗತ ಮಾಡಿದ್ದೇನೆ. ಇವತ್ತು ಸರ್ಕಾರ ನಂಬಿಕೆ ಮತ್ತು ಮೂಢನಂಬಿಕೆ ಬಗ್ಗೆ ಏನು ಶಾಸನ ತರುವುದಕ್ಕೆ ಹೊರಟಿದ್ದಾರೆ ಇದರ ಬಗ್ಗೆ ಸ್ಪಷ್ಟತೆ ಇರಬೇಕೆಂಬುದೇ ನನ್ನ ಬೇಡಿಕೆಯಾಗಿದೆ.

**ಶ್ರೀ ವಿ.ಎಸ್. ಉಗ್ರಪ್ಪ (ನಾಮನಿರ್ದೇಶಿತರು):-** ಮಾನ್ಯ ಕವಟಗಿಮಠರವರೆ, ತಾವು ಬಾರ್ಡರ್‌ನಲ್ಲಿದ್ದೀರಿ. ತಮ್ಮ ಪಕ್ಕದಲ್ಲೇ ಇರುವ ಮಹಾರಾಷ್ಟ್ರದವರು ತಂದಿರುವ ಕಾನೂನಿನ ಬಗ್ಗೆ ತಾವು ಸ್ವಲ್ಪ ಬೆಳಕು ಚೆಲ್ಲಿದರೆ ಒಳ್ಳೆಯದು.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:-** ಮಾನ್ಯ ಉಗ್ರಪ್ಪನವರೆ, ದಯವಿಟ್ಟು ಅದರ ಬಗ್ಗೆ ಚರ್ಚೆ ಬಂದಾಗ ಮಾತನಾಡೋಣ.

**ಶ್ರೀ ವಿ.ಎಸ್. ಉಗ್ರಪ್ಪ:-** ಅಲ್ಲಿ ನಿಮ್ಮ ಸರ್ಕಾರ ಇದೆ, ಅಲ್ಲಿ ಯಾವ ಯಾವ ಯೋಜನೆಗಳನ್ನು ತಂದಿರುವರೆಂದು ಹೇಳಿ.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:-** ಮಾನ್ಯ ಉಗ್ರಪ್ಪರವರೆ, you bring the legislation and then you speak on that.

**ಶ್ರೀ ವಿ.ಎಸ್. ಉಗ್ರಪ್ಪ:-** ಮಾನ್ಯ ಕವಟಗಿಮಠರವರೆ, ತಮ್ಮ ಕ್ಷೇತ್ರ ಸವದತ್ತಿ ಆಗಿದೆ. ಅಲ್ಲಿ ಬೆತ್ತಲೆ ಸೇವೆ ಮಾಡುವುದು ಸರಿಯೋ ತಪ್ಪೋ?

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:-** ಅದು ತಪ್ಪು. ಅದನ್ನು ನಾವು ಯಾರೂ . .

**ಶ್ರೀ ವಿ.ಎಸ್. ಉಗ್ರಪ್ಪ:-** ಮಾನ್ಯ ಕವಟಗಿಮಠರವರೆ, ಬೆತ್ತಲೆ ಸೇವೆ ಮಾಡುವುದು ತಪ್ಪು ಎಂದು ಹೇಳಿದಿರಿ. ಅದನ್ನು ಮೂಢನಂಬಿಕೆ ಎಂದು ಹೇಳುತ್ತೀರೋ ಅಥವಾ ಬೇರೆ ಏನು ಹೇಳುತ್ತೀರಿ?

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:-** ಮಾನ್ಯ ಸಭಾಪತಿಯವರೆ, ನಂಬಿಕೆಯೇ ಬೇರೆ ಮೂಢನಂಬಿಕೆಯೇ ಬೇರೆ. ಅವೆರಡರಲ್ಲಿಯೂ ವ್ಯತ್ಯಾಸವಿದೆ. ನಾವು ನಂಬಿಕೆಯಲ್ಲಿ ವಿಶ್ವಾಸವಿಟ್ಟಿದ್ದೇವೆ. ಮೂಢನಂಬಿಕೆಯಲ್ಲಿ ಅಲ್ಲ.

**ಉಪಸಭಾಪತಿರವರು:-** ಮಾನ್ಯ ಉಗ್ರಪ್ಪರವರೆ . . .

**ಶ್ರೀ ವಿ.ಎಸ್. ಉಗ್ರಪ್ಪ:-** ಮಾನ್ಯ ಕವಟಗಿಮಠರವರೆ, ಬೆತ್ತಲೆ ಸೇವೆ ಮಾಡುವುದು ನಂಬಿಕೆಯೋ ಮೂಢನಂಬಿಕೆಯೋ ಅದನ್ನು ದಯಮಾಡಿ ಹೇಳುವಿರಾ?

**ಉಪ ಸಭಾಪತಿಯವರು:-** ಮಾನ್ಯ ಉಗ್ರಪ್ಪರವರೆ . . .

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**Sri KAVATAGIMATH MAHANTESH MALLIKARJUN:-** Legislation ಬಂದಾಗ ಅದನ್ನು ಚರ್ಚೆ ಮಾಡೋಣ.

**ಶ್ರೀ ವಿ.ಎಸ್. ಉಗ್ರಪ್ಪ:–** ಮಾನ್ಯ ಕವಟಗಿಮಠರವರೆ, ಏಕೆಂದರೆ ತಾವೇ ಹೇಳಿದ್ದೀರಲ್ಲಾ . .

**ಉಪ ಸಭಾಪತಿಯವರು:–** ಮಾನ್ಯ ಯತ್ನಾಳ್‌ರವರೆ, conclude ಮಾಡಿ.

**ಶ್ರೀ ಬಸನಗೌಡ ಆರ್. ಪಾಟೀಲ (ಯತ್ನಾಳ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಇದನ್ನು conclude ಮಾಡುತ್ತೇನೆ. ಇವತ್ತಿನ ದಿವಸ ಕೆಲವೊಂದು ಮೂಢನಂಬಿಕೆ ಸಮಾಜದ ವ್ಯವಸ್ಥೆಯಲ್ಲಿ ಅದನ್ನು ನಾವು ಖಂಡಿಸುತ್ತೇವೆ. ಸಾರಾಸಗಟಾಗಿ ಮಾನ್ಯ ಉಗ್ರಪ್ಪನವರ ಹಾಗೆ ಎಲ್ಲವನ್ನೂ ಖಂಡಿಸುವುದಿಲ್ಲ. ಯಾವುದನ್ನು ಖಂಡಿಸಬೇಕೋ ಅದನ್ನು ಖಂಡಿಸುತ್ತೇವೆ, ಯಾವುದನ್ನು ಸ್ವಾಗತ ಮಾಡಬೇಕೋ ಅದನ್ನು ಸ್ವಾಗತ ಮಾಡುತ್ತೇವೆ. ಮಾನ್ಯ ಉಗ್ರಪ್ಪನವರು ಸಾರಾಸಗಟಾಗಿ ಖಂಡಿಸುತ್ತಾರೆ. ಕಳಕಳಿಯಿಂದ ಹೇಳುತ್ತೇನೆ ತಾವು ಎಲ್ಲರೂ.....

**ಉಪ ಸಭಾಪತಿಯವರು:–** ಮಾನ್ಯ ಯತ್ನಾಳ್‌ರವರೆ, ಮಾನ್ಯ ಉಗ್ರಪ್ಪನವರ ಬಗ್ಗೆ ಹೇಳಬೇಡಿ.

**ಶ್ರೀ ಬಸನಗೌಡ ಆರ್. ಪಾಟೀಲ (ಯತ್ನಾಳ್):–** ಮಾನ್ಯ ಸಭಾಪತಿಯವರೆ, ತಮ್ಮ ಮೂಲಕ ಒಟ್ಟಾರೆ ಎಲ್ಲರಿಗೂ ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ, ಈ ದೇಶದಲ್ಲಿ ನೀವು ಹಿಂದೂ ಧರ್ಮವನ್ನು, ಹಿಂದೂ ಸಂಸ್ಕೃತಿಯನ್ನು ಟೀಕೆ ಮಾಡಿ ಇವತ್ತು ಅತ್ಯಂತ ಕೆಟ್ಟ ಪರಿಸ್ಥಿತಿಗೆ ಬಂದಿದ್ದೀರಿ. ಇನ್ನಾದರೂ ನೀವು ಭಾರತೀಯ ಸಂಸ್ಕೃತಿಯನ್ನು ಟೀಕೆ ಮಾಡುವುದನ್ನು ಬಿಟ್ಟು ಒಳ್ಳೆಯದನ್ನು ಒಳ್ಳೆಯದು ಎಂದು ಹೇಳಬೇಕು. ನಮ್ಮ ದೇಶದ ಒಬ್ಬ ಮಿಲಿಟರಿ ಅಧಿಕಾರಿಗೆ ಹೇಳಿರುವುದು ಅದೇನು ಮಾತನಾಡುವಂತಹ ಶಬ್ದಗಳೇ? ದೇಶದ ವ್ಯವಸ್ಥೆ ಎತ್ತ ಸಾಗುತ್ತಿದೆ? ಇವರೆಲ್ಲಾ ಈ ರೀತಿ ಹಿಂದೂ ವಿರೋಧಿಗಳ ಹಾಗೆ ಮಾತನಾಡುವುದರಿಂದ ನಮ್ಮ ಬಿಜೆಪಿ ಪಕ್ಷದವರು ಈ ದೇಶವನ್ನು ಆಳುವುದಕ್ಕೆ ಕಾರಣವಾಗಿದೆ.

**ಉಪ ಸಭಾಪತಿಯವರು:–** ಮಾನ್ಯ ಯತ್ನಾಳ್‌ರವರೆ, ಈಗ ಬರದ ಬಗ್ಗೆ ಮಾತನಾಡಿ. ಪಕ್ಷ ರಾಜಕಾರಣದ ಬಗ್ಗೆ ಮಾತನಾಡುವುದು ಬೇಡ, ಬರದ ಬಗ್ಗೆ ಮಾತನಾಡಿ.

**ಶ್ರೀ ವಿ.ಎಸ್. ಉಗ್ರಪ್ಪ:–** ಮಾನ್ಯ ಯತ್ನಾಳ್‌ರವರೆ, ಒಂದು ಮಾತನ್ನು ನಿಮಗೆ ಹೇಳುತ್ತೇನೆ.

**ಉಪ ಸಭಾಪತಿಯವರು:–** ಮಾನ್ಯ ಉಗ್ರಪ್ಪನವರೆ, ಬೇಡಿ . .

**ಶ್ರೀ ವಿ.ಎಸ್. ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, ಒಂದು ನಿಮಿಷ ಪ್ಲೀಸ್. ಮೊನ್ನೆ ದಿವಸ ಕೂಡ ಸ್ಪಷ್ಟಪಡಿಸಿದ್ದಾರೆ. ಯಾರು ಕೂಡ ಒಂದು ವರ್ಗದ ಅಥವಾ ಒಂದು ಧರ್ಮದ ವಾರಸುದಾರರಲ್ಲ. ನಾವೆಲ್ಲರೂ ಹಿಂದೂಗಳು ಇದು ಸ್ಪಷ್ಟ. ಹಿಂದುತ್ವದಲ್ಲಿರುವ ಯಾವುದೋ ಒಂದು ವರ್ಗ ಅವರು ನಿಯಂತ್ರಿಸುವಂತಹ ವ್ಯವಸ್ಥೆಯ ವಿರುದ್ಧ ನಮ್ಮ ಧ್ವನಿ ಇರುತ್ತದೆ. ಉದಾಹರಣೆಗೆ ನಾನು ಮಹರ್ಷಿ ವಾಲ್ಮೀಕಿ ವಂಶಸ್ಥನಾಗಿ ಹುಟ್ಟಿರುವವನಾಗಿದ್ದು

" ತಿದ್ದುಪಡಿಯಾಗದ ಪ್ರತಿ–ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ರಾಮಾಯಣವನ್ನು ಈ ದೇಶದ ಕಣ್ಣಾಗಿ ಕೊಟ್ಟಿರುವಂತಹ; ಆದರೆ ಕೆಲವರು ಅದರಲ್ಲಿರುವುದು ತಪ್ಪು ಎಂದು ಹೇಳುತ್ತಾರೆ. ಮಹಾಭಾರತ ಇರಬಹುದು ರಾಮಾಯಣ ಇರಬಹುದು ಅದರಿಂದ ಕಲಿಯುವಂತಹ, ಮನನ ಮಾಡಿಕೊಳ್ಳುವಂತಹ ವಿಚಾರಗಳು ಅನೇಕವಿವೆ. ನಾನು ಆಗಲೇ ಹೇಳಿದ ಹಾಗೆ ಒಂದು ದೇವಸ್ಥಾನಕ್ಕೆ ಹೋಗಿ ಮೂಢನಂಬಿಕೆ ಹಿನ್ನೆಲೆಯಲ್ಲಿ ಬೆತ್ತಲೆ ಸೇವೆ ಮಾಡುವುದನ್ನು ಸರಿಯಲ್ಲ ಎಂದು ಹೇಳುವುದು ಇನ್ನೊಂದು ಕಡೆ. ಎಲ್ಲಾ ಧರ್ಮಗಳಲ್ಲಿಯೂ ಒಳ್ಳೆಯ ವಿಚಾರಗಳಿವೆ. ಅದು ಹಿಂದೂ ಧರ್ಮ, ಮುಸಲ್ಮಾನ ಧರ್ಮ ಅಥವಾ ಕ್ರೈಸ್ತ ಧರ್ಮ ಇರಬಹುದು. ಅದರಲ್ಲಿ ಯಾವುದು ಒಳ್ಳೆಯದಿದೆ ಅದನ್ನು ಮಾತ್ರ ತೆಗೆದುಕೊಳ್ಳಬೇಕೇ ಹೊರತು ಅದರ ಮೂಲಕ ಅವನು ಆ ಜಾತಿ, ಆ ಧರ್ಮ ಎಂದು ದ್ವೇಷ ಮಾಡುವುದು ಸರಿಯಲ್ಲ. ಅದು ಕಾಂಗ್ರೆಸ್‌ನ philosophy. ಶ್ರೀ ರಾಜೀವ್ ಗಾಂಧಿಯವರ ಕಾಲದಲ್ಲಿ ಗಂಗಾ ನದಿಯ ಶುದ್ಧೀಕರಣಕ್ಕಾಗಿ 300 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಶುದ್ಧೀಕರಣ ಮಾಡಿಸಿದ್ದು ಹಿಂದುತ್ವದ ವಿರೋಧಿಯೇ? ಎಲ್ಲಿ ಯಾವ ಹಂತದಲ್ಲಿ ಈ ದೇಶದ, ಈ ಸಮಾಜದ ವ್ಯವಸ್ಥೆಯ ದೃಷ್ಟಿಯಿಂದ ತೀರ್ಮಾನಗಳ ಅವಶ್ಯಕತೆ ಇರುತ್ತದೆ ಆ ಅವಶ್ಯಕತೆಯ ತೀರ್ಮಾನಗಳು ಆಗಬೇಕಾಗುತ್ತದೆ ಎನ್ನುವುದನ್ನು ತಾವು ತಿಳಿದುಕೊಳ್ಳಬೇಕಾಗುತ್ತದೆ. ನಾನು ಕೂಡ ವಿರೋಧ ಮಾಡುವುದಿಲ್ಲ. ಬಹುಶಃ ಅದು ನಿಮ್ಮ ತಪ್ಪು ಗ್ರಹಿಕೆಯಾಗಿರಬಹುದು ಎಂದು ಭಾವಿಸುತ್ತೇನೆ.

**ಶ್ರೀ ಬಸನಗೌಡ ಆರ್. ಪಾಟೀಲ (ಯತ್ನಾಳ್):-** ಮಾನ್ಯ ಸಭಾಪತಿಯವರೆ, ಮಾನ್ಯ ಉಗ್ರಪ್ಪರವರಿಗೆ ಹೃತ್ಪೂರ್ವಕ ಅಭಿನಂದನೆಗಳನ್ನು ತಿಳಿಸುತ್ತೇನೆ. ಏಕೆಂದರೆ ಅವರು ತಾವು ಒಬ್ಬ ಹಿಂದೂ ಎಂದು ಹೇಳಿರುವುದಕ್ಕೆ ಅವರ ಮೇಲೆ ನನಗೆ ಗೌರವ ಹೆಚ್ಚಾಗಿದೆ ಎಂದರೆ ತಪ್ಪಾಗಲಾರದು.

**ಶ್ರೀ ವಿ.ಎಸ್. ಉಗ್ರಪ್ಪ:-** ಮಾನ್ಯ ಯತ್ನಾಳ್‌ರವರೆ, ನಾನು ಯಾವಾಗ ಮುಸ್ಲಿಂ ಎಂದು ಹೇಳಿದ್ದೆ?

**ಶ್ರೀ ಎ. ಮಂಜು (ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು):-** ಅವರು ಯಾವತ್ತೂ ಹಾಗೆ ಹೇಳಿಲ್ಲ.

**ಶ್ರೀ ಬಸನಗೌಡ ಆರ್. ಪಾಟೀಲ (ಯತ್ನಾಳ್):-** ಮಾನ್ಯ ಸಭಾಪತಿಯವರೆ, ಅವರು ಯಾವಾಗಲೂ ಹಿಂದೂ ವಿರೋಧಿಯ ಹಾಗೆ ವರ್ತನೆ ಮಾಡಿಯೇ 40 ಸ್ಥಾನಗಳಿಗೆ ಬಂದಿದ್ದಾರೆ. ಅವರು ಹೇಳಿರುವುದು ನಿಜ. ಯಾವುದೋ ಒಂದು ವರ್ಗ ಇಡೀ ದೇಶವನ್ನು ನಿಯಂತ್ರಣ ಮಾಡುತ್ತಿರುವುದು ನಮಗೂ ಅನುಭವವಾಗಿದೆ ಅದರ ಪ್ರಾಯಶ್ಚಿತ್ತವನ್ನು ನಾವು ಕೂಡ ಪಡುತ್ತಿದ್ದೇವೆ. ಈಗ ತಾವು ಏನು ಹೇಳಿದ್ದೀರಿ ನಾನು ವೈಯಕ್ತಿಕವಾಗಿ ಅದಕ್ಕೆ ಬಲಿಯಾಗಿದ್ದೇನೆ. ಏಕೆಂದರೆ ನನಗೆ ರಾಜಕೀಯವಾಗಿ ಹಿನ್ನಡೆಯಾಗಬೇಕಾದರೆ ಆ ವರ್ಗವೇ ಸೇರಿ ನನ್ನನ್ನು ಮುಗಿಸಬೇಕೆಂದು ಈ ಸದನಕ್ಕೆ ತಂದು ನಿಲ್ಲಿಸಿದ್ದಾರೆ.

**ಶ್ರೀ ಎ. ಮಂಜು:-** ಮಾನ್ಯ ಯತ್ನಾಳ್‌ರವರೆ, ತಮ್ಮ ಪಕ್ಕದಲ್ಲಿರುವವರು;

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಬಸನಗೌಡ ಆರ್. ಪಾಟೀಲ (ಯತ್ನಾಳ್):-** ಮಾನ್ಯ ಸಚಿವರೆ, ಅವರು ದೇವರಂತಹ ಮನುಷ್ಯರು. ಈ ವ್ಯವಸ್ಥೆಯಲ್ಲಿ ಶ್ರೀ ಭಾನುಪ್ರಕಾಶ್‌ರವರು . .

**ಶ್ರೀ ಭಾನುಪ್ರಕಾಶ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ನನ್ನ ಪಾಡಿಗೆ ನಾನು ಕುಳಿತಿದ್ದೇನೆ. ನಿಜವಾದ ಹಿಂದೂ ನಾನೊಬ್ಬನೇ. ಸಂಯಮದಿಂದ ಕುಳಿತಿದ್ದೇನೆ. ತಾವು ಭಾನುಪ್ರಕಾಶ್‌ಜೀ ಮಾತನಾಡಿ ಎಂದು ಹೇಳುವವರೆಗೆ ನಾನು ಮಾತನಾಡುವುದಿಲ್ಲ. ತಾವು ಇರುವಾಗ ಮಾನ್ಯ ಸಚಿವರಾದ ಶ್ರೀ ಎ.ಮಂಜು ರ್ರವರು ನನ್ನ ಹೆಸರನ್ನು ಹೇಳಿದರೆ, ಹೇಗೆ?

**ಶ್ರೀ ಎ. ಮಂಜು:-** ಮಾನ್ಯ ಭಾನುಪ್ರಕಾಶ್‌ರವರೆ, ನಾನು ತಮ್ಮ ಹೆಸರನ್ನು ಹೇಳಲಿಲ್ಲ.

**ಶ್ರೀ ಭಾನುಪ್ರಕಾಶ:-** ಮಾನ್ಯ ಸಚಿವರೆ, ನಾನೊಬ್ಬನೇ ಅವರ ಪಕ್ಕದಲ್ಲಿ ಇರುವುದು.

**ಶ್ರೀ ಬಸನಗೌಡ ಆರ್. ಪಾಟೀಲ (ಯತ್ನಾಳ್):-** ಮಾನ್ಯ ಸಭಾಪತಿಯವರೆ, ಹೀಗೆ ಸುಮ್ಮನೆ ಕುಳಿತಿರುವವರು ನೇರವಾಗಿಯೇ ಹೊಡೆದುಬಿಡುತ್ತಾರೆ. ಲಿಂಗಾಯತರು, ಒಕ್ಕಲಿಗರು, ಶೂದ್ರರು ನಾವೆಲ್ಲಾ ಬಾಯಿಬಡುಕರು. ಅವರು ಹಾಗಲ್ಲ. ಒಳಗಿಂದೊಳಗೇ ಗೂಟ ಹೊಡೆದುಬಿಡುತ್ತಾರೆ ಅದು ನಮಗೆ ಗೊತ್ತಾಗುವುದಿಲ್ಲ. ಅವರು ಬುದ್ಧಿವಂತರು, ಅವರು ಯಾವಾಗಲೂ ನಿರಂತರವಾಗಿ ದೇಸಿ ತುಪ್ಪ ತಿನ್ನುವವರು. ಆದರೆ ನಾವು ಮೊಸರು, ಮಜ್ಜಿಗೆ ಹೀಗೆ ಅವರು ಬಿಟ್ಟಿದ್ದನ್ನು ತಿಂದು ಒಕ್ಕಲುತನ ಮಾಡುವ ಜನಾಂಗಗಳಾಗಿದ್ದೇವೆ. ಬರಗಾಲದ ಬಗ್ಗೆ ಚರ್ಚೆ ಮಾಡುತ್ತಾ ಹಿಂದೂ ಧರ್ಮದ ಬಗ್ಗೆ ಮತ್ತು ಎಲ್ಲೆಲ್ಲಿಗೋ ಬಂದಿದ್ದೇವೆ. ಅದಕ್ಕೆ ತಮ್ಮ ಕ್ಷಮೆಯನ್ನು ಯಾಚಿಸಿ,

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಯತ್ನಾಳ್‌ರವರೆ, ಶ್ರೀ ಭಾನುಪ್ರಕಾಶ್‌ರವರು ತಾವು ಹೇಳಿದ ಹಾಗೆ ಕಾಣುತ್ತಿಲ್ಲ.

**ಶ್ರೀ ಭಾನುಪ್ರಕಾಶ:-** ಮಾನ್ಯ ಸಭಾಪತಿಯವರೆ, ನಾನು ಬೆಳಕಿನಲ್ಲಿ ಕಾಣುತ್ತಿದ್ದೇನೆ ಎಂಬುದೇ ತುಂಬಾ ಸಂತೋಷದ ವಿಷಯ. ಮಾನ್ಯ ಸಚಿವರಾದ ಶ್ರೀ ಎ. ಮಂಜು ಅಥವಾ ಉಳಿದವರ ಹಾಗೆ, ತಮ್ಮ ಹಾಗೆ ನಾನು ಬೆಳ್ಳಗೆ ಇಲ್ಲವಲ್ಲ ಅದಕ್ಕೆ ನಾನು ಕಾಣುತ್ತಿದ್ದೇನೆ ಎಂಬುದೇ ಒಂದು ಸಂತೋಷದ ವಿಷಯ.

**ಶ್ರೀ ಬಸನಗೌಡ ಆರ್. ಪಾಟೀಲ (ಯತ್ನಾಳ್):-** ಮಾನ್ಯ ಸಭಾಪತಿಯವರೆ, ಶಿವಮೊಗ್ಗದಲ್ಲಿ ಇಬ್ಬರು ನಾಯಕರ ನಡೆ ಏನಿದೆ, ಅದಕ್ಕೆ ಮೂಲ ಕಾರಣೀಕರ್ತರು ಇವರೇ ಆಗಿದ್ದಾರೆ. ಯಾರೂ ಇಲ್ಲ ಇವರು ಎರಡೂ ಕಡೆ ಜಗಳ ಏರ್ಪಡುವ ಹಾಗೆ ಮಾಡಿ, Santoshji, Pralhad Joshi ಇವರುಗಳಲ್ಲಿ ಯಾರನ್ನಾದರೂ ಮುಖ್ಯಮಂತ್ರಿಯನ್ನಾಗಿ ಮಾಡಬೇಕೆಂದು ಇದ್ದಾರೆ.

**ಶ್ರೀ ಕೆ.ಬಿ. ಶಾಣಪ್ಪ:-** ಮಾನ್ಯ ಸಭಾಪತಿಯವರೆ, ನಾನು ಹಿಂದೆ ಕುಳಿತಿದ್ದೇನೆ ಎಂದು ಈ ರೀತಿ ಮಾತನಾಡುವುದಕ್ಕೆ ಬರುವುದಿಲ್ಲ. It is not a comedy.

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಬಸನಗೌಡ ಆರ್. ಪಾಟೀಲ (ಯತ್ನಾಳ್):-** ಮಾನ್ಯ ಸಭಾಪತಿಯವರೆ, ಈಗಾಗಲೇ ಬರದ ಬಗ್ಗೆ, ವ್ಯವಸ್ಥೆ ಬಗ್ಗೆ ಸಾಕಷ್ಟು ಚರ್ಚೆ ಮಾಡಿದ್ದೇವೆ. ಅದಕ್ಕೆ ನನಗೆ ಸಾಕಷ್ಟು ಅವಕಾಶವನ್ನು ಕೊಟ್ಟಿದ್ದೀರಿ. ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುವುದೇನೆಂದರೆ, ಶಾಶ್ವತವಾದ ಪರಿಹಾರಗಳ ಬಗ್ಗೆ ಗಂಭೀರವಾಗಿ ಸರ್ಕಾರ ಚಿಂತನೆ ಮಾಡಬೇಕಾಗಿದೆ. ಬರಗಾಲವು ಕೇವಲ ಒಂದು ವರ್ಷದ್ದಲ್ಲ. ಇದು ನಿರಂತರವಾಗಿದ್ದು, ಇದನ್ನು ಶಾಶ್ವತವಾಗಿ ನಿರ್ಮೂಲನೆ ಮಾಡುವುದಕ್ಕೆ ಪ್ರಯತ್ನ ಮಾಡಬೇಕೆಂದು ಕೇಳಿಕೊಂಡು ನನ್ನೆರಡು ಮಾತುಗಳನ್ನು ಮುಗಿಸುತ್ತೇನೆ, ಧನ್ಯವಾದಗಳು.

**ಉಪ ಸಭಾಪತಿಯವರು:-** ಧನ್ಯವಾದಗಳು. ಶ್ರೀ ಮೋಹನ್ ಕೊಂಡಜ್ಜಿರವರು,

**ಶ್ರೀ ವಿ.ಎಸ್. ಉಗ್ರಪ್ಪ:-** ಮಾನ್ಯ ಸಭಾಪತಿಯವರೆ, ದಯಮಾಡಿ ಗಮನಸೆಳೆಯುವ ಸೂಚನೆಯನ್ನು ತೆಗೆದುಕೊಳ್ಳುತ್ತೀರಾ?

**ಉಪ ಸಭಾಪತಿಯವರು:-** ಇಲ್ಲ, ಶ್ರೀ ಪ್ರಸನ್ನಕುಮಾರ್‌ರವರೆ, ಮಾತನಾಡಿ.

**ಶ್ರೀ ಶರಣಪ್ಪ ಮಟ್ಟೂರ (ಶಿಕ್ಷಕರ ಕ್ಷೇತ್ರ):-** ಮಾನ್ಯ ಪ್ರಸನ್ನಕುಮಾರ್‌ರವರೆ, ಸಭಾಪತಿಯವರಿಗೆ ವಿಶೇಷ ಧನ್ಯವಾದಗಳನ್ನು ಹೇಳಲೇ ಇಲ್ಲ ನೀವು. ಅವರಾಗಿದ್ದರೆ ನಿಮಗೆ ಮಾತನಾಡಲು ಅವಕಾಶ ಕೊಡುತ್ತಿರಲಿಲ್ಲ. ಇವರು ಇಷ್ಟು ಅವಕಾಶವನ್ನು ಕೊಟ್ಟಿದ್ದಾರೆ.

**ಶ್ರೀ ಆರ್. ಪ್ರಸನ್ನಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳನ್ನರ್ಪಿಸುತ್ತೇನೆ. ಇತ್ತೀಚಿನ ವರ್ಷಗಳಲ್ಲಿ ಬರಗಾಲವನ್ನು ಎದುರಿಸುತ್ತಿದ್ದೇವೆ. ಉತ್ತರ ಕರ್ನಾಟಕದಲ್ಲಿ ಸಾಕಷ್ಟು ಬರಗಾಲ ಇರುತ್ತದೆ. ಆದರೆ ಮಲೆನಾಡಿನ ಜನರು ಈ ಬಾರಿ ಬಹಳಷ್ಟು ಭೀಕರವಾದಂತಹ ಬರಗಾಲವನ್ನು ಕಂಡಿದ್ದಾರೆ. ಈ ಸಲ ದಕ್ಷಿಣದ ಚಿರಾಪುಂಜಿ ಎಂದು ಕರೆಯುವ ಆಗುಂಬೆಯಲ್ಲಿ ಶೇ.50ಕ್ಕಿಂತ ಕಡಿಮೆ ಮಳೆ ಆಗಿದೆ. ಈ ರಾಜ್ಯಕ್ಕೆ ಬೆಳಕನ್ನು ಕೊಡುವಂತಹ ಲಿಂಗನಮಕ್ಕಿ ಯೋಜನೆ, ಶರಾವತಿ ಯೋಜನೆಗಳಿಗೆ ನೀರನ್ನು ತುಂಬುತ್ತಿದ್ದ ಸಾಗರ, ಹೊಸನಗರ, ತೀರ್ಥಹಳ್ಳಿ ತಾಲ್ಲೂಕು ಈ ಮೂರು ತಾಲ್ಲೂಕುಗಳು ಇವತ್ತು ಬರಗಾಲ ಪ್ರದೇಶವೆಂದು ಘೋಷಣೆಯಾಗಿರುವುದು ಬಹಳ ದುರದೃಷ್ಟಕರವಾಗಿದೆ. ಕುಡಿಯುವ ನೀರಿಗೆ ಬಹಳಷ್ಟು ತತ್ವಾರಗಳು ಆಗಿವೆ. ಸದಸ್ಯರುಗಳು ತಮ್ಮ ಅಭಿಪ್ರಾಯವನ್ನು ತಿಳಿಸಿದ್ದಾರೆ, ಎಲ್ಲೋ ಒಂದು ಕಡೆ ನಾವು ಪ್ರಕೃತಿಯ ಮೇಲೆ ದಾಳಿಯನ್ನು ಮಾಡುತ್ತಿದ್ದೇವೆ ಎಂದು ಬಹಳಷ್ಟು ಜನರು ಹೇಳಿದ್ದಾರೆ. ಬರಗಾಲದಲ್ಲಿ ಕೊಳವೆಬಾವಿಗಳನ್ನು ತೆಗೆಯುವುದಕ್ಕೆ ಹೋಗಬಾರದು, ಇರುವ ಅಂತರ್ಜಲ ಹೋಗುತ್ತದೆ ಎಂದು ಹೇಳಿದರೆ ಜನರು ರಾತ್ರೋರಾತ್ರಿ ಕೊಳವೆಬಾವಿ ಕೊರೆಯುವ ವಾಹನಗಳು ಬಂದು ಕೊಳವೆಬಾವಿಯನ್ನು ಕೊರೆದು ಅಕ್ಕಪಕ್ಕದ ಕೊಳವೆಬಾವಿಗಳು ಒಣಗಿ ಹೋಗುವಂತಹ ಪರಿಸ್ಥಿತಿ ಆಯಿತು.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

(701)/13-06-2017 6-10 ಡಿಎಸ್-ಬಿಎನ್ಎಸ್

(ಉಪಸಭಾಪತಿಯವರ ಉಪಸ್ಥಿತಿ)

**ಶ್ರೀ ಆರ್.ಪ್ರಸನ್ನಕುಮಾರ್(ಮುಂದು):-**

ಸರ್ಕಾರ ಬೋರ್‌ವೆಲ್ ತೆಗೆಯಬೇಡಿ ಎಂದು ಹೇಳುವುದಕ್ಕೆ ಯಾರು ಎನ್ನುವ ಪ್ರಶ್ನೆಯನ್ನು ಒಂದು ಕಡೆ ತೆಗೆದುಕೊಂಡು ಬಂದರು. ಇವತ್ತು ನಮ್ಮಲ್ಲಿ ಮುಖ್ಯವಾದಂತಹ ಬೆಳೆ ಅಡಿಕೆ, ಭತ್ತ, ಜೋಳ, ಈ ಮೂರು ಬೆಳೆಯನ್ನು ನಾವು ಹೆಚ್ಚು ಬೆಳೆಯುತ್ತೇವೆ. ಅದರಲ್ಲೂ ಅಡಿಕೆ ಬೆಳೆ ಈ ಸಲ ಶೇಕಡ 25-30 ರಷ್ಟು ಬಂದರೆ ಬಹಳ ದೊಡ್ಡದು. ನಮ್ಮಲ್ಲಿ ನೀರು ಇಲ್ಲ, ಏನು ನಮ್ಮಲ್ಲಿ ನೀರಾವರಿ ಯೋಜನೆ ಇದೆ, ಆ ನೀರಾವರಿ ಯೋಜನೆ ಪ್ರದೇಶಗಳಲ್ಲಿ ಮಾತ್ರ ತೋಟಗಳನ್ನು ಮಾಡುವಂತಹ ಕೆಲಸ ಮಾಡಿದರು. ಆದರೆ ನೀರಾವರಿ ಯೋಜನೆಯ ಪ್ರದೇಶವನ್ನು ಹೊರತುಪಡಿಸಿ ಇನ್ನುಳಿದ ಕಡೆಗಳಲ್ಲಿ ಅಂತರ್ಜಲವನ್ನು ಉಪಯೋಗಿಸಿಕೊಂಡು ಆ ತೋಟಗಳನ್ನು ಮಾಡಿದ್ದರು. ಇವೆಲ್ಲಾ ಇವತ್ತು ಒಣಗಿ ನಿಂತಿರುವುದರಿಂದ ಆ ರೈತನ ಬದುಕು ಬಹಳ ದುಸ್ತರವಾಗಿದೆ. ಮಾನ್ಯ ಶ್ರೀಕಂಠೇಗೌಡರು ಮಾತನಾಡುವಾಗ ಇವತ್ತು ಅರಳೀಕಟ್ಟೆಹುಂಡಿ ಗ್ರಾಮದ ಪರಿಸ್ಥಿತಿ ಏನಾಗಿದೆ ಎನ್ನುವ ವಿಚಾರ ತಿಳಿಸಿದರು. ನಮ್ಮಲ್ಲೂ ಸಹ ಇವತ್ತು ರೈತರು ಗ್ರಾಮಾಂತರ ಪ್ರದೇಶದಲ್ಲಿ ಇರುವುದಕ್ಕೆ ಇಚ್ಛೆಪಡುವುದಿಲ್ಲ. ಅವರು ತಮ್ಮ ಮಕ್ಕಳ ವಿದ್ಯಾಭ್ಯಾಸಕೋಸ್ಕರ ಪೇಟೆಗೆ ಹೋಗಬೇಕು, ಪಟ್ಟಣಕ್ಕೆ ಹೋಗಬೇಕು ಎಂದು ಬಯಸುತ್ತಿದ್ದಾರೆ. ಇವತ್ತು ಶಿವಮೊಗ್ಗದ ಅಕ್ಕಪಕ್ಕದ ಹಳ್ಳಿಗಳ ಜನರು ಅವರ ಊರಿನ ಕೃಷಿ ಮತ್ತು ಅದಕ್ಕೆ ಪೂರಕವಾದ ಕೆಲಸಗಳನ್ನು ಬಿಟ್ಟು ಬೇರೆ ಕೆಲಸಕ್ಕೆ ಬರುತ್ತಿದ್ದಾರೆ. ಇದಕ್ಕೆ ಕಾರಣವೇನೆಂದರೆ, ನಗರದಲ್ಲಿ ದಿನಕ್ಕೆ ಅವರಿಗೆ 500 ರಿಂದ 600 ರೂಪಾಯಿ ಕೂಲಿ ಸಿಗುತ್ತದೆ. ಹೀಗಾಗಿ ರೈತರು ವ್ಯವಸಾಯ ಮಾಡುವುದಿಲ್ಲ. ಇವತ್ತು ಅವರಿಗೆ ಬೇಕಾಗಿರುವುದೇನೆಂದರೆ, ಒಂದೇ ಸಲ ಹಣ ಸಿಗಬೇಕು, ಐಷಾರಾಮಿ ಜೀವನ ನಡೆಸಬೇಕು ಎಂಬುದಾಗಿರುತ್ತದೆ. ಅವರ ಆಸೆ ತಪ್ಪು ಎಂದು ಹೇಳುವುದಿಲ್ಲ. ಆದರೆ ಎಲ್ಲೋ ಒಂದು ಕಡೆ ಗ್ರಾಮಗಳಲ್ಲಿ ಮೊದಲಿದ್ದ ಗ್ರಾಮೀಣ ಸೊಗಡು ಇಲ್ಲದಂತಾಗಿದೆ. ಅದಕ್ಕೆ ಬೇಕಾದಷ್ಟು ಕಾರಣಗಳಿವೆ. ನಮ್ಮ ಊರುಗಳಲ್ಲಿ ಬೇಕಾದಷ್ಟು ಕಾರ್ಖಾನೆಗಳಾಗಿವೆ. ಆ ಕಾರ್ಖಾನೆಗಳಲ್ಲಿ ಕೆಲಸ ಮಾಡುವುದಕ್ಕೆ ಬರುತ್ತಾರೆ. ಅವರಿಗೆ ಜಮೀನುಗಳಿದ್ದರೂ ಜಮೀನುಗಳನ್ನು ಬಿಟ್ಟು ಕೆಲಸ ಮಾಡದೆ ಕಾರ್ಖಾನೆಗಳಿಗೆ ಬಂದು ಕೆಲಸ ಮಾಡುತ್ತಿದ್ದಾರೆ. ನಾವು ನೋಡಿರುವಂತಹ ಬರಗಾಲ, ಇವತ್ತು ಕುಡಿಯುವ ನೀರಿಗೆ ಮಲೆನಾಡಿನಲ್ಲಿ ತತ್ವಾರ ಆಗಿರುವುದು ಇದೇ ಪ್ರಥಮ. ಅಂತಹ ಪರಿಸ್ಥಿತಿಯಲ್ಲಿ ನಮ್ಮ ಜಿಲ್ಲಾ ಉಸ್ತುವಾರಿ ಸಚಿವರು, ಕಂದಾಯ ಸಚಿವರಾದ ಮಾನ್ಯ ಕಾಗೋಡು ತಿಮ್ಮಪ್ಪನವರು ಪ್ರತಿ ಗ್ರಾಮ ಪಂಚಾಯಿತಿಗೆ ಭೇಟಿ ಕೊಟ್ಟು, ಕುಡಿಯುವ ನೀರಿಗೆ ವ್ಯವಸ್ಥೆ ಮಾಡಿ ಸುಮಾರು 30 ಕೋಟಿ ರೂಪಾಯಿಗಳನ್ನು ಬರೀ ಕುಡಿಯುವ ನೀರಿಗಾಗಿ ಕೊಟ್ಟಿದ್ದಾರೆ. ಹಿಂದೆ ನೋಡಿದಂತಹ ಬರಗಾಲದ ಪರಿಸ್ಥಿತಿಯನ್ನು ಇವತ್ತಿನ ಬರಗಾಲದ ಪರಿಸ್ಥಿತಿಗೆ ನಾವು ಹೋಲಿಕೆ ಮಾಡಿ ನೋಡಿದರೆ ಎಲ್ಲೋ ಒಂದು ಕಡೆ ಮಾನ್ಯ

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಮುಖ್ಯಮಂತ್ರಿಯವರ ಅನ್ನಭಾಗ್ಯ ಯೋಜನೆಯಿಂದ ಇವತ್ತು ಸ್ವಲ್ಪ ಜನ ನೆಮ್ಮದಿಯಿಂದ ಇದ್ದಾರೆ ಎನ್ನುವುದು ಸ್ಪಷ್ಟವಾಗುತ್ತದೆ. ಇದಕ್ಕೆ ಕಾರಣವೇನೆಂದರೆ, ಅವರಿಗೆ ಒಂದು ಹೊತ್ತಿನ ಊಟ ಸಿಗುತ್ತದೆ ಎಂಬುದು ಖಾತ್ರಿಯಾಗಿದೆ. ನಮಗೆ ಇವತ್ತು 7 ಕೆ.ಜಿ. ಅಕ್ಕಿ ಸಿಗುತ್ತಿದೆ, ನಮ್ಮ ಕುಟುಂಬದ ಊಟ ಆಗುತ್ತದೆ ಎನ್ನುವುದು ಖಾತ್ರಿಯಾಗಿದೆ. ಸರ್ಕಾರ ಆ ಕೆಲಸ ಮಾಡಿದೆ.

ಕೃಷಿ ಸಚಿವರು ಇವತ್ತು ರೈತ ಬರಗಾಲದಲ್ಲಿದ್ದಾನೆ, ಅವನಿಗೆ ಸಹಾಯ ಮಾಡಬೇಕೆಂದು ಯಂತ್ರೋಪಕರಣಗಳನ್ನು ಬಾಡಿಗೆ ರೂಪದಲ್ಲಿ ಕೊಡುವುದು, ಈ ರೀತಿಯ ಬಹಳಷ್ಟು ಕೆಲಸಗಳನ್ನು ಮಾಡಿದ್ದಾರೆ. ರೈತ ಎಲ್ಲೋ ಹೋಗಿ ಯಾರದ್ದೋ ಯಂತ್ರೋಪಕರಣಗಳನ್ನು ತರಬೇಕೆಂದರೆ ಬಹಳ ಕಷ್ಟವಾಗುತ್ತದೆ, ಆಮೇಲೆ ದುಬಾರಿಯೂ ಆಗುತ್ತದೆ. ಒಂದೇ ಸಲ ಎಲ್ಲಾ ರೈತರು ಹೋದಂತಹ ಸಂದರ್ಭದಲ್ಲಿ ಆ ಯಂತ್ರೋಪಕರಣಗಳು ಸಮಯಕ್ಕೆ ಸರಿಯಾಗಿ ಸಿಗದಿರುವಂತಹ ಪರಿಸ್ಥಿತಿಯಾಗುತ್ತದೆ. ಇವತ್ತು ನಾವೇ ನಮ್ಮ ಜಮೀನಿನಲ್ಲಿ ಭತ್ತ ಬೆಳೆಯುವಂತಹ ಅನುಕೂಲತೆ ಇದ್ದರೂ ಕೂಡ ಭತ್ತವನ್ನು ನಾವು ಬೆಳೆಯುತ್ತಿಲ್ಲ. ಆ ಭತ್ತ ಬೆಳೆದರೆ ನಾವೇನು ಖರ್ಚು ಮಾಡಿರುತ್ತೇವೆ ಆ ಖರ್ಚು ಸಿಕ್ಕುವುದಿಲ್ಲ ಎನ್ನುವ ಉದ್ದೇಶಕ್ಕೆ ಯಾರಿಗೋ 'ನೀನು ಗುತ್ತಿಗೆ ಮಾಡಿಕೊಂಡು ನಮಗೆ ಏನು ಕೊಡುತ್ತೀಯೋ ಕೊಡು' ಎಂದು ಅವರಿಗೆ ಜಮೀನು ಕೊಡುವಂತಹ ಪರಿಸ್ಥಿತಿ ನಮ್ಮಲ್ಲಾಗಿದೆ. ಉತ್ತರ ಕರ್ನಾಟಕದ ಜನ ಇದನ್ನೆಲ್ಲಾ ನೋಡಿದ್ದಾರೆ. ಅವರು ಬರಗಾಲ ಪರಿಸ್ಥಿತಿಯನ್ನು ನೋಡಿರುವುದರಿಂದ ಅವರಿಗೆ ಒಂದು ರೀತಿಯ ಅನುಭವ ಆಗಿದೆ. ಆದರೆ ನಮಗೆ ಈ ರೀತಿಯ ಅನುಭವ ಆಗಿರಲಿಲ್ಲ, ಆದರೆ ಇವತ್ತು ಬಹಳ ಕೆಟ್ಟದಾಗಿರುವ ಅನುಭವ ಆಗಿದೆ. ಮುಂದಿನ ದಿನಗಳಲ್ಲಿ ನಾವು ನೀರನ್ನು ಯಾವ ರೀತಿ ಬಳಸಬೇಕು, ನೀರನ್ನು ಯಾವ ರೀತಿ ಕೃಷಿ ಚಟುವಟಿಕೆಗಳಿಗೆ ಉಪಯೋಗಿಸಿಕೊಳ್ಳಬೇಕು, ನೀರಾವರಿ ಪ್ರದೇಶದಲ್ಲಿನ ನಮ್ಮ ಬೆಳೆ ಪದ್ಧತಿಗಳೇನಿವೆ ಆ ಬೆಳೆ ಪದ್ಧತಿಗಳನ್ನು ಉಲ್ಲಂಘನೆ ಮಾಡದ ರೀತಿಯಲ್ಲಿ, ನಮಗೆ ಲಭ್ಯವಿರುವ ನೀರಿಗೆ ಅನುಗುಣವಾಗಿ ಬೆಳೆ ಬೆಳೆಯುವಂತಹ ಕೆಲಸವನ್ನು ನಾವು ಮಾಡಬೇಕಾಗುತ್ತದೆ. ಇವತ್ತು ನೀರನ್ನು ಪೂರ್ತಿ ನಿಲ್ಲಿಸಿ ಆ ನೀರನ್ನು ದುರುಪಯೋಗ ಮಾಡಿಕೊಳ್ಳುವ ಸ್ಥಿತಿ ನಮ್ಮಲ್ಲಿತ್ತು. ಇವತ್ತು ತುಂಗಾ ಮತ್ತು ಭದ್ರಾ ಎರಡು ದೊಡ್ಡ ನದಿಗಳು ಸಂಪೂರ್ಣವಾಗಿ ಬತ್ತಿ ಹೋಗಿವೆ. ಇವತ್ತು ಆ ನದಿಗಳಲ್ಲಿ ನೀರಿಲ್ಲ. ಅದರಲ್ಲೂ ಭದ್ರಾ ನದಿಯಿಂದ ತುಂಗಾಭದ್ರಾ ಆಗುತ್ತದೆ. ತುಂಗಾಭದ್ರಾ ನದಿಯಿಂದ ಕುಡಿಯುವ ನೀರಿಗೆ ಭದ್ರಾ ಯೋಜನೆಯಿಂದ ಉತ್ತರ ಕರ್ನಾಟಕದವರೆಗೆ ಅಂದರೆ ಗದಗ, ಮೈಲಾರಲಿಂಗ, ಹಿರೇಕೆರೂರು, ಬಳ್ಳಾರಿಯವರೆಗೂ ಕುಡಿಯುವ ನೀರು ಕೊಡುವಂತಹ ಪರಿಸ್ಥಿತಿ ಏನಿತ್ತು ಇವತ್ತು ನಮ್ಮ ರೈತರಿಗೆ ಆ ನೀರಿಲ್ಲದಂತಹ ಪರಿಸ್ಥಿತಿ ಆಗಿದೆ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಇವತ್ತು ಇಷ್ಟೊಂದು ಕ್ಲಿಷ್ಟಕರ ಪರಿಸ್ಥಿತಿ ಇದ್ದರೂ ಕೂಡ ನಮ್ಮ ಇಂಧನ ಸಚಿವರಿಗೆ ನಾವು ಧನ್ಯವಾದಗಳನ್ನು ಹೇಳಬೇಕಾಗುತ್ತದೆ. ಅವರು ವಿದ್ಯುಚ್ಛಕ್ತಿಯನ್ನು ಕೊಟ್ಟಿದ್ದಾರೆ. ರೈತರಿಗೆ ವಿದ್ಯುತ್‌ನ್ನು ಕೊಟ್ಟು ಇರುವಂತಹ ಸ್ವಲ್ಪ ನೀರನ್ನಾದರೂ ಸರಿಯಾದ ರೀತಿಯಲ್ಲಿ ಬಳಸಿಕೊಳ್ಳುವುದಕ್ಕೆ ಅವಕಾಶಗಳನ್ನು ಮಾಡಿಕೊಟ್ಟರು. ವಿದ್ಯಾರ್ಥಿಗಳಿಗೆ, ರೈತರಿಗೆ, ಕಾರ್ಖಾನೆಗಳಿಗೆ ತೊಂದರೆಯಾಗದ ರೀತಿಯಲ್ಲಿ ನಮಗೆ ವಿದ್ಯುತ್‌ನ್ನು ಕೊಡುವಂತಹ ಕೆಲಸ ಮಾಡಿದ್ದಾರೆ. ಇವತ್ತು ಸರ್ಕಾರವೇ ಎಲ್ಲವನ್ನು ಮಾಡಬೇಕು, ಸರ್ಕಾರವೇ ಸಂಪೂರ್ಣವಾಗಿ ಇದಕ್ಕೆ ಜವಾಬ್ದಾರಿಯಾಗಬೇಕೆನ್ನುವುದಾದರೆ ಬಹಳ ಕಷ್ಟವಾಗುತ್ತದೆ. ಸರ್ಕಾರದ ಜೊತೆಗೆ ನಾವು ಸರಿಯಾಗಿರಬೇಕು, ಸರ್ಕಾರ ಏನು ಹೇಳುತ್ತದೆ ಅದಕ್ಕೆ ತಕ್ಕಂತೆ ನಾವು ಕೂಡ ನಮ್ಮ ಜವಾಬ್ದಾರಿಗಳನ್ನು ನಿರ್ವಹಣೆ ಮಾಡದಿದ್ದರೆ ಮುಂದಿನ ದಿನಗಳಲ್ಲಿ ಬಹಳ ಸಮಸ್ಯೆಗಳು ಎದುರಾಗುತ್ತವೆ. ಸರ್ಕಾರ ಬಂದು ನೀರಿಗೆ ಹಣ ಕೊಡಬಹುದು, ಏನೇ ಪ್ರಯತ್ನಪಟ್ಟರೂ ಪ್ರಕೃತಿಯ ಮುಂದೆ ನಮ್ಮ ಪ್ರಯತ್ನಗಳು ವ್ಯರ್ಥವಾಗುತ್ತವೆ. ಇವತ್ತು ಪ್ರಕೃತಿಯೇ ಬಹಳ ಮುಖ್ಯ.

ಇತ್ತೀಚೆಗೆ ಮಳೆ ಚೆನ್ನಾಗಿ ಆಗುತ್ತಿದೆ. ಮಳೆಯಾಗಿ ಎಲ್ಲಾ ಜಲಾಶಯಗಳು ಭರ್ತಿಯಾದರೆ ನಾವು ಒಂದು ವರ್ಷದ ಬೆಳೆಗಳನ್ನು ಬೆಳೆಯುವುದಕ್ಕೆ ಅನುಕೂಲವಾಗುತ್ತದೆ. ಇವತ್ತು ಸರ್ಕಾರ ಬೇಕಾದಷ್ಟು ಕಾರ್ಯಕ್ರಮಗಳನ್ನು ಕೊಟ್ಟಿದೆ. ಆ ಕಾರ್ಯಕ್ರಮಗಳ ಮೂಲಕ ಇವತ್ತೇನು ರೈತರು ಬರಗಾಲದಲ್ಲಿ ಒದ್ದಾಡುತ್ತಿದ್ದಾರೆ, ಅವರಿಗೆ ಸರ್ಕಾರ ಸಾಂತ್ವನದ ಮಾತುಗಳನ್ನು ಹೇಳುತ್ತಿದೆ. ಇವತ್ತು ರೈತ ಆತ್ಮಹತ್ಯೆ ಮಾಡಿಕೊಂಡಂತಹ ಪರಿಸ್ಥಿತಿಯಲ್ಲಿ ನಮ್ಮ ನಾಯಕರಾದ ರಾಹುಲ್ ಗಾಂಧಿಯವರು ಮೃತರ ಮನೆಗೆ ಹೋಗಿ, ಅವರಿಗೆ ಸಾಂತ್ವನ ಹೇಳುವ ಕೆಲಸ ಮಾಡಿದರು. ರಾಹುಲ್ ಗಾಂಧಿಯವರು ಹಿಂದೆ ಎರಡು ಲಕ್ಷ ರೂಪಾಯಿ ಕೊಡುತ್ತಿದ್ದಂತಹ ಪರಿಹಾರವನ್ನು ಐದು ಲಕ್ಷ ರೂಪಾಯಿಗಳಿಗೆ ಹೆಚ್ಚಿಸಬೇಕು ಎಂದು ಹೇಳಿದ ಮೇಲೆ ಸನ್ಮಾನ್ಯ ಮುಖ್ಯಮಂತ್ರಿಗಳು ಐದು ಲಕ್ಷ ರೂಪಾಯಿಗಳನ್ನು ಆತ್ಮಹತ್ಯೆ ಮಾಡಿಕೊಂಡ ಆ ರೈತನ ಮನೆಗೆ ಭೇಟಿ ಕೊಟ್ಟು ಅವನ ಕುಟುಂಬದವರಿಗೆ ಐದು ಲಕ್ಷ ರೂಪಾಯಿ ಪರಿಹಾರ ಕೊಡುವಂತಹ ಕೆಲಸ ಮಾಡಿದರು. ಅವರಿಗೆ ವೈದ್ಯಕೀಯ ವೆಚ್ಚ ಭರಿಸುವಂತಹ ಕೆಲಸ ಮಾಡಿದರು. ಅವರ ಮಕ್ಕಳಿಗೆ ವಿದ್ಯೆಯನ್ನು ಕೊಡುವಂತಹ ಕೆಲಸವನ್ನು ಇವತ್ತು ಮಾಡಿದ್ದಾರೆ. ಎಲ್ಲೋ ಒಂದು ಕಡೆ ರೈತ ನಮ್ಮ ದೇಶದ ಬೆನ್ನೆಲುಬು. ಆ ರೈತರಿಗೆ ಯಾವುದೇ ಕಾರಣಕ್ಕೂ ತೊಂದರೆಯಾಗದ ರೀತಿಯಲ್ಲಿ ಇವತ್ತು ಸರ್ಕಾರ ನಡೆದುಕೊಂಡಿದೆ. ಇವತ್ತು ನಾವು ಸಾಕಷ್ಟು ಬರಗಾಲವನ್ನು ಎದುರಿಸಿದರೂ ಕೂಡ ಎಲ್ಲೋ ಒಂದು ಕಡೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳಿಂದಾಗಿ ಸಮಾಧಾನದ ವಾತಾವರಣ ನಿರ್ಮಾಣವಾಗಿದೆ. ನಮ್ಮ ಅಂತರ್ಜಲವನ್ನು ಸರಿಯಾದ ರೀತಿಯಲ್ಲಿ ಉಳಿಸಿಕೊಂಡು-ಬೆಳೆಸಿಕೊಂಡು ಅದನ್ನು ಸರಿಯಾದ ರೀತಿಯಲ್ಲಿ ಬಳಸಿಕೊಂಡರೆ ಸೂಕ್ತವಾಗುತ್ತದೆ. ಮಾನ್ಯ ಶ್ರೀಕಂಠೇಗೌಡರು ಇವತ್ತು ಬ್ರೆಜಿಲ್ ವಿಚಾರವನ್ನು ತಿಳಿಸಿದರು. ಅಲ್ಲಿ ತಮ್ಮ ಮನೆಯಿಂದ ಹೊರ ಹೋಗುವ ನೀರನ್ನು

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಉಪಯೋಗಿಸಿಕೊಂಡು, ಆ ನೀರಿನಿಂದ ಇವತ್ತು ಬೆಳೆ ತೆಗೆಯುತ್ತಿದ್ದಾರೆ. ಈ ಸಾಲಿನಲ್ಲಿ ಮಳೆ ಚೆನ್ನಾಗಿ ಆಗುತ್ತದೆನ್ನುವ ಆಶಾಭಾವನೆ ನಮಗಿದೆ. ಆದರೆ ಮುಂದೆ ಬರಗಾಲ ಬರುವುದೇ ಇಲ್ಲ ಎನ್ನುವ ರೀತಿಯಲ್ಲಿ ನಾವು ಯೋಚನೆ ಮಾಡಿದರೆ ಅದು ತಪ್ಪಾಗುತ್ತದೆ. ಆದರೆ ಆ ಬರಗಾಲಕ್ಕೆ ಹೊಂದಿಕೊಳ್ಳುವ ಕೆಲಸವನ್ನು ನಾವು ಮಾಡಬೇಕಾಗುತ್ತದೆ. ಆದ್ದರಿಂದ ಸರ್ಕಾರದಿಂದ ಕೂಡ ಈ ಕಾರ್ಯಕ್ರಮಗಳನ್ನು ಸರಿಯಾದ ರೀತಿಯಲ್ಲಿ ಜನರಿಗೆ ತಲುಪಿಸುವಂತಹ ಕೆಲಸವೂ ಆಗಬೇಕು. ನಾಗರೀಕ ಬಂಧುಗಳೇನಿದ್ದಾರೆ, ಅವರು ಕೂಡ ಯಾವುದೇ ರೀತಿಯ ದುರುಪಯೋಗ ಆಗದ ರೀತಿಯಲ್ಲಿ ಆ ಕೆಲಸಗಳನ್ನು ಮಾಡಿಕೊಳ್ಳಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನಮ್ಮಲ್ಲಿ ಶರಾವತಿ ಯೋಜನೆಯಲ್ಲಿ ಜಮೀನು ಮುಳುಗಡೆಯಾದಂತಹ ರೈತರಿಗೆ ಸುಮಾರು 45-50 ವರ್ಷಗಳಾದರೂ ಇದುವರೆಗೂ ಹಕ್ಕುಪತ್ರಗಳನ್ನು ಕೊಡುವಂತಹ ಕೆಲಸ ಆಗಿರಲಿಲ್ಲ. ಮಾನ್ಯ ಕಾಗೋಡು ತಿಮ್ಮಪ್ಪನವರು ಕಂದಾಯ ಮಂತ್ರಿಗಳಾದ ಮೇಲೆ ಇತ್ತೀಚೆಗಷ್ಟೇ ಅವರಿಗೆ ಆ ಹಕ್ಕುಪತ್ರ ಕೊಡುವಂತಹ ಕೆಲಸವನ್ನು ಮಾಡಿದ್ದಾರೆ.

(702)/13-06-2017 6-20 ಕೆಹೆಚ್=ಬಿಎನ್ಎಸ್

(ಉಪ ಸಭಾಪತಿಯವರ ಉಪಸ್ಥಿತಿ)

**ಶ್ರೀ ಆರ್.ಪ್ರಸನ್ನ ಕುಮಾರ್ (ಮುಂದು):-** ಜನರ ಬದುಕು ಕತ್ತಲಲ್ಲಿ ಉಳಿದು ಹೋಗಿತ್ತು. ಶ್ರೀ ಕಾಗೋಡು ತಿಮ್ಮಪ್ಪನವರು ಇವತ್ತಿನ ದಿವಸ ನಮ್ಮ ರಾಜ್ಯಕ್ಕೆ ಬೆಳಕನ್ನು ಕೊಡುವಂತಹ ಕೆಲಸವನ್ನು ಮಾಡಿದ್ದಾರೆ. ಇವತ್ತಿನ ದಿವಸ ಶಿವಮೊಗ್ಗ ಜಿಲ್ಲೆಯು ಸಾಕಷ್ಟು ಮುಳುಗಡೆಯಾಗಿದೆ ಎಂದು ಹೇಳಬಹುದು. ತೀರ್ಥಹಳ್ಳಿ ತಾಲ್ಲೂಕಿನ ಹಳ್ಳಿಗಳು, ಹೊಸನಗರದ ಹಳ್ಳಿಗಳು, ಸಾಗರದ ಹಳ್ಳಿಗಳು ಸಾಕಷ್ಟು ಮುಳುಗಡೆಯಾಗಿವೆ. ಸಂಕಷ್ಟದಲ್ಲಿ ಸಿಲುಕಿರುವಂತಹ ರೈತರ ಬದುಕಿಗೆ ಸಾಕಷ್ಟು ಕೆಲಸಗಳನ್ನು ಸರ್ಕಾರದವರು ಮಾಡಿದ್ದಾರೆ. ಶ್ರೀ ಕಾಗೋಡು ತಿಮ್ಮಪ್ಪನವರು ಕಂದಾಯ ಸಚಿವರಾದ ಮೇಲೆ ಸಾಕಷ್ಟು ಸುಧಾರಣೆಗಳನ್ನು ತೆಗೆದುಕೊಂಡು ಬಂದರು. ಇವತ್ತಿನ ದಿವಸ Section 94C of the Karnataka Land Revenue Act ಮೂಲಕ ಯಾರು ಮನೆಗಳನ್ನು ಕಟ್ಟಿಕೊಂಡಿದ್ದರು, ಅಂತಹವರಿಗೆ ಯಾವುದೇ ರೀತಿಯಲ್ಲಿ ದಾಖಲೆಗಳಿಲ್ಲದೇ ಇರುವಂತಹ ಸಂದರ್ಭದಲ್ಲಿ ಅವರಿಗೆ ಹಕ್ಕು ಪತ್ರಗಳನ್ನು ಕೊಡುವಂತಹ ಕೆಲಸವನ್ನು ಮಾಡಿದ್ದಾರೆ. ಬಗರ್‌ಹುಕುಂ ಎನ್ನುವ ರೈತರ ಅರ್ಜಿಗಳು ಸುಮಾರು 20 ರಿಂದ 25 ವರ್ಷಗಳಾದರೂ ಕೂಡ ಹಾಗೆಯೇ ಉಳಿದಿದ್ದವು. ಇವತ್ತಿನ ದಿವಸ ಆ ರೈತರ ಅರ್ಜಿಗಳಿಗೆ ಕಾರ್ಯಕಲ್ಪ ಕೊಡುವಂತಹ ಕೆಲಸವನ್ನು ಸನ್ಮಾನ್ಯ ಕಾಗೋಡು ತಿಮ್ಮಪ್ಪನವರು ಮಾಡಿದ್ದಾರೆ. ಮಲೆನಾಡಿನಲ್ಲಿ ಅರಣ್ಯ ಭೂಮಿಯನ್ನು ಸಕ್ರಮಗೊಳಿಸುವುದು ಒಂದು ದೊಡ್ಡ ಸಮಸ್ಯೆಯಾಗಿತ್ತು. ಒಂದು ಲಕ್ಷ ಚಿಲ್ಲರೆ ಅರ್ಜಿಗಳು ಇದ್ದವು. ಆ ಅರ್ಜಿಗಳನ್ನು ಒಂದೇ ಬಾರಿ ಸರಾಸಗಟಾಗಿ ತಿರಸ್ಕಾರ ಮಾಡಿದ್ದರು. ಇವತ್ತಿನ ದಿವಸ ಆ ಅರ್ಜಿಗಳಿಗೆಲ್ಲ ಮರುಜೀವ ಕೊಡುವಂತಹ ಕೆಲಸವನ್ನು ಮಾಡಿ, ರೈತರು

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಬದುಕುವುದಕ್ಕೆ ಅವಕಾಶ ಮಾಡಿಕೊಡಬೇಕು. ರೈತನಿಗೆ ಅನುಕೂಲವಾಗಬೇಕೆಂದು ಹೇಳಿ, ಅರಣ್ಯ ಭೂಮಿ ಸಕ್ರಮಗೊಳಿಸುವಂತಹ ಕೆಲಸ ಇವತ್ತು ಸರ್ಕಾರದಿಂದ ಆಗುತ್ತಿದೆ. ಸನ್ಮಾನ್ಯ ಮುಖ್ಯಮಂತ್ರಿಯವರು ನಮ್ಮ ರಾಜ್ಯವನ್ನು ಸುಧಾರಣೆ ಕಡೆಗೆ ತೆಗೆದುಕೊಂಡು ಹೋಗುತ್ತಿದ್ದಾರೆ. ಅವರ ನಿಲುವು ಬಡವರ, ಹಿಂದುಳಿದವರ, ದಲಿತರ ಎಲ್ಲರ ಬದುಕನ್ನು ಹಸನು ಮಾಡುವಂತಹ ಮತ್ತು ಬರಗಾಲವನ್ನು ಸಮರ್ಥವಾಗಿ ಎದುರಿಸುವಂತಹ ಕೆಲಸವನ್ನು ಮಾನ್ಯ ಮುಖ್ಯಮಂತ್ರಿಯವರು ಮಾಡಿದ್ದಾರೆ. ಹಾಗಾಗಿ ಏನೇ ಆದರೂ ಬರಗಾಲವಂತೂ ಬರಬಾರದು. ಈ ಬರಗಾಲವನ್ನು ಸಮರ್ಥವಾಗಿ ಎದುರಿಸಿದರೂ ಕೂಡ ಈ ಬರಗಾಲದಲ್ಲಿ ಜನರು ಬೆಂದು ಹೋಗುವಂತಹ ಕೆಲಸವಾಗಬಾರದು ಎಂದು ಹೇಳುತ್ತಾ ಅವಕಾಶವನ್ನು ಕೊಟ್ಟಿರುವುದಕ್ಕೆ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಉಪ ಸಭಾಪತಿಯವರು:–** ಬರಗಾಲದ ಚರ್ಚೆ ನಾಳೆ ಮುಂದುವರೆಯುತ್ತದೆ. ಈಗ ಸಭೆಯು ಮುಕ್ತಾಯವಾಗಿ ನಾಳೆ ಬೆಳಿಗ್ಗೆ 11.00 ಗಂಟೆಗೆ ಸೇರುವುದು.

**(ಸದನವು ಸಂಜೆ 6 ಗಂಟೆ 22 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ: 14ನೇ ಜೂನ್ ಮಾಹೆ 2017ರ ಬುಧವಾರದಂದು ಬೆಳಿಗ್ಗೆ 11.00 ಗಂಟೆಗೆ ಸೇರಲು ನಿಶ್ಚಯಿಸಿತು)**

*********

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "